॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರಮಾಲೆ



ಶ್ರೀ ಜಗನ್ನಾಥದಾಸವರ್ಯಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ಭೋಜನರಸವಿಭಾಗಸಂಧಿ

( ಸಂಪುಟ ೪ )

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ನಂ. ೬೧, ೩ನೆಯ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ

ಬೆಂಗಳೂರು-೫೬೦ ೦೧೯

ಶ್ರೀಮದ್ಧರಿಕಥಾಮೃತಸಾರ
ಸರ್ವವ್ಯಾಖ್ಯಾನಸಾರಸಂಗ್ರಹ
ಭೋಜನರಸ ವಿಭಾಗ ಸಂಧಿ
ಸಂಪುಟ (೪)

ಪ್ರಥಮ ಮುದ್ರಣ : ಕ್ರಿ.ಶ. ೧೯೮೭
ಪ್ರತಿಗಳ ಸಂಖ್ಯೆ : ೧೦೦೦

ಬೆಲೆ : ಹದಿನೈದು ರೂಪಾಯಿಗಳು

ಪ್ರತಿಗಳು ದೊರೆಯುವ ಸ್ಥಳ :

(೧) ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. ೬೧, ೫ನೆಯ ಅಡ್ಡರಸ್ತೆ
ನರಸಿಂಹರಾಜಾ ಕಾಲೋನಿ
ಬೆಂಗಳೂರು-೫೬೦ ೦೧೯

(೨) ವೇದಾಂತ ಬುಕ್ ಹೌಸ್
ಉಮಾ ಚಿತ್ರಮಂದಿರದ ಬಳಿ
ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಮುದ್ರಕರು :
ಪರಿಮಳ ಎಂಟರ್‌ಪ್ರೈಸಸ್
ಲಾಲ್‌ಬಾಗ್ ಫೋರ್ಟ್ ರಸ್ತೆ
ಬೆಂಗಳೂರು-೫೬೦ ೦೦೪.

## ಉದಾರ ದ್ರವ್ಯ ಸಹಾಯ

ಶ್ರೀಮದ್ಧರಿಕಥಾಮೃತಸಾರದ ಸರ್ವವ್ಯಾಖ್ಯಾನ ಸಾರಸಂಗ್ರಹ ಮಾಲಿಕೆಯಲ್ಲಿ ಮುದ್ರಿತವಾಗಿರುವ "ಭೋಜನ ರಸವಿಭಾಗಸಂಧಿ"-ಎಂಬ ಈ ಚತುರ್ಥಸಂಪುಟವು

"ಕಡೂರಿನ ಶ್ರೀ ರಾಘವೇಂದ್ರ ಬೃಂದಾವನ ಟ್ರಸ್ಟ್" ವತಿಯಿಂದ ಸಂಗ್ರಹವಾದ ಧನಸಹಾಯದಿಂದ ಪ್ರಕಟಿಸಲಾಗಿದೆ.

ಟ್ರಸ್ಟಿನ ದಾನಿಗಳ ಹೆಸರು ಮತ್ತು ಮೊಬಲಗಿನ ವಿವರಗಳು:-

(೧) ಶ್ರೀ ರಾಘವೇಂದ್ರ ಬೃಂದಾವನ ಟ್ರಸ್ಟ್,
ಕಡೂರು, ೫೭೭೫೪೮ ....500ರೂ. ಗಳು.

(೨) ಶ್ರೀ. ಎನ್. ಆರ್ ನಾರಾಯಣರಾಯರು
ಹೋಟಲ್ ದ್ವಾರಕಾ, ಆನಂದರಾವ್ ಸರ್ಕಲ್
ಬೆಂಗಳೂರು-೫೬೦೦೦೯ .... 2,000ರೂ.ಗಳು

(೩) ಶ್ರೀ. ಕೆ. ಪಿ. ಗುರುರಾಜರಾವ್
ಶ್ರೀ ಶ್ರೀನಿವಾಸ ಸ್ಟೋರ್ಸ್,
ಪ್ರಸನ್ನ ಟಾಕೀಸ್ ಸಮೀಪ
ಮಾಗಡಿ ರಸ್ತೆ, ಬೆಂಗಳೂರು ....1,000ರೂಗಳು

(೪) ದಿ॥ ಶ್ರೀ ಹೆಚ್. ನರಸಿಂಹಯ್ಯನವರ
ಸ್ಮರಣಾರ್ಥ
ಶ್ರೀ ಹೆಚ್. ಎನ್. ಶ್ರೀನಿವಾಸ್
ಶ್ರೀ ವೆಂಕಟೇಶ ಭವನ್, ಕೆ. ಎಮ್. ರಸ್ತೆ
ಕಡೂರು-೫೭೭೫೪೮ ....1,000ರೂಗಳು

(೫) ಶ್ರೀ ಹೆಚ್. ಪಿ. ನಾಗರಾಜರಾವ್.
ನ್ಯೂ ಹೋಟಲ್. ವಿಜಯ
ಕಡೂರು—೫೭೭೫೪೮
ಟ್ರಸ್ಟಿನ ಅಧ್ಯಕ್ಷರು ....1,000-ರೂಗಳು

ಒಟ್ಟು ಮೊಬಲಗಳು....5,500-ರೂಗಳು.

**ಕೃತಜ್ಞತೆ:—**

ಉದಾರವಾದ ಈ ಧನಸಹಾಯದ ಮೂಲಕ, ಈ ಚತುರ್ಥ ಸಂಪುಟದ ಶ್ರೀಘ್ರ ಮುದ್ರಣಕ್ಕೆಕಾರಣರಾದ ಕಡೂರಿನ ಶ್ರೀರಾಘವೇಂದ್ರ ವೃಂದಾವದ ಟ್ರಸ್ಟ್‌ನವರಿಗೂ, ಅದರ ಅಧ್ಯಕ್ಷರಾದ ಶ್ರೀ ಹೆಚ್. ಪಿ. ನಾಗರಾಜರಾಯರಿಗೂ ಮತ್ತು ಇತರ ಮೂರು ಮಂದಿ ದಾನಿಗಳಿಗೂ ಪ್ರಕಾಶನವು ಆಭಾರಿಯಾಗಿದೆ. ಶ್ರೀಹರಿದಾಸಸಾಹಿತ್ಯ ಪ್ರಚಾರ ಪ್ರಕಾಶನದ ಪರವಾಗಿ ಈ ಮಹನೀಯರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು.

ಈ ದಾನಿಗಳನ್ನು ಪರಿಚಯ ಮಾಡಿಸಿಕೊಟ್ಟು, ತನ್ಮೂಲಕ ಉದಾರ ಧನಸಹಾಯಕ್ಕೆ ಮುಖ್ಯ ಕಾರಣರಾದ ಪರಮಪೂಜ್ಯ ಶ್ರೀಪೇಜಾವರ ಮಠಾಧೀಶರಾದ ಶ್ರೀ ಶ್ರೀ ೧೦೮ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಪಾದಪದ್ಮಂಗಳಲ್ಲಿ ನಮ್ಮ ಸಾಷ್ಟಾಂಗಪೂರ್ವಕ ನಮಸ್ಕಾರಗಳು.

ಮುಂದಿನ ಪಂಚಮ ಸಂಪುಟವಾದ "ವಿಭೂತಿ ಸಂಧಿ" ಯ ಶೀಘ್ರ ಪ್ರಕಟಣೆಗೆ ಮೇಲ್ಕಂಡ ದಾನಿಗಳ ಮೇಲ್ಪಂಕ್ತಿಯನ್ನನುಸರಿಸಿ, ಇತರ ಮಹನೀಯರು ಮುಂದೆ ಬಂದು ಉದಾರವಾಗಿ ಧನಸಹಾಯವನ್ನು ನೀಡಬೇಕೆಂದು ವಿನಯಪೂರ್ವಕ ಕೋರಲಾಗಿದೆ.

ದಿನಾಂಕ ೧-೧೨-೧೯೮೭

ಇಂತೀ ಸಜ್ಜನರ ಪಾದಪದ್ಮಾರಾಧಕ

ಬೆಂಗಳೂರು

**ಹೆಚ್. ಎಸ್. ಶ್ರೀನಿವಾಸಮೂರ್ತಿ**

# ಪ್ರಕಾಶಕರ ನುಡಿ

"ಸರ್ವವ್ಯಾಖ್ಯಾನಸಾರಸಂಗ್ರಹ"ದ ಮಾಲಿಕೆಯಲ್ಲಿ ಜ್ಞಾನಿವರೇಣ್ಯರಾದ ಶ್ರೀ ಜಗನ್ನಾಥದಾಸವರ್ಯರ ಅಮರಕೃತಿ ಶ್ರೀಮದ್ಧರಿಕಥಾಮೃತಸಾರದ ನಾಲ್ಕನೆಯ ಸಂಧಿಯನ್ನು (ಭೋಜನರಸವಿಭಾಗಸಂಧಿ) ಚತುರ್ಥ ಸಂಪುಟದ ರೂಪದಲ್ಲಿ ಪ್ರಕಟಿಸಿ, ಸನ್ಮಾನ್ಯ ವಾಚಕರ ಕೈಯಲ್ಲಿಡುತ್ತಿರುವುದು ತುಂಬಾ ಸಂತೋಷದ ಸಂಗತಿ.

ಇದರ ಹಿಂದಿನ ಪ್ರಕಟಣೆ--ವ್ಯಾಪ್ತಿಸಂಧಿಯು ದಿನಾಂಕ೨–೧೦–೯೬೮೭ರಂದು ತೃತೀಯ ಸಂಪುಟವಾಗಿ ಬಿಡುಗಡೆಯಾಯಿತು. ಅದಾದ ಸಮಾರು ಆರು, ತಿಂಗಳಿನ ಒಳಗಾಗಿ ಈ ಚತುರ್ಥ ಸಂಪುಟವು ಬಿಡುಗಡೆಯಾಗಬೇಕಾಗಿತ್ತು. ಕೆಲವು ಅನಿವಾರ್ಯ ಕಾರಣಗಳಿಂದ ವಿಳಂಬವಾಗಿದೆ, ಇದಕ್ಕಾಗಿ ಈ ಗ್ರಂಥರತ್ನದ ಅಧ್ಯಯನದಲ್ಲಿ ಆಸಕ್ತಿಯುಳ್ಳ ಸಮಸ್ತ ಭಗವದ್ಭಕ್ತರಲ್ಲಿ ಕ್ಷಮೆಯಾಚಿಸುತ್ತೇನೆ. ಇನ್ನು ಮುಂದಿನ ಸಂಪುಟಗಳು ಶ್ರೀ ಹರಿವಾಯುಗಳ ಕೃಪಾ ಬಲದಿಂದ ಬೇಗಬೇಗನೆ ಪ್ರಕಟವಾಗುವುವು ಎಂಬ ಆಶ್ವಾಸನೆಯನ್ನು ನೀಡುತ್ತೇನೆ.

ಈ ಸಂಧಿಯಲ್ಲಿ ತಾಮ್ರ ಪರ್ಣೀಯ ಸಂಸ್ಕೃತ ಮೂಲವ್ಯಾಖ್ಯಾನವು ದೊರೆಯಲಿಲ್ಲವಾದ್ದರಿಂದ, ಅದನ್ನು ಮುದ್ರಿಸಲು ಸಾಧ್ಯವಾಗಲಿಲ್ಲ. ಅಂತೆಯೇ ಜಂಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನವೂ ಪೂರ್ಣವಾಗಿ ದೊರೆತಿಲ್ಲ. ದೊರೆತಿರುವಷ್ಟು ಭಾಗ ಮಾತ್ರ ಪ್ರಕಟಿಸಲಾಗಿದೆ.

ತಾಮ್ರಪರ್ಣೀಯ ಹಾಗೂ ಜಂಬುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನದ ವಹಿಗಳು (ಭೋಜನರಸವಿಭಾಗ ಸಂಧಿಗೆ ಸಂಬಂಧಿಸಿದಂತೆ) ಯಾವ ಮಹನೀಯರಲ್ಲಿ ಇದ್ದರೂ, ಅವುಗಳನ್ನು ಅಭಿಮಾನವಿಟ್ಟು, ಕೃಪೆ ಮಾಡಿ ನಮಗೆ ಕಳುಹಿಸಿಕೊಡಬೇಕೆಂದು ಆ ಮಹನೀಯರಲ್ಲಿ ಸವಿನಯ

ಪ್ರಾರ್ಥನೆ. ಅವುಗಳ ನಕಲುಗಳನ್ನು ತಯಾರಿಸಿಕೊಂಡು, ಜೋಪಾನವಾಗಿ ವಹಿಗಳನ್ನು ಅವರಿಗೆ ಹಿಂದಿರುಗಿಸಲಾಗುವುದು.

**ಶ್ರೀ ಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆಯಲ್ಲಿ** ಈಗಾಗಲೇ **ಶ್ರೀಮದ್ಧರಿಕಥಾಮೃತಸಾರದ** ಮೊದಲನೆಯ ಮೂರು ಸಂಧಿಗಳು ಪ್ರಮುಖ ವ್ಯಾಖ್ಯಾನಗಳೊಡನೆ ಪ್ರಕಟವಾಗಿವೆ :-

(೧) **ಮಂಗಳಾಚರಣಸಂಧಿ**–ಪ್ರಥಮ ಸಂಪುಟ [ಪ್ರತಿಯ ಬೆಲೆ 8–00 ರೂ.ಗಳು] ಈ ಸಂಪುಟವನ್ನು ದಿನಾಂಕ ೭-೪-೧೯೮೫ ರಂದು ಶ್ರೀಮನ್ಮಧ್ವಶಾಸ್ತ್ರಸಂಪನ್ನರಾದ ಪರಮಪೂಜ್ಯ **ಶ್ರೀ ಬಾಳುಗಾರು ಶ್ರೀನಿವಾಸಾಚಾರ್ಯ**ರು ತಮ್ಮ ಅಮೃತ ಹಸ್ತದಿಂದ ಬಿಡುಗಡೆ ಮಾಡಿದರು.

[೨] **ಕರುಣಾಸಂಧಿ** :- ದ್ವಿತೀಯಸಂಪುಟ [ಪ್ರತಿಯ ಬೆಲೆ 15 ರೂ] ಈ ಸಂಪುಟವು ದಿನಾಂಕ ೨–೨-೧೯೮೬ ರಂದು ಹರಿಕಥಾವಿದ್ವಾನ್ ಪೂಜ್ಯ ಶ್ರೀ ಟಿ. ಕೆ. ವೇಣುಗೋಪಾಲದಾಸರ ಅಮೃತ ಹಸ್ತದಿಂದ ಬಿಡುಗಡೆ ಯಾಯಿತು.

[೩] **ವ್ಯಾಪ್ತಿ ಸಂಧಿ** :- ತೃತೀಯ ಸಂಪುಟ [ಪ್ರತಿಯ ಬೆಲೆ 12 ರೂ.] ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾಂಗಳವರು ಈ ತೃತೀಯ ಸಂಪುಟವನ್ನು ತಮ್ಮ ಅಮೃತ ಹಸ್ತದಿಂದ ಬಿಡುಗಡೆ ಮಾಡಿದರು. ಅಂದು, ಪಂಡಿತ ಶ್ರೀ ವ್ಯಾಸನಕರೆ ಪ್ರಭಂಜನ ಅವರು "ವ್ಯಾಪ್ತಿಸಂಧಿಯ ವಿಷಯವಾಗಿ ವಿದ್ವತ್ಪೂರ್ಣವಾದ ಪ್ರವಚನ ವನ್ನು ನಡೆಯಿಸಿದರು.

## ಪ್ರಥಮ ಸಂಪುಟದ ಪುನರ್ಮುದ್ರಣ :-

ಪ್ರಥಮ ಸಂಪುಟದ ರೂಪದಲ್ಲಿ ಪ್ರಕಟವಾಗಿದ್ದ **ಮಂಗಳಾಚರಣ ಸಂಧಿಯ** ಪ್ರತಿಗಳೆಲ್ಲವೂ, ಪ್ರಕಟವಾದ ಮೂರು ತಿಂಗಳಿನಲ್ಲಿಯೇ ತೀರಿ ಹೋದುದರಿಂದ, ಅದರ ಪುನರ್ಮುದ್ರಣ ಕಾರ್ಯವನ್ನು ಪ್ರಾರಂಭಿಸ ಬೇಕೆಂದು ನಿರ್ಧರಿಸಲಾಯಿತು. ಆದರೆ ಈಗ ಪ್ರಕಟವಾಗಿರುವ ಚತುರ್ಥ ಸಂಪುಟದ (ಭೋಜನರಸವಿಭಾಗಸಂಧಿ) ಮುದ್ರಣಕಾರ್ಯದ ಕಾರಣದಿಂದಾಗಿ ಪ್ರಥಮಸಂಪುಟದ ಪುನರ್ಮುದ್ರಣವನ್ನು ಪ್ರಾರಂಭಿಸಲು ಕಾಲಾವಕಾಶವಾಗ ಲಿಲ್ಲ. ಇಷ್ಟರಲ್ಲಿಯೇ ಪುನರ್ಮುದ್ರಣಕಾರ್ಯವು ಆರಂಭವಾಗಿ, ಪ್ರಥಮ ಸಂಪುಟವನ್ನು ಆದಷ್ಟು ಜಾಗ್ರತಿಯಾಗಿ ಸನ್ಮಾನ್ಯ ವಾಚಕರಿಗೆ ಒದಗಿಸಲಾಗು ವುದೆಂಬ ಆಶ್ವಾಸನೆಯನ್ನು ನೀಡುತ್ತೇನೆ. ಹಿಂದೆ ದ್ವಿತೀಯ ತೃತೀಯ ಮತ್ತು ಚತುರ್ಥ ಸಂಪುಟಗಳ ಪ್ರಕಟನಾ ಕಾರ್ಯಕ್ಕೆ ಉದಾರಹೃದಯದಿಂದ 108ರೂ. ಮತ್ತು ಮೇಲ್ಪಟ್ಟು ದ್ರವ್ಯಸಹಾಯ ನೀಡಿರುವ ಮಹನೀಯರೆಲ್ಲರಿಗೂ ಪುನರ್ಮುದ್ರಣವಾದ ಕೂಡಲೇ ಪ್ರಥಮಸಂಪುಟವನ್ನು ಒದಗಿಸಲಾಗುವುದು. ಅದರ ಬೆಲೆ 10 ರೂ.ಗಳು.

## ಮುಂದಿನ ಪಂಚಮ ಸಂಪುಟಕ್ಕೆ ದ್ರವ್ಯ ಸಹಾಯಕ್ಕಾಗಿ ವಿನಂತಿ:

ಮುಂದಿನ ಪ್ರಕಟಣೆ–**ವಿಭೂತಿ ಸಂಧಿಯು** ಪಂಚಮ ಸಂಪುಟವಾಗಿ ಪ್ರಕಟ ವಾಗಲಿದೆ. ಹಿಂದಿನಂತೆಯೇ ಶ್ರೀ ಮದ್ಧರಿಕಥಾಮೃತಸಾರ ಅಧ್ಯಯನದಲ್ಲಿ ಆಸಕ್ತಿಯುಳ್ಳ ಹರಿದಾಸಸಾಹಿತ್ಯಾಭಿಮಾನಿಗಳು ಉದರ ಮನಸ್ಸಿನಿಂದ 108ರೂ ಅಥವಾ ಅದಕ್ಕೆ ಮೇಲ್ಪಟ್ಟು ದ್ರವ್ಯಸಹಾಯವನ್ನು ನೀಡಬೇಕೆದು ಸವಿನಯ ಪ್ರಾರ್ಥನೆ. ಹೊಸದಾಗಿ ದ್ರವ್ಯಸಹಾಯನೀಡುವ ಅಂತಹ ಮಹನೀಯರಿಗೆ ಪ್ರಥಮ ಸಂಪುಟದಿಂದ ಪ್ರಾರಂಭಿಸಿ ಸಪ್ತಮ ಸಂಪುಟದ ವರೆಗೆ ಪ್ರತಿಗಳನ್ನು ಒದಗಿಸಲಾಗುವುದು. ಬೆಂಗಳೂರಿನಿಂದ ಹೊರಗಿರು ವವರಿಗೆ ಅಂಚೆವೆಚ್ಚ ಉಚಿತ ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ.

**ಪಂಚಮ ಸಂಪುಟಕ್ಕೆ ಮುಂಗಡ ಹಣ :-**

ಶೀಘ್ರದಲ್ಲಿಯೇ ಪ್ರಕಟವಾಗಲಿರುವ ಮುಂದಿನ ಸಂಪುಟ [ವಿಭೂತಿ ಸಂಧಿ]ದ ಪ್ರತಿಯನ್ನು ಪಡೆಯಲು ಇಚ್ಛೆಯುಳ್ಳವರು ಪ್ರಕಾಶಕರ ವಿಳಾಸಕ್ಕೆ 12ರೂ.ಗಳನ್ನು ಎಮ್. ಒ. ಮೂಲಕ ಕಳುಹಿಸಬೇಕಾಗಿ ವಿನಂತಿ. ಆ ಪ್ರತಿಯ ಮೌಲ್ಯವು 18ರೂ. ಗಳಾಗಬಹುದೆಂದು ಪುಟಗಳ ಸಂಖ್ಯೆಯ ಆಧಾರದಮೇಲೆ ಅಂದಾಜಾಗಿದೆ ಇದರಿಂದ 2 ರೂ ಮುಂಗಡಹಣ ಕಳುಸುವವರಿಗೆ 6 ರೂ. ಉಳಿತಾಯವಾಗುವುದು. ಈ ವಿಷಯದಲ್ಲಿ ತಮ್ಮ ಅಭಿಮಾನದ ಸಹಕಾರವನ್ನು ನೀಡಬೇಕೆಂದು ಪ್ರಾರ್ಥನೆ.

ಶ್ರೀ ಜಗನ್ನಾಥದಾಸವರ್ಯರ ಸಾಕ್ಷಾತ್ ಶಿಷ್ಯರಾಗಿದ್ದ ಶ್ರೀಕಮಲಾಪತಿ ದಾಸರಿಂದ ವಿರಚಿತ **"ಭಾವದರ್ಪಣ ಟೀಕಾ"**-ಎಂಬ ವ್ಯಾಖ್ಯಾನ ಗ್ರಂಥವನ್ನು ಕೊಟ್ಟು, ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿರುವ ಸೀತಾರಾಮ ವಿಠ್ಠಲಾಂಕಿತ ಸನ್ಮಾನ್ಯ ಶ್ರೀವಿ. ಶ್ರೀನಿವಾಸಮೂರ್ತಿಗಳಿಗೆ ನನ್ನ ಕೃತಜ್ಞತೆಯ ವಂದನೆಗಳನ್ನು ಈ ಸಂಧರ್ಭದಲ್ಲಿ ಅರ್ಪಿಸುತ್ತೇನೆ. ತಮ್ಮಲ್ಲಿದ್ದ ಕೆಲವು ವ್ಯಾಖ್ಯಾನಗಳನ್ನು ಒದಗಿಸಿಕೊಟ್ಟ ಹಿರಿಯರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿಯವರಿಗೂ ಮತ್ತು ಶ್ರೀ ಲಕ್ಷ್ಮಣದಾಸರಿಗೂ ನನ್ನ ಕೃತಜ್ಞತೆಯ ವಂದನೆಗಳು. ಮೊದಲನೆಯ ಮೂರು ಸಂಪುಟಗಳನ್ನು ಕೊಂಡು, ಸಹಕಾರ ನೀಡಿದ್ದಲ್ಲದೆ, ತಮ್ಮ ದ್ವಾರಾ ಅಭಿಮಾನಿಗಳನ್ನು ನೋಂದಾಯಿಸಿಕೊಟ್ಟ ಮಹನೀಯರಿಗೆಲ್ಲಾ ನನ್ನ ಹೃತ್ಪೂರ್ವಕ ಪ್ರಣಾಮಗಳು, ಚತುರ್ಥ ಸಂಪುಟದ ಪ್ರಕಟಣಾ ಕಾರ್ಯದಲ್ಲಿ ಹಲವು ರೀತಿಗಳಲ್ಲಿ ಸಹಕರಿಸಿದ ನನ್ನ ಧರ್ಮಪತ್ನಿ ಪದ್ಮಾ ಮೂರ್ತಿಯವರ ಉಪಕಾರ ಸ್ಮರಣೆ ನನ್ನ ಕರ್ತವ್ಯ. ಹಿಂದಿನ ಸಂಪುಟಗಳ ಬಿಡುಗಡೆ ಯ ಸಂದರ್ಭದಲ್ಲಿ ರಸೀದಿಗಳನ್ನು ಬರೆಯುವುದರಿಂದ ಪ್ರಾರಂಭಿಸಿ, ಸಮಾರಂಭದ ಸಮಸ್ತ ಕಾರ್ಯಕ್ರಮಗಳಲ್ಲಿಯೂ ನಾನಾ ರೀತಿಗಳಲ್ಲಿ ಸಹಕರಿಸಿದ ಶ್ರೀ ಹೆಚ್. ಜಿ. ರಾಘವೇಂದ್ರ ಮೂರ್ತಿ ಹೆಚ್. ಎಸ್. ರಘುನಾಥ್. ಹೆಚ್. ಎಸ್. ಮೋಹನ್, ಹೆಚ್. ಎಸ್ ಛಾಯಾ ಮತ್ತು ಅವರ ಸಹಾಯಕ ವರ್ಗದವರಿಗೆಲ್ಲಾ ನನ್ನ ಕೃತಜ್ಞತೆಯ ವಂದನೆಗಳು.

ಶ್ರೀ ಹರಿವಾಯುಗಳ ಪ್ರೇರಣಾನುಸಾರ ಸಕಲ ಹರಿದಾಸಸಾಹಿತ್ಯಾಭಿಮಾನಿಗಳ ನೆರವು ಮತ್ತು ಅಭಿಮಾನದ ಸಹಕಾರದಿಂದ ಮುಂದಿನ ಸಂಪ್ರಟಗಳು ಬೇಗ ಬೇಗನೆ ಪ್ರಕಟವಾಗಿ, ಸನ್ಮಾನ್ಯ ಭಗವದ್ಭಕ್ತರ ಕೈಸೇರುವಂತಾಗಲಿ ಎಂದು ಹಾರೈಸುತ್ತಾ, ನನ್ನ ಪ್ರಾಸ್ತಾವಿಕ ರೂಪವಾದ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಇಂತೀ ವಿಜ್ಞಾಪನೆಗಳು

ಹೆಚ್. ಎಸ್. ಶ್ರೀನಿವಾಸಮೂರ್ತಿ
(ಪ್ರಕಾಶಕರು)
ಸಜ್ಜನರ ಪಾದ ಸೇವಕ

## ಚತುರ್ಥ ಸಂಪುಟದ (ಭೋಜನರಸವಿಭಾಗಸಂಧಿ) ಪ್ರಕಟಣಾ ಕಾರ್ಯಕ್ಕೆ ಉದಾರಹೃದಯದಿಂದ ದ್ರವ್ಯಸಹಾಯನೀಡಿದ ಅಭಿಮಾನಿಗಳು.

(ಹಿಂದಿನ ಪಟ್ಟಿಯಿಂದ ಮುಂದುವರಿದಿದೆ)

| ಕ್ರಮ ಸಂಖ್ಯೆ | ಅಭಿಮಾನಿಗಳ ಹೆಸರು | ಸ್ಥಳ | ಮೊಬಲಗು ರೂ |
|---|---|---|---|
| ೩೫ | ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾಂಗಳ ವರು, | ಬೆಂಗಳೂರು (ಪೊಕ್ಕಾಂ) | 1000 |
| ೩೬ | ಶ್ರೀ ಕುಪ್ಪೂರಾವ್ | ಹೈದರಾಬಾದ್ | 100 |
| ೩೭ | ಶ್ರೀ ಕೆ. ಹನುಮಂತರಾವ್ | ಬಳ್ಳಾರಿ | 108 |
| ೩೮ | ಶ್ರೀ ಹೆಚ್. ಎಸ್ ಜಯರಾವ್ | ಬೆಂಗಳೂರು | 501 |
| ೩೯ | ಶ್ರೀ ಆರ್. ಮಾಧವರಾವ್ | ಬೆಂಗಳೂರು | 108 |
| ೪೦ | ಶ್ರೀ ಟಿ. ಕೆ, ಗುರುರಾಜಾರಾವ್ | ಬೆಂಗಳೂರು | 108 |
| ೪೧ | ಶ್ರೀ ಎಮ್ ಬಿ. ಅಂಬೇಕರ್ | ಶಿರಾಳ್‌ಪೋಸ್ಟ್ | 10 1 |
| ೪೨ | ಶ್ರೀ ಎಮ್. ವಿ. ರಾಮಾಚಾರ್ | ಬಳ್ಳಾರಿ | 108 |
| ೪೩ | ಶ್ರೀ ಎಮ್. ಎಸ್. ನಾಗರಾಜ್ | ರಾಯಚೂರು | 108 |
| ೪೪ | ಶ್ರೀ ಎಮ್. ಎಸ್. ಕೇಶವಮೂರ್ತಿ | ಬೆಂಗಳೂರು | 108 |
| ೪೫ | ಶ್ರೀ ಪಿ. ಎಸ್, ಹರಿರಾವ್ | ಬೆಂಗಳೂರು | 108 |
| ೪೬ | ಶ್ರೀ ಸಿ, ಎಲ್. ಕೃಷ್ಣರಾವ್ | ಬೆಂಗಳೂರು | 108 |
| ೪೭ | ಶ್ರೀ ವಿ. ಬಿ. ಸಾಂಗ್ಲಿ | ಬೆಂಗಳೂರು | 108 |
| ೪೮ | ಶ್ರೀ ಭೀಮಾಚಾರ್ | ಬೆಂಗಳೂರು | 108 |
| ೪೯ | ಶ್ರೀ ಕೆ, ಹನುಮಂತಾಚಾರ್ | ಕರಟಗಿ | 108 |
| ೫೦ | ಶ್ರೀಮತಿ ನಿರ್ಮಲ ಎಸ್. ಗುಡಿ | ಬೊಂಬಾಯಿ | 108 |

| | | | |
|---|---|---|---|
| ೫೧ | ಶ್ರೀಮತಿ ರಾಜಾಮಣಿ ಆರ್. ರಾವ್ | ಬೆಂಗಳೂರು | 108 |
| ೫೨ | ಶ್ರೀ ಪ್ರಾಣೇಶರಾವ್ | ರಾಯಚೂರು | 108 |
| ೫೩ | ಶ್ರೀ ಬಿ. ಎಸ್. ರಾವ್ | ಬೆಂಗಳೂರು | 108 |
| ೫೪ | ಶ್ರೀ ಎ. ಎಸ್ ನರಸಿಂಹಮೂರ್ತಿ | ಮೈಸೂರು | 108 |
| ೫೫ | ಶ್ರೀ ಎಮ್. ಎಸ್. ವೆಂಕಟೇಶಮೂರ್ತಿ | ಬೆಂಗಳೂರು | 108 |
| ೫೬ | ಡಾ. ಕೆ. ನರಹರಿದಾಸ್ | ಬಜವ ಪೋಸ್ಟ್ | 118 |
| ೫೭ | ಶ್ರೀಮತಿ ಶಾಂತಾ ಜ. ಮಂಗಳವೇಡಿ | ಬೆಳಗಾಂ | 118 |
| ೫೮ | ಶ್ರೀ ಎಸ್. ಪವಮಾನಾಚಾರ್ | ಬೊಂಬಾಯಿ | 108 |
| ೫೯ | ಶ್ರೀ ಪರಗಿ ವಸಂತಕುಮಾರ್ | ಹೈದರಾಬಾದ್ | 108 |
| ೬೦ | ಡಾ. ಕೆ. ವೆಂಕಟರಾವ್ | ಮದ್ರಾಸು | 111 |
| ೬೧ | ಡಾ. ಜಿ. ವರದರಾಜಾರಾವ್ | ಮೈಸೂರು | 110 |
| ೬೨ | ಶ್ರೀ ಬಿ. ಎನ್. ಬದರೀನಾಥ್ | ಮೈಸೂರು | 108 |
| ೬೩ | ಶ್ರೀ ಎಮ್. ಜಿ. ಮಾಧವರಾವ್ | ಮದ್ರಾಸು | 108 |
| ೬೪ | ಶ್ರೀ ಕೆ. ಎ. ಪದ್ಮನಾಭರಾವ್ | ಬೆಂಗಳೂರು | 108 |
| ೬೫ | ಶ್ರೀ ಪಿ. ಆನಂದತೀರ್ಥಾಚಾರ್ | ಚಿತ್ರದುರ್ಗ | 100 |
| ೬೬ | ಶ್ರೀ ಎಸ್. ಕೃಷ್ಣಮೂರ್ತಿ | ಭದ್ರಾವತಿ | 108 |
| ೬೭ | ಶ್ರೀ ವಿ. ಜಿ. ಸುಬ್ರಮಣ್ಯ | ಭದ್ರಾವತಿ | 108 |
| ೬೮ | ಶ್ರೀ ಮಧ್ವಾಚಾರ್ಯ ಗುಡಿ | ಬೊಂಬಾಯಿ | 108 |
| ೬೯ | ಶ್ರೀ ಹೆಚ್. ಹನುಮಂತರಾವ್ | ಹೈದರಾಬಾದ್ | 108 |
| ೭೦ | ಶ್ರೀ ಎಸ್. ಕೃಷ್ಣಮೂರ್ತಿ | ಭದ್ರಾವತಿ | 108 |
| ೭೧ | ಶ್ರೀ ಎಮ್.ಎಸ್. ಗುರುರಾಜಾಚಾರ್ಯ | ಭದ್ರಾವತಿ | 108 |
| ೭೨ | ಶ್ರೀ ಎಸ್. ಮಾಧವಮೂರ್ತಿ | ಬೈಂದೂರು (ದ.ಕ.) | 108 |
| ೭೩ | ಶ್ರೀ ಹೆಚ್ ಎಲ್. ದಾಶರಥಯ್ಯ | ಭದ್ರಾವತಿ | 108 |
| ೭೪ | ಶ್ರೀ ಎಸ್. ಕೆ. ಪ್ರಹ್ಲಾದರಾವ್ | ಬೆಂಗಳೂರು | 108 |
| ೭೫ | ಶ್ರೀ ಯು. ನಾಗರಾಜರಾವ್ | ಕೆ.ಜಿ. ಎಫ್, | 108 |
| ೭೬ | ಶ್ರೀ ಕೆ. ಆರ್. ಕುಲಕರ್ಣಿ | ಧಾರವಾಡ | 108 |

| | | | |
|---|---|---|---|
| ೭೭ | ಶ್ರೀ ಸಿ. ಪಿ. ವಾಸುದೇವ್ | ಬೆಂಗಳೂರು | 108 |
| ೭೮ | ಶ್ರೀ ಡಿ. ಆರ್ ರಾಘವೇಂದ್ರರಾವ್ | ಬೆಂಗಳೂರು | 108 |
| ೭೯ | ಶ್ರೀ ಪಿ. ಎನ್. ಕಟ್ಟಿ | ಕೊಲ್ಲಾಪುರ | 108 |
| ೮೦ | ಶ್ರೀ ಕೃಷ್ಣರಾವ್ ಗೋವಿಂದ ಕೌಲಜಗಿ | ಧಾರವಾಡ | 108 |
| ೮೧ | ಶ್ರೀ ಬಿ. ಎನ್. ಕಾಲೀಭಟ್ | ಧಾರವಾಡ | 108 |
| ೮೨ | ಶ್ರೀ ಹೆಚ್. ಎ, ಗೋಪಾಲರಾವ್ | ಬೆಂಗಳೂರು | 108 |
| ೮೩ | ಶ್ರೀ ಎಸ್. ಶೇಷಗಿರಿರಾವ್ | ಬೆಂಗಳೂರು | 108 |
| ೮೪ | ಶ್ರೀ ಡಿ. ಎ. ಜಕಾತಿ | ಬೆಂಗಳೂರು | 108 |
| ೮೫ | ಶ್ರೀ ವಿ. ಎಸ್ ಪರ್ವತೀಕರ್ | ಧಾರವಾಡ | 108 |
| ೮೬ | ಶ್ರೀ ಎಸ್. ಆರ್. ದೇಶಪಾಂಡೆ | ಬಿಜಾಪುರ | 108 |
| ೮೭ | ಶ್ರೀ ಸಿ. ಗುಂಡೂರಾವ್ | ಹೈದರಾಬಾದ್ | 108 |
| ೮೮ | ಡಾ. ಬಿ. ಕೆ. ರಾಜಪುರೋಹಿತ್ | ಹೈದರಾಬಾದ್ | 108 |
| ೮೯ | ಶ್ರೀ ಎನ್. ಶೇಷಾಚಾರ್ | ಬೆಂಗಳೂರು | 108 |
| ೯೦ | ಶ್ರೀ ಎಮ್. ಪ್ರಸನ್ನಕುಮಾರ | ಗೋವ | 108 |
| ೯೧ | ಶ್ರೀ ಪಡುಬಿದ್ರೆ ರಾಘವೇಂದ್ರರಾವ್ | ಬೆಂಗಳೂರು | 108 |
| ೯೨ | ಶ್ರೀ ಮಥುರಾನಾಥ್ ಪಡಕಿ | ಬೆಂಗಳೂರು | 108 |
| ೯೩ | ಶ್ರೀ ಕೆ. ಪದ್ಮನಾಭರಾವ್ | ಬೆಂಗಳೂರು | 108 |
| ೯೪ | ಶ್ರೀಮತಿ ಸುಶೀಲಾಬಾಯಿ. | ಬೆಂಗಳೂರು | 501 |
| ೯೫ | ಶ್ರೀ ಕೆ. ಜಯರಾವ್ | ಧಾರವಾಡ | 101 |

## ಭಾಗಶಃ ದ್ರವ್ಯಸಹಾಯನೀಡಿರುವ ಮಹನೀಯರು

| | | | |
|---|---|---|---|
| ೧ | ಶ್ರೀ. ಸಿ. ನಾರಾಯರಾವ್. | ಹೈದರಾಬಾದ್ | 50 |
| ೨ | ಶ್ರೀ. ಹೆಚ್. ನಾರಾಯಣರಾವ್ | ಹೈದರಾಬಾದ್ | 58 |
| ೩ | ಡಾ. ಯಲವಗಿ | ಬೆಂಗಳೂರ | 50 |
| ೪ | ಶ್ರೀ. ಪಿ. ಆರ್. ಕುಲಕರ್ಣಿ | ಹುಬ್ಬಳ್ಳಿ | 50 |
| ೫ | ಶ್ರೀ ಎಂ. ಎಸ್. ರಂಗನಾಥ | ಶಿವಮೊಗ್ಗ | 51 |
| ೬ | ಶ್ರೀ ಬಿ. ಎಸ್. ಗುರುರಾಜಾರಾವ್. | ಬೆಂಗಳೂರು | 51 |
| ೭ | ಶ್ರೀ ಅಡಿವೀರಾಪ. | ಚಿಕ್ಕಜಂತಕಲ್ | 58 |
| ೮ | ಶ್ರೀ. ನಾಮಾವಳಿ | ಧಾರನಾಡ | 58 |

**ವಿನಂತಿ**

(೧) ಮೇಲಿನ ಪಟ್ಟಿಯಲ್ಲಿ ಪ್ರಮಾದವಶದಿಂದ ಯಾರ ಹೆಸರನ್ನಾದರೂ ಹಾಕದೆ ಬಿಟ್ಟಿದ್ದ ಪಕ್ಷದಲ್ಲಿ. ಅಥವಾ ನಮೂದಿಸಿರುವ ಮೊಬಲಗಿನ ವಿಷಯದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ. ಕೃಪೆಮಾಡಿ ತಿಳಿಸಬೇಕಾಗಿ ಕೋರಲಾಗಿದೆ. ಮುಂದಿನ ಸಂಪುಟದಲ್ಲಿ ಅದನ್ನು ಸರಿಪಡಿಸಿ ಪ್ರಕಲಿಸಲಾಗುವುದು.

(೨) ಹಿಂದಿನ ತೃತೀಯ ಸಂಪುಟದಲ್ಲಿ ಪ್ರಕಟಸಲಾಗಿದ್ದ ಅಭಿಮಾನಿಗಳಪಟ್ಟಿಯಲ್ಲಿ ಶ್ರೀಕೆ. ಪ್ರಸಾದ್‌ರಾವ್ ಹೈದರಾಬಾದ್ ಈ ಮಹನೀಯರ ಹೆಸರನ್ನು ಶ್ರೀ ಕೆ. ಪ್ರಾಣೇಶರಾವ್, ಹೈದರಾಬಾದ್ ಎಂದು ತಪ್ಪಾಗಿ ಮುದ್ರಿತವಾಗಿದೆ. ಈ ತಪ್ಪಿಗಾಗಿ ಆ ಮಹನೀಯರಲ್ಲಿ ಕ್ಷಮೆ ಕೋರಲಾಗಿದೆ.

೧೦೮ರೂ. ಅಥವಾ ಅದಕ್ಕಿಂತ ಹೆಚ್ಚು ಧನಸಹಾಯವನ್ನು ಮುಂಗಡವಾಗಿ ನೀಡುವುದರ ಮೂಲಕ ಮುಂದೆ ಪ್ರಕಟವಾಗಲಿರುವ ಪಂಚಮ ಸಂಪುಟ [**ವಿಭೂತಿಸಂಧಿ**] ದ ಶೀಘ್ರ ಪ್ರಕಟಣೆಗೆ ನೆರವು ನೀಡಬೇಕೆಂದು ಸವಿನಯ ಪ್ರಾರ್ಥನೆ.

ಇಂತೀ ವಿಜ್ಞಾಪನೆಗಳು

**ಹೆಚ್. ಎಸ್. ಶ್ರೀನಿವಾಸಮೂರ್ತಿ**

(ಪ್ರಕಾಶಕರು)

ಸಜ್ಜನರ ಪಾದಪದ್ಮಾರಾಧಕ

ಬೆಂಗಳೂರು

ದಿನಾಂಕ ೧–೧೨–೧೯೮೭.

॥ ಶ್ರೀಃ ಹರಿಃ ಓಂ ॥

॥ ಶ್ರೀ ಲಕ್ಷ್ಮೀನರಸಿಂಹಾಭಿನ್ನ ಶ್ರೀ ಜಗನ್ನಾಥವಿಠ್ಠಲಾಯನಮಃ ॥

# ಸಂಧಿ (೪)

# "ಭೋಜನರಸವಿಭಾಗಸಂಧಿ"

**ಸಂಧಿಯ ಸಾರ :—**

ಆಧ್ಯಾತ್ಮಿಕ ಪ್ರಪಂಚದಲ್ಲಿ ಶ್ರೀ ಹರಿದಾಸಸಾಹಿತ್ಯಾಖ್ಯವಾದ ಸಾರಸ್ವತ ಭಂಡಾರಕ್ಕೆ **ಶ್ರೀಮದ್ಧರಿಕಥಾಮೃತಸಾರ**ವೆಂಬ ತಮ್ಮ ಮೇರುಕೃತಿಯಾದ ಗ್ರಂಥರತ್ನವೆಂಬ ಅಮೂಲ್ಯ ಕಾಣಿಕೆಯನ್ನು ನೀಡಿ, ತನ್ಮೂಲಕ ಶ್ರೀ ಜಗನ್ನಾಥ ವಿಠ್ಠಲನ ಕರುಣ ಪಡೆವ ಮುಮುಕ್ಷು ಜೀವರಿಗೆ ಮಾರ್ಗದರ್ಶನ ನೀಡುವ ಇಂತಹ ಮೋಕ್ಷಪ್ರದಗ್ರಂಥರತ್ನದ ನಿರ್ಮಾತೃಗಳಾದ ಶ್ರೀ ಜಗನ್ನಾಥ ದಾಸವರ್ಯರು ಸಾಧನಪ್ರಪಂಚದಲ್ಲಿ ವಿಹರಿಸುತ್ತಿರುವ ಸಜ್ಜನವೃಂದಕ್ಕೆ ಮಹೋಪಕಾರಮಾಡಿದ್ದಾರೆ, ಪ್ರಾತಃಸ್ಮರಣೀಯರಾದ ದಾಸಶ್ರೇಷ್ಠರು ಜ್ಞಾನ, ಭಕ್ತಿ ಹಾಗೂ ವೈರಾಗ್ಯಸಂಪನ್ನರು. ಭಗವದ್ವಿಭೂತಿಸಂಪನ್ನರೂ ಅಪರೋಕ್ಷೀಕೃತಶ್ರೀಶರೂ ಆದ ಶ್ರೀಜಗನ್ನಾಥ ದಾಸವರೇಣ್ಯರು, ಪ್ರಥಮ ಸಂಧಿಯಲ್ಲಿ ಶ್ರೀ ಲಕ್ಷ್ಮೀದೇವಿಯರ ಕರಸರಸಿಜಗಳಿಂದ ಪೂಜಿತವಾದ ಪದ್ಮವುಳ್ಳ ಶ್ರೀ ರಮಾಧವನನ್ನು ತಾರತಮ್ಯ ಕ್ರಮದಿಂದ ವಿಧ್ಯುಕ್ತವಾಗಿ ಸ್ತೋತ್ರಗೈದು, ತಮ್ಮ ಕೃತಿ ರತ್ನವನ್ನು ಕೈವಲ್ಯದಾಯಕನಾದ ಶ್ರೀಲಕ್ಷ್ಮೀನರಸಿಂಹನ ಚರಣಾರವಿಂದಗಳಲ್ಲಿ ಭಕ್ತಿ ಪುರಸ್ಸರವಾಗಿ ಅರ್ಪಿಸಿ, ಮಂಗಳಾಚರಣಮಾಡಿದ್ದಾರೆ,

ಜಗದೇಕಕಾರಣವಾದ ಶ್ರೀಹರಿಯ "ಕಾರುಣ್ಯ"ವೆಂಬ ಮಹಿಮಾತಿಶಯವನ್ನು ವೇದೋಪನಿಷತ್ತುಗಳು, ಪುರಾಣ ಹಾಗೂ ಇತಿಹಾಸ ಪ್ರಸ್ಥಾ

ಗಳಿಂದ ಸಮಯೋಚಿತವಾದ ಅನೇಕ ದೃಷ್ಟಾಂತಗಳಿಂದ ವಿವರಿಸಿ, ರಸಿಕರಾದ ಭಗವದ್ಭಕ್ತರ ಹೃನ್ಮನಗಳನ್ನು ಸೂರೆಗೊಂಡಿದ್ದಾರೆ, ನಮ್ಮ ನಿತ್ಯಜೀವನ ದಲ್ಲಿ ಕಂಡುಬರುವ ಅನೇಕ ದೃಷ್ಟಾಂತಗಳನ್ನು ಕೊಟ್ಟು, ತತ್ವಾರ್ಥಗಳ ರಹಸ್ಯವನ್ನು ಮನಮುಟ್ಟುವಂತೆ ವರ್ಣಿಸುತ್ತಾರೆ, ದಾಸರಾಯರು ಪ್ರತಿ ಪದ್ಯದಲ್ಲಿಯೂ ಕೊಡುವ ಉಪಮಾಲಂಕಾರಗಳು ಅತ್ಯಂತ ಯುಕ್ತಿಯುಕ್ತ ಹಾಗೂ ಸಮಂಜಸ.

ಜಗದ್ಭರಿತನಾದ ಭಗವಂತನ ವ್ಯಾಪ್ತಿಮಹಿಮೆಯನ್ನು ತೃತೀಯಸಂಧಿ ಯಾದ "ವ್ಯಾಪ್ತಿಸಂಧಿ"ಯಲ್ಲಿ ಮುಕ್ತಕಂಠದಿಂದ ಕೊಂಡಾಡುತ್ತಾ, ಎಲ್ಲ ರೊಳು ತಾನಿಪ್ಪ, ತನ್ನೊಳಗೆಲ್ಲರನು ಧರಿಸಿಹ ಶ್ರೀ ಜಗನ್ನಾಥವಿಠ್ಠಲನು ಅಣು ರೇಣುತೃಣಕಾಷ್ಠಾದಿ ಸಮಸ್ತವಸ್ತುಗಳಲ್ಲಿಯೂ, ಸರ್ವತ್ರವ್ಯಾಪ್ತನು ಎಂದು ಲೋಕಕ್ಕೆ ಸಾರಿದ ಭಾಗವತೋತ್ತಮನಾದ ಪ್ರಹ್ಲಾದ ಬಾಲಕನ ಮಾತನ್ನು ಸತ್ಯಮಾಡುವುದಕ್ಕಾಗಿ ಸ್ತಂಭದಿಂದ ಜಿಗಿದು ಬಂದ ಶ್ರೀಲಕ್ಷ್ಮೀನರಸಿಂಹರೂಪ ನನ್ನು ಧ್ಯಾನಿಸುತ್ತಾ, ವ್ಯಾಪ್ತಿಸಂಧಿಯನ್ನು ಉಪಸಂಹರಿಸುತ್ತಾರೆ.

ಪ್ರಸಕ್ತ ಸಂಧಿ ನಾಲ್ಕನೆಯ ಸಂಧಿ. ಚತುರ್ಥಸಂಧಿಗತ ವಿಷಯ ವಭೋಜನರಸ ವಿಭಾಗ ಪ್ರಕರಣ" ಈ ಸಂಧಿಯಲ್ಲಿ ಜ್ಞಾನಿವರೇಣ್ಯರಾದ ದಾಸರಾಯರು ಭೋಜನ ಎಂದರೇನು ? ಭೋಜ್ಯವಸ್ತುಗಳಲ್ಲಿ ಧ್ಯಾನಿಸ ಬೇಕಾದ ಭಗವದ್ರೂಪಗಳು, ವಿವಿಧ ಭೋಜ್ಯ ಪದಾರ್ಥಗತ ರಸವಿಶೇಷಗಳು, ಭೋಜನ ಕ್ರಿಯೆ ಎಂಬುದೊಂದು ಒಂದು ಮಹಾ ಯಜ್ಞ, ಈ ಯಜ್ಞರೂಪ ವಾದ ಕ್ರಿಯಾವಿಶೇಷವನ್ನು ಶ್ರೀಹರಿಯ ಪ್ರೀತ್ಯರ್ಥವಾಗಿ ಅನುಸಂಧಾನ ಪೂರ್ವಕವಾಗಿ ಮಾಡುವ ಕ್ರಮ, ತದಂಗರ್ಗತ ಭಗವದ್ರೂಪಗಳ ಚಿಂತನ ಇತ್ಯಾದಿ ಪ್ರಮೇಯಾರ್ಥಗಳನ್ನು ವಿಷದೀಕರಿಸುತ್ತಾರೆ.

ಬ್ರಹ್ಮಾಂಡದಲ್ಲಿರುವ ಸಮಸ್ತ ಚೇತನರೂ ಸ್ವೀಕರಿಸುವ ಭೋಜನ ಪದಾರ್ಥಗಳು ನಾಲ್ಕು ಪ್ರಕಾರ ಇವೆ, ಈ ಚತುರ್ವಿಧ ಭೋಜನ ಪದಾರ್ಥ ಗಳ ರಸವಿಶೇಷಗಳು ಹೇಗೆ ಹಂಚಿಕೆಯಾಗುತ್ತವೆ ಎಂಬ ವಿಷಯವನ್ನು ಪ್ರಥಮ ಪದ್ಯದಿಂದ ತಿಳಿಸುತ್ತಾರೆ.

ಸ್ವರೂಪ ದೇಹಕ್ಕ ಆವರ್ಕಣವಾಗಿರುವ ತ್ರಿಗುಣಾತ್ಮಕವಾದ ಷೋಡಶ ಕಲಾತ್ಮಕವಾದ ಲಿಂಗಶರೀರಕ್ಕೆ ಆಗುವ ಉಪಚಯ ಕ್ರಮ ಮತ್ತು ಅಲ್ಲಿ ರಸವಿಶೇಷಗಳ ವಿಭಾಗವನ್ನು ವಿವರಿಸುತ್ತಾರೆ,

ವಾರಿವಾಚ್ಯನಾದ ಶ್ರೀಪರಮಾತ್ಮನು ಜಲಾಭಿಮಾನಿಯಾದ ವರುಣ ನಲ್ಲಿದ್ದು, ಷಡ್ರಸೋಪೇತನಾಗಿ, ಮೂವತ್ತಾರು ಸಹಸ್ರ ಸ್ತ್ರೀನಾಡಿ ಮತ್ತು ಅಷ್ಟೇ ಸಂಖ್ಯಾತವಾದ ಪುರುಷನಾಡಿಗಳಲ್ಲಿದ್ದೂ, ರಸವಾಹಕನಾಗಿ, ಬೃಹತಿ ನಾಮದಿಂದ ರಾತ್ರಿ ಮತ್ತ ಹಗಲು ಕಾಲಗಳಲ್ಲಿ ವ್ಯಾಪಾರ ಮಾಡುವ ಬಗೆಯನ್ನು ತಿಳಿಸುತ್ತಾರೆ,

ಷಡ್ರಸಗಳು ಸತ್ವಾದಿಗುಣಭೇದದಿಂದ ೬ × ೩ = ೧೮ ರೂಪಗಳಾಗಿ ವಿಭಾಗವಾಗಿವೆ, ಹೀಗೆ ವಿಭಕ್ತವಾದ ರಸವಿಶೇಷಗಳು ಸಾರ, ಅಸಾರ, ನೀತ ಅಪ್ರಚುರ, ಖಂಡ, ಅಖಂಡ, ಚಿತ್ ಮತ್ತು ಪ್ರಚುರ ಎಂದು ಪ್ರತಿವಸ್ತುವಿನಲ್ಲಿಯೂ ೧೬ ಕಳಾಕ್ಕೆ ಉಪಚಯವಾಗತಕ್ಕ ರಸಭೇದಗಳನ್ನು ವಿವರಿಸುತ್ತಾರೆ, ಸ್ಥೂಲಶರೀರದಲ್ಲಿ ವಿದ್ಯಮಾನಗಳಾದ ೭೨೦೦೦ ನಾಡಿಗಳಲ್ಲಿ ರಮಾರಮಣನಾದ ಶ್ರೀ ಹರಿಯು ವಿಶ್ವಾದಿ ಸಹಸ್ರನಾಮಗಳಿಂದ ಪ್ರಾಚುರ್ಯರೂಪದಿಂದಿದ್ದು, ಸ್ಥೂಲದೇಹಕ್ಕೆ ಉಪಚಯ ಮಾಡಿಸುತ್ತಾನೆ.

ಕ್ಷೀರಗತ ರಸ ವಿಶೇಷಕ್ಕೆ "ವಿಶದ" ಎಂದು ಹೆಸರು, ಈ ರಸದಲ್ಲಿ ಶ್ರೀ ಪರಮಾತ್ಮನು ೩೬೦ ರೂಪಗಳಿಂದ ಇದ್ದಾನೆ, ಘೃತಗತ ರಸವಾದ "ಸ್ಥಿರ" ಎಂಬಲ್ಲಿ ೨೯ ರೂಪಗಳಿಂದ ರಸಪದವಾಚ್ಯನಾಗಿದ್ದಾನೆ, ಗುಡರಸವಾದ "ತೀಕ್ಷ್ಣ" ಎಂಬ ರಸ ವಿಶೇಷದಲ್ಲಿ ೫೧೦೧ ರೂಪಗಳಿಂದ ವಿರಾಜಮಾನನಾಗಿದ್ದಾನೆ, ಫಲರಸ ಸಾಂಕೇತವಾದ "ನಿರಹರ"ದಲ್ಲಿ ೨೮೨೫ ರೂಪಗಳಿಂದ ವಿಹರಿಸುವನು,

ಇಂತು ವಿಶದ, ಸ್ಥಿರ, ತೀಕ್ಷ್ಣ ಮತ್ತು ನಿರಹರಗಳೆಂಬ ನಾಲ್ಕು ಪ್ರಕಾರವಾದ ರಸವಿಶೇಷಗಳಲ್ಲಿ ಒಟ್ಟು ೮೩೨೯ ರೂಪಗಳಿಂದ ಇದ್ದು, ವಿಹರಿಸುವ ಶ್ರೀ ಪರಮಾತ್ಮನ ಭಗವದ್ರೂಪಗಳನು ಚಿಂತಿಸಿ, ಭೋಜನ[illegible]

ಶ್ರೀಹರಿಯ ಪೂಜಾರೂಪವಾದ ಪುಣ್ಯಯಜ್ಞ ಕ್ರಮ ಎಂದೆನಿಸುವುದು, ಪೂರ್ವೋಕ್ತ ರೂಪಗಳಿಂದ ಮುಖ್ಯಪ್ರಾಣಾಂತರ್ಗತನಾಗಿ ತತ್ತ್ವಾಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿರೂಪದಿಂದ ತನ್ನಾಮಕನಾಗಿ, ಆಯಾಯಾ ನಾಮ ವಿಶೇಷಗಳಿಂದಲೇ ವಾಚ್ಯನಾಗಿರುವ ಶ್ರೀ ಪರಮಾತ್ಮನನ್ನು ಧ್ಯಾನಿಸು ವರೇ ನಿಜವಾದ ಬ್ರಹ್ಮಜ್ಞಾನಿಗಳು,

ಆಪಾದ ಮೌಲಿಪರ್ಯಂತ ವ್ಯಾಪಿಸಿದ ಈ ಸ್ಥೂಲ ದೇಹದಲ್ಲಿ "ಕಪಿಲ" ನಾಮಕನಾಗಿಯೂ, ನೇತ್ರೇಂದ್ರಿಯದಲ್ಲಿ "ವರಹರಿ" ರೂಪನಾಗಿಯೂ ಮತ್ತು ಮೂಗಿನ ದ್ವಾರಗಳಲ್ಲಿ "ಶ್ರೀ ಪರಶುರಾಮ" ನಾಮಕನಾಗಿಯೂ ಶ್ರೀ ಪರಮಾತ್ಮನು ರೂಪತ್ರಯಗಳಿಂದ ಇದ್ದು, ಆಯಾಯಾ ಅವಯವಗಳ ವ್ಯಾಪಾರ ಮಾಡಿಸುವವನು, ನಾಲಿಗೆಯಲ್ಲಿ ಮತ್ಸ್ಯರೂಪಿಯಾಗಿ, ಹಲ್ಲು ಗಳಲ್ಲಿ ಹಂಸಾಖ್ಯನಾಗಿ ತ್ರಿಪಾದ ಗಾಯತ್ರೀ ಪ್ರತಿಪಾದ್ಯನಾಗಿ ಶ್ರೀ ಹಯಗ್ರೀವ ದೇವರು ಮುಖದಲ್ಲಿಯೂ ಇದ್ದು, ಪೂರ್ಣಾನಂದ ಜ್ಞಾನಸ್ವರೂಪನಾದ ಶ್ರೀ ಪರಮಾತ್ಮನು ಚೇತನದಲ್ಲಿ ಸಂತತ ನೆಲೆಸಿದ್ದು ಷಾಡ್ರಸವನ್ನು ತಾನು ಸ್ವೀಕರಿಸಿ, ತದ್ದ್ವಾರಾ ಬಿಂಬಕ್ರಿಯಾ ವ್ಯಾಪಾರದಿಂದ ಜೀವರಿಗೆ ತೃಪ್ತಿಯನ್ನು ಕೊಡುತ್ತಿರುವನು,

ಭೋಜ್ಯ ವಸ್ತುಗಳಿಗೂ ಮತ್ತು ಭೋಕ್ತೃವಿಗೂ ಇರುವ ಭಗ ವತ್ಸಂಬಂಧವನ್ನು ಹೇಳುತ್ತಾರೆ, ಅನಂತಕಲ್ಯಾಣಗುಣಗಣರತ್ನಾಕರನಾದ ಶ್ರೀ ಪರಮಾತ್ಮನು ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪಗಳಿಂದ ಭೋಜನ ಮಾಡುವ ಭೋಕ್ತೃಗಳ ಒಳಗೂ ಮತ್ತು ನಾರಾಯಣ ಮತ್ತು ಅನಿರುದ್ಧ ಇವೆರಡು ರೂಪಗಳಿಂದ ಭೋಜನ ಯೋಗ್ಯವಾದ ಭೋಜ್ಯ ವಸ್ತುಗಳಲ್ಲಿಯೂ ತಾನು ನಿಯಾಮಕನಾಗಿದ್ದು [ಸ್ವಗತರಸಗಳನ್ನು ತಾನು ಸ್ವೀಕರಿಸಿ, ಆಯಾಯಾ ಭೋಜ್ಯವಸ್ತುಗತ ರಸವಿಶೇಷಗಳ ದ್ವಾರಾ ಬಿಂಬಕ್ರಿಯಾರೂಪದಿಂದ ಜೀವರಿಗೆ ತೃಪ್ತಿಯನ್ನು ಕೊಡುತ್ತಾ ತರ್ಪಕನೆಂದೆನಿಸಿದ್ದಾನೆ,

ವಾಸುದೇವರೂಪೀ ಶ್ರೀ ಪರಮಾತ್ಮನು ಅಂತರ್ಬಹಿಸ್ಥ ಕಂಠಗತ ಪ್ರದೇಶದಲ್ಲಿ (ಆಕಾಶ) ಶ್ರೀ ರಮಾಸಹಿತನಾಗಿ ತಾನಿದ್ದು, ಪೂರ್ವೋಕ್ತ

ಅನಿರುದ್ಧಾದಿ ಪಂಚರೂಪಗಳಿಂದ ಕ್ರಿಯಾಕಲಾಪಗಳನ್ನು ನಡೆಯಿಸುವನು, ಅಂತಹ ಪಂಚರೂಪಾತ್ಮಕನಾದ ಶ್ರೀ ಪರಮಾತ್ಮನು ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ದೇವತೆಗಳಲ್ಲಿ ಏಯಾಮಕನಾಗಿರುವನೆಂದು ತಿಳಿದವನೇ ಜ್ಞಾನಿಯ (ಕೋವಿದನು)

ಮುಂದಿನ ಪದ್ಯಗಳಲ್ಲಿ ಅನ್ನ ಮೊದಲಾದ ಭೋಜನ ಯೋಗ್ಯವಸ್ತುಗಳಲ್ಲಿ ಚಿಂತಿಸಬೇಕಾದ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ, ಅನ್ನದಲ್ಲಿ ವಾಸುದೇವನೂ, ನಾನಾ ಸುಭಕ್ಷ್ಯಗಳಲ್ಲಿ ಸಂಕರ್ಷಣನೂ ಪಾಯಸದಲ್ಲಿ ಕೃತಿಪತಿ ಪ್ರದ್ಯುಮ್ನನೂ. ತುಪ್ಪದಲ್ಲಿ ಅನಿರುದ್ಧನಾಮಕ ಶ್ರೀ ಪರಮಾತ್ಮನೂ ಇರುವನೆಂದು ಚಿಂತಿಸಬೇಕು. ಗರುಡಧ್ವಜನಾದ ಶ್ರೀವಿಷ್ಣುವು ತೊವ್ವೆಯಲ್ಲಿಯೂ, ನಾನಾ ಶಾಕ (ತರಕಾರಿಗಳು)ಗಳಲ್ಲಿ ಉಪೇಂದ್ರನೂ ಇದ್ದಾನೆ. ಅಂತರ್ಬಹಿಸ್ಥ ಸರ್ವತ್ರ ವ್ಯಾಪ್ತನಾಗಿ ನಾರಾಯಣನು ನೆಲೆಸಿದ್ದಾನೆ ಎಂದು ಧ್ಯಾನಿಸಿ ಭೋಜನ ಮಾಡುವುದೇ ಶ್ರೀ ಹರಿಗೆ ಪ್ರೀತ್ಯರ್ಥವಾದ ಮಹಾ ಯಜ್ಞವು.

ಜ್ಞಾನ ಆನಂದಾದಿಗಳಿಂದ ಉದ್ರಿಕ್ತ ವಸ್ತುವಾದ ಶ್ರೀ ಪರಮಾತ್ಮನು ಭೋಜನಕ್ಕೆ ಯೋಗ್ಯವಾದ (ನಿಷಿದ್ಧವಲ್ಲದ) ಭೋಜ್ಯ ಪದಾರ್ಥಗಳಲ್ಲಿ ಸಮಗ್ರ ರೂಪದಿಂದ "ಅಖಂಡ"ನೆಂತಲೂ, ಪೃಥಕ್‌ರೂಪದಿಂದ "ಖಂಡ"ನೆಂತಲೂ, ಖ್ಯಾತನಾಮನಾಗಿದ್ದಾನೆ. ಸ್ವಗತಭೇದವಿವರ್ಜಿತನಾದ ಶ್ರೀ ಪರಮಾತ್ಮನು ಸ್ವರಮಣನು, ನಿತ್ಯತೃಪ್ತನು, ಈ ಜಗತ್ತಿನಲ್ಲಿ ಜೀವರಿ ಭೋಜನ ಕ್ರಿಯಾದ್ವಾರಾ ತೃಪ್ತಿಯನ್ನು ಪಡಿಸುತ್ತಿರುವ ಖಂಡಾಖಂಡರೂ ಯಾದ ಶ್ರೀ ಪರಮಾತ್ಮನ ರೂಪದ್ವಯಗಳನ್ನು ಅರಿತು ಚಿಂತಿಸುತ್ತಾ ಅವನಿಗೆ ಸಮರ್ಪಿಸುವುದೇ ಮಹಯಜ್ಞವು.

ಪೂರ್ವೋಕ್ತ ಪ್ರಕಾರ, ಉತ್ತಮಾನುಸಂಧಾನ ಕ್ರಮದಿಂದ ಭಗವದ್ರೂ ಗಳನ್ನು ತತ್ತತ್ಪದಾರ್ಥ ಮತ್ತು ಸ್ಥಾನಗಳಲ್ಲಿ ಚಿಂತಿಸುತ್ತಾ, ಭೋಜ ಮಾಡುವವನು ಮಹಾಜ್ಞಾನಿಯು. ನಿತ್ಯೋಪವಾಸಿ ಎಂದೆನಿಸುವನ ಜಗತ್ತಿನಲ್ಲಿ ಅತ್ಯಂತ ಮಹತ್ತಾದ ಯಜ್ಞಗಳನ್ನು ಮಾಡಿದ ಫಲಕ್ಕೆ ಭಾ ಯಾಗುವನು. ಯಾವ ರೋಗಾದಿಗಳೂ ಅವನನ್ನು ಬಾಧಿಸುವುದಿಲ್ಲ. ಪಾ

ರಹಿತನಾಗಿರುವನು. ನಮಗೆ ಈಗ ಇರುವುದು, ಹಿಂದೆ ಆಗಿಹೋಗಿದ್ದು ಮುಂದೆ ಆಗಲಿರುವುದು. ಇವೆಲ್ಲವೂ ಸರ್ವನಿಯಾಮಕನಾದ ರಮಾಪತಿಯಿಂದಲೇ ನಡೆದಿದ್ದು ಎಂಬ ಅನುಸಂಧಾನದಿಂದ ಸರ್ವಾರ್ಪಣೆಗೈಯ್ಯಲು, ತಾಯಿಯು ಮಕ್ಕಳನ್ನು ನೋಡಿಕೊಳ್ಳುವಂತೆ. ಅಂತಹ ಭಗವದ್ಭಕ್ತರ ಕ್ಷೇಮಚಿಂತಕನಾಗಿರುವನು.

ಇನ್ನು ಮುಂದಿನ ಪದ್ಯಗಳಲ್ಲಿ ದೇಹಗತ ಪಂಚಕೋಶಗಳ ವಿವರ ಮತ್ತು ತದಂತರ್ಗತ ಭಗವದ್ರೂಪಗಳ ವಿಚಾರವನ್ನು ತಿಳಿಸುತ್ತಾರೆ. ಸರ್ವ ಸಾರಭೋಕ್ತನಾದ ಅನಿರುದ್ಧರೂಪೀ ಶ್ರೀಹರಿಯು ೮೨೫೧ ರೂಪಗಳಿಂದ ಪೃಥ್ವೀಸಾಂಕೇತವಾದ ಅನ್ನಮಯಕೋಶದಲ್ಲಿ ಕೋಶಾಭಿಮಾನಿಯಾಗಿದ್ದಾನೆ. ಉದಕಪ್ರಾಚುರ್ಯವಾದ ಪ್ರಾಣಮಯಕೋಶದಲ್ಲಿ ಕೃತೀಶ ಪ್ರದ್ಯುಮ್ನನು ೫೫೮೩ ರೂಪಗಳಿಂದ ಕೋಶಾಭಿಮಾನಿಯಾಗಿ ವ್ಯಾಪಾರ ನಡೆಯಿಸುತ್ತಾನೆ.

ತೇಜಃಸಾಂಕೇತವಾದ ಮನೋಮಯ ಕೋಶದಲ್ಲಿ ಜಯಾಪತಿ ಸಂಕರ್ಷಣ ನಾಮಕ ಶ್ರೀ ಪರಮಾತ್ಮನು ೫೬೨೧೦೭ ರೂಪಗಳಿಂದ ವಿರಾಜಮಾನನಾಗಿದ್ದಾನೆ.

ಮಾಯಾಪತಿ ವಾಸುದೇವನು ವಾಯುತತ್ತ್ವಪ್ರಾಚುರ್ಯವಾದ ವಿಜ್ಞಾನಮಯಕೋಶಾಭಿಮಾನಿಯಾಗಿ ೪೩೭೪ ಭಗವದ್ರೂಪಗಳಿಂದ ವ್ಯಾಪಿಸಿದ್ದಾನೆ. ಹೀಗೆ ಮಹತ್ತತ್ವಾಭಿಮಾನಿಗಳಾದ ಬ್ರಹ್ಮ ವಾಯುದೇವರೇ ಮೊದಲಾದ ತತ್ತ್ವೇಶರಲ್ಲಿ ನಿಯಾಮಕನಾಗಿರುವ ಪುರುಷನಾಮಕನಾದ ಶ್ರೀಹರಿಯ ಪತ್ನಿ ಶ್ರೀ ಲಕ್ಷ್ಮೀದೇವಿಯರು. ಅಂಡದ ಹೊರಗೆ ಸೂಕ್ಷ್ಮ ಸೃಷ್ಟಿಕಾಲದಲ್ಲಿ ಮಾಯಾಪತಿ ವಾಸುದೇವನಾಮಕ ಶ್ರೀ ಪರಮಾತ್ಮನ ಅಂಗದಿಂದ ಉದ್ಭವವಾದ ಬೆವರಿನಲ್ಲಿ ವಿರಜಾನದಿರೂಪದಲ್ಲಿ ತಾವಿದ್ದು, ಮುಕ್ತಿ ಯೋಗ್ಯರಾದ ಬ್ರಹ್ಮಾದಿ ತೃಣಜೀವಪರ್ಯಂತ ಅವರ ಲಿಂಗಭಂಗ ಮಾಡಿಸುವಳು. ಲಿಂಗಭಂಗದ ನಂತರ ಮೋಕ್ಷದಾಯಕ ವಾಸುದೇವನ ಅನುಗ್ರಹದಿಂದ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಪ್ರಾಪ್ತಿ.

ಮುಂದೆ ಆನಂದಮಯಕೋ ಶೋಶಾಭಿಮಾನಿಯಾದ ಶ್ರೀಮನ್ನಾರಾಯಣನು ೫೧೨೫ ರೂಪಗಳನ್ನು ಧರಿಸಿ ಆನಂದಮಯನೆಂದೆನಿಸಿರುವನು. ಅಂತು ಪಂಚಕೋಶಾಂತರ್ಗತ ಭಗವದ್ರೂಪಗಳ ಒಟ್ಟು ಸಂಖ್ಯೆ ೫೮೫೪೦೦ ಆಯಿತು. ಇಷ್ಟು ರೂಪವಿಶಿಷ್ಟನಾಗಿ ಶ್ರೀ ಪರಮಾತ್ಮನು ಈ ಬ್ರಹ್ಮಾಂಡದಲ್ಲೆಲ್ಲಾ ತುಂಬಿ, ಸರ್ವತ್ರವ್ಯಾಪ್ತನಾಗಿದ್ದಾನೆ.

ಮುಂದಿನ ಪದ್ಯಗಳಲ್ಲಿ ಆಯಾಯಾ ಕೋಶಾಕಾರದಿಂದ ಇರುವ ಭಗವ ದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ. ಶಾಂತೀರಮಣನಾದ ಅನಿರುದ್ಧನು ೧೦೧ ಅಕ್ಷರ ಸಾಂಕೇತವಾದ ರೂಪಗಳಿಂದ ಅನ್ನಮಯ ಕೋಶದಲ್ಲಿ "ಅನ್ನ" ನಾಮಕನಾಗಿದ್ದಾನೆ. ಕೃತೀಶನಾದ ಪ್ರದ್ಯುಮ್ನನು ಪ್ರಾಣಮಯ ಕೋಶದಲ್ಲಿ ೫೧೩ ರೂಪಗಳಿಂದ "ಪ್ರಾಣ" ಎಂಬ ಹೆಸರಿನಿಂದ ವಿರಾಜಮಾನನಾಗಿದ್ದಾನೆ ಜಯಾಪತಿಯಾದ ಸಂಕರ್ಷಣನು ಮನೋಮಯ ಕೋಶದಲ್ಲಿ ೫೫ ಭಗ ದ್ರೂಪಗಳಿಂದ ಇದ್ದು, ಚೇತನರನ್ನು ನಾನಾ ಪ್ರಕಾರವಾಗಿ ವಿಕಾರಗೊಳಿಸು (ಚಂಚಲ)ಮನಸ್ಸಿನಲ್ಲಿ "ಮನ" ಶಬ್ದವಾಚ್ಯನಾಗಿದ್ದಾನೆ. ಮಾಯಾ ಪತಿಯಾ ವಾಸುದೇವನು ವಿಜ್ಞಾನಮಯಕೋಶದಲ್ಲಿ "ವಿಜ್ಞಾನ" ಶಬ್ದವಾಚ್ಯನಾ ೫೮೪ ರೂಪಗಳಿಂದ ವ್ಯಾಪಾರಮಾಡುತ್ತಾನೆ.

ಲಕ್ಷ್ಮೀಧವನಾದ ಶ್ರೀ ಮನ್ನಾರಾಯಣನು ಆನಂದಮಯ ಕೋಶದ "ಆನಂದ" ಶಬ್ದವಾಚ್ಯನಾಗಿ ೩೦೫೨ ರೂಪಗಳಿಂದ ವ್ಯಾಪಿಸಿದ್ದಾನೆ. ಅಂತ ಪಂಚಕೋಶಗತ ಅಕ್ಷರ ಸಾಂಕೇತವಾದ ಭಗವದ್ರೂಪಗಳ ಒಟ್ಟು ಸಂಖ ೪೩೦೫ ಆಗುತ್ತದೆ. ಇಷ್ಟು ಸಂಖ್ಯಾಕವಾದ ಭಗವದ್ರೂಪಗಳಿಂದ ಶ್ರೀ ಪರಮಾತ್ಮನು ಬೆಣ್ಣೆಯಲ್ಲಿ ತುಪ್ಪವಿರುವಂತೆ, ಭಾರತೀರಮಣರಾದ ಮುಖ ಪ್ರಾಣರಲ್ಲಿದ್ದಾನೆ. ಮುಂದಿನ ಪದ್ಯಗತವಿಷಯ ಪಂಚಕೋಶಾಭಿಮಾ ಗಳಾದ ಪ್ರಾಣಾದಿ ದೇವತೆಗಳಲ್ಲಿ ಅಂತರ್ಗತ ಭಗವದ್ರೂಪಗಳ ವಿವ ಅನ್ನಮಯಕೋಶಗತ ಅನಿರುದ್ಧನು, ಆ ಕೋಶಾಭಿಮಾನಿ "ಪ್ರಾಣ" ಶರೀರದಲ್ಲಿ "ಪ್ರಾಣ" ನಾಮಕನಾಗಿ, ೫೩ ರೂಪಗಳಿಂದ ತದ್ವಾಚ್ಯನಾಗಿದ್ದಾ ಪ್ರಾಣಮಯಕೋಶಗತ ಪ್ರದ್ಯುಮ್ನನು ಆ ಕೋಶಾಭಿಮಾನಿ "ಅಪಾ

5॥ ಶರೀರದಲ್ಲಿ "ಅಪಾನ" ಎಂಬ ಹೆಸರಿನಿಂದ ತದ್ವಾಚ್ಯನಾಗಿದ್ದು, ೫೦೦ ರೂಪಗಳಿಂದ ಇದ್ದಾನೆ. ಮನೋಮಯಕೋಶಗತ ಸಂಕರ್ಷಣನು ಆ ಕೋಶಾಭಿಮಾನಿ ವ್ಯಾನನಲ್ಲಿ ೫೧ ಅಕ್ಷರ ಸಾಂಕೇತ ರೂಪಗಳಿಂದ ಅಂತರ್ಗತನಾಗಿದ್ದಾನೆ. ವಿಜ್ಞಾಮಯ ಕೋಶಗತ ಮಾಯೇಶ ವಾಸುದೇವನು ಆ ಕೋಶಾಭಿಮಾನಿ ಉದಾನದಲ್ಲಿ "ಉದಾನ" ನಾಮಕನಾಗಿ ೫೫೫ ಅಂತರ್ಯಾಮಿ ರೂಪಗಳಿಂದ ಇದ್ದಾನೆ.

ಆನಂದಮಯಕೋಶಗತನಾದ ಮೂಲನಾರಾಯಣನು ಆ ಕೋಶಾಭಿಮಾನಿ ಸಮಾನನಲ್ಲಿ "ಸಮಾನ" ನಾಮಕನಾಗಿ ೫೫೭ ರೂಪಗಳಿಂದ ಅಂತಬರ್ಹಿಶ್ಚ ವ್ಯಾಪ್ತನಾನಾಗಿದ್ದಾನೆ. ಪಂಚಕೋಶಗತ ಅಭಿಮಾನಿಗಳ ವಿವೀಕ್ಷಾ ಒಟ್ಟು ಭಗವದ್ರೂಪಗಳ ಸಂಖ್ಯೆ ೧೭೧೧ ಆಗುವುದು. ಇಂತು
17॥ ರೂಪವಿಶಿಷ್ಟನಾಗಿ ಪ್ರಾಣಾದಿ ಪಂಚಪ್ರಾಣರಲ್ಲಿ ನೆಲೆಸಿದ್ದು ಸಮಸ್ತ ಜಗತ್ತನ್ನೂ ಪಾಲನೆಮಾಡುತ್ತಿರುವ ಪರಮ ಕರುಣಾಳು ಶ್ರೀಹರಿ !

ಮುಂದಿನ ಪದ್ಯದಲ್ಲಿ ಪಿತೃದೇವತೆಗಳ ವಿಚಾರವನ್ನು ತಿಳಿಸುತ್ತಾರೆ. ಪಿತೃ, ಪಿತಾಮಹ ಮತ್ತು ಪ್ರಪಿತಾಮಹ ಎಂಬ ಪಿತೃದೇವತೆಗಳ ವರ್ಗತ್ರಯದಲ್ಲಿ ಕ್ರಮವಾಗಿ ಅಷ್ಟವಸುಗಳು, ಏಕಾದಶ ರುದ್ರರು ಮತ್ತು ದ್ವಾದಶಾದಿತ್ಯರಲ್ಲಿ ಆಶ್ರಯವನ್ನು ಹೊಂದಿ, ದೇವತಾವರ್ಗ ೮ (ವಸುಗಳು)+೧೧ (ರುದ್ರರು)+೧೨ (ಆದಿತ್ಯರು)=೩೧ ಸಂಖ್ಯೆಯಾಯಿತು. ಒಂದೊಂದು ವರ್ಗದಲ್ಲೂ ಒಂದೊಂದು ಅನಿರುದ್ಧ ರೂಪದ ಪ್ರಕಾರ, ೩೧×೩=೯೩ ರೂಪಗಳಾಯಿತು. ಇದಕ್ಕೆ "ತ್ರಿನವತಿ" (ತೊಂಬತ್ತು ಮೂರು) ಎಂದು ಹೆಸರು. ಇಂತು ತ್ರಿನವತಿ ಸ್ವರೂಪಾತ್ಮಕನಾದ ಅನಿರುದ್ಧ ರೂಪೀ ಶ್ರೀ ಪರಮಾತ್ಮನು ಯಾವಾಗಲೂ "ಯಜಮಾನ"ನೆಂದೆನಿಸಿ, ಅಗ್ನಿ, ಯಮದೇವರು, ಚಂದ್ರ ಮೊದಲಾದ ದೇವತೆಗಳ ದ್ವಾರಾ ಪಿತೃದೇವತೆಗಳಿಗೆ ಅನ್ನವಾಚ್ಯನಾಗಿದ್ದು, "ಅನ್ನ" ಎಂದು ಕರೆಯಿಸುತ್ತಾನೆ. ಆ ಅನಿರುದ್ಧರೂಪೀ ಪರಮಾತ್ಮನೇ ಪ್ರದ್ಯುಮ್ನರೂಪದಿಂದ ದೇವಭಾಗ ಬೇರೆ ಮತ್ತು ಸಂಕರ್ಷಣ ರೂಪದಿಂದ ಪಿತೃಭಾಗ ಬೇರೆ ಈ ರೀತಿ ವಿಭಾಗಿಸಿ,

ಪಿತೃಭಾಗ ಅಗ್ನಿದ್ವಾರಾ. ಪಿತಾಮಹನ ಭಾಗ ಯಮನ ದ್ವಾರಾ, ಪ್ರಪಿತಾಮಹನ ಭಾಗ ಚಂದ್ರನ ದ್ವಾರಾ ಪಿತೃದೇವತೆಗಳಿಗೆ ಉಣಿಸುತ್ತಾ, ಆ ಅನಿರುದ್ಧನೇ "ತುರ್ಯ" ಎಂಬ ನಾಮವಾಚ್ಯನಾಗಿ ವಾಸುದೇವರೂಪದಿಂದ ತೃಪ್ತಿಯನ್ನೀಯುವನು.

ಷಣ್ಣವತಿನಾಮಕನಾದ ಶ್ರೀಪರಮಾತ್ಮನು (೯೬ ರೂಪಗಳಿಂದ) ಅಷ್ಟ ವಸುಗಳಲ್ಲಿ ಏಕಾದಶ ರುದ್ರರಲ್ಲಿ ಮತ್ತು ದ್ವಾದಶಾದಿತ್ಯದಲ್ಲಿ ಸ್ಥಿತನಾಗಿ ಶರಣಾಗತರಾದ ತನ್ನ ಭಕ್ತಜನರು ಶುದ್ಧ ಮನಸ್ಸಿನಿಂದ ಭಕ್ತಿಪೂರ್ವಕವಾಗಿ ಮಾಡುವ ಪುಣ್ಯ ಕರ್ಮಗಳನ್ನು ಸ್ವೀಕರಿಸಿ, ಅವರವರ ಪಿತೃದೇವತಾಗಣಕ್ಕೆ ಪರಮಾನಂದವನ್ನು ಕೊಟ್ಟು ಕಾಪಾಡುವನು.

ಬ್ರಹ್ಮಾದಿಜೀವರನ್ನು ಪಾಲನಮಾಡುವ "ಸುತಪ" ನಾಮಕನಾದ ಶ್ರೀಪರಮಾತ್ಮನು ಅಕಾರದಿಂದ ಪ್ರಾರಂಭಿಸಿ, ಕ್ಷಕಾರಪರ್ಯಂತ ಐವತ್ತೊಂದು ಅಕ್ಷರಗಳಲ್ಲಿ ವ್ಯಾಪ್ತನಾಗಿ ವರ್ಣವಾಚ್ಯನಾಗಿದ್ದು, ೨೪ ತತ್ತ್ವಗಳಲ್ಲಿ ಸಮೀಚೀನವಾದ ಕೇಶವಾದಿ ಚತುರ್ವಿಂಶತಿ ರೂಪಗಳಿಂದ ವಿಶಿಷ್ಟನಾಗಿದ್ದು, ತ್ವಗಾದಿ ಸಪ್ತಧಾತುಗಳಲ್ಲಿ ಅನಿರುದ್ಧಾದಿ ಪಂಚರೂಪಗಳು ವಸಿಷ್ಠ ಮತ್ತು ಹಂಸನಾಮಕನಾಗಿ ಎರಡು ರೂಪಗಳು. ಅಂದರೆ ಒಟ್ಟು ಸಪ್ತರೂಪಗಳಿಂದ ಇದ್ದು, ಅನಿರುದ್ಧನಾಮಕ ಶ್ರೀ ಪರಮಾತ್ಮನು ಬ್ರಹ್ಮಾಂಡದಲ್ಲಿ ಜೀವಗಣವನ್ನು ಕ್ಷೇತ್ರೇಶರ ದ್ವಾರಾ ಸಂರಕ್ಷಣ ಮಾಡುತ್ತಿರುವನು. ಪೂರ್ವೋಕ್ತ ೯೬ ಶ್ರಾದ್ಧಕಾಮಿಯಾದ ಷಣ್ಣವತಿನಾಮಕನಾದ ಅನಿರುದ್ಧಮೂರ್ತಿಯ ಚತುರಮೂರ್ತಿಗಳನ್ನು (ಅನಿರುದ್ಧ ಅನಿರುದ್ಧ ; ಅನಿರುದ್ಧ ಪ್ರದ್ಯುಮ್ನ ; ಅನಿರುದ್ಧ ಸಂಕರ್ಷಣ ಮತ್ತು ಅನಿರುದ್ಧ ವಾಸುದೇವ ಎಂಬ ಈ ನಾಲ್ಕು ರೂಪಗಳು) ಪಿತೃಕಾರ್ಯಗಳಲ್ಲಿ ಅನುಸಂಧಾನ ಪೂರ್ವಕ ಪೂಜಾ ಮಾಡುವವರು ಪರಮಜ್ಞಾನಿಗಳೆಂದೆನಿಸುವರು.

ಸಮಗ್ರ ಬ್ರಹ್ಮಾಂಡವನ್ನೇ ತನ್ನ ಉದರದಲ್ಲಿ ಧರಿರುವ ಶ್ರೀಹರಿಯು ರಾಮಾವತಾರಕಾಲದಲ್ಲಿ ದಂಡಕಾರಣ್ಯದಲ್ಲಿ ಶಬರೀ ಎಂಬ ತನ್ನ ಭಕ್ತಳು ಕೊಟ್ಟ ಫಲಗಳನ್ನು ಸ್ವೀಕರಿಸಿದನು. ಗೋಕುಲದಲ್ಲಿ ಅಬಲೆಯರಾದ

ಗೋಪಿಕಾಸ್ತ್ರೀಯರ ಭಕ್ತಿಗೆ ಒಲಿದನು. ಋಷಿಪತ್ನಿಯರು ಕೊಟ್ಟನ್ನವನ್ನೇ ಭುಂಜಿಸಿದನು. ಕುಬುಜೆ ನೀಡಿದ ಗಂಧವನ್ನು ಸ್ವೀಕರಿಸಿ, ಅವಳ ಕುರೂಪವನ್ನು ಕಳೆದು, ಉದ್ಧರಿಸಿದ ಪರಮ ಕರುಣಾಳು. ಋಷಿವರ್ಗ ಮತ್ತು ಜ್ಞಾನಿಗಳಿಂದ ಸಂಸೇವ್ಯಮಾನನಾದ ಶ್ರೀ ಪರಮಾತ್ಮನು ನಿತ್ಯತೃಪ್ತನು ಹಾಗೂ ಸ್ವರಮಣನು. ಅಂತಹ ಕರುಣಾಮಯನಾದ ಜಗತ್ಪ್ರಭುವು ನಾವರ್ಪಿಸಿದ ಕರ್ಮಗಳನ್ನು ಎಂದಿಗಾದರೂ ಸ್ವೀಕರಿಸದೆ ಬಿಡುತ್ತಾನೆಯೇ ?

ಸರ್ವೋತ್ತಮನಾದ ಶ್ರೀಹರಿಯ ಜ್ಞಾನಸವಂದಾದಿಗಳು ಅಗಣಿತ, ಅಪರಿಚ್ಛಿನ್ನ ಮತ್ತು ನಿತ್ಯದಲ್ಲೂ ಪರಿಪೂರ್ಣವಾದುವು. ರಮಾ, ಬ್ರಹ್ಮ, ರುದ್ರ ಇಂದ್ರಾದಿ ಸಮಸ್ತದೇವತಾವರ್ಗದಿಂದ ಪ್ರಾರಂಭಿಸಿ ತೃಣಾಂತಮುಕ್ತಿ ಯೋಗ್ಯರ ಸ್ವರೂಪಗತ ಆನಂದಗುಣಗಳ ಮೊತ್ತ ಸೇರಿದರೂ, ಶ್ರೀ ಪರಮಾತ್ಮನ ಲೇಶವಾದ (ಅತ್ಯಲ್ಪವಾದ) ಗುಣಕ್ಕೂ, ಆನಂದಕ್ಕೂ ಸಮ ವಾಗಲಾರದು. ಅಂತಹ ಅಪರಿಮಿತ ಆನಂದೋದ್ರಿಕ್ತವಸ್ತು ಶ್ರೀ ಪರಮಾತ್ಮನು ! ನಾವು ಭೋಜನ ಮಾಡುತ್ತಿರುವ ಕಾಲದಲ್ಲಿ ಹರಿನಾಮ ಸ್ಮರಣೆಯಿಂದಲೂ, ಭೋಜ್ಯಪದಾರ್ಥಗಳ ಭಗವದ್ರೂಪಗಳ ಚಿಂತನೆ ಯಿಂದಲೂ ಮೈಸ್ಮರಣೆಹಾರಿ, ಮತ್ತು ತುತ್ತುತುತ್ತಿಗೂ ಕೃಷ್ಣಾರ್ಪಣಭಾವ ದಿಂದ ತದೇಕ ಚಿತ್ತನಾದವನ ಭೋಜನ ಯಜ್ಞರೂಪವಾದ ಕರ್ಮವನ್ನು ಊಟ ಮಾಡುವಾಗ ಮಗುವು ಕೈಯೊಡ್ಡಿ ತನ್ನ ತಾಯಿಯು ಕೊಡುವ ಅನ್ನವನ್ನು ಸ್ವೀಕರಿಸುವಂತೆ ಕೈಗೊಂಬನು.

ತ್ರಿವಿಧಜೀವರು ಮಾಡುವ ಕರ್ಮಗಳನ್ನು ಶ್ರೀ ಪರಮಾತ್ಮನು ತಾನೇ ಬಿಂಬಕ್ರಿಯಾ ದ್ವಾರಾಮಾಡಿ, ಅವರ ದ್ವಾರಾಮಾಡಿಸಿ. ಆಯಾಯಾ ಜೀವರ ಅಧಿಷ್ಠಾನದಲ್ಲಿ ಆಚರಿಸಲ್ಪಟ್ಟ ಕರ್ಮಗಳನ್ನೇ ರಮಾವರನು ಸ್ವೀಕರಿಸಿ. ಅವ ರವರ ಯೋಗ್ಯತಾನುಸಾರ ಆಯಾಯಾ ಕರ್ಮಜನ್ಯವಾದ ಫಲಕವನ್ನೀಯುವನು ಅಗ್ನಿಯು ಹೇಗೆ ತನ್ನಲ್ಲಿ ಹಾಕಿದ ಸಮಸ್ತವಸ್ತುಗಳನ್ನೂ ಭಸ್ಮೀಭೂತಮಾಡಿ ತಾನು ಹೇಗೆ ಯಾವ ವಿಕಾರವನ್ನೂ ಹೊಂದದೆ. ನಿರ್ಲಿಪ್ತನಾಗಿರುವಂತೆ ಜಗದ್ವಿಲಕ್ಷಣನಾದ ಶ್ರೀಹರಿಯು ಜೀವಕೃತ ಕರ್ಮವಿಶೇಷಗಳಿಂದ ತಾನು ನಿರ್ಲಿಪನಾಗಿದ್ದು, ಪವಿತ್ರವಾದ ಪದಾರ್ಥಗಳಿಗೆ ಪಾವಿತ್ರ್ಯವನ್ನು ತಂದು

ಕೊಡುವ (ಪಾವನಕೆ ಪಾವನನಿಪ) ಶ್ರೀ ಪರಮಾತ್ಮನು ಜೀವರು ಅರ್ಪಿಸಿದ್ದನ್ನು ಸ್ವೀಕರಿಸುವನು ಎಂಬುದರಲ್ಲಿ ಏನು ಆಶ್ಚರ್ಯ !

ರೋಗಾದಿ ಉಪದ್ರವಗಳಿಂದ ಕಲುಷಿತವಾಗಿರುವ (ರುಚಿಕೆಟ್ಟಿರುವ) ನಾಲಿಗೆಗೆ ಸುರಸೋಪೇತಗಳಾದ ದಿವ್ಯ ಭಕ್ಷ್ಯಭೋಜ್ಯಗಳು ಮತ್ತು ಪರಿಶುದ್ಧವಾದ ನೀರು ರುಚಿತೋರದೇ ಕಹಿಯಾಗಿ ತೋರುತ್ತವೆ. ಇದಕ್ಕೆ ಜಿಹ್ವೆಯಲ್ಲಿರುವ ದೋಷವೇ ಕಾರಣ ಹೊರತು ಸುರಸ ಭೋಜನ ಪದಾರ್ಥಗಳಲ್ಲ. ಅಂತೆಯೇ ಪರಮಮಂಗಳವಿಗ್ರಹನಾದ ಪರಮಪಾವನಮೂರ್ತಿ ಶ್ರೀ ಪರಮಾತ್ಮನಿಗೆ ಸಕಲ ರಸವಿಶೇಷಗಳೂ ಶುಭರಸಗಳೆನಿಸುತ್ತವೆ. ರಸಗತ ಸ್ವಾಖ್ಯರಸವನ್ನು ಮಾತ್ರ ತಾನು ಸ್ವೀಕರಿಸುವುದರಿಂದ ಆ ಸ್ವಾಖ್ಯರಸಾಖ್ಯವಾದ ಭಗವದ್ರೂಪಗಳು ನಿತ್ಯವೂ ಮಂಗಳಸ್ವರೂಪಗಳೇ ಆಗಿವೆ. ಅನ್ನಾಂತರ್ಗತನಾಗಿ ಅನ್ನಮಯ ಶಬ್ದವಾಚ್ಯನಾದ ಶ್ರೀ ಅನಿರುದ್ಧರೂಪೀ ಪರಮಾತ್ಮನು, ಸ್ವಭಕ್ತರು ಅನುಸಂಧಾನಪೂರ್ವಕವಾಗಿ ಅರ್ಪಿಸುವ ಕರ್ಮಗಳನ್ನು ಸ್ವೀಕರಿಸುವನೇ ಹೊರತು ಬಿಡುವುದಿಲ್ಲ. ಊರ್ವಶ್ಯಾವಿಷ್ಟಳಾದ ಪೂತನಿ ಎಂಬ ರಾಕ್ಷಸಿಯು ತನಗೆ ಉಣಿಸಿದ ವಿಷಪೂರಿತವಾದ ಹಾಲನ್ನು ಉಂಡು, ಸ್ತನಗತ ವಿಷಗತ ಸ್ವಾಖ್ಯ ರಸ ತಾನು ಭೋಜನಮಾಡಿ, ತನ್ನಿಂದ ಭಿನ್ನವಾದ ಜಡ ವಿಷರಸವನ್ನು ತ್ಯಜಿಸಿ, ಪೂತನಿಯ ಪ್ರಾಣವನ್ನೇ ಹೀರಿ, ಸಂಹರಿಸಿದನು, ಆ ರಾಕ್ಷಸಿಯಲ್ಲಿ ಆವಿಷ್ಟಳಾಗಿದ್ದ ಊರ್ವಶಿಗೆ ಸದ್ಗತಿಯನ್ನೇ ಕರುಣಿಸಿ, ರಾಕ್ಷಸಿಯನ್ನು ಅಂಧಃ ತಮಸ್ಸಿಗೆ ಕಳುಹಿಸಿದನು.

ಜೀವೋತ್ತಮರಾದ ವಾಯುದೇವರು ಕ್ಷೀರಸಮುದ್ರ ಮಥನ ಕಾಲದಲ್ಲಿ ಉತ್ಪನ್ನವಾದ ಅತ್ಯಂತ ಉಗ್ರಸ್ವರೂಪವುಳ್ಳ ಕಾಲಕೂಟವೆಂಬ ವಿಷವನ್ನೇ ಶ್ರೀ ಪರಮಾತ್ಮನ ಆಜ್ಞಾದಿಂದ ಪಾನಮಾಡಿ, ಜಗತ್ತನ್ನೇ ಸಂರಕ್ಷಿಸಿದರು. ಆ ವಾಯುದೇವರ ಶಿಷ್ಯರಾದ ಪಾರ್ವತೀಪತಿ ಮಹರುದ್ರ ದೇವರು ವಾಯುದೇವರಿಂದ ದತ್ತವಾದ ಶೇಷಗರಳವನ್ನು ಭುಂಜಿಸಿ, ಅಮೃತನೆಂದೆನಿಸಿದರು, ಶ್ರೀಲಕುಮೀವಲ್ಲಭನಾದ ಶ್ರೀಪರಮಾತ್ಮನ ಶಕ್ತಿ ಸಾಮರ್ಥ್ಯಗಳು ವಾಯ್ವಾದಿ ಜೀವಗಣಗಳಿಗಿಂತ ಪರಮ ವಿಲಕ್ಷಣವಾಗಿರುವುದರಿಂದ, ಅಪರಿಮಿತ ಹಾಗೂ ಅಚಿಂತ್ಯಾದ್ಭುತ ಮಹಿಮಾಸಂಪನ್ನನು. ಏತಾದೃಶಮಹಿ

ಮೋಪೇತನಾದ ಶ್ರೀ ಪರಮಾತ್ಮನು ಶುಭ ಮತ್ತು ಅಶುಭ ಕರ್ಮಜಾಲಗಳಿಂದ ಜನ್ಯವಾದ ಫಲಗಳನ್ನು (ಸ್ವಭಕ್ತರು ಭಕ್ತ್ಯಾತಿಶದಿಂದ ತನಗೆ ಅರ್ಪಿಸಿದ ದ್ವಂದ್ವ ಕರ್ಮವಿಶೇಷಗಳನ್ನು) ಸ್ವೀಕರಿಸುವನು. ಇದರಿಂದ ಜೀವಜಡವರ್ಗ ಗಳಿಂದ ಪರಮ ಭಿನ್ನನಾದ ಶ್ರೀ ಪರಮಾತ್ಮನಿಗೆ ಯಾವ ವಿಧವಾದ ವಿಕಾರವೂ ಇಲ್ಲ. ಜನದ್ವಿ ಲಕ್ಷಣನಾದ ನಿರ್ಲಿಪ್ತನಾದ ಜಗತ್ಸ್ವಾಮಿಗೆ ಶುಭರಸಗಳಿಂದ ಏಳಿಗೆಯಾಗಲೀ (ಉಪಚಯ) ಅಶುಭ ರಸದಿಂದ ದೇಹ ಕ್ಷೀಣತೆಯಾಗಲೀ ಯಾವುದೂ ಉಂಟಾಗುವುದಿಲ್ಲ. ಸ್ವಾಖ್ಯ ರಸಗಳನ್ನೇ ಮಾತ್ರ ಸ್ವೀಕರಿಸುವ ನಿತ್ಯ ತೃಪ್ತನೂ ಸ್ವರಮಣನೂ ಆದ ಶ್ರೀ ಪರಮಾತ್ಮನು ನಿರ್ವಿಕಾರನಾಗಿ ಶಪ್ಪ ದ್ರೇಕ ಪ್ರಕಾರವಾಗಿರುವನು.

ಪೂರ್ವೋಕ್ತ ಕ್ರಮದಲ್ಲಿ ಚ್ಯುತಿರಹಿತನಾದ ಅಮೃತರೂಪೀ ಶ್ರೀ ಪರಮಾತ್ಮನ ಭೋಜನೋಪಯೋಗ್ಯವಾದ ದ್ರವ್ಯಾಧಿಷ್ಠಾನಗಳಲ್ಲಿ ತದ್ರೂಪ, ತದಾಕಾರ, ತದ್ವಾಚ್ಯ ಮತ್ತು ತನ್ನಾಮಕನಾಗಿ ಇರುವ ಭಗವದ್ರೂಪಗಳನ್ನು ಚಿಂತಿಸುತ್ತಾ ವಿಷಯಾದಿಗಳನ್ನು ಭೋಗಿಸುತ್ತಿರು ಎಂದು ದಿವ್ಯಸಂದೇಶವನ್ನು ಸಾರುತ್ತಾರೆ ಜ್ಞಾನಿವರೇಣ್ಯರಾದ ದಾಸವರ್ಯರು. ಜಗತ್ಸೃಷ್ಟಿಗೆ ಮುಖ್ಯ ಕಾರಣನೂ, ನಿಯಾಮಕನೂ, ಸರ್ವತ್ರವ್ಯಾಪ್ತನೂ ಎಂದು ಗುರೂಪದೇಶ ದ್ವಾರಾ ಶಾಸ್ತ್ರಯೋನಿತ್ವಾತ್ ತಿಳಿದು, ಸಾಧಕರು ಸಂಸಾರದಲ್ಲಿ ನೀರಿನಲ್ಲಿ ಪದ್ಮಪತ್ರವಿದ್ದಂತೆ, ನಿರ್ಲಿಪ್ತರಾಗಿದ್ದು, ದ್ವಂದ್ವ ಕರ್ಮಜನ್ಯ ಫಲರೂಪ ವಾದ ಪುಣ್ಯ ಪಾಪಗಳನ್ನು ನಿರ್ವಿಕಾರನೂ ಜಗದ್ವಿ ಲಕ್ಷಣನೂ ದಿವ್ಯ ಮಂಗಳ ವಿಗ್ರಹನೂ ಆದ ಶ್ರೀ ಪರಮಾತ್ಮನ ಪಾದಾರವಿಂದಗಳಿಗೆ ಅರ್ಪಿಸಬೇಕೆಂದು ಬೋಧಿಸಿದ್ದಾರೆ.

585400 ಅನ್ನಮಯಾದಿ ಕೋಶಗತರೂಪಗಳು ೫೮೫೪೦೦ ಮತ್ತು ಅನ್ನ ಕೋಶಾದಿ ರೂಪಗಳು ೪೩೦೫ ಆ ಭಗವದ್ರೂಪಗಳು ಒಟ್ಟು ಐದು ಲಕ್ಷದ
589705 ಎಂಭತ್ತೊಂಬತ್ತು ಸಾವಿರದ ಏಳನೂರ ಐದು ರೂಪಗಳನ್ನು ಧರಿಸಿ, ಭೋಜನಮಾಡುವ ಭೋಕ್ತೃಗಳೊಳಗೆ "ಭೋಕ್ತೃ" ನಾಮಕನಾಗಿಯೂ ಮತ್ತು ಭೋಜನಯೋಗ್ಯವಾದ ಪದಾರ್ಥಗಳಲ್ಲಿ "ಭೋಜ್ಯ" ಶಬ್ದ ವಾಚ್ಯ ವಾಗಿಯೂ ಇದ್ದು, ಶ್ರೀ ಭೂ ದುರ್ಗಾರಮಣನಾದ ಪುರುಷರೂಪೀ ಶ್ರೀ

ಪರಮಾತ್ಮನು ಈ ಸ್ಥೂಲ ದೇಹದಲ್ಲಿ ಪಾದಾದಿ ಶಿರಪರ್ಯಂತ ಜ್ಞಪ್ತವ್ಯೋತ ನಾಗಿ ವ್ಯಾಪಿಸಿದ್ದು, ಜೀವರನ್ನು ಸರ್ವಕಾಲಗಳಲ್ಲಿಯೂ ಸಂರಕ್ಷಿಸುತ್ತಿ ರುವನು ಎಂದು ಈ ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾ, ತಮ್ಮ ಬಿಂಬರೂಪೀ ಶ್ರೀ ಜಗನ್ನಾಥವಿಠ್ಠಲನ ದಿವ್ಯ ಪಾದಪದ್ಮಗಳಲ್ಲಿ ಅರ್ಪಿಸಿ, ಕೃತ ಕೃತ್ಯರಾಗಿದ್ದಾರೆ ಜ್ಞಾನಿಶ್ರೇಷ್ಠಂಶ್ರೀ ಜಗನ್ನಾಥದಾಸವರೇಣ್ಯರು.

**||ಇಂತು ಶ್ರೀ ಜಗನ್ನಾಥದಾಸವರ್ಯಕೃತ ಅವರ ಅಮರಕೃತಿ ಶ್ರೀಮದ್ಹರಿಕಥಾಮೃತಸಾರದಲ್ಲಿ, "ಭೋಜನರಸವಿಭಾಗಸಂಧಿ"ಯ ಸಾರಾಂಶ ಮುಗಿಯಿತು ||**

|| ಶ್ರೀ ಮಧ್ವೇಶಾರ್ಪಣ ಮಸ್ತು ||

॥ ಶ್ರೀಃ ಹರಿಃ ಓಂ ॥

॥ ಶ್ರೀ ಲಕ್ಷ್ಮೀನಾರಸಿಂಹಾಭಿನ್ನ ಶ್ರೀ ಜಗನ್ನಾಥವಿಠ್ಠಲಾಯ ನಮಃ ॥

## ನಾಲ್ಕನೆಯ ಸಂಧಿ

## ಭೋಜನರಸವಿಭಾಗಸಂಧಿ

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

## ಪದ್ಯ (೧)

ಮೂಲ :

ವನಜಜಾಂಡದೊಳುಳ್ಳಖಿಳ ಚೇ ।
ತನರು ಭುಂಜಿಪ ಚತುರವಿಧ ಭೋ ।
ಜನಪದಾರ್ಥದಿ ಚತುರವಿಧ ರಸರೂಪ ತಾನಾಗಿ ॥
ಮನಕೆ ಬಂದುದನುಂಡುಣಿಸಿ ಸಂ ।
ಹನನಕುಪಚಯ ಕರಣಕಾನಂ ।
ದನಿಮಿಷರಿಗಾತ್ಮಪ್ರದರ್ಶನ ಸುಖವನೀವ ಹರಿ ॥೧॥

**ಅವತರಣಿಕೆ :**

ಈ ಬ್ರಹ್ಮಾಂಡದಲ್ಲಿರುವ ಸಮಸ್ತಚೇತನರೂ ಭೋಜನಮಾಡುವ ಪದಾರ್ಥಗಳು ನಾಲ್ಕು ಪ್ರಕಾರ ಇವೆ. ಈಚತುರ್ವಿಧ ಭೋಜನವಸ್ತುಗಳಲ್ಲಿ ಆಯಾಯಾ ಪದಾರ್ಥಗತರಸ ಪ್ರಾಚುರ್ಯನಾಗಿ. ನಿತ್ಯತೃಪ್ತನಾದ ಶ್ರೀ ಪರಮಾತ್ಮನು ಭೋಜನ ಯೋಗ್ಯ ವಸ್ತುಗತ ರಸಗಳನ್ನು ತಾನು ವಿಭಾಗಿಸಿ, ಸ್ವಾಖ್ಯರಸವಿಶೇಷವನ್ನು ಮಾತ್ರ ತಾನು ಸ್ವೀಕರಿಸಿ, ಜಡರಸವನ್ನು ಈ ಸ್ಥೂಲ ದೇಹದ ಉಪಚಯಕ್ಕೂ, ಆನಂದ ರಸವನ್ನು ಕರಣಾಭಿಮಾನಿಗಳಾದ ತತ್ವ ದೇವತೆಗಳಿಗೂ ಹಂಚಿ, ತದ್ವಾರಾ ಇಂದ್ರಿಯಗಳ ಮೂಲಕ ಜೀವನಿಗೆ ತೃಪ್ತಿಯನ್ನೀಯುವನು ಎಂದು ಹೇಳುತ್ತಾರೆ. "ವನಜಜಾಂಡದೊಳು" ಎಂಬ ಸಂಧಿಗತ ಈ ಪ್ರಥಮ ಪದ್ಯದಿಂದ ॥೧॥

**ಪ್ರತಿಪದಾರ್ಥ :**

**ವನಜಜಾಂಡದೊಳುಳ್ಳ**ಈ ಬ್ರಹ್ಮಾಂಡದಲ್ಲಿರತಕ್ಕ (ವನಜ = ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭಿಯಲ್ಲಿ ಉತ್ಪನ್ನವಾದ ಚತುರ್ದಶದಳಾತ್ಮ "ವಾದ ಕಮಲ; ವನಜಜ = ಆಕಮಲದಲ್ಲಿ ಉತ್ಪನ್ನರಾದ ಚತುರ್ಮುಖ ಬ್ರಹ್ಮದೇವರು; ವನಜಜಾಂಡ = ಬ್ರಹ್ಮಾಂಡ) **ಅಖಿಳಚೇತನರು** = ಸಮಸ್ತ ಜೀವವರ್ಗವೂ **ಭುಂಜಿಪ** = ತಿನ್ನುವ **ಚತುರವಿಧ** = ನಾಲ್ಕುಪ್ರಕಾರವಾದ, ಗಂದರೆ ಖಾದ್ಯ, ಪೇಯ, ಚೋಷ್ಯ ಮತ್ತು ಲೇಹ್ಯ ಎಂಬ ನಾಲ್ಕು ವಿಧಗಳಾದ **ಭೋಜನಪದಾರ್ಥದಿ** = ಭೋಜನಕ್ಕೆ ಯೋಗ್ಯವಾದ ಪದಾರ್ಥಗಳಲ್ಲಿ (ನಿಷಿದ್ಧವಲ್ಲದ ಭೋಜ್ಯವಸ್ತುಗಳು) **ಚತುರವಿಧ** = ರುಚಿಸಾಂಕೇತವಾದ ಪೂರ್ವೋಕ್ತ ನಾಲ್ಕುವಿಧವಾದ **ರಸರೂಪತಾನಾಗಿ** = ರಸವಿಶೇಷಗಳಲ್ಲಿ ತದಾಕಾರದಿಂದ ತದ್ವಾಚ್ಯನಾಗಿ ರಸಾಖ್ಯರೂಪಗಳನ್ನು ಧರಿಸಿ **ಮನಕೆ ಬಂದುದನು** = ಯಾವಯಾವ ಪದಾರ್ಥಗಳಿಂದ ದೇಹಧಾರಿಗಳಾದ ಜೀವರಿಗೆ ಭೋಜನಮಾಡಿಸಬೇಕೆಂದು ತನ್ನ ಮನಸ್ಸಿಗೆ ಬರುತ್ತದೆಯೋ, ಅಂದರೆ ತನ್ನ ಸಂಕಲ್ಪಾನುಸಾರ **ಉಂಡು** = ಆಯಾಯಾಪದಾರ್ಥಗಳ ಸ್ವಾಖ್ಯರಸವಿಶೇಷಗಳನ್ನು ತಾನು ಸ್ವೀಕರಿಸಿ **ಉಣಿಸಿ** = ಬಿಂಬಕ್ರಿಯಾದ್ವಾರಾ ಜೀವರಿಗೆ ತೃಪ್ತಿಯನ್ನು ನೀಡಿ **ಸಂಹನನಕೆ** = ಸ್ಥೂಲಶರೀರಕ್ಕೆ (ಈ ಶರೀರವು ನಾಶವಾಗು

ವುದರಿಂದ "ಸಂಹನನ" ಎಂದು ಹೆಸರು) **ಉಪಚಯ**=ಜಡರಸದ್ವಾರಾ ಪುಷ್ಟಿಯನ್ನು ಕೊಟ್ಟು (ಉಪಚಯ ಎಂದರೆ ಉಬ್ಬುವುದು—ಬೆಳವಣಿಗೆ) **ಕರಣಕೆ**=ಮನಸ್ಸು ಮೊದಲಾದ ಇಂದ್ರಿಯಗಳಿಗ **ಅನಂದ**=ಸುಖವನ್ನೂ **ಅನಿಮಿಷರಿಗೆ**=ತತ್ವಾಭಿಮಾನಿ ದೇವತೆಗಳಿಗೆ (ರೆಪ್ಪೆ ಇಲ್ಲದಿರುವುದರಿಂದ ದೇವತೆಗಳು "ಅನಿಮಿಷರು") **ಆತ್ಮಪ್ರದರ್ಶನ**=ತನ್ನ ಸ್ವರೂಪದರ್ಶನರೂಪ ವಾದ **ಸುಖವನು**=ಆನಂದವನ್ನು **ಈವ ಹರಿ**=ಬಿಂಬರೂಪಿಯಾದ ಶ್ರೀ ಪರಮಾತ್ಮನು ಕೊಡುತ್ತಾನೆ. ॥ ೧ ॥

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :

ಉದಕದಲ್ಲಿ ಉತ್ಪನ್ನವಾದ ಕಮಲದಲ್ಲಿ (ವನಜಜ) ಚತುರ್ಮುಖ ಬ್ರಹ್ಮದೇವರಿಂದ ಅಭಿಮನ್ಯಮಾನವಾದ ಅಂಡಾಕಾರವಾದ ಬ್ರಹ್ಮಾಂಡ ಸುವರ್ಣಾತ್ಮಕವಾದದ್ದು. ಹದಿನಾಲು ಲೋಕಾತ್ಮಕ ಹದಿನಾಲ್ಕುದಳಯುಕ್ತ ವಾದದ್ದು. ಇದು ಶ್ರೀಪದ್ಮನಾಭದೇವರ ನಾಭಿಕಮಲದಲ್ಲಿ ಉತ್ಪನ್ನವಾಗಿ ಅದರಲ್ಲಿ ಸಂಸೃಷ್ಟದೇಹದಿಂದ ಉತ್ಪನ್ನವಾಗಿ ಚತುರ್ಮುಖಗಳಾಗಿರುವ ಬ್ರಹ್ಮಾಭಿಮನ್ಯಮಾನವಾದ ಬ್ರಹ್ಮಾಂಡದೊಳು (ವನಜಜಾಂಡದೊಳು), ಸಂಸೃಷ್ಟ ದೇಹಗಳಿಂದ ಯುಕ್ತವಾಗಿ ಇರತಕ್ಕ (ಉಳ್ಳ), ಬ್ರಹ್ಮಾದಿತೃಣಾಂತ ತ್ರಿವಿಧಜೀವರು (ಚೇತನಶಬ್ದ ಸ್ಥಾವರ ಜೀವರ ವ್ಯಾವರ್ತನೆ ಮಾಡುತ್ತದೆ. "ಭುಂಜಿಪ" ಎನ್ನತಕ್ಕ ಪದ ಮುಂದೆ ಇರೋಣದರಿಂದ ಸ್ಥಾವರ ಜೀವರು ಉದಕವನ್ನು ಭೋಜನ ಮಾಡತದೆ, ಆದ್ದರಿಂದ ಉಭಯಜೀವರೂ ಗ್ರಾಹ್ಯ. ವೃಕ್ಷಾದಿಗಳಿಗೆ ಸ್ವಪ್ನಾವಸ್ಥಾ ಮಾತ್ರವೇ ಆದ್ದರಿಂದ ಚೇತನರು ದಿಕ್ಪ ದರ್ಶವೂ) ಅವರವರ ಯೋಗ್ಯತಾನುಸಾರ ಶ್ರೀ ಪರಮಾತ್ಮನಿಂದ ನಿಯಮಿತವಾದ ಭೋಜನಮಾಡತಕ್ಕ (ಭುಂಜಪ) ನಾಲ್ಕುವಿಧ ಪದಾರ್ಥಗಳಲ್ಲಿ ಅವು ದಾವು ವೆಂದರೆ= (೧) ಪೃಥಕ್ ತಂಡುಲಾದಿ ದ್ರವ್ಯಗಳು. ಇನ್ನೂ ಕಠಿಣಗಳಾದ

ಸಾರದ್ರವ್ಯಗಳ ದಂತದಿಂದ ಅಗಿದು, ತಿಂಬೋ ಪದಾರ್ಥಗಳಿಗೆ "ಖಾದ್ಯ" ಎಂತ ನಾಮ. (೨) ದ್ರವರೂಪವಾದ ರಸಾಯನಾದಿ ಪದಾರ್ಥಗಳು, ಪಾನಕದಂತೆ ಕುಡಿಯುವ ಪದಾರ್ಥಗಳಿಗೆ "ಪೇಹ್ಯ"—ಎಂತ ನಾಮ. (೩) ಅಗ್ನಿ, ಉದಕಗಳಿಂದ ಪಕ್ವವಾಗಿ ಮೆತ್ತಗೆ ಪಚನವಾಗಿದ್ದರನ್ನ ನಾಲಿಗೆಯಿಂದ ಹೊರಳಿಸಿ, ತಿಂಬೋ ಪದಾರ್ಥಗಳಿಗೆ "ಚೋಷ್ಯ"—ಎಂತನಾಮ. (೪) ನಾಲಿಗೆಗೆ ಸ್ಪರ್ಶಮಾಡಿ ಚಪ್ಪರಿಸಿ ರಸ ತಿಳಕೊಂಬೋ ಚಟ್ನಿ ಮೊದಲಾದ ಹಸಿ ಪದಾರ್ಥಗಳಿಗೆ "ಲೇಹ್ಯ"—ಎಂತನಾಮ. ಈ ನಾಲ್ಕೂ ಸುಚೇತನರು ಭುಂಜಿಸತಕ್ಕ ಪದಾರ್ಥಗಳು. (ಚತುರವಿಧ ಭೋಜನ ಪದಾರ್ಥವಿ) ವೃಕ್ಷಾದಿ ಗಳಲ್ಲಿ ಪಾನಮಾತ್ರವೇ. ಈ ಪ್ರಕಾರ ಚತುರ್ವಿಧದಿಂದ ಇರತಕ್ಕ, ಭೋಜ ನಕ್ಕೆ ಯೋಗ್ಯವಾದ ಜಡರೂಪವಾದ ಏತಾದೃಶ ಪದಾರ್ಥಗಳಲ್ಲಿ ಒಂದು ಒಂದರಲ್ಲಿ, ಒಂದೊಂದು ರುಚಿಪೋರೆಗೆ ನಾಲ್ಕು ರುಚಿಗಳು ಇವೆ. (ಚತುರ ವಿಧ ರಸರೂಪತಾನಾಗಿ). ಈ ರುಚಿ ಎಂಬುದು ಷಡ್ರಸಗಳಲ್ಲಿ ಸೇರದು. ಆದರೂ ಎರಡು ಮೂರು ರಸಗಳು ಕಲೆತು, ಒಂದು ಅಖಂಡಪದಾರ್ಥವಾಗಿ ತದ್ಗತ ರಸ "ರುಚಿ" ಎಂತ ಕರಸತದೆ.. ಇಂಥಾ ರಸವೆಂತ ಕೇವಲ ನಿರ್ಧಾರ ಶಕ್ತ ವಲ್ಲದ ರಸಕ್ಕೆ—"ರುಚಿ"—ಎಂತ ನಾಮ. ಇಂಥಾ ರಸಗಳಲ್ಲಿ, ಆಮ್ಲಾದಿ ಆರುವಿಧಜಡರಸಗಳಲ್ಲಿ ಕುಶಲನಾದ ಶ್ರೀಪರಮಾತ್ಮ ರುಚಿಸಾಂಕೇತವಾದ ಪೂರ್ವೋಕ್ತನಾಲ್ಕು ರಸ ತದನ್ಯ ಈ ಆಮ್ಲಾದಿ ಆರು ರಸಗಳು ಹ್ಯಾಂಗೆ ಅದೋ ಹಾಂಗೆ ತದಾಕಾರದಿಂದ ರಸಾಖ್ಯರೂಪಗಳನ್ನು ಧರಿಸಿ. (ರಸರೂಪತಾನಾಗಿ.) ರಸಾಕಾರತಾನಾಗಿ ಅಂತರ್ಗತನಾಗಿದ್ದಾನೆ. ಚತುರ್ವಿಧರಸ ಯಾಕೆ ಹೇಳಿದ ರೆಂದರೇ. ಎಪ್ಪತ್ತೆರಡುಸಾವಿರ ರಸವಿಭಾಗ ಮುಂದೆ ಹೇಳತ್ತಾರೆ. ಆ ರಸಗಳು ಎಂಥಾದ್ದು ಎಂದರೇ ದಿಕ್ಪ್ರದರ್ಶನಮಾಡಿದರು. ಈ ಪ್ರಕಾರ ರಸಯುಕ್ತವಾದ ಪದಾರ್ಥಗಳನ್ನು ದೇಹಾಂತರ್ಗತನಾದ ಬಿಂಬರೂಪೀ ಶ್ರೀಹರಿಯು ತನ್ನ ಮನಸ್ಸಿಗೆಃ ದಾವಪದಾರ್ಥವಾದರೆ, ದೇಹಧಾರಿಗಳಿಗೆ ಭೋಜನಮಾಡಿಸ ಬೇಕೆಂಬ ಮನಸ್ಸು ಬರತದೋ ಅಂತಹ ಪದಾರ್ಥವನ್ನು(ಮನಕೆಬಂದುದನು) ಪದಾರ್ಥಗತ ತನ್ನ ಸ್ವರೂಪಭೂತರಸ ದೇಹಗತ ದೇಹಾಕಾರವಾದ ತನ್ನಪುರು ರುಷರೂಪದಿಂದ ಉಂಡು(ತದನಂತರ ಜೀವನದ್ವಾರಾ ದೇವತೆಗಳ ದ್ವಾರ) ದೇಹಕ್ಕೆ ಉಣಿಸಿ (ಉಂಡುಣಿಸಿ) ಹಾಂಗೆ ಉಣಿಸಿದ ಪದಾರ್ಥದ ವಿಭಾಗ

ಹ್ಯಾಂಗೆಂದರೆ— ಜಡರಸ ಜಡದೇಹಕ್ಕೆ ಉಪಚಯಮಾಡಿ( ಸಂಹನನಕು ಪಚಯ) ಉಪಚಯ,ಎಂದರೇ ಚಣಕಾದಿಗಳು ಉದಕದಲ್ಲಿ ನೆನೆಹಾಕಿದರೆ ಉದಕಕಾರಣದಿಂದ ಪದಾರ್ಥ ತೊಯ್ದು ಉಬ್ಬುತ್ತದೆ. ಇದಕ್ಕೆ ಉಪಚಯ ಎಂತನಾಮ. ದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಇಂದ್ರಿಯ ಗಳಿಗೆ ತನ್ನ ದೇಹಕ್ಕೆ ಉಪಚಯವಾದದ್ದನ್ನು ನೋಡಿ ಆನಂದ (ಕರಣಕಾ ನಂದ) (ಇವಗೆ ಸ್ವಾಖ್ಯರಸವಿಲ್ಲವಾದ್ದರಿಂದ ನೋಡಿ ಸಂತೋಷ ಪಡೋಣವೇ ಜೀವಗೆ ಸ್ವಾಖ್ಯ) ದೇಹಾಕಾರರಾದ ತತ್ವದೇವತೆಗಳಿಗೆ (ಅನಿಮಿಷರಿಗೆ) ಅವರೂನೂ ತಮ್ಮ ತಮ್ಮ ಸ್ಥೂಲದೇಹದಿಂದಲೇ ಅಧಿಷ್ಠಾನಗತರಾಗಿ ಇರುತ್ತಾರಾದ್ದರಿಂದ ರಸಗತ ರಸಾಖ್ಯ ದೇಹಕ್ಕೂ ದೇಹಗತ ದೇಹಾಕಾರ ಮದ, ವ್ಯಾಪ್ತವಾದ ದೇಹಕ್ಕೂ ಪ್ರಕರ್ಷಣ ದರ್ಶನಮಾಡಿಸಿ (ಆತ್ಮ ಪ್ರದರ್ಶನ), ಅವರವರಲ್ಲಿ ಐಕ್ಯಐದಿಸಿ, ಇಂಥಾ ಆತ್ಮ ಪ್ರದರ್ಶನವಾದ ಸುಖವನ್ನು ಬಿಂಬರೂಪೀ ಶ್ರೀ ಪರಮಾತ್ಮನು ಕೊಡುತ್ತಾನೆ (ಸುಖವನೀವ ಹರಿ).

ಶ್ರೀ ಪರಮಾತ್ಮನು ತನ್ನ ಸ್ವಾಖ್ಯರಸವೆಂಬ ಭಗವದ್ರೂಪವನ್ನು ಬಿಂಬ ರೂಪವಾದ ಭಗವದ್ರೂಪದಲ್ಲಿ ಲಯಪಡಿಸಿ, ರಮಾ ಬ್ರಹ್ಮಾದಿಗಳ ಭುಕ್ತರಸ ಅವರ ದ್ವಾರಾ ಅವರಿಗೆ ಭೋಜನಮಾಡಿಸಿ, "ನಾನು ಭೋಜನ ಮಾಡಿದೆ"— ನೆಂಬ ಜ್ಞಾನದ್ವಾರಾ ಜೀವೇಂದ್ರಿಯಗಳಿಗೆ ಸಂತೋಷಪಡಿಸಿ, ಜಡರಸ ದೇಹಕ್ಕೆ ಉಪಚಯ ಮಾಡುತಾನೆ. ಜಡವಾದ ಶುಭಾಶಭರಸ ಪರಮಾತ್ಮ ಸ್ವೀಕರಿಸೋದಿಲ್ಲ ಎಂತ ತಾತ್ಪರ್ಯ.

**ವಿಶೇಷಾರ್ಥ :**

**"ಸ್ವರೂಪೇಣೈವ ಶಕ್ತ್ಯೋಽಪಿ ಜೀವದೇಹಸ್ಥಿತೋಹರಿಃ ।**
**ಭುಂಕ್ತೇ ತತ್ತದ್ಗುಣಾನ್ ವಿಷ್ಣುರ್ನೈವ ದೋಷಾನ್ ಕಥಂಚನ॥"**

—ಎಂಬಂಥಾ **ಬೃಹದ್ಭಾಷ್ಯಾನುಸಾರ** ಜೀವರು ಉಣ್ಣತಕ್ಕಂಥಾ ಮೇಲೆ ಹೇಳಿದ ಚತುರ್ವಿಧ ರಸರೂಪಗಳು ಶ್ರೀಪರಮಾತ್ಮ ಉಂಡು ಜೀವರಿಗೆ ಉಣಸತಾನೆಂದು ಹೇಳುತ್ತಾರೆ.

**"ಚತುರ್ಧಾ ಸರ್ವ ಭೋಕ್ತಾರಂ"** ಎಂಬ **ಮಾಂಡೂಕ್ಯ ಭಾಷ್ಯಾನುಸಾರ** ನೇತ್ರದಲ್ಲಿ ವಿಶ್ವನಾಗಿ ನಿಂತು, ಜಾಗ್ರತಿ ಸಂಬಂಧ ಸ್ಥೂಲರಸವು, ಕಂಠದಲ್ಲಿ ತೈಜಸನಾಗಿ ನಿಂತು ಸ್ವಪ್ನಸಂಬಂಧ ಪ್ರವಿವಿಕ್ತ ರಸವು, ಹೃದಯ ದಲ್ಲಿ ಪ್ರಾಜ್ಞನಾಗಿ ನಿಂತು, ಸೃಷ್ಟಿಸಿದ ಅನಿತ್ಯ ಆನಂದರಸವು.

**'ವಿಷ್ಣುಸ್ತು ತುರ್ಯರೂಪೇಣ ದ್ವಾದಶಾಂತೇವ್ಯವಸ್ಥಿತಃ"**—ಎಂಬ **ಛಾಂದೋಗ್ಯಭಾಷ್ಯಾನುಸಾರ** ಬ್ರಹ್ಮರಂಧ್ರಸ್ಥಾವದಲ್ಲಿ ತುರ್ಯನಾಮಕ ನಾಗಿ ನಿಂತು, ಸಾತ್ವಿಕ ಜೀವ ಸಂಬಂಧಸ್ವರೂಪಭೂತ ಆನಂದರಸವು ಏವಂ ರೀತ್ಯಾ ಚತುರ್ವಿಧ ರಸಗಳನ್ನೂ, ಚತುರ್ವಿಧರೂಪನಾಗಿ ಉಂಡುಣಿಸುವ ನೆಂತಲೂ ಹೇಳುತ್ತದೆ.

ಇದೇ ವಿಷಯದಲ್ಲಿ **ಮಾಂಡೂಕಭಾಷ್ಯ ವಿವಿರಣವಾಕ್ಯ**:—

**"ಚತುರ್ಥೇತಿ ವಿಶ್ವಾದಿರೂಪೇಣ ಚತುರ್ಧಾ ನೇತ್ರಾದಿ ಸ್ಥಾನೇಷು ಸ್ಥಿತ್ವಾ ಸರ್ವವಿಷಯ ಭೋಕ್ತಾರಮಿತ್ಯರ್ಥಃ ।**

**ವಕ್ಷ್ಯತೇ ಚೈತತ್ ಸ್ಥೂಲಭುಕ್ ಪ್ರವಿವಿಕ್ತಭುಗಾನಂದ ಭುಗಿತಿ । ನನು ತುರ್ಯಸ್ಯ ಭೋಕ್ತಾನುಕ್ತೇಶ್ಚತುರ್ಧಾ ಸರ್ವಭೋಕ್ತಾರ ಮಿತಿ ಕಥಮುಕ್ತ ಮಿತಿ ಚೇತ್ ಆನಂದಾಮ ಭುಗಿತ್ಯಸ್ಯ ತುರ್ಯೇ ಅಪಿ ಗ್ರಾಹ್ಯತ್ವಾದಿತ್ಯಾಶಯಾತ್ ॥**

ಇದಲ್ಲದೆ

**"ಸೃಜತ್ಯನಿತ್ಯ ಸೌಖ್ಯಂತು ಸ್ವಸಂಗಾತ್ತಾಮುಸೇಷ್ವಜಃ ।**
**ಸುಪ್ತಿ ಕಾಲೇಷು ಭಗವಾನ್ ತತ್ಸುಖಂ ಪ್ರಾಕೃತಂಸ್ಮೃತಿಮ್ ॥"**

ಎಂತ **ಗರುಡಪುರಾಣೋಕ್ತಿ** ಇದೆ .ಇದರಂತೆ ರಾಜಸ ತಾಮಸರಿಗೆ ಸೃಷ್ಟಿಸಿ ತೋರಿಸಿದಂತಾ ಪ್ರಾಕೃತಾನಂದರಸ ಪ್ರಾಜ್ಞ ಸ್ವೀಕರಿಸುತ್ತಾನೆಂತಲೂ ಸಾತ್ವಿಕ ಜೀವರ ಸ್ವರೂಪಭೂತ ಆನಂದರಸ ತುರ್ಯ ಸ್ವೀಕರಿಸುತ್ತಾನೆಂತಲೂ **ಮಂಡೂಕಭಾಷ್ಯದ** ಭಾವವನ್ನು ಶ್ರೀ ಪುರಂದರದಾಸವರ್ಯರು ತಮ್ಮ ಮಳಾದಿಯಲ್ಲಿ ಹೀಗೆ ಹೇರುತ್ತಾರೆ.

**"ನಿತ್ಯಾನಿತ್ಯವೆಂದು ಆನಂದ ದ್ವಿವಿಧಾನ್ವೈಯ್ಯಾ ।**
**ಚಿತ್ತದಿ ಕೇಳೋ ಮನಜಾ ಈ ರಹಸ್ಯವ ।**
**ಸುಪ್ತಿಲಿ ದ್ವಿವಿಧ** (ರಾಜಸ ತಾಮಸರಿಗೆ) **ಸೃಷ್ಟಿಸಿ ತೋರಿಸಿವ ಅ ।**
**ನಿತ್ಯಸುಖವನ್ನು ಪ್ರಾಜ್ಞನೇ ಸ್ವೀಕರಿಪ ।**
**ಸತ್ಯಜೀವ ಸ್ವರೂಪಭೂತ ಸುಖನಿತ್ಯದಿ ಸ್ವೀಕರಿಪ ತುರ್ಯದೇವ।**
**ಭೃತ್ಯವತ್ಸಲ ಶ್ರೀ ಪುರಂದರವಿಠ್ಠಲನು ಆಪ್ತರ ಪಾಲಿಪನು**
**ತಿಳಿಯಲು ಮುದದಿಂದ ॥**

ಈ ಪ್ರಕಾರ ಹೇಳಿದ್ದಾರಾದ ಪ್ರಯುಕ್ತ ಭಕ್ತಾಗ್ರೇಸರರು ಪರಮಾಂತರ್ಯಾರ್ಥ ಉಪಾಸನ ಮಾಡಬೇಕಂತ ದಾಸರಾಯರ ಹೃದಯವಾಗಿದೆ ಎಂತ ತಾತ್ಪರ್ಯ ॥೧॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :

ಈಸಂಧಿಯಲ್ಲಿ ಭೋಜನ ಪದಾರ್ಥಗಳಲ್ಲಿ ಯಾವಯಾವ ಭಗವದ್ರೂಪ ಗಳಿವೆ ಎಂಬ ವಿಷಯವನ್ನು ಹೇಳುತ್ತಾ ಅದರಲ್ಲಿ ಬರುವ ವಿಷಯಸೂಚನೆ ಯನ್ನು ಈ ಪದ್ಯದಿಂದ ಹೇಳುತ್ತಾರೆ

ಬ್ರಹ್ಮಾಂಡದೊಳಗುಳ್ಳ ಅಖಿಳಪ್ರಾಣಿಗಳು ಭುಂಜಿಸುವ ನಾಲ್ಕುಪ್ರಕಾರ ವಾದ ಭೋಜನಪದಾರ್ಥಗಳೊಳಗೆ ನಾಲ್ಕು ವಿಧವಾದ ರುಚಿಗಳೂ ತಾನೇ ಆಗಿರುವನು. ಷಡ್ರಸವೆಂದು ಲೋಕಪ್ರಸಿದ್ಧಿಯಾಗಿರಲು ದಾಸರಾಯರು ನಾಲ್ಕು ರಸಗಳೆಂದು ಹೇಳಿದುದರ ಅಭಿಪ್ರಾಯ ವೇನೆಂದರೆ:—ಷಡ್ರಸವೆಂದರೆ ಉಪ್ಪು,ಖಾರ,ಹುಳಿ, ಸಿಹಿ,ಕಹಿ ಮತ್ತು ಒಗರುಗಳೆಂತ ಆರುವಿಧರಸಗಳು. ಇಲ್ಲಿನ ನಾಲ್ಕುವಿಧವಾದ ರಸವು ಮಿಶ್ರವಾದುವು, ಭಕ್ಷ್ಯವೆಂದರೆ, ಸಿಹಿಯಾದವು ಕೆಲವು, ಸಪ್ಪೆ,ಕೆಲವು ಉಪ್ಪು ಖಾರ ಮಿಶ್ರವಾದವು ಕೆಲವು ಹೀಗೆ ಲೇಹ್ಯಾದಿ ಗಳಲ್ಲಿರತಕ್ಕ ಪ್ರತ್ಯೇಕ ಪ್ರತ್ಯೇವಾದ ರುಚಿಕರವಾದ ಪದಾರ್ಥಗಳಲ್ಲಿ ರುಚಿರೂಪ ನಾಗಿ ತಾನಾಗಿಯೇ ಇರುವನು. ಆಯಾ ಚೇತನರೊಳಗಿದ್ದು, ಅವರಿಗೆ ರುಚಿಸು ವ ಪದಾರ್ಥಗಳನ್ನು ತಾನುಂಡು, ಅವರಿಗುಣಿಸಿ, ಶರೀರಕ್ಕೆ ಪುಷ್ಟಿಯನ್ನುಂಟು ಮಾಡಿ, ಚಕ್ಷು ಶ್ರೋತ್ರಾದಿ ಇಂದ್ರಿಯಗಳಿಗೆ ಆನಂದವನ್ನು ಕೊಡಿಸಿ, ತತ್ವಾಭಿ

ಮಾನಿದೇವತೆಗಳಿಗೆ ತನ್ನಸ್ವರೂಪಪ್ರದರ್ಶನವನ್ನು ಮಾಡಿಸಿ, ಸುಖವ ನ್ನುಂಟುಮಾಡುವನ ॥೨॥

## (೩) "ಭಾವದರ್ಪಣಟೀಕಾ :

ಈಗ ಶ್ರೀಮಧ್ವಶಾಸ್ತ್ರ ಭಾಗವತಾದಿ ಸಮಸ್ತಗ್ರಂಥಗಳನ್ನು ಪರಿಶೋಧಿಸಿ ಶ್ರೀಮತ್ಸರ್ವಜ್ಞರಾಯರ ಆಶಯಾನುಸಾರ ಸಾಧನ ಮಾಡುವುದಕ್ಕೆ ಶಕ್ತಿ ಇಲ್ಲ ದಂಥಾ ದೀನಜನಗಳಿಗೆ ಉದ್ಧಾರಾರ್ಥವಾಗಿ ಬದ್ಧದೀಕ್ಷಾವಂತರಾದಂಥಾ ಶ್ರೀಮಜ್ಜಗನ್ನಾಥದಾಸವರ್ಯರು ಪರಮ ಸುಲಭರೀತಿಯಿಂದ ತಿಳಿಸೋದ ಕ್ಕೋಸ್ಕರ ಭೋಜನ ಸಂಧಿ ಉಪಕ್ರಮಿಸುತ್ತಾರೆ.

ಈ ಬ್ರಹ್ಮಾಂಡದಲ್ಲಿ ಸಮಸ್ತಚೇತನರು ಭೋಜನ ಮಾಡತಕ್ಕಂಥಾ ಖಾದ್ಯ, ಚೋಷ್ಯ, ಪೇಯ ಮತ್ತು ಲೇಹ್ಯ—ಈ ಚತುರ್ವಿಧ ಪದಾರ್ಥದಲ್ಲಿ ಚತುರ್ವಿಧ ರಸರೂಪಗಳು ತಾನೇ ಆಗಿ.

**"ಸ್ವರೂಪೇಣ ಶಕ್ತೋಽಪಿ ಜೀವದೇಹಸ್ಥಿತೋಹರಿಃ।**
**ಭುಂಜ್ಯತೇ ತತ್ತದ್ಗುಣಾನ್ ವಿಷ್ಣುರ್ನೈವ ದೋಷಾನ್ ಕಥಂಚನ"**

—ಎಂಬಂಥ **ಬೃಹದ್ಭಾಷ್ಯಾನುಸಾರ** ಮನಸ್ಸಿಗೆ ಬಂದಂತೆ ತಾನು ಭೋಜನ ಮಾಡಿ ಜೀವರಿಗೆ ಉಣಿಸುತ್ತಾನೆಂದು ಹೇಳುತ್ತಾರೆ "ವನಜಜಾಂಡ" ಎಂಬ ಪದ್ಯದಿಂದ.

ಸಂಹನನವೆಂದರೆ ಶರೀರ ಎಂದರ್ಥ. **"ಗಾತ್ರಂ ವಪುಸ್ಸಂಹನನ ಶರೀರ ವರ್ಷ್ಮ ವಿಗ್ರಹ"—ಇತ್ಯಮರಃ॥**

ಇದಕ್ಕೆ ಉಪಚಯವೆಂದರೆ, ವೃದ್ಧಿ ಎಂದರ್ಥ. ಕರಣಾಕಾನಂದ ಎಂದರೆ ಸಮಸ್ತ ಪದಾರ್ಥಗಳಿಗಭಿಮಾನಿಗಳಾಗಿ ಜೀವರೋದ್ದಿಶ್ಯ ಶ್ರೀಶಗೆ ಅರ್ಪಣೆ ಮಾಡತಕ್ಕಂಥ ಇಂದ್ರಿಯೇಶರಾದಂಥಾ ತತ್ವೇಶರಿಗೆ ಆನಂದವೆಂದರ್ಥ. ಆತ್ಮಪ್ರದರ್ಶನವೆಂದರೆ, ಇದೇ ತತ್ವೇಶರಿಗೆ ಜೀವನ ಸ್ಥೂಲದೇಹಗತ ನಾದಂಥ ಆತ್ಮನಾಮಕ ಶ್ರೀ ಹರಿಯ ಸಂದರ್ಶನವೆಂದರ್ಥ.

**ಯಥೋಕ್ತಂ ಸೂತ್ರಭಾಷ್ಯೇ—**

**"ಆತ್ಮಾಂತರಾತ್ಮೇತಿ ಹರೇರೇಕಏವ ದ್ವಿಧಾಸ್ಥಿತಃ।**
**ನಿವಿಷ್ಟೋ ಹೃದಯೇ ನಿತ್ಯಂ ರಸಂ ಪಿಬತಿ ಕರ್ಮಜಮಿತಿ"।**
ಏತಾದೃಶ ಸುಖವನೀವ—ಕೊಡುವ ಎಂತ ಭಾವ ಅಥವಾ

**"ಚತುರ್ಥಾಸರ್ವಭೋಕ್ತಾರಂ"। ಎಂಬೋ ಮಾಂಡೂಕ ಭಾಷ್ಯಾನುಸಾರ** ನೇತ್ರಸ್ಥಾನದಲ್ಲಿ ವಿಶ್ವನಾಗಿ ನಿಂತು ಜಾಗ್ರತಿಸಂಬಂಧ ಸ್ಥೂಲರಸವು; ಕಂಠದಲ್ಲಿ ತೈಜಸನಾಗಿ ನಿಂತು, ಸ್ವಪ್ನಸಂಬಂಧ ಪ್ರವಿವಿಕ್ತರಸವು; ಹೃದಯದಲ್ಲಿ ಪ್ರಾಜ್ಞನಾಗಿ ನಿಂತು ಸೃಷ್ಟಿಸಿದ ಅನಿತ್ಯ ಆನಂದರಸವು **"ವಿಷ್ಣುಸ್ತುತುರ್ಯರೂಪೇಣ ದ್ವಾದಶಾಂತೇ ವ್ಯವಸ್ಥಿತಃ॥"ಎಂಬ ಛಾಂದೋಗಾನ್ಯುಸಾರ** ಬ್ರಹ್ಮರಂಧ್ರಸ್ಥಾನದಲ್ಲಿ ತುರ್ಯನಾಮಕನಾಗಿ ನಿಂತು, ಸಾತ್ವಿಕಜೀವ ಸಂಬಂಧ ಸ್ವರೂಪಭೂತ ಆನಂದರಸವು ಎಂಬ ರೀತ್ಯಾ ಚತುರ್ವಿಧ ರಸಗಳಲ್ಲಿ ಚತುರ್ವಿಧ ರೂಪತಾನಾಗಿ ಉಂಡುಣಿಸುವನೆಂತಲೂ ಹೇಳುತ್ತದೆ. ಇದೇವಿಷಯದಲ್ಲಿ **ಮಾಂಡೂಕ್ಯ ಭಾಷ್ಯವಿವರಣ ವಚನ :**

**"ಚತುರ್ಥೇತಿ ವಿಶ್ವಾದಿ ರೂಪೇಣ ಚತುರ್ಧಾ ನೇತ್ರಾದಿ ಸ್ಥಾನೇಷು ಸ್ಥಿತ್ವಾ ಸರ್ವವಿಷಯಭೋಕ್ತಾರಮಿತ್ಯರ್ಥ: । ವಕ್ಷ್ಯತೇ ಚೈತತ್‌ಸ್ಥೂಲಭುಕ್ ಪ್ರವಿವಿಕ್ತ ಭುಗಾನಂದ ಭುಗಿತಿ॥**

**ನನು ತುರ್ಯಸ್ಯ ಭೋಗಾನುಕ್ತೇಶ್ಚತುರ್ಧಾ ಸರ್ವಭೋಕ್ತಾರಮಿತಿ ಕಥಮುಕ್ತ ಮಿತಿಚೇತ್ ಆನಂದಾನು ಭಾಗಿತ್ಯಸ್ಯ ತುರ್ಯೋಪಿ ಗ್ರಾಹ್ಯತ್ವಾದಿತ್ಯಾಶಯಾತ್: ॥** ಎಂತ ಇರುತ್ತದೆ.

ಇದಲ್ಲದೆ **"ಸೃಜತ್ಯನಿತ್ಯಸಾರ್ಥೈಯಂತು ಸ್ವಸಂಗಾತ್ಮಾಮಸೇಷ್ವಜ:।**
**ಸುಪ್ತಿಕಾಲೇಷು ಭಗವಾನ್ ತತ್ಸುಖಂ ಪ್ರಾಕೃತಂ ಸ್ಮೃತಮ್॥"-**
**ಎಂತ ಗರುಡಪುರಾಣೋಕ್ತಿ ರೀತ್ಯಾ** ರಾಜಸ ತಾಮಸರಿಗೆ ಸೃಷ್ಟಿಸಿ ತೋರಿಸಿ

ವಂಥ ಪ್ರಾಕೃತಾನಂದರಸ ಪ್ರಾಜ್ಞಸ್ವೀಕರಿಸುತ್ತಾನೆಂತಲೂ. ಸಾತ್ವಿಕ ಜೀವರ ಸ್ವರೂಪಭೂತ ಆನಂದರಸ ತುರ್ಯ ಸ್ವೀಕರಿಸುತ್ತಾನೆಂತಲೂ ಹೇಳುತ್ತಾರೆ ॥೧॥

## (೪) “ಗುರುಹೃದಯಪ್ರಕಾಶಿಕೆ”—ವ್ಯಾಖ್ಯಾನ:-

ವನಜಜಾಂಡವೆಂಬ ಬ್ರಹ್ಮಾಂಡದಲ್ಲಿ ಇರುವ ನಿಖಿಳಚೇತನರು, ಎಂದರೆ ಜೀವರೂ ಭೋಜನಮಾಡುವ ಚತುರ್ವಿಧ ಪದಾರ್ಥದಲ್ಲಿ ಎಂದರೆ, ಹಲ್ಲಿನಿಂದ ಎಲ್ಲಾ ಅಗಿದು ತಿನ್ನುವುದು, ಕಲಿಸಿ ನುಂಗುವುದು. ನಾಲಿಗೆಗೆ ಹಚ್ಚುವ ಗೊಜ್ಜು ಮೊದಲಾದುದು, ಕುಡಿಯುವ ಕ್ಷೀರ ಮೊದಲಾದ್ದು. ಈ ನಾಲ್ಕು ಬಗೆ ವಸ್ತುಗಳಲ್ಲಿ ನಾಲ್ಕುರಸರೂಪನಾಗಿ, ಜೀವರ ಮನಸ್ಸಂಸ್ಕಾರದಲ್ಲಿ ತನ್ನ ಇಚ್ಛಾನುಕೂಲವಾಗಿ ಉಂಡುಣಿಸಿ, ಎಂದರೆ, ಆನೆ ತನ್ನ ಸೊಂಡಲಿನಲ್ಲಿ ನೀರು ತುಂಬಿಕೊಂಡು ತನ್ನ ಮರಿಗಳಿಗೆ ಕುಡಿಸುವಂತೆ, ತಾನು ತೆಗೆದುಕೊಂಡು ಜೀವರ ಕ್ಷುತ್‌ನಿವೃತ್ತಿಗೆ, ಎಂದರೆ, ಹಸಿವು ಪರಿಹಾರಕ್ಕಾಗಿ ಕೊಡುತ್ತಾ, ಸಂಹನನ ಎಂದರೆ, ಶರೀರಕ್ಕೆ ಉಪಚಯವನ್ನು ಎಂದರೆ, ಪುಷ್ಟಿಯನ್ನು ಕೊಡುತ್ತಾ, ಕರಣ ಎಂದರೆ, ನಾಲಿಗೆ ಮೊದಲಾದ ಇಂದ್ರಿಯಗಳಿಗೆ ಪ್ರೀತಿಯನ್ನೂ, ಅನಿಮಿಷ ಎಂದರೆ, ಇಂದ್ರಿಯಾಭಿಮಾನಿದೇವತೆಗಳಿಗೆ ಆತ್ಮಪ್ರದರ್ಶನಸುಖವೆಂದರೆ, ಆಯಾಯ ರಸಗತ ತನ್ನ ರೂಪದರ್ಶನಾನಂದವನ್ನು ಶ್ರೀಹರಿಯು ಕೊಡುವನು. ಇದರಿಂದ—

**“ಭುಂಜಾನಂ ವಾ ಗುಣಾನ್ವಿತಂ ವಿಮೂಢಾ:।**
**ನಾನುಪಶ್ಯಂತಿ ಪಶ್ಯಂತಿ ಜ್ಞಾನ ಚಕ್ಷುಷಃ ॥”**

-ಎಂಬ ಗೀತಾರ್ಥವು ಹೇಳಲ್ಪಟ್ಟಿತು ॥೧॥

## (೫) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ”-

॥ಜಂ॥ ಗುಣಾಢ್ಯೋ ದೋಷದೂರೋ ಯದ್ವೈಶ್ವಾನರ ಇತೀರಿತಃ॥ ದತ್ತೇ ತದನುಸಂಧಾನಮುದ್ಧರೇದ್ವಾಯು ಸಂಸ್ಥಿತಃ ॥ ಯಥಾಮಾತುಃ

ಸುತಾನಾಂಚ ಚಪಲಂ ವೈಶ್ವಾನರಾದಪಿ। ಭವೇದ್ಭೋಜನ ಕಾಲೇಷುಧ್ಯಾಯತೋ ಜಾನತಃ ಕ್ರಿಯಾಃ॥ ತದ್ವಯಂ ದುರ್ಗಮಂ ಮರ್ತ್ಯಾಃ ಅತಃ ಸಂಕ್ಷಿಪ್ಯಕಥ್ಯತೇ॥ ಸತ್ಪಾದಮಕರಂದಸ್ಯ ಜುಷಾಂ ಚೇದಂ ಮಹತ್ತರಂ॥ ವಿದುಷಾಂ ಚೈವ ಮನೋಹಾರಿ ಕ್ರೋಢೀಕೃತ್ಯ ವಿಲೇಖನಂ॥ ಇತ್ಯಾಲೋಚ್ಯ ರಮಾಲೋಲ ದಾಸಧುರ್ಯೋ ಮಹಾಮತಿಃ॥ ಭೋಜನಾಖ್ಯಂ ಸುಸಂಧಿಂಚಾರಭತೇ ಮಧ್ವವಲ್ಲಭಃ॥

ದ್ವಾರ ಪಂಚಕ ಯುಗ್ ದಿವ್ಯಮಂಟಪೋ ಹೃದಿಕಾಶ (ಸ) ತೇ॥ ವೈಶ್ವಾನರಃ ಸ್ವಾಮೀ ರಮಾಲಿಂಗಿತ ವಿಗ್ರಹಃ॥ಏಕೋರ್ಧ್ವದಲಿರಂಗೈರ್ಯುತೋ ದುಸ್ತಾದಿಭಿರ್ಹರಿಃ॥ ಮೂರ್ಧ್ನಿ ಸ್ವರ್ಗಃ ತಥಾನೇತ್ರೇ ಸೂರ್ಯಃಪ್ರಾಣಶ್ಚ ತತ್ರಹಿ॥ ಮುಖೇ ಚಾಹವನೀಯೋಽಸ್ತಿ ದಕ್ಷಿಣಾಗ್ನಿಃ ಮನಸ್ಯಯಂ॥ ಹೃದ್ಯಸ್ತಿ ಗಾರ್ಹಪತ್ಯೋತೋ ವೇದ್ಯೋರಸಿ ಸುರೋಮಸು॥ ಧರ್ಮೋಽಸ್ತಿ ಗಗನಂ ಮಧ್ಯ ದೇಹೇನಾಭ್ಯವ ಏವಚ॥ ಜಲಂ ಚಾಪಾನವಾಯುಶ್ಚ ಪಾದೌ ಪೃಥ್ವ್ಯಾಶ್ರಯೌ ಮತೌ ॥ ತದಾಶ್ರಯತ್ವಾತ್ತಜ್ಞ ತ್ವಾತ್ತ (ತತ್) ಸ್ವಚ್ಛಾಭೇದೇ ಯುತಾ ॥ ತಚ್ಛಬ್ದಃ ವೃತ್ತಿಃ ಛಾಂದೋಗ್ಯ ಭಾಷ್ಯಮಾಲಾ ತದುಚ್ಯತೇ ॥ ಓಂ ॥ ಕ್ರೀಡಾತ್ಮಕತ್ವಾದ್ದ್ವಾಖ್ಯಂ ಚ ಸುತೇಜಾಶ್ಚಾತಿತೇಜಸಾ ॥ ಸ್ವರ್ಗಾಧಾರಂ ಶಿರೋ ವಿಷ್ಣೋಃ ಸರ್ವರೂಪಾತಿದರ್ಶನಾತ್ ॥ ಚಕ್ಷುಸ್ತು ವಿಶ್ವರೂಪಾಖ್ಯಂ ಆದಾನಾದಾಯುಷಾಮಸಿ॥ ಆದಿತ್ಯಾಖ್ಯಂ ಚ ಸೂರ್ಯಸ್ಯಾಪ್ಯಾಶ್ರಯಂ ಸರ್ವದಾಸ್ಮೃತಂ ॥ ವಾಯ್ವಾದಿ ಪ್ರಾಣಶಕ್ಯಂ ನ ಯತ್ತತ್ಕರ್ತಾ ಹರಿರ್ಯತಃ ॥ ಪ್ರಾಣಸ್ತೇನ ಪೃಥಗ್ವರ್ತ್ಮಾ ವಾಯುರ್ಜ್ಞಾನಾಯುರೂಪತಃ ॥ ವಾಯೋರಪ್ಯಾಶ್ರಯಂ ನಿತ್ಯಂ ಬಹೃತ್ವಾದ್ಬಹುಳಃ ಸ್ಮೃತಃ ॥ ಆಕಾಶ ನಾಮಾ ಚಾದೀಪ್ತೇರ್ಮಧ್ಯದೇಹೋ ರಮಾಪತೇಃ ॥ ವ್ಯಾಪ್ತತ್ವಾದಾಪ ಇತ್ಯುಕ್ತೋ ರಯಿೋರತಿಕರತ್ವತಃ॥ ವಸ್ತಿರಾಕಾಶ ವಾಯ್ವೋಶ್ಚ ತಾವಾಧಾರೌ ಪ್ರಕೀರ್ತಿತೌ॥ ಪೃಥನಾತ್ ಪೃಥಿವೀನಾಮಾ ಪ್ರತಿಷ್ಠಾ ಚ ಪ್ರತಿಷ್ಠಿತೇ ॥ ಪಾದೌ ಭಗವತೋ ವಿಷ್ಣೋಃ ಪೃಥಿವ್ಯಾಶ್ರಯ ಏವಚೇತಿ ॥ ಏತಸ್ಮಾಲೋಪನಿಷತ್ ॥ ಓಂ ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ, ಪ್ರಾಣಃ ಪೃಥಗ್ವರ್ತ್ಮಾ, ಸಂದೋಹೋ ಬಹುಲೋ, ವಸ್ತಿರೇವ ರಯಿಃ

ಪೃಥಿವ್ಯೇವ ಪಾದೌ, ಉದರ ಏವ ವೇದಿಃ, ಲೋಮಾನಿಬರ್ಹಿಃ, ಹೃದಯಂ ಗಾರ್ಹಪತ್ಯಂ, ಮನೋನ್ವಾಹಾರ್ಯ ಪಚನಂ, ಆಸ್ಯಮಾಹವನೀಯಂ ॥ ಪಶ್ಚಿಮ ತತ್ಪೂರ್ವದ್ವಾರಪಃ ಪ್ರಾಣಾದ್ಯಭಿಮಾನೀ ತ್ರಿರೂಪಃ ಸೂರ್ಯಃ ॥ ಪಶ್ಚಿಮ ದ್ವಾರಪಃ ಅಪಾನಾದ್ಯಭಿಮಾನೀ ತ್ರಿರೋಪೋಗ್ನಿಃ ॥ ದಕ್ಷಿಣ ದ್ವಾರಪಃ ವ್ಯಾನಾದಿ ತ್ರಿರೂಪಶ್ಚಂದ್ರಃ ॥ ಸಮಾನಾದಿ ತ್ರಿರೂಪಶ್ಶೇಂದ್ರಃ ಉತ್ತರಃ ದ್ವಾರಪಃ॥ ಉದಾನಾದ್ಯಭಿಮಾನೀ ಭಾರತೀಪತಿಃ ಶ್ರೀರೂಪೋ ಮುಖ್ಯ ಪ್ರಾಣಃ ಊರ್ಧ್ವ ದ್ವಾರಪಃ॥ ಶ್ರೀಪ್ರಾಣ ಭಾರತ್ಯಸ್ತು ಅವಿಶೇಷತಃ ಸರ್ವತ್ರ ದ್ವಾರಪಾ ಇತಿ ॥

## ತತಃ ಪಂಚಪ್ರಾಣಾಹುತೀಃ ದದ್ಯಾತ್

ಅತ್ರಮೇ ಶಂಕಾ ಶಂಕಪೋ ಮುರದ್ವರುಃ ॥ ದ್ರಪದ್ಭ್ರವ್ಯೋದಕೇನ್ಯೈವ ಪರಿಷೇಚನಮಗ್ರತಃ॥ ಸತ್ಯಂತ್ವರ್ತೇನ ಪ್ರಾತಶ್ಚ ಋತಂ ತ್ವೇತಿ ಕುತೋನಿಶಿ ॥ ಆದಿತೇನ್ವಿತಿ ವಸ್ಥೀಸ್ತು ಪರಿಷೇಚನ ಕರ್ಮಣಿ ॥ ಪತ್ಯತೇನ್ಯದ್ವಿಹಾಯೇ ಮೌಪಾಠ್ಯಮೇವ ಕುತಃ ಖಲು ॥ ಪಾಪಸಂಕೋಚನಾರ್ಥಂ ಹಿ ಚಿತ್ರ ತದ್ಗುಪ್ತಾಯೋರ್ಯದಿ ॥ ಆಹುತಿದ್ವಿತಯಂ ಚೇದ್ಧಿ ಸತ್ಯಾನೃತ ವಿವೇಚನೇ ॥ ನಿಯುಕ್ತ ವರುಣಸ್ಯಾಪಿ ದೀಯತಾಂ ಮೂಹುತಿರ್ನರೈಃ ॥ ಕಿಂಚ ಪಂಚಾಹುತಿ ಸ್ಥಾನಂ ಪರಂಪಾನಪರಮೇವ ಚ ॥ ಷಡುದ್ಧರತ ಶತ್ರೂನ್ಮೇ ಷಡ್ದಸ್ಯು ವಿಜಿಗೀಷವಃ॥ ಗಾಯತ್ರ್ಯಾಸೇಚನಂ ಗೃಹ್ಯ ಶತ್ರುಸಪ್ತಕಮಾಹವೇ ॥ ಸಂಶಪ್ತಕಾನ್ ವಿಜಯವತ್ ಜಯಾಮಃ ಶೃಣುತಾಚಿರಂ ॥ ನೇದಂ ಭೋಜನಂ ಶರೀರ ಪುಷ್ಟ್ಯರ್ಥೇ ರಾಗತಃ ಪ್ರಾಪ್ತಂ ॥ ಕಿಂತು ತತ್ರ ಶರೀರೋಪಾದಾನ ಶರೀರವಂತೌ ಪಿತರೌ ಸ್ವದೇಹ ಪೋಷಕೌ ॥ ಅಥಪಿತೃಸ್ಥಾದಿತ್ಯ ನಾಮ್ನಃ ಹರೇಃ ಪ್ರೀತ್ಯರ್ಥಂ ಭೋಜನಂ ॥ ಸಾಯಂ ಪ್ರಾತರ್ದ್ವಿಜಾತೀನಾಂ ಭೋಜನಂ ವಿಧಿ ಚೋದಿತಂ ॥ ಇತಿವಿಧಿಃ॥ ದ್ವಿವಾರಂ ಭೋಜನಂ ॥ ಅತ ಏವಾಪರಾಹ್ನ ಪಕ್ಷಸ್ತ್ವಭಿ ಪ್ರೇತಃ ಇತಿ ॥ ಪ್ರಾಣಸ್ತ್ವಧಿಷ್ಠಾನಭೂತಃ ಸರ್ವತ್ರಾಪೇಕ್ಷಿತಃ ಏವ ಮಂತ್ರಶ್ಚೈತದರ್ಥ ಪ್ರತಿಪಾದಕಃ ಏವೇತಿ ನಿಯುಕ್ತಶ್ಚಾಸ್ಮಿನ್ ಕರ್ಮಣಿ ॥ ಓಂ ಸತ್ಯಂತ್ವರ್ತೇನ ಪರಿಷಿಂಚಾಮಿ ಓಂ ॥

ಅಯಮರ್ಥಃ । ಸಚ್ಛಬ್ದವಾಚ್ಯಃ ಪ್ರಾಣಃ ॥ ತಕಾರವಾಚ್ಯಃ ಬ್ರಹ್ಮಾ । ಯಕಾರವಾಚ್ಯಃ ಆದಿತ್ಯಃ । ಇತ್ಯೈತರೇಯ ಭಾಷ್ಯೇ ಸತ್ಯಪದಾರ್ಥ ಸ್ಫುಟಃ॥ ತಥಾಚ ಸ್ವದೇಹೋಪಾದಾನ ಪಿತ್ರಧಿದೈವತ ಸೂರ್ಯಸ್ಥಿತ ಪ್ರಾಣ ಬ್ರಹ್ಮಾಂತರ್ಗತಮಾದಿತ್ಯನಾಮಾನಂ ಶ್ರೀಹರಿಂ ಮದ್ದೇಹಸ್ಥಂ ಮಾತೃಸಹಿತಂ ಋತೇನ ಮಾತೃಸ್ಥೇನ ಸಹ ತ್ವಾ ಇತಿ ತ್ವಾಂ, ಪರಿತಃ ಸಿಂಚಾಮಿ-ವ್ಯಾಪ್ತಂ ಚಿಂತಯಾಮಿ । ತಥ್ಯೈವ ಸಾಯಂ । ಋತಂ ದ್ವಾರೇಷ್ಠಾ ವಚೋಗರ್ಭಭೂತೌಬಪಿ ವ್ಯಾಪ್ತೌ । ಋ ಇತಿ ಋಕಾರ ಸ್ವರೂಪಮ್ ॥ ತತ್ರ ಅಭಿಮಾನಿನಃ ವಾಯುಃ ತತ್ಪದಯೋಗ್ಯಾ ॥ ಐತರೇಯ ಭಾಷ್ಯೇ ಸ್ಫುಟಮುಕ್ತ್ವಾ ರೇಫದ್ವಯಮಧ್ಯೇ ಏಕಃ ತೇಜೋವಾಚಕತ್ವಾತ್ ಬ್ರಹ್ಮ ವಾಚಕಃ ॥ ಅಪರೋ ವಹ್ನಿಃ ಶ್ರೀಹರಿವಾಚಕಃ ಪ್ರಸಿದ್ಧಃ । ವಹ್ನಿಶ್ಚ ಮಾತ್ರ ಧಿ ದೈವತಂ । ಪ್ರಸಿದ್ಧಂ । ತತಶ್ಚ ಮಾತ್ರಧಿದೈವ ವಹ್ನಿಪ್ರಾಣ ಬ್ರಹ್ಮಾಂ ತರ್ಗತಂ ನಾರಾಯಣಂ, ಪಿತೃಧಿಕರಣ ಶ್ರೀ ನರಸಿಂಹದೇವ ಸಪಪರಿತಃ ಚಿಂತಯಾಮಿ । ಉಭಯತ್ರಾಪಿ ಕರಣೇ ತೃತೀಯಾ॥ ಹಾತೃಸ್ಥ ಪ್ರಾರ್ಥನೇನ ಪಿತೃಸ್ಥಂ, ಪಿತೃಸ್ಥಾಜ್ಞಯಾ ಮಾತೃಸ್ಥಂ ಚಿಂತಯಾಮಿ ॥ ನಕೇವಲಮೇಕೇನ ರೂಪೇಣ ಕಿಂನಾಮ ಬಹುಭಿರಿತಿ ಜ್ಞಾಪನಾಯ ಸಿಂಚಾಮೀತಿಪ್ರಯೋಗಃ ॥ ಸಿಂಚನೇ ಚ ಅನೇಕಬಿಂದವಃ ॥ ತತ್ರಪತ್ರರೂಪ. ॥ ೧ ॥

### ಸರ್ವವ್ಯಾಖ್ಯಾನ ಸಾರಸಂಗ್ರಹ :—

ಪ್ರಕೃತ ಸಂಧಿಗತ ಪ್ರಥಮ ಪದ್ಯದಲ್ಲಿ ಜಗತ್ತಿನಲ್ಲಿ ಸಮಸ್ತಚೇತನರು ಭುಂಜಿಸುವ ಭೋಜನಯೋಗ್ಯ ಪದಾರ್ಥಗತ ರಸಗಳನ್ನು ಸ್ವರಮಣನಾದ ಶ್ರೀಹರಿಯು ವಿಭಾಗಮಾಡುವ ಕ್ರಮವನ್ನೂ ಮತ್ತು ಆಯಾಯಾ ರಸವಿಶೇಷ ಗಳ ಹಂಚಿಕೆ ಹೇಗೆ ವ್ಯವಸ್ಥಿತವಾಗಿ ನಡೆಯುತ್ತದೆ ಎಂಬ ವಿವರಗಳನ್ನು ತಿಳಿಸುತ್ತಾರೆ.

ಶ್ರೀಪರಮಾತ್ಮನು ಶ್ರೀರಮಾದೇವಿಯರಿಂದ ಪೂಜಿತಪಾದಪದ್ಮ ಗಳುಳ್ಳವನಾಗಿ, ಕ್ಷೀರಸಾಗರಶಾಯಿಯಾಗಿ ಪದ್ಮನಾಭರೂಪದಿಂದ ಶಯನಿಸಿ ರಲು, ಆತನ ನಾಭಿ ಎಂಬ ದಿವ್ಯ ಮಡುವಿನಿಂದ ಅಪ್ರಾಕೃತವಾದ ಕಮಲವು

ಉತ್ಪನ್ನವಾಯಿತು. ಆ ಕಮಲವು ಸುವರ್ಣಾತ್ಮಕವಾಗಿದ್ದು, ಹದಿನಾಲ್ಕು ದಳಗಳಿಂದ ಯುಕ್ತವಾದದ್ದು, ಒಂದೊಂದು ದಳವೂ ಬ್ರಹ್ಮಾಂಡಗತ ಒಂದೊಂದು ಲೋಕವನ್ನೂ ಪ್ರತಿಪಾದಿಸುವುದರಿಂದ. ಆ ಕಮಲವು ಚತುರ್ದಶಭುವನಸಾಂಕೇತವಾದದ್ದು. ಅಂತಹ ಕಮಲ (ವನಜ)ದಲ್ಲಿ ಚತುರ್ಮುಖ ಬ್ರಹ್ಮ ದೇವರು ಉತ್ಪನ್ನರಾದರು.(ವನನಜ) ಭಂಗಾರಮಯ ವಾದ ಕಮಲವಲ್ಲಿ ಉತ್ಪನ್ನರಾದ ಆಕಮಲೋದ್ಭವರಿಗೆ, "ಹಿರಣ್ಯಗರ್ಭ" ಎಂದು ಹೆಸರು. ಮಹತತ್ವಾತ್ಮಕ ವಾದ ಬ್ರಹ್ಮ ದೇವರ ಶರೀರವೇ ಬ್ರಹ್ಮಾಂಡ ವೆನಿಸುವುದು. (ವನಜಜಾಂಡ), ಇಂತಹ ಬ್ರಹ್ಮಾಂಡವು ಬ್ರಹ್ಮಾಭಿಮನ್ಯ ವಾದದ್ದು. ಈ ಬ್ರಹ್ಮಾಂಡದಲ್ಲಿರುವ ಬ್ರಹ್ಮಾದಿತೃಣಾಂತ ಸಮಸ್ತ ಜೀವ ವರ್ಗದಲ್ಲಿ ಮಾನವರು. ಪಶುಪಕ್ಷಿ ಮುಂತಾದುವು ಒಂದುವರ್ಗ. ಈ ವರ್ಗಕ್ಕೆ "ಜಂಗಮ" ವರ್ಗವೆಂದು ಹೆಸರು. ವೃಕ್ಷ, ಲತಾದಿಗಳು "ಸ್ಥಾವರವರ್ಗ"ಕ್ಕೆ ಸೇರಿದುವು, ಈ ಸಮಸ್ತ ಚೇತನ ವರ್ಗಕ್ಕೂ ಆಹಾರ ಅತ್ಯಗತ್ಯ. ಅದಿಲ್ಲದೆ ಅವುಗಳ ಬೆಳವಣಿಗೆ ಸಾಧ್ಯವಿಲ್ಲ. ಈ ಬೆಳವಣಿಗೆಗೆ ಅಥವಾ ಪುಷ್ಟಿಗೆ ಶಾಸ್ತ್ರ ದಲ್ಲಿ "ಉಪಜಯ" ಎನ್ನುವರು. ಸಮಸ್ತ ಚೇತನರು ತೆಗೆದುಕೊಳ್ಳುವ ಆಹಾರಪದಾರ್ಥಗಳು ನಾಲ್ಕು ವಿಧವಾಗಿವೆ (ಚತುರ್ವಿಧ ಭೋಜನಪದಾರ್ಥ ಗಳು) ಅವು ಯಾವುವೆಂದರೆ (೧) ಖಾದ್ಯ (೨) ಪೇಯ (೩) ಚೋಷ್ಯ ಮತ್ತು (೪)ಲೇಹ್ಯ—ಎಂಬುವಾಗಿ ನಾಲ್ಕು ಪ್ರಕಾರ.

(೧) ಹಲ್ಲಿನಿಂದ ಅಗಿದು ತಿನ್ನುವ ಕಠಿಣವಾದ ತಂಡುಲಾದಿ ದ್ರವ್ಯ ಗಳಿಗೆ "ಖಾದ್ಯ" ಎಂದು ಹೆಸರು,

(೨) ನೀರಿನಂತೆ ಕುಡಿಯುವ, ಪಾನಕ, ಕ್ಷೀರ ಮುಂತಾದ ದ್ರವರೂಪ ಪದಾರ್ಥಗಳಿಗೆ "ಪೇಯ" ಎಂದು ಹೆಸರು.

(೩) ನೀರು ಮತ್ತು ಅಗ್ನಿಗಳ ಸಂಬಂಧದಿಂದ ಪಕ್ವವಾಗಿ ಬೆಂದು, ನಾಲಿಗೆಯಿಂದ ಹೊರಳಿಸಿ ತಿನ್ನುವ ದ್ರವ್ಯಗಳಿಗೆ "ಚೋಷ್ಯ" ಎಂದು ಹೆಸರು.

(೪) ನಾಲಿಗೆಯಿಂದ ಚಪ್ಪರಿಸಿ, ಸೇವಿಸತಕ್ಕ ಗೊಜ್ಜು ಚಟ್ನಿ ಮುಂತಾದ ಪದಾರ್ಥಗಳಿಗೆ "ಲೇಹ್ಯ" ಎಂತ ನಾಮ,

ಯಾವ ಆಹಾರಪದಾರ್ಥವಾದರೂ ಈ ನಾಲ್ಕರಲ್ಲಿಯೇ ಸೇರುವುದು, ಪೂರ್ವೋಕ್ತ ಚತುರ್ವಿಧ ಭೋಜನ ವಸ್ತುಗಳಲ್ಲಿ ರಸವಿಶೇಷಗಳಿವೆ, ಜಗತ್ತಿನಲ್ಲಿ ರಸಗಳು ಆರು ಪ್ರಕಾರವಾಗಿ "ಷಡ್ರಸ"ಗಳೆಂದು ಪ್ರಸಿದ್ಧ, ಈ ಆರು ರಸಗಳು ಯಾವುವೆಂದರೆ [೧] ಉಪ್ಪು [೨] ಹುಳಿ [೩] ಖಾರ [೪] ಸಿಹಿ [೫] ಕಹಿ ಮತ್ತು [೬] ಒಗರು. ಎಂಬುದಾಗಿ ಆರುವಿಧ. ಒಂದೊಂದು ರಸದಲ್ಲಿಯೂ ಶ್ರೀಪರಮಾತ್ಮನು ತನ್ನ ರೂಪವನ್ನಿಟ್ಟು, ತನ್ನಾಮಕನಾಗಿ ಆ ರಸಶಬ್ದವಾಚ್ಯನಾಗಿದ್ದಾನೆ. ಆ ರಸಗತಭಗವದ್ರೂಪವೇ ಆ ರಸದ ಪ್ರಾಚುರ್ಯದ ಪ್ರಕಟಣೆಗೆ ಕಾರಣರೂಪವು. ಅಂತಹ ಎರಡು. ಮೂರು ರಸಗಳು ಸೇರಿದಾಗ "ರುಚಿ" ಉತ್ಪನ್ನವಾಗುವುದು. ಪದಾರ್ಥಗತ ಸಮಷ್ಟಿರಸರೂಪ ವಿಶೇಷವು ಆ ಪದಾರ್ಥದ "ರುಚಿ" ಎಂದೆನಿಸಿಕೊಳ್ಳುವುದು. ಇದನ್ನು ರಸನೇಂದ್ರಿಯವಾದ ನಾಲಿಗೆಯು ಸ್ವೀಕರಿಸಿ, ತದ್ವಾರಾ ರಸಾನುಭವವು ಜೀವನಿಗೆ ಉಂಟಾಗುವುದು. ಇವೆಲ್ಲಾ ಭಗವದ್ವ್ಯಾಪಾರ ವಿಶೇಷಗಳೇ. ಹೀಗೆ ಚತುರ್ವಿಧ ಭೋಜನ ವಸ್ತುಗಳಲ್ಲಿ ಚತುರ್ವಿಧ ರಸರೂಪನು ತಾನೇ ಆಗಿ ಶ್ರೀಹರಿಯು "ಭೋಜನ ಕ್ರಿಯೆ" ಎಂಬ ವ್ಯಾಪಾರವನ್ನು ಜೀವರಲ್ಲಿ ನಿಂತು ತಾನು ಮಾಡಿ ಮಾಡಿಸುತ್ತಿರುವನು. ಆಯಾಯಾ ಜೀವರ ಯೋಗ್ಯತಾನುಸಾರ. ಅವರಿಗೆ ಯಾವ ಯಾವ ಪದಾರ್ಥಗಳು ಮನಸ್ಸಿಗೆ ಆನಂದವನ್ನು ಕೊಡುತ್ತವೆಯೋ. ಅದರಂತೆ, ಸತ್ಯಸಂಕಲ್ಪನಾದ ರಸಶಬ್ದವಾಚ್ಯನಾದ ಶ್ರೀಪರಮಾತ್ಮನು ತನ್ನ ಇಚ್ಛಾನುಸಾರ, ತಾನುಂಡು, ಜೀವರ ದ್ವಾರಾ ಉಣಿಸಿ, ಜೀವರಿಗೆ ತೃಪ್ತಿ ಕೊಡುವನು. ಆಯಾಯಾ ರಸಗತಭಗವದ್ರೂಪಾತ್ಮಕವಾದ ಸ್ವಾಖ್ಯರಸವನ್ನು [ತನ್ನದೇ ಆದ ರಸ] ತಾನು ಸ್ವೀಕರಿಸುವುದರಿಂದ ಬಿಂಬಕ್ರಿಯಾದ್ವಾರಾ ಪ್ರತಿಬಿಂಬನಾದ ಜೀವನಿಗೆ ಭೋಜನಮಾಡಿದ ತೃಪ್ತಿ ಉಂಟಾಗುವುದು. ಈ ರಸವಿಶೇಷಗಳ ಹಂಚಿಕೆಯು ಪೂರ್ವೋಕ್ತಪ್ರಕಾರ ನಾಲ್ಕು ಪ್ರಕಾರ ನಡೆಯುವುವು [೧] ಸ್ವಾಖ್ಯರಸವನ್ನು ಶ್ರೀಪರಮಾತ್ಮನೇ ಸ್ವೀಕರಿಸುವನು. [೨] ಪದಾರ್ಥಗತ ಜಡರಸವನ್ನು ಸ್ಥೂಲದೇಹದ [ಸಂಹನನ] ಬೆಳವಣಿಗೆ ಅಥವಾ ಪುಷ್ಟಿಗೆ [ಉಪಚಯ]ಗೆ ವಿನಿಯೋಗವಾಗುವಂತೆ ಮಾಡುವನು. [೩] ದೇಹಗತ ಜಡ ಇಂದ್ರಿಯಗಳಿಗೆ [ಕರಣಕ್ಕೆ] ಆನಂದರಸ [ಆನಂದ]ವನ್ನು ಕೊಟ್ಟು. ಭೋಜನದಿಂದ ಇಂದ್ರಿಯಗಳ ತೃಪ್ತಿಯಾಗುವುದು. ಮತ್ತು [೪] ಇಂದ್ರಿಯಾಭಿಮಾನಿ

ತತ್ತ್ವ ದೇವತೆಗಳಿಗೆ (ಅನಿಮಿಷರಿಗೆ) ಆಯಾಯಾ ರಸಗತ ಸ್ವರೂಪ ದರ್ಶನಾನಂದವನ್ನು (ಆತ್ಮಪ್ರದರ್ಶನಸುಖ) ಕೊಡುವನು, ಹೀಗೆ ಸ್ವಾಖ್ಯರಸವು ರಸಾಂತರ್ಗತವಾದ ಶ್ರೀಪರಮಾತ್ಮನಿಗೂ (ಸ್ವರೂಪಗಳಲ್ಲಿಯೇ ಕ್ರೀಡೆಮಾಡುವುದರಿಂದ ಸ್ವರಮಣನು ಸ್ವಾಖ್ಯರಸ ಗ್ರಾಹಕನು,) ಜಡರಸವು ದೇಹದ ಉಪಜೆಯಕ್ಕೂ ಆನಂದರಸವು ದೇಹಗತ ಇಂದ್ರಿಯಗಳಿಗೂ ಮತ್ತು ತತ್ವಾಭಿಮಾನಿದೇವತೆಗಳಿಗೆ ಆಯಾಯಾ ಇಂದ್ರಿಯಗಳಿಗೆ ಆನಂದವನ್ನು ಕೊಡುವ ರಸವಿಶೇಷಗಳಲ್ಲಿ ಅಂತರ್ಗತವಾದ ತನ್ನರೂಪಗಳನ್ನೇ ತೋರಿಸಿ ತದ್ವಾರಾ ದರ್ಶನಾನಂದಭಾಗ್ಯವನ್ನು ಕರುಣಿಸುವನು.

ಈ ಚತುರ್ವಿಧ ರಸರೂಪಗಳನ್ನು ಇನ್ನೊಂದು ವಿಧದಲ್ಲಿಯೂ ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಅನುಸಂಧಾನಮಾಬಹುದು—

(೧) ಸರ್ವರ ಬಲಗಣ್ಣಿನಲ್ಲಿ ಶ್ರೀಪರಮಾತ್ಮನು "ವಿಶ್ವ"ನಾಮಕನಾಗಿ ನಿಂತು, ಜಾಗ್ರತಾವಸ್ಥೆಗೆ ಪ್ರೇರಕನಾಗಿ, ಆ ಅವಸ್ಥಾ ಸಂಬಂಧವಾದ "ಸ್ಥೂಲ ರಸ"ವನ್ನು "ಸ್ಥೂಲಭುಕ್" ಎಂದೆನಿಸಿ, ಸ್ವೀಕರಿಸುವನು ಇದರಿಂದ ಸಮಸ್ತ ಜೀವರಿಗೆ ಜಾಗ್ರತಾವಸ್ಥೆಯಲ್ಲಿ ವ್ಯಾಪಾರಗಳು ನಡೆಯುವುವು.

(೨) ಅದೇ ವಿಶ್ವನು ಕಂಠಪ್ರದೇಶಕ್ಕೆ ಬಂದು, "ತೈಜಸ"ನಾಮಕನಾಗಿ ಸ್ವಪ್ನಾವಸ್ಥೆಗೆ ಪ್ರೇರಕನಾಗಿದ್ದಾನೆ. ಆಗ ವಾಸನಾಮಯರೂಪವಾದ ಮನಸ್ಸಿನ ಸಂಸ್ಕಾರದಿಂದ, ಸ್ವಾಪ್ನ ಪದಾರ್ಥಗಳನ್ನು ತಕ್ಷಣ ಸೃಷ್ಟಿಸಿ, ಸ್ವಪ್ನ ಸಂಬಂಧ "ಪ್ರವಿವಿಕ್ತ"ವೆಂಬ ರಸವಿಶೇಷವನ್ನು ಸ್ವೀಕರಿಸಿ, ಸ್ವಪ್ನಾನುಭವವನ್ನು ಜೀವರಿಗೆ ತಂದು ಕೊಡುವನು.

(೩) ಅದೇ ತೈಜಸನು, ಹೃದಯಸ್ಥಾನವನ್ನು ಪ್ರವೇಶಿಸಿ, "ಪ್ರಾಜ್ಞ" ನಾಮಕನಾಗಿ "ಸುಷುಪ್ತಿ" ಎಂಬ ಗಾಢನಿದ್ರಾವಸ್ಥೆಗೆ ಪ್ರೇರಕನಾಗಿದ್ದಾನೆ. ಆಗ "ಆನಂದ"ವೆಂಬ ಅನಿತ್ಯರಸವಿಶೇಷವನ್ನು ಸೃಷ್ಟಿಸಿ, ಜೀವರಿಗೆ ಮೋಕ್ಷಾನಂದಕ್ಕೆ ಸದೃಶವಾದ ಆನಂದವನ್ನು ಕ್ವಚಿತ್ ಉಂಟು ಮಾಡುವನು.

(೪) ಆದೇ ಪ್ರಾಜ್ಞನು ಬ್ರಹ್ಮರಂಧ್ರಸ್ಥಾನದಲ್ಲಿ "ತುರ್ಯ"ನಾಮಕನಾಗಿ ನಿಂತು ಸಾತ್ವೀಕಜೀವಸಂಬಂಧ "ಸ್ವರೂಪಭೂತ ಆನಂದರಸ"ವನ್ನುಂಟು ಮಾಡುವನು.

ಹೀಗೆ ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರ್ಯ-ಎಂಬ ನಾಲ್ಕು ರೂಪಗಳಿಂದ ರಸವಿಭಾಗವನ್ನು ಮಾಡುವ ವಿವರಗಳು ಮಾಂಡೂಕ ಮತ್ತು ಛಾಂದೋಗ್ಯ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿವೆ. ಈ ವಿವರಗಳ ಪಕ್ಷಿನೋಟವನ್ನು ಈ ಕೆಳಗಿನ ಪಟ್ಟಿಯಲ್ಲಿ ಪರಿಶೀಲಿಸಬಹುದು,

## ಪಟ್ಟಿ (೧)

| ಕ್ರಮ ಸಂಖ್ಯೆ | ರಸವಿಶೇಷ | ವಿಭಾಗ | ಕಾರ್ಯ |
|---|---|---|---|
| ೧ | ಸ್ವಾಖ್ಯರಸ | ಶ್ರೀ ಪರಮಾತ್ಮನೇ ಸ್ವೀಕರಿಸುತ್ತಾನೆ. | ಸ್ವರಮಣತ್ವ ತದ್ವಾರಾ ಆಯಾಯಾ ರಸವಿಶೇಷಗಳ ಮತ್ತು ಪದಾರ್ಥಗತರುಚಿ ಪ್ರಾಚುರ್ಯ. |
| ೨ | ಜಡರಸ | ಸ್ಥೂಲ ದೇಹಕ್ಕೆ | ದೇಹದ ಬೆಳವಣಿಗೆಗೆ [ದೇಹೋಪಚಯ] |
| ೩ | ಆನಂದರಸ | ಇಂದ್ರಿಯಗಳಿಗೆ | ಭೋಜನದ್ವಾರ ಕರಣಾನಂದ. |
| ೪. | ಆತ್ಮಪ್ರದರ್ಶನ ಸುಖ | ತತ್ವಾಭಿಮಾನಿ ದೇವತೆಗಳು | ಆಯಾಯಾ ಇಂದ್ರಿಯಗಳಿಗೆ ಆನಂದ ಪ್ರದವಾದ ರಸಗತ ರೂಪಗಳ ದರ್ಶನಾನಂದ ಭಾಗ್ಯ. |

## ಪಟ್ಟಿ (೨)

| ಕ್ರಮ ಸಂಖ್ಯೆ | ಭಗವದ್ರೂಪ | ಸ್ಥಾನ | ರಸವಿಶೇಷ | ಕಾರ್ಯ |
|---|---|---|---|---|
| ೧ | ವಿಶ್ವ | ಬಲನೇತ್ರದಲ್ಲಿ | ಸ್ಥೂಲರಸ | "ಸ್ಥೂಲಭುಕ್" ಎಂದೆನಿಸಿ ಜಾಗ್ರತಾವಸ್ಥ ಪ್ರೇರಕ ರೂಪ. |
| ೨ | ತೈಜಸ | ಕಂಠಪ್ರದೇಶ | ಪ್ರವಿವಿಕ್ತರಸ | ಸ್ವಪ್ನಾವಸ್ಥೆಗೆ ಪ್ರೇರಕನಾಗಿದ್ದಾನೆ. |
| ೩ | ಪ್ರಾಜ್ಞ | ಹೃದಯದಲ್ಲಿ | ಆನಂದವೆಂಬ ಅನಿತ್ಯರಸ | ಸುಷುಪ್ತ್ಯವಸ್ಥೆಗೆ ಪ್ರೇರಕ ರೂಪ. ಆ ಅವಸ್ಥೆಯಲ್ಲಿ ಕ್ವಚಿತ್‌ಮೋಕ್ಷಾನಂದ ಸದೃಶವಾದ ಅನುಭವ |
| ೪ | ತುರ್ಯ | ಬ್ರಹ್ಮರಂಧ್ರದಲ್ಲಿ | ಸಾತ್ವೀಕ ಜೀವ ಸಂಬಂಧ "ಸ್ವರೂಪ ಭೂತ ಆನಂದರಸ" | ಆನಂದಾನುಭವ ವಿಶೇಷ |

# ಪದ್ಯ (೨)

**ಮೂಲ :**

**ನೀಡದಂಡದಲಿಪ್ಪ ಲಿಂಗಕೆ ।**
**ಷೋಡಶಾತ್ಮಕ ರಸವಿಭಾಗವ ।**
**ಮಾಡಿ ಷೋಡಶಕಲೆಗಳಿಗೆ ಉಪಚಯುಗಳನೆ ಕೊಡುತ ॥**
**ಕ್ರೋಡ ಎಪ್ಪತ್ತೆರಡುಸಾವಿರ ।**
**ನಾಡಿಗತ ದೇವತೆಗಳೊಳಗಿ ।**
**ದ್ದಾಡುತಾನಂದಾತ್ಮ ಚರಿಸುವ ಲೋಕದೊಳು ತಾನು ॥ ೨ ॥**

**ಅವತರಿಣಿಕೆ :**

ಜೀವನಿಗೆ ಗೂಡಿನಂತಿರುವ ಸ್ಥೂಲಶರೀರಕ್ಕೆ ಆಗತಕ್ಕ ಉಪಚಯಕ್ರಮ್ಮ ವನ್ನು ಹೇಳುತ್ತಾರೆ "ನೀಡದಂಡದಲಿಪ್ಪ"-ಎಂಬ ಈ ಎರಡನೆಯ ಪದ್ಯದಿಂದ- ಭೂರಮಣನಾದ ವರಾಹರೂಪೀ ಶ್ರೀಹರಿಯು ಎಪ್ಪತ್ತೆರಡು ಸಾವಿರ ನಾಡಿಗತ ದೇವತೆಗಳ ದ್ವಾರಾ ವ್ಯಾಪಾರ ಮಾಡಿ ಮಾಡಿಸುತ್ತಾ ಜ್ಞಾನಾನಂದ ಸ್ವರೂಪನಾದ ಜಗನ್ನಿಯಾಮಕನು ಲಿಂಗದೇಹಗತ "ಷೋಡಶಕಲೆಗಳಿಗೆ ಉಪಚಯವನ್ನುಂಟುಮಾಡತಕ್ಕ ವಿವರಗಳನ್ನು ನಿರೂಪಿಸುತ್ತಾರೆ. ॥ ೨ ॥

**ಪ್ರತಿಪದಾರ್ಥ :**

**ನೀಡದಂಡಲಿ**=ಗೂಡಿನೋಪಾದಿಯಲ್ಲಿ **ಇಪ್ಪ**=ಇರುವ **ಲಿಂಗಕೆ**= ಸೂಕ್ಷ್ಮರೂಪಲ್ಲಿ ಲಿಂಗಸಾಂಕೇತವಾದ ಸ್ಥೂಲಶರೀರಕ್ಕೆ **ಷೋಡಶಾತ್ಮಕ**= ಹದಿನಾರು ಸಂಖ್ಯಾಕವಾದ **ರಸವಿಭಾಗವ**=ಭೋಜನಯೋಗ್ಯ ದ್ರವ್ಯಗತ ರಸವಿಶೇಷಗಳನ್ನು ವಿಭಾಗಿಸಿ **ಷೋಡಶಕಲೆಗಳಿಗೆ**=ಹದಿನಾರು ಕಳೆಗಳಿಗೆ **ಉಪಚಯುಗಳನೆ ಕೊಡುತ**=ವೃದ್ಧಿಯನ್ನುಂಟುಮಾಡುತ್ತಾ **ಕ್ರೋಡ**=

ಶ್ರೀ ವರಾಹರೂಪಿಯಾದ ಪರಮಾತ್ಮನು **ಎಪ್ಪತ್ತೆರಡುಸಾವಿರನಾಡಿಗತ**= ಎಪ್ಪತ್ತೆರಡು ಸಾವಿರಸಂಖ್ಯಾಕವಾದ ನಾಡಿಗಳಲ್ಲಿರುವ **ದೇವತೆಗಳೊಳಗಿದ್ದು** = ನಾಡೀ ಅಭಿಮಾನಿ ಮತ್ತು ಕಳಾಭಿಮಾನಿ ದೇವತೆಗಳಲ್ಲಿ ಭಾರತೀ ರಮಣ ಮುಖ್ಯಪ್ರಾಣಾಂತರ್ಗತನಾಗಿದ್ದು **ಆಡುತಾ**= ಕ್ರೀಯಾ ವಿಶಿಷ್ಟನಾಗಿ **ಆನಂದಾತ್ಮ**= ಆನಂದಸ್ವರೂಪಿಯಾದ ಬಿಂಬರೂಪೀ ಶ್ರೀಪರಮಾತ್ಮನು **ಲೋಕದೊಳು**= ಹದಿನಾಲ್ಕು ಲೋಕಗಳಲ್ಲಿ ವಿದ್ಯಮಾನರಾದ ತ್ರಿವಿಧಜೀವರ ದೇಹಗಳಲ್ಲಿ **ತಾನು ಚರಿಸುವ**= ತಾನು ಇಂತಹ ಉಪಚಯದಿಂದ ದೇಹಕ್ಕೆ ಪುಷ್ಟಿಪ್ರದನಾಗಿ ದೇಹದ್ವಾರಾ ಸಂಚಾರಮಾಡಿ ಮಾಡಿಸುವನು ॥ ೨ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಗೂಡಿನೋಪಾದಿಯಲ್ಲಿ ಇರತಕ್ಕ ಎಂದರೇ, ಜೀವನ ಅನಾದಿ ಲಿಂಗೋಪಾದಾನದಿಂದ ಸೂಕ್ಷ್ಮಸೃಷ್ಟಿಯಲ್ಲಿ ಪರಿಣಮಿಸಿದ ಅನಿರುದ್ಧ ಶರೀರಸಹಿತನಾಗಿ ಜೀವ ಆವಾಸನಾಗಿ ಇರುವ ಸ್ಥೂಲದೇಹವು ಅನಾದಿ ಲಿಂಗವೆಂದು ತಾತ್ಪರ್ಯವಲ್ಲ. ಪ್ರಕೃತ ಪ್ರಸಕ್ತ ಅನಾದಿಲಿಂಗದೇಹಕ್ಕಲ್ಲ. ಭೋಜನಮಜ್ಜನಾದಿಗಳು ಮಾಡತಕ್ಕ ದೇಹದ ಪ್ರಸಕ್ತಿ ಸ್ಥೂಲದೇಹವೆಂದು ತಾತ್ಪರ್ಯ ಮತ್ತು ಲಿಂಗ ಎಂದರೆ ಗುರ್ತು, ಮನುಷ್ಯ ಎಂತಲೂ. ಪಶು ಎಂತಲೂ ಗುರ್ತು ತೋರಿಸಿಕೊಡತಕ್ಕದ್ದು. ಸ್ಥೂಲದೇಹವಾದ ಪ್ರಯುಕ್ತ ಲಿಂಗಪದ ಸ್ಥೂಲದೇಹಕ್ಕೆ ಸಾಂಕೇತವು. ಉಪಚಯಾದಿಗಳಿಂದ ವೃದ್ಧಿ ಹ್ರಾಸಾದಿಗಳು ಕಾಣತಕ್ಕದ್ದನ್ನು ಸ್ಥೂಲದೇಹಕ್ಕೇ ಹೊರತು ಅನಾದಿಲಿಂಗಕ್ಕಲ್ಲ ಅತ ಏವ ಇಂಥಾ ಸ್ಥೂಲಶರೀರಕ್ಕೆ ಹದಿನಾರು ಸಂಖ್ಯಾಕವಾದ ಷೋಡಶ ಕಳೆಗಳು ಯದಾತ್ಮಕವೋ ತದಾತ್ಮಕ ಭೋಜನ ಮಾಡತಕ್ಕ ಪಂಚಭೂತಾತ್ಮಕ ದ್ರವ್ಯಗತ ಸಂಸ್ಪೃಷ್ಟ ರಸಗಳ, ಅದಕ್ಕೆ ಸೇರತಕ್ಕ ರಸಗಳ ಅಧಿಕಾರಿ ಭೋಜನ ಮಾಡಿದ ನಂತರ ಪ್ರತ್ಯೇಕ ಪ್ರತ್ಯೇಕ ಮಾಡಿ ಷೋಡಶಕಳೆಗಳಿಗೆ--

**"ಕಳಾಶ್ಚ ಪಂಚಭೂತಾನಿ ಜ್ಞಾನಕರ್ಮೇಂದ್ರಿಯಾಣಿಚ |**
**ಪಂಚಪಂಚ ಮನಶ್ಚೇತಿ ಷೋಡಶೋಕ್ತಾಮಹರ್ಷಿಭಿಃ ||"**

**—ಇತಿ ಭಾಗವತ ಪ್ರಥಮಸ್ಕಂಧವಿ ಜಯ ಧ್ವಜೀಯವ್ಯಾಖ್ಯಾನರೀತ್ಯಾ** ಪಂಚಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳು ಪಂಚಭೂತಗಳು ಮತ್ತು ಮನಸ್ಸು ಇವು ಸೇರಿ ಹದಿನಾರು ಕಳೆಗಳು ಎಂದರ್ಥ, ಇದರಲ್ಲಿ ಪಂಚಭೂತ ಗಳ ಪ್ರಾಚುರ್ಯವಿಶೇಷಗಳಿಗೆ ದಾವದಾವ ಕಳಾದಲ್ಲಿ ದಾವದು ಪ್ರಾಚುರ್ಯ, ದಾವುದು ಅಪ್ರಾಚುರ್ಯವೋ ಅದದನ್ನನುಸರಿಸಿ ವಿಭಾಗ ಮಾಡಿದ ಒಂದು ಕಳಾಕ್ಕ ಉಪಚಯನವಾಗತಕ್ಕ ರಸ, ಆ ಕಳಕ್ಕೆ ಅದರಂತೆ ಸೇರಿಸಿ, ಪೂರ್ವೋಕ್ತ ಚಣಕ ಉದಕ ದೃಷ್ಟಾಂತದೋಪಾದಿಯಲ್ಲ ಪ್ರತಿ ಪ್ರತಿ ಕಳಾಕ್ಕೂ ಉಪಚಯ ಗಳನ್ನು ದೇಹಾಂತರ್ಗತನಾಗಿ ಶ್ರೀಪರಮಾತ್ಮ ಕೊಡುತ್ತಾ. ಶ್ರೀವರಾಹರೂಪಿ ಯಾದ ಪರಮಾತ್ಮ ಎಪ್ಪತ್ತೆರಡು ಸಾವಿರ ನಾಡಿಗಳಿಗೆ ಉಪಚಯವಾಗತಕ್ಕ 72000 ರಸಗಳ ವಿಭಾಗಮಾಡಿ, ನಾಡಿಗಳಿಗೆ ಉಪಚಯಗಳನ್ನ ಕೊಡತಾ, ಇನ್ನು ಈ ನಾಡಿಗತ ಉಪಲಕ್ಷಣಯಾ ಷೋಡಶಕಳಾಗತ, ನಾಡಿ ಅಭಿಮಾನಿ ಮತ್ತು ಕಳಾಭಿಮಾನಿ ದೇವತೆಗಳೊಳಗೆ ಭಾರತೀರಮಣಮುಖ್ಯಪ್ರಾಣಾಂ ತರ್ಗತನಾಗಿದ್ದು ವಿಭಾಗ ವ್ಯಾಪಾರದಿಂದಲೂ, ಆಯಾಯಾ ದೇವತೆಗಳ ಸಹಿತನಾಗಿಯೂ ದೇಹದಲ್ಲಿ ಆಡುತಾ, ಆನಂದಸ್ವರೂಪಿಯಾದ ಸ್ಥೂಲ ದೇಹಗತ ಬಿಂಬರೂಪೀ ಪರಮಾತ್ಮ, ತಾನು ಇಂಥಾ, ಉಪಚಯರಿಂದ ದೇಹಕ್ಕೆ ಬಲಪ್ರದನಾಗಿ ದೇಹದ್ವಾರಾ ಸಂಚಾರಮಾಡಿಸುವನು. ಈ ಹದಿನಾಲ್ಕುಲೋಕ ದಲ್ಲಿ ವಿದ್ಯಮಾನರಾದ ತ್ರಿವಿಧಜೀವರ ದೇಹದೊಳು ಈ ಪ್ರಕಾರ ಶ್ರೀ ಪರಮಾತ್ಮ ತಾನು ಸಂಚರಿಸುತಾ ಇರತಾನೆ.

**ವಿಶೇಷಾರ್ಥ :**

ಜೀವರು ಪ್ರತ್ಯಕ್ಷದಲ್ಲಿ ಭೋಜನಮಾಡತಕ್ಕದ್ದು ಪೃಥ್ವೀಸಾಂಕೇತವಾದ ಅನ್ನ, ಅಪ್‌ಸಂಕೇತವಾದ ಉದಕ, ತೇಜಃಸಾಂಕೇತವಾದ ತೇಜ, ಪ್ರಾಚುರ್ಯವಾದ ಘೃತತೈಲಾದಿಗಳು, ಆಕಾಶವಾಯುಗಳು, ಈ ಮೂರರಲ್ಲಿ ವಿದ್ಯಮಾನಗಳಾಗಿ ಅವೆ. ಅಗೋಚರ, ಪ್ರತ್ಯಕ್ಷ ಭೋಜನಾರ್ಹವಲ್ಲ, ಪದಾರ್ಥ ಗಳ ದ್ವಾರಾ ಭೋಜನಮಾಡಿ ದೇಹಗತ ಆಕಾಶವಾಯುಗಳಿಗೆ ಸೇರತಾ

ಇರತದೆ. ಅನ್ನದ ಮಲ ಅಮೇಧ್ಯವು, ಉದಕದಮಲ ಮೂತ್ರವು. ತೇಜೋಮಲ ರೇತಸ್ಸು ಮೊದಲಾದ ಶುಕ್ಲಶೋಣಿತವು. ವಾಯುಮಲ ಅಪಾನವಾಯು. ಬಾಹ್ಯ ಆಕಾಶವಾಯುಗಳಿಗೆ ಉಪಚಯವುಂಟು, ಬಾಹ್ಯ ವಾಯು ಸ್ಪರ್ಶದಿಂದ ಅಪ್ಯಾಯನವು. ಬಾಹ್ಯ ಆಕಾಶಜನ ಸಂಬಂಧವಿಲ್ಲದೇ ಅವಕಾಶವಿದ್ದರೆ ದೇಹಕ್ಕೆ ಅಪ್ಯಾಯನವು, ಇಂಥಾ ಸೂಕ್ಷ್ಮೋಪಚಯ ಉಂಟು ಮಾಡತಾನೆ, ಅಲಕ್ಷ್ಯದಿಂದ ತೋರೋದಿಲ್ಲ ಎಂತ ತಾತ್ಪರ್ಯ ॥ ೨ ॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :

ಪಕ್ಷಿಗಳಿಗೆ ಮೇಲೆ ಅವರಕವಾಗಿರುವ ಗೂಡಿನಂತೆ ಜೀವರಿಗೆ ಮೇಲೆ ಅವರಕವಾಗಿರುವ ಸ್ಥೂಲಶರೀರಕ್ಕೆ ಷೋಡಶಾತ್ಮಕನಾದ ಶ್ರೀ ಪರಮಾತ್ಮನು ಚತುರ್ವಿಧ ರಸವಿಭಾಗಗಳನ್ನು ಮಾಡಿ ಉಣಿಸುವನು. ನಾಲ್ಕುವಿಧರಸ ಗಳೆಂದರೆ ಖಾದ್ಯವಾದ ಪದಾರ್ಥದಲ್ಲಿ ಉಪ್ಪು ಖಾರ ಮಿಶ್ರವಾದುದು ಕೆಲವು, ಸಿಹಿ ಪದಾರ್ಥಗಳು ಎಲ್ಲವೂ ಸೇರಿ "ಖಾದ್ಯರಸ"ವೆಂದೆನಿಸಿಕೊಳ್ಳುವುದು. ಇದರಂತೆ ಪೇಯದಲ್ಲಿಯೂ, ಲೇಹ್ಯದಲ್ಲಿಯೂ ಮತ್ತು ಚೋಷ್ಯಗಳಲ್ಲೂ ಇರುವವು, ಇವುಗಳ ರುಚಿಗಳು ಬೇರೆಬೇರೆಯಾಗಿರುವುದರಿಂದ ಅದನ್ನೇ "ರಸ"ವೆಂದು ಹೇಳಿರುವರು. ಈ ರಸಗಳನ್ನು ವಿಭಾಗಮಾಡಿ ಷೋಡಶ ಕಲೆಗಳಿಗೆ ಪುಷ್ಟಿಯನ್ನು ಕೊಡುವನು. ಷೋಡಶಕಳ ಅಂದರೆ **ಭಾಗವತ ಪ್ರಥಮ ಸ್ಕಂಧ ತಾತ್ಪರ್ಯದಲ್ಲಿ—**

**"ಕಲಾಶ್ಚ ಪಂಚಭೂತಾನಿ ಜ್ಞಾನಕರ್ಮೇಂದ್ರಿಯಾಣಿಚ ।**
**ಪಂಚ ಪಂಚಮನಶ್ಚೇತಿ ಷೋಡಶೋಕ್ತೋ ಮುನೀಷಿಭಿಃ॥"**

—ಎಂತ ಪ್ರಮಾಣವಾಕ್ಯವಿದೆ. ಈ ಪ್ರಕಾರ, ಮನಸ್ಸು, ಪಂಚಭೂತಗಳು, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಈ ಹದಿನಾರು ಇಂದ್ರಿಯ ಗಳಿಗೂ ಪುಷ್ಟಿಯನ್ನು ಕೊಟ್ಟು, ವರಾಹರೂಪಿಯಾದ ಶ್ರೀಪರಮಾತ್ಮನು ಸ್ಥೂಲಶರೀರದಲ್ಲಿರುವ ಎಪ್ಪತ್ತೆರಡುಸಾವಿರ ನಾಡಿಗಳಭಿಮಾನಿ ದೇವತೆ ಗಳೊಳಗಿದ್ದು, ವಿಹಾರಮಾಡುತ್ತಾ, ಆನಂದಸ್ವರೂಪನಾಗಿ ಲೋಕಗಳಲ್ಲಿ ಸಂಚರಿಸುವನು ॥ ೨ ॥

## (೩) ಭಾವದರ್ಪಣಟೀಕಾ"—ವ್ಯಾಖ್ಯಾನ :

ನೀಡ=ಪಕ್ಷಿಗೂಡು ಎಂದರ್ಥ "ಕುಲಾಯೋ ನೀಡಮಸ್ತ್ರಿಯಾ ಮಿತ್ಯಮರ : ||"

ಏತಾದೃಶಲಿಂಗದೇಹಕ್ಕೆ ಷೋಡಶಕಳಾ-ಎಂದರೆ, ಪಂಚ ಕರ್ಮೇಂದ್ರಿಯ ಪಂಚಜ್ಞಾನೇಂದ್ರಿಯ, ಪಂಚತನ್ಮಾತ್ರಾ, ಮನಸ್ಸು- ಅಂತು ಕಲಾ ಹದಿನಾರು ಈ ವಿಷಯದಲ್ಲಿ ಪ್ರಮಾಣ :

**"ಇಂದ್ರಿಯಾಣಿ ದಶೈಕಂಚ ಮನಸ್ತನ್ಮಾತ್ರಕಾಸ್ತಥಾ |**
**ಪಂಚೈವ ಷೋಡಶಕಲೋ ಲಿಂಗದೇಹೋಽಹ್ಯನಾದಿಮಾನಿತಿ||"**
**—ವಿಷ್ಣುರಹಸ್ಯೋಕ್ತಿ||**

ಏತಾದೃಶ ಕಲಾಗಳಿಗೆ ಉಪಚಯ ಎಂದರೆ ವೃದ್ಧಿ ಇದರನ್ನು ಕ್ರೋಡ=ವರಾಹ.

**"ಕ್ರೋಡೋಭೂಧರ ಇತ್ಯಮರಃ ||**

ಈ ವರಾಹರೂಪಿಯಾದ ಶ್ರೀ ಹರಿ ದ್ವಾಸಪ್ತತಿಸಾಹಸ್ರನಾಡಿಗತ ತತ್ತ್ವೇಶರಲ್ಲೂ ವ್ಯಾಪ್ತನಾಗಿದ್ದು, ಆನಂದಸ್ವರೂಪನು ಲೋಕದೊಳು ಸಂಚರಿಸುವನೆಂದು ತಾತ್ಪರ್ಯ ||೨||

## (೪) "ಗುರುಹೃದಯಪ್ರಕಾಶಿಕೆ"—ವ್ಯಾಖ್ಯಾನ :

ಇದರ ವಿವರವೇ ಅಧ್ಯಾಯಪೂರ್ತಿಯಾಗಿ ನಿರೂಪಿಸಲ್ಪಟ್ಟಿದೆ. ಈ ಪದ್ಯದಿಂದ ನೀಡವೆಂಬ ಲಿಂಗಶರೀರಕ್ಕೆ ರಸ ಉಪಯೋಗಮಾಡುವ ಬಗೆಯನ್ನು ವಿವರಿಸುತ್ತಾರೆ. ನೀಡದಂದಲಿ, ಪಕ್ಷಿಯಗೂಡಿನಂತೆ ಜೀವನಿಗೆ ಆಚ್ಛಾದಕವಾಗ ಸೂಕ್ಷ್ಮಶರೀರಕ್ಕೆ, ಷೋಡಶಾತ್ಮಕ ರಸವಿಭಾಗವಮಾಡಿ, ಎಂದರೆ, ಸವಿ, ಕಣ್ಣಿಗೆ ಇಂಪು, ಸುವಾಸನೆ, ಶುಚಿ ಎಂಬ ನಾಲ್ಕು ರಸಗಳನ್ನು

ಹದಿನಾರು ಬಗೆಯಾಗಿ ಪುಷ್ಟಿಯಾಗುವಂತೆ ವಿಭಾಗಮಾಡಿ, ಷೋಡಶಕಲೆ ಗಳೆಂಬ ಪಂಚಜ್ಞಾನೇಂದ್ರಿಯಾಗಳು, ಪಂಚಕರ್ಮೇಂದ್ರಿಯಗಳು, ಪಂಚಭೂತ ಗಳು ಮತ್ತು ಮನಸ್ಸು ಸಹ ಹದಿನಾರು ಅಂಶಗಳಿಗೆ ಪುಷ್ಟಿ ಎಂದರೆ, ಉಪಚಯವನ್ನು ಕೊಡುತ್ತಾ, ಈ ದೇಹದಲ್ಲಿ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿರುವ ತತ್ತ್ವದೇವತೆಗಳಲಿದ್ದು, ಆಡುತ್ತಾ ಎಂದರೆ, ವಿನೋದಿ ಸುತ್ತಾ ಸಂತೋಷ ಸ್ವರೂಪ ಶ್ರೀಹರಿಯು ತಾನು ಚರಿಸುವ ಎಂದರೆ **"ಚರಗತಿ ಭಕ್ಷಣಯೋಃ"**—ಎಂಬ ಧಾತುರೀತ್ಯಾ, ಸರ್ವರಲ್ಲೂ ಸ್ವರಸ ಅನುಭವಿಸುತ್ತಿರುವನೆಂದರ್ಥ. ಇಲ್ಲಿ ವರಾಹರೂಪೀ ಕ್ರೋಡನಾಮಕ ರಮಾ ಪತಿಯನ್ನು ನಾಡಿಗಳಲ್ಲಿ ಚಿಂತಿಸಬೇಕೆಂದು ನಿರೂಪಿಸುತ್ತಾರೆ ॥ ೨ ॥

## (ಇ) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ)—

ನನು ಅನುಪಚಿತ ಸೂಕ್ಷ್ಮೇಂದ್ರಿಯಾಣಾಂ ಸ್ಥೂಲಾನ್ನಾತ್ ಕಥಮಾನಂದ್ ಇತ್ಯತಃ ಆಹ॥ ನೀಡೇತಿ॥ ಗೂಡು॥ ನಿರ್ಗಮಾದ್ಯರ್ಥಂ ರಂಧ್ರದ್ವಯಯುತ ತ್ವಾತ್ ತದ್ಗ್ರಹಣಂ। ಪ್ರಕಾಶನಿಸ್ಸರಣಾರ್ಥಕ ತ್ರಿರೂಪ ರಮಾಧಿಷ್ಠಿತ ಛಿದ್ರತ್ರಯಯುಕ್ತ ನಾರಿಕೇಲ ಫಲಾಕಾರಂ ಸ್ವಚ್ಛ ಸ್ಫಟಿಕವದ್ಭಾಸ್ವರಂ ಸಾತ್ವಿಕಾನಾಂ ಲಿಂಗಕಲೇವರಂ ಇತ್ಯನ್ಯತ್ರೋಕ್ತೇಃ। ಪನಸಫಲವತ್ ಆವರಣಷಟ್ಕ ಬದ್ಧಸ್ಯ ಕಾಂತಿಃ ಕಥಂ ನಿಸ್ಸರತೀತಿ ನ ಕುಚೋದ್ಯವಕಾಶಃ॥ ಷೋಡಶಸಂಭೂತಂ, ಷೋಡಶ ಕಲಾಮಿತಿ, ಭಾಗವತತಾತ್ಪರ್ಯ ದೀಪಿ ಕೋಕ್ತೇಃ। ತಾಃ ಕಲಾಃ ಪಂಚ ತನ್ಮಾತ್ರಾಃ ಜ್ಞಾನಕರ್ಮೇಂದ್ರಿಯಾಣಿ, ಪಂಚ ಪಂಚೈ ಏಕ ಮನಸಾ ಷೋಡಶೋಕ್ತಾಃ ಮಹರ್ಷಿಭಿರಿತಿ ಮನೋಕ್ತಾಃ॥ ಕ್ರೋಡ:—ವರಾಹಃ।ಆನಂದಾತ್ಮ ತದ್ರೂಪ ॥೨॥

**ಕನ್ನಡಾರ್ಥ**

ಸ್ಥೂಲಾನ್ನದಿಂದ ಸೂಕ್ಷ್ಮೇಂದ್ರಿಯಗಳಿಗೆ ಆಗುವ ಆನಂದದ ಕ್ರಮ ವನ್ನು ವಿವರಿಸುತ್ತಾರೆ "ನೀಡದಂದಲಿಪ್ಪ"—ಎಂಬ ಪದ್ಯದಿಂದ. ನೀಡ ಎಂದರೆ ಹಕ್ಕಿಗಳು ವಾಸಮಾಡುವ ಗೂಡು ಎಂದರ್ಥ, ಗೂಡಿಗೆ ಆಗಮನ ಮತ್ತು ನಿರ್ಗಮನಗಳಿಗೆ ಎರಡು ರಂಧ್ರಗಳಿರುವುವು. ಈ ಕಾರಣದಿಂದ **ಈ**

ದೃಷ್ಟಾಂತವನ್ನು ತೆಗೆದುಕೊಂಡಿರುತ್ತಾರೆ ಸಾತ್ವಿಕ ಜೀವರಿಗೆ ಶುದ್ಧವಾದ ಸ್ಪಟಿಕಮಣಿಯಂತೆ ಪ್ರಕಾಶಮಾನವಾದ ಲಿಂಗದೇಹವು ಇರುವುದು. ಅದು ಮೂರು ಛಿದ್ರಗಳಿಂದ (ಕಣ್ಣುಗಳತಿಂರುವ) ಸಹಿತವಾದ ತೆಂಗಿನಕಾಯಿಯ ಆಕಾರವುಳ್ಳದ್ದು. ತ್ರಿರೂಪಾತ್ಮಕಳಾದ ಶ್ರೀರಮಾದೇವಿಯ ಆವಾಸಸ್ಥಾನವು (ಅಭಿಮನ್ಯಮಾನವಾದದ್ದು). ಷೋಡಶಕಳಾತ್ಮಕವಾದ ಲಿಂಗದೇಹಕ್ಕೆ ನಾಡಿಗಳ ದ್ವಾರಾ ಸೂಕ್ಷ್ಮೇಂದ್ರಿಯಗಳಿಗೆ ಉಪಚಯ. ಭೂತ ಪಂಚಕಗಳು=೫; ಜ್ಞಾನೇಂದ್ರಿಯಗಳು=೫; ಕರ್ಮೇಂದ್ರಿಯಗಳು=೫; ಮನಸ್ಸು=೧ ಇವೆಲ್ಲವೂ ಸೇರಿ ೧೬ ಕಳೆಗಳು, **ಭಾಗವತತಾತ್ಪರ್ಯ ದೀಪಿಕೆ** ಯಲ್ಲಿ ಇದಕ್ಕೆ ಪ್ರಮಾಣವಚನ. "ಕ್ರೋಡ" ಎಂದರೆ ವರಾಹ ರೂಪೀ ಶ್ರೀಪರಮಾತ್ಮನು, ಆನಂದಾತ್ಮಾ"—ಎಂದೇ ಆನಂದಮಯರೂಪ ನೆಂದು ತಾತ್ಪರ್ಯ॥೨॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಗೂಡಿನಲ್ಲಿ ಪಕ್ಷಿಗಳು ವಾಸಿಸುತ್ತವೆ. ಗೂಡು ಪಕ್ಷಿಗಳ ನಿವಾಸಸ್ಥಾನ, ಅಂತೆಯೇ ಸಾಧನಶರೀರವಾದ ಈ ಸ್ಥೂಲದೇಹವೂ ಜೀವನ ಆವಾಸಮಂದಿರ ಇಂತಹ ಗೂಡಿನಂತೆ ಇರತಕ್ಕ (ನೀಡವಂದಲಿಪ್ಪ) "ಲಿಂಗಕೆ" ಎಂದು ದಾಸರಾಯರು ಪದಪ್ರಯೋಗಮಾಡಿದ್ದಾರೆ. ಇಲ್ಲಿ "ಲಿಂಗ" ಶಬ್ದದಿಂದ ಅನಾದಿಲಿಂಗದೇಹವನ್ನು ತೆಗೆದುಕೊಳ್ಳಬಾರದು. ಏಕೆಂದರೆ ಇದೇ ಪದ್ಯದಲ್ಲಿ ಮುಂದೆ ಉತ್ತರಾರ್ಧದಲ್ಲಿ ಎಪ್ಪತ್ತೆರಡು ಸಾವಿರನಾಡಿಗತ ದೇವತೆಗಳೊಳ ಗಿದ್ದು"—ಎಂದು ಹೇಳಿರುತ್ತಾರೆ ಎಪ್ಪತ್ತೆರಡುಸಾವಿರಸಂಖ್ಯಾಕವಾದ ನಾಡಿ ವ್ಯೂಹಗಳು ಇರುವುದು ಸ್ಥೂಲದೇಹದಲ್ಲಿಯೇ ಮತ್ತು ಆ ನಾಡಿಗತ ತತ್ವೇಶರು ಅನಾದಿಲಿಂಗದೇಹದಲಿಲ್ಲ. ಈ ಕಾರಣದಿಂದ ಸ್ಥೂಲದೇಹದ ವಿಚಾರವೇ ಇದು, ಅನಾದಿಲಿಂಗವೂ ತ್ರಿಗುಣಾತ್ಮಕವಾದದ್ದು ಮತ್ತು ಷೋಡಶ ಕಳಾತ್ಮಕ ವಾದದ್ದು ಅಂತೆಯೇ ಸ್ಥೂಲದೇಹದಲ್ಲಿಯೂ ಸಹ ನಾಲಿಗೆಗೆ (ರಸನೇಂದ್ರಿಯ) ಸವಿ, ಕಣ್ಣಿಗೆ (ನೇತ್ರೇಂದ್ರಿಯ) ಇಂಪು, ಮೂಗಿಗೆ(ಘ್ರಾಣೇಂದ್ರಿಯ) ಸುವಾ ಸನೆ ಮತ್ತು ಚರ್ಮಕ್ಕೆ (ತ್ವಗಿಂದ್ರಿಯ) ಶುಚಿ ಎಂಬ ನಾಲ್ಕು ವಿಧವಾದ ರಸ

ವಿಶೇಷಗಳನ್ನು (ಇವುಗಳು ಭೋಜನ ದ್ರವ್ಯಗತ ರಸಗಳಿಂದ ಹಂಚಿಕೆಯಾಗಿ ಈ ನಾಲ್ಕು ಜ್ಞಾನೇಂದ್ರಿಯೇಗಳ ದ್ವಾರಾ, ಆನಂದವನ್ನು ಕೊಡುವುವು) ಖಾದ್ಯ, ಪೇಯ, ಚೋಷ್ಯ ಮತ್ತು ಲೇಹ್ಯಗಳೆಂಬ ಚತುರ್ವಿಧ ಭೋಜನ ಯೋಗ್ಯವಾದ ಪದಾರ್ಥಗಳಿಂದಾಗಿ ೪×೪=೧೬ ಭಾಗಗಳಾಗಿ ವಿಭಾಗಿ ಸಲ್ಪಡುವುದು. ಈ ಹದಿನಾರು ಸಂಖ್ಯಾಕವಾದ ರಸವಿಶೇಷಗಳು "ಷೋಡಶ ಕಳೆಗಳಗೆ" ಆದಂರೆ,ಜ್ಞಾನೇಂದ್ರಿಯಗಳು=೫ ಕರ್ಮೇಂದ್ರಿಯಗಳು=೫ ಪಂಚ ಭೂತಗಳು=೫ ಮತ್ತು ಮನಸ್ಸು=೧ ಒಟ್ಟಿನಲ್ಲ ಈ ಹದಿನಾರು ತತ್ವಗಳಿಗೆ ವೃದ್ಧಿ (ಪುಷ್ಟಿ) ರೂಪವಾದ ಉಪಚಯವನ್ನು ಶ್ರೀ ಪರಮಾತ್ಮನು ಕೊಡುತ್ತಾನೆ ಭಾಗವತದಲ್ಲಿ "ಪಂಚಭೂತ"ಗಳೂ ಎಂದು ಹೇಳಿದೆ. **ಆದರೆ ವಿಷ್ಣು ರಹಸ್ಯ ದಲ್ಲಿ** "ಪಂಚತನ್ಮಾತ್ರ" ಗಳು ಎಂದು ಹೇಳಿದೆ. ಪಂಚಭೂತಗಳು ತನ್ಮಾತ್ರಾಗುಣ ಗಳಿಗೆ ಅಧಿಷ್ಠಾನಗಳು, ಹೇಗಂದರೆ ಭೂತತ್ತ್ವ—ಗಂಧ; ಉದಕತತ್ತ್ವ—ರಸ; ತೇಜೋತತ್ತ್ವ —ರೂಪ; ವಾಯುತತ್ತ್ವ—ಸ್ಪರ್ಶಮತ್ತು ಆಕಾಶತತ್ತ್ವ— ಶಬ್ದ.ಈ ಪ್ರಕಾರ ಗಂಧ, ರಸ,ರೂಪ, ಸ್ಪರ್ಶಮತ್ತು ಶಬ್ದಗಳು,ಪೃಥ್ವಿ,ಅಪ್ಪು ತೇಜಸ್ಸು, ವಾಯು ಮತ್ತು ಆಕಾಶಗಳೆಂಬ ಪಂಚಭೂತಗಳ ಗುಣ ವಿಶೇಷಗಳು ಇದರಿಂದ ಗುಣಿಗಳಾದ ಪಂಚ ಭೂತಗಳೆಂದಮೇಲೆ ತದ್ಗತ ಗುಣಗಳಾದ ಪಂಚತನ್ಮಾತ್ರಗಳೂ ಗ್ರಾಹ್ಯ, ಆದರೆ ಸವಿ, ಇಂಪು, ಸುವಾಸನೆ ಮತ್ತು ಪುಚಿ ಎಂಬ ಕರಣಾನಂದಪ್ರದರಸವಿಶೇಷಗಳು ಕ್ರಮವಾಗಿ ನಾಲಿಗೆ, ಕಣ್ಣು, ಮೂಗು ಮತ್ತು ಚರ್ಮ ಈ ನಾಲ್ಕು ಜ್ಞಾನೇಂದ್ರಿಯಗಳಿಗೆ ಸಂಬಂಧ ವಾದುವು. ಮೂಲತತ್ತ್ವವಾದ ಆಕಾಶತತ್ತ್ವದಿಂದ ಈ ನಾಲ್ಕು ತತ್ತ್ವಗಳೂ ಜನ್ಯವಾದ್ದರಿಂದ, ಆಕಾಶತತ್ತ್ವವು ಈ ನಾಲ್ಕರಲ್ಲಿಯೂ ವಿದ್ಯಮಾನವಾಗಿಯೇ ಇದೆ. ಇದರಿಂದ ಆಕಾಶತತ್ತ್ವವೂ ಮತ್ತು ತನ್ಮಾತ್ರಾಗುಣವಾದ ಶಬ್ದವೂ ಗ್ರಾಹ್ಯ, ಇಲ್ಲಿ ವರಾಹರೂಪೀ ಪರಮಾತ್ಮನು(ಕ್ರೋಡ) ವಿಹರಿಮತ್ತಾನೆ ಎಂದಿದ್ದಾರೆ, ವರಾಹರೂಪಿಯು ಭೂರಮಣನು, ಅನ್ನವು ಪೃಥ್ವೀಸಾಂಕೇತವಾ ದದ್ದು, ಈಕಾರಣದಿಂದ ಅನ್ನಗತರಸಗಳನ್ನು ಕ್ರೋಡ ರೂಪಿಯಾದ ಪರಮಾತ್ಮನು ನಾಡಿಗಳ ದ್ವಾರಾ ಸ್ಥೂಲ ದೇಹಕ್ಕೆ ವಿಭಾಗಮಾಡಿ ಉಪಚಯ ವನೇ ಕೊಡುತಾನೆ, ಸ್ಥೂಲದೇಹದಲ್ಲಿ ಒಟ್ಟು ಎಪ್ಪತ್ತೆರಡು ಸಾವಿರ ನಾಡಿ ಗಳಿವೆ. ಇವುಗಳಲ್ಲಿ ೩೬೦೦೦ ಪುರುಷ ನಾಡಿಗಳು ಮತ್ತು ೩೬೦೦೦ಸ್ತ್ರೀ

ನಾಡಿಗಳು. ಪುರುಷನಾಡಿಗಳು ದೇಹದ ಬಲಭಾಗದಲ್ಲಿಯೂ ಮತ್ತು ಸ್ತ್ರೀನಾಡಿಗಳು ಎಡಭಾಗದಲ್ಲಿಯೂ ಜಾಲದಂತೆ ಹಬ್ಬಿಕೊಂಡು ವ್ಯಾಪ್ತವಾಗಿವೆ. ಪಂಚಜ್ಞಾನೇಂದ್ರಿಯಗಳಿಗೆ ಈ ನಾಡಿಗಳ ನೇರವಾದ ಸಂಬಂಧವಿದೆ. ಈ ನಾಡಿಗಳ ಅಭಿಮಾನಿಗಳಾದ ತತ್ವ ದೇವತೆಗಳಲ್ಲಿ ಕ್ರೋಡರೂಪೀ ಶ್ರೀಪರಮಾತ್ಮನು ಸ್ಥಿತನಾಗಿದ್ದು, ರಸವಿಬಾಗಮಾಡಿ, ಹದಿನಾರು ಕಳೆಗಳಿಗೆ, ಉಪಚಯಕೊಡುತ್ತಾ, ಇಂದ್ರಿಯಗಳಿಗೆ ಆನಂದರಸಪ್ರದವಾಗಿದ್ದಾನೆ. ಪಂಚಭೂತ ಮತ್ತು ತನ್ಮಾತ್ರೆಗಳ ದ್ವಾರಾ ಜ್ಞಾನೇಂದ್ರಿಯಗಳ ಪ್ರವರ್ತನ, ತದ್ವಾರಾ ಕರ್ಮೇಂದ್ರಿಯಗಳ ವ್ಯಾಪಾರಗಳು, ಹೀಗೆ ಕ್ರಿಯಾವಿಶೇಷಗಳು ಈ ಸ್ಥೂಲ ದೇಹಗತ ಇಂದ್ರಿಯಗಳ ದ್ವಾರಾ ನಡೆಯುವುವು, ಜ್ಞಾನಾನಂದಸ್ವರೂಪಿಯಾದ ಶ್ರೀಪರಮಾತ್ಮನು ಈ ಪ್ರಕಾರ ಎಪ್ಪತ್ತೆರಡು ಸಾವಿರ ಸಂಖ್ಯಾಕವಾದ ನಾಡಿಗತ ದೇವತೆಗಳಲ್ಲಿದ್ದು, ತಾನು ವಿಹಾರ ಮಾಡುತ್ತಾ ದೇಹಾದ್ಯಂತ ಸಂಚರಿಸುತ್ತಾ ಬಿಂಬಕ್ರಿಯಾದ್ವಾರಾ ದೇವತೆಗಳು ಅವರಿಗೆ ನಿಯಾಮಕರಾಗಿರುವ ಶ್ರೀ ಮುಖ್ಯಪ್ರಾಣದೇವರ ದ್ವಾರಾ. ಸಕಲ ಇಂದ್ರಿಯಗತ ವ್ಯಾಪಾರಗಳನ್ನು ಸಾಧನ ಶರೀರವೆಂದೆನಿಸಿಕೊಳ್ಳುವ ಈ ಸ್ಥೂಲ ಶರೀರದಲ್ಲಿ ಮಾಡಿ ಮಾಡಿಸುತ್ತಿರುವನು ಎಂತ ತಾತ್ಪರ್ಯ ॥ ೨ ॥

## ಪದ್ಯ (೩)

**ಮೂಲ :**

**ವಾರಿವಾಹ್ಯನು ವಾರಿಯೊಳಗಿ ।**
**ಪ್ಪ್ಪಾರು ರಸವೆಂದೆನಿಸಿ ಮೂವ ।**
**ತ್ತಾರು ಸಾವಿರ ಸ್ತ್ರೀಪುರುಷನಾಡಿಯೊಳು ತದ್ರೂಪ ॥**
**ಧಾರಕನು ತಾನಾಗಿ ಸರ್ವಶ ।**
**ರೀರಗಳಲಿ ಅಹಶ್ಚರಾತ್ರಿ ವಿ**
**ಹಾರಮಾಳ್ಪನು ಬೃಹತಿಯೆಂಬ ಸುನಾಮದಿಂ ಕರೆಸಿ ॥ ೩ ॥**

**ಅವತರಿಣಿಕೆ :**

ಉದಕಾಭಿಮಾನಿಯಾದ ವರುಣನಲ್ಲಿದ್ದು ಶ್ರೀಪರಮಾತ್ಮನು ವಾರಿ ವಾಚ್ಯನಾಗಿ ಷಡ್ರಸಗತನಾಗಿದ್ದು, ೩೬೦೦೦ ಪುರುಷ ಮತ್ತು ೩೬೦೦೦ ಸ್ತ್ರೀ ನಾಡಿಗಳ ದ್ವಾರಾ ತದ್ರೂಪನಾಗಿದ್ದು, ಸಮಸ್ತ ಜೀವರ ದೇಹಗಳಲ್ಲಿ ಅಹರ್ನಿಶಿ ಬೃಹತಿ ಎಂಬ ಸಮೀಚೀನವಾದ ಹೆಸರಿನಿಂದ ಕರೆಯಿಸಿಕೊಳ್ಳುತ್ತಾ ವಿಹರಿಸುತ್ತಾ ದೇಹಗತ ವ್ಯಾಪಾರಗಳನ್ನೇ ಮಾಡಿ ಮಾಡಿಸುವನು-ಎಂದು ಹೇಳುತ್ತಾರೆ, "ವಾರಿ ವಾಚ್ಯನು"-ಎಂಬ ಈ ಪದ್ಯದಿಂದ ॥೩॥

**ಪ್ರತಿಪದಾರ್ಥ :—**

**ವಾರಿವಾಚ್ಯನು**=ಉದಕನಾಮಕನಾಗಿ ಶ್ರೀ ಪರಮಾತ್ಮನು **ವಾರಿಯೊಳಗಿದ್ದು**=ಉದಕಾಭಿಮಾನಿಯಾದ ವರುಣನಲ್ಲಿ ಅಂತರ್ಗತರೂಪದಿಂದ ಇದ್ದು **ಆರುರಸವೆಂದೆನಿಸಿ**=ಷಡ್ರಸ ಶಬ್ದವಾಚ್ಯನಾಗಿ **ಮೂವತ್ತಾರು ಸಾವಿರ ಸ್ತ್ರೀ ನಾಡಿಯೊಳು**=೩೬೦೦೦ ಸಂಖ್ಯಾಕವಾದ ದೇಹದ ಎಡಭಾಗಗತ ಸ್ತ್ರೀ ನಾಡಿಗಳಲ್ಲಿಯೂ **ಮೂವತ್ತಾರು ಸಾವಿರಪುರುಷನಾಡಿಯೊಳು** =೩೬೦೦೦ ಸಂಖ್ಯಾಕವಾದ ದೇಹದ ಬಲಭಾಗಗತ ಪುರುಷನಾಡಿಗಳಲ್ಲಿಯೇೂ **ತದ್ರೂಪ**=ನಾಡಿರೂಪನಾಗಿ **ಧಾರಕನು**=ಆನಾಡಿಗಳಿಗೆ ಆಧಾರಭೂತನಾಗಿ **ತಾನಾಗಿ**=ಸ್ವಯಂ ತದಾಕಾರ ತದ್ರೂಪಗಳಿಂದ **ಸರ್ವಶರೀರಗಳಲಿ**= ಸಮಸ್ತ ಜೀವರ ದೇಹಗಳಲ್ಲಿ ವಿದ್ಯಮಾನಗಳಾದ **ಅಹಶ್ಚ**=ಹಗಲಿನಲ್ಲಿಯೂ **ರಾತ್ರಿ**=ರಾತ್ರಿಕಾಲದಲ್ಲಿಯೂ **ಬೃಹತಿಯೆಂಬ**=ಬೃಹತೀಎಂಬ ಛಂದಸ್ಸಿನ ನಾಮಧೇಯದಿಂದ **ಸುನಾಮದಿಂ**=ಸಮೀಚೀನವಾದ (ಉತ್ಕೃಷ್ಟವಾದ) ಹೆಸರಿನಿಂದ **ಕರೆಸಿ**=ವಾಚ್ಯನಾಗಿದ್ದು **ವಿಹಾರವಮಾಳ್ಪನು**=ನಾಡಿಗತನಾಗಿದ್ದು ನಾಡಿಗಳ ಸಂರಕ್ಷಣೆ, ತದ್ವಾರಾ ದೇಹಕ್ಕೆ ರಸವಿಭಾಗಗಳ ಹಂಚಿಕೆ ಇತ್ಯಾದಿ ವ್ಯಾಪಾರಗಳನ್ನು ಮಾಡುತ್ತಾ ಕ್ರೀಡಾ ವಿಶಿಷ್ಟನಾಗಿರುವನು ॥ ೩ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ವಾರಿ ಎಂದರೆ ಉದಕ, ಈ ಉದಕಕ್ಕೆ ಅಭಿಮಾನಿದೇವತಾ ವರುಣ. ಅಂತಹ ವರುಣನಲ್ಲಿ ಅಂತರ್ಗತನಾದ ಶ್ರೀ ಹರಿನಾಮಕ ಪರಮಾತ್ಮ ಉದಕ ದೊಳಗೆ ಅಖಂಡರೂಪದಿಂದ ತದಾಕಾರನಾಗಿದ್ದು "ವಾರಿ" ಎಂತ ಕರೆಸತಕ್ಕ ಶ್ರೀಪರಮಾತ್ಮನು (ವಾರಿವಾಚ್ಯನು) ಷಡ್ರಸಗಳಲ್ಲಿದ್ದಾನೆ. ಈ ಆರು ರಸಗಳು ಉದಕವನ್ನು ಆಶ್ರಯಿಸಿ ಇವೆ. ಈ ಷಡ್ರಸಗಳ ವಿವರ ಇಂತಿದೆ :-

| ಕ್ರಮ ಸಂಖ್ಯೆ | ರಸಗಳು | ಅಭಿಮಾನಿ ದೇವತೆ ಗಳು | ತದ್ಗತ ಭಗವದ್ರೂಪಗಳು |
|---|---|---|---|
| ೧ | ಉಪ್ಪು | ನಿರ್‌ಋತಿ | ಜನಾರ್ದನ |
| ೨ | ಹುಳಿ | ಪಾರ್ವತಿ | ದಾಮೋದರ |
| ೩ | ಖಾರ | ದಕ್ಷಪ್ರಜಾಪತಿ | ನರಸಿಂಹ |
| ೪ | ಸಿಹಿ | ಇಂದ್ರ | ವಾಸುದೇವ |
| ೫ | ಕಹಿ | ಯಮ | ಅನಿರುದ್ಧ |
| ೬ | ಒಗರು | ಭಾಗೀರಥಿ ದೇವಿ | ಹರಿನಾಮಕ ಪರಮಾತ್ಮ |

| | | |
|---|---|---|
| [೧] | ಪೃಥ್ವಿಯಲ್ಲಿ ಸರ್ವಗಂಧಾಶ್ರಯವು | ಇದು ನೇಮವಾದ್ದ ರಿಂದ ಸರ್ವರಸಕ್ಕೂ ಉದಕವೇ ಆಶ್ರಯ |
| [೨] | ಅಪ್ಪಿನಲ್ಲಿ ಸರ್ವ ರಸಾಶ್ರಯವು | |
| [೩] | ತೇಜದಲ್ಲಿ ಸರ್ವ ರೂಪಾಶ್ರಯವು | |
| [೪] | ವಾಯುವಿನಲ್ಲಿ ಸರ್ವಸ್ಪರ್ಶಾಶ್ರಯವು | |
| [೫] | ಆಕಾಶದಲ್ಲಿ ಸರ್ವಶಬ್ದಾಶ್ರಯವು | |

ಪೂರ್ವೋಕ್ತ ಷಡ್ರಸಗಳು ದಾವದಾವ ಅಧಿಷ್ಠಾನವನ್ನು ಆಶ್ರಯಿಸಿ ಆವೋ, ಅಲ್ಲೆಲ್ಲಾ ಉದಕಾಶ್ರಯವಿದೆ. ಅಲ್ಲೆಲ್ಲಾ ಶ್ರೀಪರಮಾತ್ಮ ವಾರಿ ಅಂತರ್ಗತನಾಗಿ ವಾರಿವಾಚ್ಯನಾಗಿದ್ದಾನೆ. ಈ ಪ್ರಕಾರವಾಗಿ ಆಶ್ರಯಮಾಡಿ ಇರುವ ಪೂರ್ವೋಕ್ತ ಲವಣಾದಿ ಆರು ರಸಗಳಲ್ಲಿ ತದಾಕಾರವಾಗಿ ಇದ್ದು ಆರು ರಸವಂತ ಕರೆಸಿ, ತನ್ನಾಮಧೇಯನಾಗಿ ವಾರಿ ಒಳಗೂ ತದ್ಗತ ಆರು ರಸಗಳ ಒಳಗೂ ಇದ್ದು ಪೂರ್ವೋಕ್ತ ಪ್ರಕಾರ ರಸಪದವಾಚ್ಯನೆಂದೆನಿಸಿ, ೭೨೦೦೦ ರಸವಿಭಾಗಮಾಡಿ, ಅಷ್ಟರಲ್ಲಿ ಅಷ್ಟು ರೂಪಗಳಿಂದ ಇದ್ದು, ಆಯಾ ರಸಗಳ ದೇಹಗತ ಎಪ್ಪತ್ತೆರಡುಸಾವಿರನಾಡಿಗಳೊಳಗೆ ಭೋಜನಾದಿಗಳಿಂದ ಉಪಚಯಮಾಡಥಾನೆ, ದೇಹಗತ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ ಮೂವತ್ತಾರು ಸಾವಿರ ಎಡಭಾಗಗತ ನಾಡಿಗಳು ಇವೆ. ಇದರಲ್ಲಿ ಪರ ಮಾತ್ಮನು ಸ್ತ್ರೀರೂಪದಿಂದಲೂ, ಬಲಗತ ಮುವತ್ತಾರು ಸಾವಿರ ನಾಡಿಗಳಲ್ಲಿ ಪುರುಷರೂಪದಿಂದಲೂ, ನಾಡಿಗಳ ಆಕಾರದಾವುದೋ ತದಾಕಾರದಿಂದಲೂ, ಖಂಡರೂಪಗಳು, ಸ್ತ್ರೀಪುರುಷರೂಪಗಳು, ತದಾಕಾರ ರೂಪ, ಅಖಂಡರೂಪ ಉಭಯಪ್ರಕಾರದಿಂದಲೂ ಇದ್ದು, ಆ ನಾಡಿಗಳಿಗೆ ಆಧಾರಭೂತನಾಗಿದ್ದಾನೆ. ಸಮಸ್ತ ಜೀವರ ದೇಹಗಳಲ್ಲಿ ವಿದ್ಯಮಾನಗಳಾದ ಹಗಲು ಸಾಂಕೇತದಿಂದ ಕರೆಸತಕ್ಕ ಪೂರ್ವೋಕ್ತ ಬಲಭಾಗಗತ ಪುರುಷಾಭಿಮಾನಿ ನಾಡಿಗಳು ೩೬೦೦೦; ರಾತ್ರಿ ಸಾಂಕೇತದಿಂದ ಕರೆಸತಕ್ಕ ಪೂರ್ವೋಕ್ತ ಎಡಭಾಗಗತ ಸ್ತ್ರೀ ಅಭಿಮಾನಿ ಗಳು ೩೬೦೦೦. ಮನುಷ್ಯರ ಆಯುಸ್ಸು ೧೦೦ ವರ್ಷಗಳಿಗೆ ಹಗಲು ೩೬೦೦೦, ರಾತ್ರಿ ೩೬೦೦೦. ಪ್ರಕಾರ ಒಟ್ಟು ೭೨೦೦೦ ನಾಡಿಗಳಲ್ಲಿ ಇಷ್ಟು ರೂಪಗಳಿಂದ ಇದ್ದು, ಸೂರ್ಯ ಚಂದ್ರಾದಿಗಳು ಸಂಚಾರಮಾಡಿ, ಆಯುಸ್ಸು ಕ್ಷೀಣ ಮಾಡಥಾ ಇರತಾನೆ. ಈ ಪರಮಾತ್ಮ ದಾವ ನಾಮದಿಂದ ಕರಿಸಿ,

ಈ ವ್ಯಾಪಾರಮಾಡಥಾನೆ ಅಂದರೆ, "ಬೃಹತೀ"—ಎಂಬ ಛಂದಸಿಸ್ನಿನಿಂದ. ಈ ಛಂದಸ್ಸು ಹನ್ನೊಂದು ಅಕ್ಷರದೀಡ ಯುಕ್ತವಾದದ್ದು. ಇಂತಹ ಬೃಹತೀ ಸಾಂಕೇತವಾದ ದೇವಋಕ್ಕುಗಳು ೧೦೦ ಈ ನೂರು ಋಕ್ಕು ಪ್ರತಿಪಾದ್ಯನಾಗಿ ಬೃಹತೀನಾಮವಾಚ್ಯನಾಗಿ ಇರಥಾನೆ. ಇದರಲ್ಲಿ ದಕ್ಷಿಣಭಾಗಗತ [ಬಲಕ್ಕೆ] ೩೬೦೦೦ ಪುರುಷನಾಡಿಗಳಲ್ಲಿ ಬೃಹತೀಸಹಸ್ರಸ್ವರಾಕ್ಷರ ನಾಮಗಳಿಂದಲೂ ವಾಮಭಾಗಗತ [ಎಡಕ್ಕೆ] ೩೬೦೦೦ ಸ್ತ್ರೀನಾಡಿಗಳಲ್ಲಿ ಬೃಹತೀ ಸಹಸ್ರ ವ್ಯಂಜನಾಕ್ಷರ ನಾಮಗಳಿಂದಲೂ ಇದ್ದಾನೆ. ೩೬೦೦೦ ಸ್ವರಾಕ್ಷರವಾಚ್ಯ ರೂಪಗಳು, ೩೬೦೦೦ ವ್ಯಂಜನಾಕ್ಷರ ವಾಚ್ಯರೂಪಗಳು. ಸ್ವರಾಕ್ಷರಗಳು "ಅ" ಪ್ರಾರಂಭಮಾಡಿ "ಅಃ" ವರಗೆ, ವ್ಯಂಜನಾಕ್ಷರಗಳು "ಕ" ಆರಂಭಿಸಿ "ಕ್ಷ" ವರಗೆ ಎಂದು ಸಾಂಕೇತವು. ಇದಕ್ಕೆ ಪ್ರಮಾಣ :

**"ದ್ವಾಸಪ್ತತಿಸಹಸ್ರನಾಡೀಷು ಬೃಹತೀಸಹಸ್ರವಾಚ್ಯಾನಿ ದ್ವಾಸ-**
**ಪ್ತತಿ ಸಹಸ್ರರೂಪಾಣಿ ।**
**ತತ್ರಾಪಿ ದಕ್ಷಿಣಭಾಗಸ್ಥ ಷಟ್‌ತ್ರಿಶಂತ್ಸಹಸ್ರನಾಡೀಷು ಬೃಹತೀ**
**ಸಹಸ್ರ ಸ್ವರಾಕ್ಷರವಾಚ್ಯಾನಿ ॥**
**ಷಟ್‌ತ್ರಿಶಂತ್ಸ ಹಸ್ರರೂಪಾಣಿ ವಾಮಭಾಗಸ್ಥ ಷಟ್‌ತ್ರಿಶಂತ್ಸಹಸ್ರ**
**ನಾಡ್ಯಸ್ತು ಬ್ರಹತೀ ಸಹಸ್ರ ವ್ಯಂಜನಾಕ್ಷರ ವಾಚ್ಯಾನಿ ಷಡತ್ರಿಶಂತ್ಸ**
**ಹಸ್ರರೂಪಾಣೀತಿ ವಿವೇಶಃ॥**

**ಇತಿಷೊಡಶೇ॥**

**ವಿಶೇಷಾರ್ಥ :**

ಶ್ರೀ ಪರಮಾತ್ಮನು ಕ್ಷೀರ ಮೊದಲಾದ ರಸಪದಾರ್ಥಗಳಲ್ಲಿ ವಿಶದಾದಿ ಭಗವದ್ರೂಪದಿಂದ ಹ್ಯಾಂಗೆ ವ್ಯಾಪ್ತನೋ ತದ್ವತ್ ವಾರಿ ಒಳಗೆ ತದ್ವಾಚ್ಯನಾಗಿ ದ್ರವ್ಯರೂಪದಿಂದ ಷಡ್ರಸ ಎಂದು ಎನಿಸಥಾನೆ. ಎಂಬೋದರಲ್ಲಿ ಶ್ರೀ ವಿಜಯದಾಸರು ತಾವು ಮಾಡಿದಂಥಾ ರಸವಿಭಾಗ ಸುಳಾದಿಯಲ್ಲಿ ಹೇಳಿದ್ದಾರೆ:-

'ಕ್ಷೀರಾನ್ನ ಮೊದಲಾದ ಪದಾರ್ಥನಿಕರಾದಿ ।
ಶ್ರೀ ರಮಾಪತಿ ತಾನು  ವಿಶದಾದಿರೂಪದಿಂದ।
ಧಾರಾಳವಾಗಿ ನಿಂತು  ಬಹುರೂಪನೆನಿಸಿಕೊಂಡು ।
ಸಾರಾನ್ನ ಸ್ವೀಕರಿಪ ತೆರದಲ್ಲಿ ನಿರುತದಿ ಪಾರೀಲೀ
ಆರು ರಸವೆನಿಸುವ ದ್ರವನಾಗಿ ಮಾರಜನಕ ವಿಜಯವಿಠ್ಠಲನ।
ದಯಪಡೆವ ಧೀರರು ತಿಳಿದಿದನು ಅನುಭವಿಸುವುದು ನಿತ್ಯಾ॥"

## (೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :-

ಉದಕತತ್ವದಲ್ಲಿ ಉದಕಶಬ್ದವಾಚ್ಯನಾಗಿದ್ದು, ಆ ಉದಕತತ್ತ್ವದ ಮಾತ್ರಾಗುಣವಾದ ಆರುವಿಧರಸಗಳು ಅಂದರೆ, ಸಿಹಿ, ಕಹಿ, ಉಪ್ಪು, ಹುಳಿ, ಖಾರ ಮತ್ತು ಒಗರುಗಳೆಂಬ ಆರು ರಸಗಳ ನಾಮಗಳನ್ನು ಪಡೆದಿರುವನು. ೩೬೦೦೦ ಸ್ತ್ರೀನಾಡಿಗಳಲ್ಲಿಯೂ, ೩೬೦೦೦ ಪುರುಷ ನಾಡಿಗಳಲ್ಲಿಯೂ, ನಾಡಿಗಳರೂಪಗಳನ್ನು ತಾನೇ ಧರಿಸಿ ಇರುವನು. ಈ ದೇಹದೊಳಗೆ ಬಲಭಾಗದಲ್ಲಿ ೩೬೦೦೦ ನಾಡಿಗಳೂ ಮತ್ತು ಎಡಭಾಗದಲ್ಲಿ ೩೬೦೦೦ ನಾಡಿಗಳೂ ಇರುವುವು. ಎಡಭಾಗದ ನಾಡಿಗಳಿಗೆ ಸ್ತ್ರೀ ನಾಡಿಗಳೆಂದೂ, ಬಲಭಾಗದ ನಾಡಿಗಳಿಗೆ ಪುರುಷನಾಡಿಗಳೆಂದೂ ಹೆಸರು. ಒಂದು ವರ್ಷದಲ್ಲಿ ೩೬೦ ಹಗಲು ಮತ್ತು ೩೬೦ ರಾತ್ರಿಗಳಂತೆ ಮನುಷ್ಯರ ಆಯುಃಪ್ರಮಾಣಭೂತವಾದ ೧೦೦ ವರ್ಷಗಳಿಗೆ ೩೬೦೦೦ ಹಗಲೂ ಮತ್ತು ೩೬೦೦೦ ರಾತ್ರಿಗಳೂ ಆಗುವುವು. ಈ ಹಗಲು ರಾತ್ರಿ ಅಭಿಮಾನಿ ದೇವತೆಗಳು ಈ ನಾಡಿಗಳಿಗೂ ಅಭಿಮಾನಿಗಳಾಗಿರುವರು. ಈ ಸ್ತ್ರೀಪುರುಷ ನಾಡಿಗಳಿಗೆ ದಿವಾನಾಡಿಗಳೆಂತಲೂ, ರಾತ್ರಿನಾಡಿಗಳೆಂತಲೂ ವ್ಯವಹಾರ ಉಂಟು. ಆದ್ಯಂತ ೭೨೦೦೦ ನಾಡಿಗತ ದೇವತೆಗಳಲ್ಲಿಯೂ, ತಚ್ಛಬ್ದವಾಚ್ಯನಾಗಿರುವುದರಿಂದ "ಬೃಹತೀ"- ಎಂಬ ನಾಮವು ಶ್ರೀಪರಮಾತ್ಮನಿಗೆ ಪ್ರಾಪ್ತವಾದುದು. ಇಂತಹ ನಾಮಧೇಯದಿಂದ ಜ್ಞಾನಿಗಳಿಂದ ಕರೆಸಿಕೊಳ್ಳುತ್ತಾ, ನಾಡಿಗತನಾಗಿ ವಿಹಾರಮಾಡುವವನು ॥೩॥

(೪) "ಭಾವದರ್ಪಣ ಟೀಕಾ"—ವ್ಯಾಖ್ಯಾನ :

ಶ್ರೀಕಾಂತನ ಪರಮಾಶ್ಚರ್ಯಕರವಾದ ವ್ಯಾಪಾರ ಹೇಳುತ್ತಾರೆ— "ವಾರಿ" ಎಂಬ ಪದ್ಯದಿಂದ.

"ತತ್ತದ್ವಸ್ತುಷು ಸರ್ವೇಷು ತತ್ತದಾಕಾರತಃ ಸ್ಥಿತಃ ||"
"ತತ್ತಚ್ಛಬ್ದೈಶ್ಚ ಭಗವಾನ್ ಪ್ರೋಚ್ಯತೇ ನಿಜಶಕ್ತಿತಃ ||"

ಎಂಬೋ ಪ್ರಮಾಣರೀತ್ಯಾ ಶ್ರೀಹರಿ ಕ್ಷೀರಾದಿಪದಾರ್ಥದಲ್ಲಿ ವಿಶದಾದಿ ರೂಪದಿಂದ ಹ್ಯಾಂಗೆ ವ್ಯಾಪ್ತನೋ ತದ್ವತ್ ವಾರಿ ಒಳಗೆ ತದ್ವಾಚ್ಯನಾಗಿ ದ್ರವ ರೂಪದಿಂದ "ಷಡ್ರಸ" ಎಂದು ಎನಿಸುತ್ತಾನೆ—ಎಂಬ ವಿಷಯದಲ್ಲಿ ಸುಳಾದಿ:-

ಉಕ್ತಂಚ ವಿಜಯದಾಸ ರಾಜೈಃ:-
"ಕ್ಷೀರವೇ ಮೊದಲಾದ
ಅನುಭವಿಸುವುದು ನಿತ್ಯಾ ||" (ಈ ಸುಳಾದಿಯ ಪೂರ್ಣರೂಪವನ್ನು ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ, ನೋಡುವುದು)

ಹೀಗೆ ರಸವಿಭಾಗಸುಳಾದಿಯಲ್ಲಿ ಹೇಳಿರುವ ಪ್ರಯುಕ್ತ ವಾರಿಯಲ್ಲಿ ಆರು ರಸವೆನಸಿ, ಸರ್ವರ ದೇಹದಲ್ಲಿದ್ದಂಥ ಮೂವತ್ತಾರು ಸಾವಿರ ಸ್ತ್ರೀ ನಾಡಿ ಗಳಲ್ಲೂ ಮತ್ತು ಮೂವತ್ತಾರುಸಾವಿರ ಪುರುಷನಾಡಿಗಳಲ್ಲೂ ತನ್ನಾಮ ತದ್ರೂಪ ತದಾಕಾರವಾಗಿ ಇರುವದೇ ಸಿದ್ಧಾಂತವೆಂದು ಪದ್ಯಾರ್ಥ. ಇದಕ್ಕೆ ಪ್ರಮಾಣ:-

ಉಕ್ತಂಚ ಮಾನಸಸ್ಮೃತೌ ||

"ಏತಾನಿ ಪುರುಧಿದೇನಾಂ ರಾತ್ರ್ಯಾಯುದ್ದೈವತಾನಿ ಚ |
ಏತಾನಿ ಪುಂಸ್ತ್ರೀರೂಪಾಣಿ ಬೃಹತೀಶೃತಿಗತಾನಿ ಚ ||
ಬೃಹತೀ ಸಾಹಸ್ರಶೃತೌ ಸ್ವರವ್ಯಂಜನ ಭೇದತಃ |
ದ್ವಾಸಪ್ತತಿಸಹಸ್ರಾಣಿ ಸ್ತ್ರೀರೂಪಾಣಿ ವಿಚಿಂತಯೇದಿತಿ ||"

ಎಂಬ ರೀತ್ಯಾ ಪುಂ ಸ್ತ್ರೀರೂಪದಿಂದ ಸಮಸ್ತನಾಡಿಗಳಲ್ಲೂ ವ್ಯಾಪ್ತನಾಗಿ ಇರೋಣದಲ್ಲದೇ ತದಭಿಮಾನಿಗಳಾದ ದೇವತೆಗಳಲ್ಲೂ ಸಹ ವ್ಯಾಪ್ತನಾಗಿ ವಿಹರಿಸುತ್ತಾನೆಂದು ದಾಸಾರ್ಯರ ಹೃದಯ ॥ ೩ ॥

## (೪) ಗುರುಹೃದಯ ಪ್ರಕಾಶಿಕೆ—ವ್ಯಾಖ್ಯಾನ:-

**"ಬೃಹಪೂರ್ಣತಾಯಾಂ"**— ಎಂಬ ಧಾತುವಿನಿಂದ ನಾಡಿಗಳಲ್ಲಿ ಪೂರ್ಣನಾದ ಕಾರಣ **ಬೃಹತೀ** ಎಂದು ಹೆಸರುಳ್ಳವನಾಗಿ, ಕಶ್ಮಲನಿವಾರಿಸುವುದರಿಂದ **ವಾರಿ** ಎಂದು ಕರೆಸುವ ಶ್ರೀ ಹರಿಯು ನೀರಿನಲ್ಲಿದ್ದು, ಸಿಹಿ, ಕಹಿ, ಹುಳಿ, ಉಪ್ಪು, ಖಾರ ಮತ್ತು ಒಗರು ಎಂಬ ಆರು ವಿಧ ರುಚಿ ಹುಟ್ಟಿಸುವುದರಿಂದ,ಆರು ರಸವೆಂದು ಕರೆಯಿಸಿಕೊಂಡು ಎಡದಲ್ಲಿರುವ ಮೂವತ್ತಾರು ಸಾವಿರ ಸ್ತ್ರೀನಾಡಿಗಳಲ್ಲಿ ಸ್ತ್ರೀರೂಪದಿಂದಲೂ, ಬಲದಲ್ಲಿರುವ ಮೂವತ್ತಾರು ಸಾವಿರ ಪುರುಷನಾಡಿಗಳಲ್ಲಿ ಪುರುಷರೂಪದಿಂದಲೂ, ಹಗಲೂ ರಾತ್ರಿಯೂ ಸಹ, ಎಂದರೆ ಸರ್ವಕಾಲದಲ್ಲಿಯೂ, ಸರ್ವಜೀವರಲ್ಲಿಯೂ **ಬೃಹತಿ**— ಎಂಬ ಮಂಗಳನಾಮದಿಂದ ಸರ್ವವ್ಯಾಪಾರಗಳನ್ನೂ ತಾನು ಮಾಡಿ, ಜೀವರದ್ವಾರಾ ಮಾಡಿಸುವನು ॥ ೩ ॥

## (೫) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ :)

ವಾರೀತಿ॥ ಆರು॥ ಮಧುರಃ ಅಮ್ಲಃ ಕಟುಃ ಕಷಾಯಃ ತಿಕ್ತಃ ಲವಣಃ॥ ಮೂವತ್ತಾರು॥ ದಕ್ಷಿಣಾಃ ಪಿಂಗಳಾಃ ಪ್ರೋಕ್ತಾಃ ಇಡಾಃ ವಾಮಾಃ ಪ್ರಕೀರ್ತಿತಾಃ ॥ ನಾಡ್ಯೋಥಮಧ್ಯಮಾಃ ಪ್ರೋಕ್ತಾಃ ಸುಷುಮ್ನಾ ವೇದ ಪಾರಗೈರಿತಿ ದ್ವಿತೀಯ ಭಾಗವತ ತಂತ್ರೇ॥ ತದ್ಗತ ಹರಿವಾಯು ರೂಪಾಣಾಂ ಸ್ತ್ರೀ ಪುಂಸ್ತ್ವಬಲಾತ್ ನಾಡೀನಾಮುಪಚಾರಃ॥ ಅಹಶ್ಚೇತಿ॥ ಅಹೋರಾತ್ರ್ಯಭಿಮಾನಿ ಸೂರ್ಯಗಾನಿ ರೂಪಾಣಿ ಹರೇಃ ಪರಸ್ಪರಂ ಸ್ತ್ರೀಪುಮಾತ್ಮನಾ ಇಂದಿರಾಗತಾತ್ಮತನುಭಿಃ ಸ್ತ್ರ್ಯಾತ್ಮಕಾಭಿಃ ರಮಂತೇ॥ ಪುಂ ರೂಪಾಣಿ ಸ್ವಸ್ತ್ರೀ ರೂಪೇಷು ದಿವ್ಯೇಷು ಮಹಾಶ್ಚರ್ಯತಮೇಷು ಚ॥ ದಿವ್ಯಾಲಂಕಾರ ಸನ್ಮಾಲ್ಯ ವಿಚಿತ್ರಾಂಬರ ಧಾರಿಷು॥ ಮಹಾಸೌಂದರ್ಯ ಯುಕ್ತೇಷು ನಿರ್ದೋಷೇಷು ಚ

ಸರ್ವದಾ। ರಮಂತೇ– ಇತ್ಯಾದ್ಯುಕ್ತ್ವಾ ಯದ್ಯಪ್ಯೇವಂ ಮಹಾಪೂರ್ಣಾನಂದ ಸಾಂದ್ರಾಕೃತಿಃ ಹರಿಃ । ತಥಾಪಿ ಸರ್ವಲೋಕೋಜ್ವ ಮಹಾಶೃಂಗಾರ ಸಾಗರಾಂ ॥ ಚಿದಾನಂದಘನಾಂ ದಿವ್ಯಕಾಂತಿ ಮದ್ಭೂಷಣೋಜ್ವಲಾಂ । ಅನಂತಾನಂತ ರೂಪೇಣ ಸೇವಮಾನಾಂ ವಿಚಿತ್ರಧಾ ಮಹಾಲಕ್ಷ್ಮೀಂ ರಮಯತೇ ಲೀಲಯಾ ಕೃಪಯಾ ಹರಿಃ ॥ ರಮಯಾ ರಮಮಾಣೋಪಿ ತತ್ಸ್ಥೋಸ್ಯೈವ ಸ್ತ್ರೀಯಾತ್ಮನಾ ॥ ರಮತೇನಾನ್ಯತಃ ಕ್ವಾಪಿರತಿ ವಿಷ್ಣೋಃ ಪೂರ್ಣಾತ್ಮನಃ । ರಮಯಾರಮಣಂ ತಸ್ಮಾತ್ ನ ಹ್ಯನ್ಯರತಿರಚ್ಯುತಃ ॥ ಸ್ವಸ್ತ್ರೀರೂಪಾಂ ರಮಾಂ ತತ್ರ ಸನ್ನಿವೇಶ್ಯ ಮಹಾನ್ ಪುಮಾನ್ ॥ ರಮತೇ ಜಾಂಬುವತ್ಯಾದ್ಯಾಶ್ಚೈವಂ ಜ್ಞೇಯಂ ಬುಭೂಷುಭಿರಿತಿ ರತ್ನಮಾಲಾಯಾಂ॥ ಅತ್ರ ಕೇಚಿತ್ ॥ ಮೂಲರೂಪೇ ರಮಣಮೇವಂ । ಅವತಾರೇ ತು ಮನುಷ್ಯ ವಚ್ಚರಮಣಾತ್ ಸ್ಪಷ್ಟರೇತಃ ಪಾತಂ, ತದುಪಾದಾನದೇಹ ಪ್ರದ್ಯುಮ್ನಾನಿ ಸೃಷ್ಟಿಂ ಚ ಬ್ರುವತೇ ॥ ತತ್ತುಚ್ಛಂ ॥ ಸಯುಕ್ತಿಕಂ ಸರಸ ಭಾರತ್ಯಾಂರೇತಃ ಪಾತಮುಪಾಕೃತ್ಯ ಸೇಯಂ ಸೃಷ್ಟಿಶ್ಚ ಮಾನಸೀ ಇತ್ಯುಕ್ತಂ॥ ಉಕ್ತಂಚ ಗಾರುಡೇ ॥ ಮಾಯಾನಾಮ ಪ್ರಕೃತೀತ್ಯೇವ ಮಾಹುಃ ಸಾ ಸೂಕ್ಷ್ಮರೂಪಾ ನ ತು ಚೇಂದ್ರಜಾಲಿಕಾ॥ ತಸ್ಯಾಭಿಮಾನೀ ಶ್ರೀರಿತಿವೇದಿತವ್ಯಂ ವೀರ್ಯಾಧಾನಂ ತತ್ರ ತಾಸಾಂ ಚ ಮೇಲನಂ॥ ಕಾರ್ಯೋನಸ್ಮಿನ್ ಮೇಲನಂ ಚಾಹುರಾರ್ಯಾಃ ರೇತೋರೂಪಂ ನಾಹುರಾರ್ಯಾಶ್ಚ ವಿಷ್ಣೋಃ ಇತಿ ॥ ಅತೋ ನ ಕಶ್ಚಿತ್ ಕ್ಷುದ್ರೋಪದ್ರವಃ ॥ ಅತ್ರವಿಶೇಷಃ ॥ ಗಾತ್ರೇ ದ್ವಾಸಪ್ತತಿ ಸಹಸ್ರನಾಡ್ಯಃ ಕುತ್ರ ಕತಿ ಇತ್ಯಾದಿಕಂ ನಾಡೀಪ್ರಕ್ರಿಯಾಸಂಧೌ ದ್ರಷ್ಟವ್ಯಂ । ತತ್ರ ದಕ್ಷಿಣಾಃ ನಾಡ್ಯಃ ಪಿಂಗಳಾಃ । ರಾತ್ರೀಮಾನೀ ಬೃಹತೀ ಛಂದಸ್ಕ ಷಡುಸಕ್ ಸಹಸ್ರಾಂತರ್ಗತ ಷಟತ್ರಿಶಂತ್ ಸಹಸ್ರವತವರ್ಣಾಂತರ್ಗತ ಪ್ರಮದಾ ರೂಪ ಹರ್ಯಾಶ್ರಯಾಂ॥ ವಾಮನಾಡ್ಯಃ ಅಹರ್ಮಾನೀ ಸಹಸ್ರಾಂತರ್ಗತ ಅಜ್ವರ್ಣಾಂತರ್ಗತ ಸಹಸ್ರ ಪುಂ ರೂಪ ಶ್ರಿತಾಃ॥

ಷಟ್‌ತ್ರಿಂಶದ್ರೂಪವಾನ್ ವಿಷ್ಣುಃ ವ್ಯಂಜನೇಷು ಚ ಸಂಸ್ಥಿತಃ ॥ ತಾನ್ಯೇವ ವಿಷ್ಣುರೂಪಾಣಿ ರಾತ್ರೀಣಾಮಪಿ ದೇವತಾಃ॥ ಏಕೈಕಂಚ ಸಹಸ್ರಂ ತೇತ್ ವ್ಯಂಜನೇಷು ಚ ರಾತ್ರಿಷು॥ ರೂಪಂ ವಿಷ್ಣೋಃ ಸ್ಥಿತಂ ವ್ಯಾಪ್ಯ ಷಟ್

ತ್ರಿಂಶತ್ ಸಹಸ್ರಧಾ॥ ಷಟ್‌ತ್ರಿಶಂತ್ ಸಹಸ್ರಾಣಿ ಸ್ವರಗಾಣಿ ಹರೇರಪಿ। ತಾನ್ಯೇವಾಸ್ಥಾಂ ದೈವತಾನಿ ರೂಪಾಣಿ ಪರಮಾತ್ಮನಃ॥ ದ್ವಾಸಪ್ತತಿಸಹಸ್ರಾಣಿ ರೂಪಾಣ್ಯೇವಂ ರಮಾಪತೇ॥ ಶತಾಬ್ದಾನಾಮಹೋರಾತ್ರ ದೈವತಾನ್ಯತ್ತಮಾನಿಚ॥ ಬೃಹತೀಸಹಸ್ರ ವರ್ಣಾನಾಮಪಿ ಧ್ಯಾತ್ವಾ ಖಿಲಾನ್ಯಪಿ॥ ಶತವರ್ಷ ಹರಿಧ್ಯಾನ ಫಲಮಾಪ್ನೋತಿ ಪೂರುಷಃ॥ ಏವಂ ಸಂಪಾದ್ಯ ಜ್ಞಾತ್ವೈವ ಬೃಹತೀನಾಂ ಸಹಸ್ರಕಂ॥ಷಟ್‌ತ್ರಿಶಂತ್ ಸಹಸ್ರಾಣಿ ಬೃಹತ್ಯುಕ್ಥಾರ್ಣಗಾನಿ ತು। ಸ್ತ್ರೀ ರೂಪಾಣಿ ಹರೇಸ್ತಾವತ್ ಆಸಾಮಪ್ಯಭಿ ಮಾನಿನಾಂ॥ ಸೂರ್ಯ ರೂಪೇಷು ರೂಪಾಣಿ ಪುಮಾಕಾರಾಣಿ ಸರ್ವಶ;॥ಏತ್ಯೈಃ ಪುರುಷಗೈಃ ರೂಪೈಃ ಬೃಹತ್ಯುಕ್ಥ ವ್ಯವಸ್ಥಿತೈಃ॥ ಕದಾಚಿತ್ ಭಗವಾನ್ ವಿಷ್ಣುಃ ಪುಮಾಕಾಕಾಣಿ ತಾ ನಿಜಾ॥ ಕೃತ್ವಾ ಸೂರ್ಯಗತಾನ್ಯೇವ ಸ್ತ್ರೀ ರೂಪಾಣಿ ವಿಧಾಯೆಚ॥ ತಾನಾಪ್ನೋತಿ ಜ ಪುಂರೂಪೈಃ ತೈರೇವಾಕ್ಷರಗಾನಿ ಚ॥ ಸ್ತ್ರೀರೂಪಾಣಿ ಜಗನ್ನಾಥಃ ಪ್ರಾಪ್ನೋತ್ಯಾತ್ಮೇಚ್ಛಯಾ ಪ್ರಭುಃ ॥ ಪುಂರೂಪ ಪ್ರಮದಾರೂಪ ಸ್ವರೂಪೈಃ ರಮತೇ ಸ್ವಯಂ ॥ ಏಕೀಕೃತ್ಯ ಚ ತಾನ್ಯೇವ ದ್ವಿರೂಪೋ ರಮತೇ ತಥಾ ॥ ಸ ಏವ ರಮತೇ ಮಾಯಾಂ ಸ್ಥಿತಾತ್ಮಾ ಸ್ತ್ರೀತನೌ ಹರಿಃ॥ ಪ್ರಾಣಸ್ಯೋತ್ಪತ್ತಿ ಕಾಮಃ ಸನ್ಮನೇಚ್ಛಾ ಕಾಮ ಮಾರಕಃ ॥ ಇತ್ಯರ್ಧನಾರೀ ನಾರಾಯಣ ತಂತ್ರೇ ॥ ಸ್ತ್ರೀ ಪುಂ ರೂಪೀ ಸ ಕೇಶವಃ॥ ಯಸ್ಮಿನ್ ಸ್ವಾತ್ಮನಿ ಯುಕಃ ಸನ್ ರಮತೇ ಸ್ತ್ರೀ ಪುಮಾತ್ಮನಾ ॥ ಮುನಿಗಂಧರ್ವ ಪಿತ್ರಾದ್ಯೈಃ ನ್ಯತತ್ ಪ್ರಾಪ್ಯಂ ಕಥಂಚನ ॥ ಪ್ರಾಪ್ನುವಂತಿ ಸುರಾಃ ಸರ್ವೇ ತದ್ರೂಪಂ ಜಾಜ್ವಲತ್ ಸದಾ ॥ ಅರ್ಧನಾರೀ ನರಾಕಾರಂ ತಸ್ಯ ವಾಮಸ್ಥಿತಾಸಿ ಚ॥ ಸ್ತ್ರೀರೂಪಾಣಿ ಚ ಸರ್ವಾಣಿ ವಿಷ್ಣೋರತ್ಯದ್ಭುತಾನಿ ಚ॥ ವಿಷ್ಣೋರ್ಯಾನಿ ತು ಪುಂರೂಪಾಣ್ಯಾಸ್ಥಿ ತಾನಸ್ಯ ದಕ್ಷಿಣೇ ॥ ತಾನ್ಯಸ್ಸೈವ ತು ರೂಪಾಣಿ ಯುಜ್ಯಂತೇತ್ರ ಪರಸ್ಪರಂ॥ ಏಷು ನಾರಾಯಣೋ ದೇವೋ ಹ್ಯರ್ಧನಾರೀ ಪುಮಾತ್ಮಕಃ ॥ ಸರ್ವೇ ದೇವಾಃ ಸಭಾರ್ಯಾಶ್ಚ ತಂ ಪ್ರಾಪ್ಯ ಪುರುಷೋತ್ತಮಂ॥ ಏಕೀಭಾವಂ ಸ್ವಭಾರ್ಯಾಭಿಃ ಅರ್ಧನಾರೀ ನರಾತ್ಮನಾಃ ॥ ಪ್ರಾಪ್ಯೈಉಪಾಸತೇ ವಿಷ್ಣುಂ ಮುಕ್ತಾಃ ಸಂಸಾರಸಾಗರಾತ್ ॥ ಮೋದಂತೇ ಚ ರಮಂತೇ ಚ ವಿಭಾಗಂ ಚೇಚ್ಛಯಾಪ್ನುಯುಃ । ಪ್ರಸಾದಾದ್ವಾ ಸುದೇವಸ್ಯ ತೇನ್ಯೈವನಿಯತಾ ಅಮಿಾ ॥ ಅಭಿಮಾನೀ ಬೃಹತ್ಯಾಸ್ತು ವಾಯುಃ ಇತ್ಯು-

ಕ್ತೀಪಿ ಗಾಯತ್ರೀ ದೇವತಾತ್ವಂತು ಲಕ್ಷ್ಮ್ಯಾ ಇತ್ಯುಕ್ತ್ವಾ ಬೃಹತೀ ದೇವತಾ ತತ್ರ ಭಗವಾನ್ ಪುರುಷೋತ್ತಮಃ॥ ಸ್ತ್ರೀರೂಪೋ ಬೃಹತೀ ನಾಮೇತಿ ಐತರೇಯ ಭಾಷ್ಯೇ ॥ ಅತ್ಯದ್ಭುತ್ಸ್ನಂ ಚ ಏಕಂ ಅರ್ಧತಃ ಶುಕ್ಲವರ್ಣಂ, ಅರ್ಧತೋ ರಕ್ತಂ। ಅಪರಂ ಅರ್ಧತಃ ಶುಕ್ಲಮರ್ಧತಃ ಪೀತಂ। ಏಕಮರ್ಧತಃ ಸ್ತ್ರೀ ಭೂತ ವ್ಯಾಸಾತ್ಮಕ ಮರ್ಧತಃ ಪುರುಷ ಭೂತ ನಾರಾಯಣಾತ್ಮಕಂ। ಏಕ ಮರ್ಧತಃ ಪುರುಷ ಮತ್ಸ್ಯಾತ್ಮಕ ಮರ್ಧತಃ ಪುರುಷಭೂತ ಸ್ತ್ರೀ ಭೂತ ಕೃಷ್ಣಾತ್ಮಕಂ ॥ ಏಕಮರ್ಧತಃ ಹಯಾತ್ಮಕಂ ಅರ್ಧತಃ ಪುರುಷ ಹಂಸಾತ್ಮಕಮಿತ್ಯಾದಿ ರೂಪೇಣಾ ಸಜಾತೀಯ ವಿಜಾತೀಯ ನಾನಾವರ್ಣಾಕೃತಿತ್ವಾತ್ ॥ ಇತ್ಯಾದಯಃ ಭಾಷ್ಯರಹಸ್ಯಾರ್ಥ ವಿಶೇಷಾಃ ಅಸ್ಮದಾಚಾರ್ಯೈಃ ಅನುದಿನಂ ಅನುಶಿಕ್ಷಿತಾಃ ॥ ಯಥಾವಬೋಧಂ ಮಯಾ ದಿಙ್ಮಾತ್ರ ಪ್ರದರ್ಶನಾಯ ತತ್ರ ತತ್ರೋಚ್ಯಂತೇ ಇತಿ ತೀರ್ಥಾಚಾರ್ಯ ಚರಣ ತಾಮ್ರಪರ್ಣೀ ಶ್ರೀನಿವಾಸಾಚಾರ್ಯೈಃ ಐತರೇಯ ಟಿಪ್ಪಣ್ಯಾಮುಕ್ತಂ॥

ವಿದ್ಯಾಧೀಶ ಕೃಪಾಲೇಶಯುಜಾ ಸೋದೇಟ್ತುಕಾಮಯಾಂ॥ ವಾದಿರಾಜೇನ ತತ್ಕಂಜಂ ಪ್ರಾಬೋಧಿ ಹಿ ಯಥಾಮತಿ ॥ ಕದಾಚಿದ್ಭಾಷ್ಯವಾಗರ್ಥಃ ಟಿಪ್ಪಣ್ಯಾಮಷ್ಟಧಾಕೃತಃ ॥ ವ್ಯಾಸಭೀತ್ಯಾ ರಸಸ್ಯಾದ್ವಾ ಸಮಯಾಸ ಪ್ರದರ್ಶ್ಯತೀ ॥ ೩ ॥

**ಕನ್ನಡಾರ್ಥ :**

ನೀರಿನಲ್ಲಿ ಶ್ರೀಪರಮಾತ್ಮನು ವಾರಿವಾಚ್ಯನಾಗಿದ್ದಾನೆ. ಷಡ್ರಸಗಳನ್ನು ಉತ್ಪತ್ತಿ ಮಾಡಿ ಆ ರಸಾಂತರ್ಗತನಾಗಿದ್ದಾನೆ. ಸಿಹಿ, ಹುಳಿ, ಖಾರ, ಉಪ್ಪು, ಕಹಿ, ಮತ್ತು ಒಗರು ಇವೇ ಆ ಷಡ್ರಸಗಳು. ನಮ್ಮ ದೇಹದಲ್ಲಿ ೭೨೦೦೦ ನಾಡಿಗಳಿವೆ. ಎಡಗಡೆ ಇರುವ ನಾಡೀಸಮೂಹಕ್ಕೆ "ಇಡಾ" ಎಂದು ಹೆಸರು. ದಕ್ಷಿಣ ಪಾರ್ಶ್ವಗತ ನಾಡೀವ್ಯೂಹಕ್ಕೆ "ಪಿಂಗಲಾ" ಎಂದು ಹೆಸರು, ಇವುಗಳ ಮಧ್ಯಗತನಾಡಿಯೇ "ಸುಷುಮ್ನಾ" ಎಂಬ ಪ್ರಧಾನನಾಡಿಯು. ಈ ವಿಷಯವು **ಭಾಗವತ ತಂತ್ರ ದ್ವಿತೀಯ ಸ್ಕಂಧದಲ್ಲಿ** ಉಕ್ತವಾಗಿದೆ. ಈ ೭೨೦೦೦

ಪುರುಷರೂಪಗಳಿವೆ.
ನಾಡಿಗಳಲ್ಲಿ ಶ್ರೀಹರಿ ಮತ್ತು ವಾಯು ದೇವರ ಸ್ತ್ರೀ ಪುರುಷರೂಪಗಳಿವೆ.
ಈ ಕಾರಣದಿಂದ ಈ ನಾಡಿಗಳನ್ನು ಪುರುಷನಾಡಿಗಳು ಮತ್ತು ಸ್ತ್ರೀನಾಡಿ
ಗಳೆಂದು ಹೇಳುತ್ತಾರೆ. ಈ ನಾಡಿಗಳಲ್ಲಿ ಅಂತರ್ಗತನಾಗಿದ್ದು ಶ್ರೀ ಹರಿಯು
ತದ್ರೂಪನಾಗಿ ತನ್ನಾಮಕನಾಗಿ ವಿಹರಿಸುವನು. (ಅಹಶ್ಚರಾತ್ರಿ ವಿಹಾರ
ಮಾಳ್ಪನು). ನಾಡ್ಯಂತರ್ಗತ ಶ್ರೀಹರಿಯ ರೂಪಗಳು ಮಹಾಲಕ್ಷ್ಮೀ ಶರೀರ
ದಲ್ಲಿ ಸ್ತ್ರೀ ರೂಪದಿಂದ ರಮಿಸುತ್ತವೆ. ಶ್ರೀ ಪರಮಾತ್ಮನ ಪುರುಷಾಕಾರ
ರೂಪಗಳು ಪರಮರಮ್ಯವಾದ ಉತ್ತಮ ಆಭರಣಗಳಿಂದ ಶೋಭಾಯ
ಮಾನವಾಗಿದ್ದು, ಚಿತ್ರ ವಿಚಿತ್ರ ವಸ್ತ್ರಗಳಿಂದ ಅಲಂಕೃತವಾಗಿವೆ. ಆ ರೂಪ
ಗಳೆಲ್ಲವೂ ಪರಮಾದ್ಭುತ ಹಾಗೂ ಅತ್ಯಂತ ಸೌಂದರ್ಯೋಪೇತ. ಶ್ರೀ
ಹರಿಯು ನಿರವಧಿಕ ಸಂಪೂರ್ಣ ಆನಂದಮಯರೂಪನಾಗಿದ್ದಾನೆ. ನಾನಾ
ಆಭರಣರೂಪಗಳಿಂದ, ಅನಂತಾನಂತರೂಪಗಳಿಂದ ತನ್ನನ್ನು ಎಡಬಿಡದೇ
ಸೇವಿಸುತ್ತಿರುವ ಇಂದಿರೆಯನ್ನು ಕೃಪಾಪೂರ್ಣ ದೃಷ್ಟಿಯಿಂದ ನಾನಾ ಬಗೆಯ
ಲೀಲಾರೂಪಾತ್ಮಕನಾಗಿ ರಮಿಸಿ, ಆನಂದಪಡಿಸುವನು. ರಮಾಂತರ್ಗತ ತನ್ನ
ಸ್ತ್ರೀರೂಪದಲ್ಲಿಯೇ ವಿಹರಿಸುವನು (ಕ್ರೀಡಿಸುವನು) ಶ್ರೀಪರಮಾತ್ಮನು
ಸ್ವರಮಣನು. ಸ್ವಾಭಿನ್ನಗಳಾದ ರೂಪಗಳ ವಿನಹ ಇತರರಲ್ಲಿ ರತಿ ವಿಹಾರ
ಮಾಡುವುದಿಲ್ಲ. ತನ್ನ ಸ್ವರೂಪ ಭೂತವಾದ ಶ್ರೀ ರಮಾ ಎಂಬ ಸಾಂಕೇತ
ವುಳ್ಳ ಸ್ತ್ರೀರೂಪವನ್ನು ರಮಾದೇವಿಯರಲ್ಲಿಟ್ಟು ಅದರಲ್ಲಿ ವಿಹರಿಸುವನು.
ಶ್ರೀ ಹರಿಯ ಮೂಲರೂಪಕ್ಕೂ ಶ್ರೀ ರಮಾಂತರ್ಗತ ಬಿಂಬರೂಪಕ್ಕೂ ಐಕ್ಯ
ಚಿಂತನೆಯೇ ಶ್ರೀಹರಿಗೆ ಲೀಲಾ ರೂಪವಾದ ವಿಹಾರವು, ಜಾಂಬುವತಿ
ಮುಂತಾದವರಲ್ಲಿ ಈ ಪ್ರಕಾರ ಅನುಸಂಧಾನಿಸಬೇಕು. ಈ ವಿಷಯವು
**ಸತ್ತತ್ವರತ್ನಮಾಲೆ** ಯಲ್ಲಿ ನಿರೂಪಿತವಾಗಿದೆ. ಶ್ರೀಹರಿಗೆ ಶುಕ್ಲಶೋಣಿತ
ಸಂಪರ್ಕವಿಲ್ಲವೆಂದು ಯುಕ್ತಿ ಯುಕ್ತವಾಗಿ ನಿರೂಪಿಸಿ, ಇಚ್ಛಾಮಾತ್ರದಿಂದಲೇ
ಪ್ರಭುವಿನ ಸೃಷ್ಟಿಯು ಎಂದು **ಶ್ರೀ ಸರಸಭಾರತೀವಿಲಾಸ** ದಲ್ಲಿ
ಶ್ರೀವಾದಿರಾಜ ಶ್ರೀಮಚ್ಚರಣರು ಸಮರ್ಥಿಸುತ್ತಾರೆ. ಪ್ರಕೃತಿಗೆ
ಮಾಯ ಎಂದು ಕರೆಯುತ್ತಾರೆ. ಅದು ಅತ್ಯಂತಸೂಕ್ಷ್ಮರೂಪದಲ್ಲಿದೆ -ಇದು
**ಗರುಡಪುರಾಣದ** ವಚನ. ಶ್ರೀ ಲಕ್ಷ್ಮಿಯು ಇದಕ್ಕೆ ಅಭಿಮಾನಿಯು.

ಮಾಡುವುದೇ ಸೃಷ್ಟಿಯು. ಶ್ರೀ ಪರಮಾತ್ಮನು ರಮಾಧಿಷ್ಠಾನದಲ್ಲಿ ಈ ಗುಣಗಳನ್ನು ಕ್ಷೋಭನಮಾಡುವನು. (ಗುಣವೈಷಮ್ಯ) ತನ್ನ ವೀರ್ಯದಾನ ಮಾಡುವುದಿಲ್ಲ. ಶ್ರೀವಿಷ್ಣುವಿಗೆ ರೇತಸ್ಸಿನ ಸಂಪರ್ಕವಿಲ್ಲ. ಆತನು ಸ್ವರಮಣನು. ದೇಹಗತ ೭೨೦೦೦ ನಾಡಿಗಳಲ್ಲಿ ಬಲಪಾರ್ಶ್ವಗತ "ಪಿಂಗಲಾ" ನಾಡಿಗಳು ಬೃಹತೀ ಛಂದಸ್ಸಿನ ಸಹಸ್ರ ಋಕ್ಕುಗಳಲ್ಲಿರುವ ೩೬೦೦೦ ಹಲ್ (ವ್ಯಂಜನ) ವರ್ಣಾಂತರ್ಗತ ಶ್ರೀಹರಿಯು ಸ್ತ್ರೀ ರೂಪಾತ್ಮಕವಾಗಿರುವುವು. ರಾತ್ರ್ಯಭಿಮಾನಿಗಳು ಎಡಭಾಗದಲ್ಲಿರುವ "ಇಡಾ" ನಾಡಿಗಳು. ಹಗಲಿಗೆ ಅಭಿಮಾನಿಗಳಾದ ಬೃಹತೀ ಸಹಸ್ರದಲ್ಲಿರುವ ಸ್ವರಾತ್ಮಕ ವರ್ಣಗಳಲ್ಲಿ (ಅಜ್ವರ್ಣ) ಅಂತರ್ಗತವಾಗಿರುವ ೩೬೦೦೦ ಪುರುಷರೂಪೀ ಶ್ರೀ ಹರಿಯಲ್ಲಿ ಇರತಕ್ಕವು. ಇವುಗಳ ಸಂಕಲನವೇ ೭೨೦೦೦ ಸಂಖ್ಯಾಕವಾದ ನಾಡಿಗಳಾಗುವುವು. ಶ್ರೀಪರಮಾತ್ಮನು ಸ್ವರ ಮತ್ತು ವ್ಯಂಜನಾತ್ಮಕ ತನ್ನದೇ ಆದ (ಸ್ವರೂಪಭೂತ) ಸ್ತ್ರೀ ಪುರುಷರೂಪಗಳಿಂದ ವಿಹಾರಮಾಡುತ್ತಾನೆ. ಶ್ರೀ ರಮಾದೇವಿಯರಲ್ಲಿ ಸ್ವರಮಾರೂಪಾತ್ಮಕ ಸ್ತ್ರೀ ರೂಪದಿಂದ ವಿಹರಿಸುವನು. ಈವಿವರಗಳು **ಅರ್ಧನಾರೀ ನಾರಾಯಣತಂತ್ರ**ದಲ್ಲಿ ಉಕ್ತವಾಗಿವೆ.

ಬೃಹತೀ ಛಂದಸ್ಸಿನ ಋಕ್ಕಿಗೆ ಶ್ರೀವಾಯುದೇವರು ಅಭಿಮಾನಿಗಳು ಎಂದು ತಿಳಿಸಿ, ಗಾಯತ್ರೀ ದೇವತೆಯು ಶ್ರೀ ಲಕ್ಷ್ಮೀದೇವಿಯೇ ಎಂದು ಹೇಳಿ ಬೃಹತೀ ದೇವತೆಯು ಶ್ರೀಮನ್ನಾರಾಯಣನೇ, ಅವನು ಸ್ತ್ರೀ ರೂಪಾತ್ಮಕನಾಗಿ "ಬೃಹತೀ" ಎಂದು ಕರೆಯಿಸಲ್ಪಡುತ್ತಾನೆ, ಈ ವಿಷಯವು **ಐತರೇಯ ಭಾಷ್ಯ**ದಲ್ಲಿ ಉಕ್ತವಾಗಿದೆ. ಶ್ರೀಪರಮಾತ್ಮನ ರೂಪವು ಅತ್ಯಾಶ್ಚರ್ಯಕರವು. ಒಂದು ಭಾಗದಲ್ಲಿ ಅರ್ಧ ಶುಕ್ಲ ವರ್ಣ (ಬಿಳಿಯಬಣ್ಣ), ಅರ್ಧ ರಕ್ತವರ್ಣ (ಕೆಂಪು ಬಣ್ಣ) ಮತ್ತೊಂದು ಭಾಗದಲ್ಲಿ ಅರ್ಧ ಬಿಳಿಯಬಣ್ಣ, ಅರ್ಧ ಹಳದಿಯ ಬಣ್ಣ ಹೀಗೆ ವಿಜಾತೀಯ ಬಣ್ಣಗಳಿಂದ ಯುಕ್ತವಾಗಿದೆ. ಒಂದುಕಡೆ ಅರ್ಧ ಸ್ತ್ರೀ ಭೂತವಾದ ವ್ಯಾಸರೂಪ ಮತ್ತು ಇನ್ನೊಂದು ಪಾರ್ಶ್ವದಲ್ಲಿ ಅರ್ಧಪುರುಷಾಕಾರವಾದ ನಾರಾಯಣರೂಪ. ಇನ್ನೊಂದು ಅವಯವದಲ್ಲಿ ಅರ್ಧ ಪುರುಷ ರೂಪಿಯಾದ ಮತ್ಸ್ಯರೂಪ; ಉಳಿದ ಅರ್ಧವು ಸ್ತ್ರೀ ರೂಪಿಯಾದ ಕೃಷ್ಣರೂಪ ಬೇರೊಂದು ಅವಯವದಲ್ಲಿ ಅರ್ಧ ಸ್ತ್ರೀ ರೂಪವಾದ ಹಯಗ್ರೀವ ರೂಪ

ಮತ್ತು ಉಳಿದ ಅರ್ಧವು ಪುರುಷರೂಪಿಯಾದ ಹಂಸರೂಪ—ಹೀಗೆ ವಿವಿಧ ರೂಪ ವಿಶೇಷಗಳು. ಇವೆಲ್ಲವೂ ಐತರೇಯ ಭಾಷ್ಯದ ವಿಶೇಷಾರ್ಥಗಳು ॥೩॥

**ಸರ್ವವ್ಯಾಖ್ಯಾನಸಾರ ಸಂಗ್ರಹ ;**

ಉದಕತತ್ತ್ವವು (ವಾರಿ) ಆರು ರಸಗಳಿಗೂ ಆಶ್ರಯವಾಗಿದೆ. ಷಡ್ರಸೋಪೇತವಾದ ರುಚಿಯು ರಸನೇಂದ್ರಿಯಕ್ಕೆ ಉದಕದ್ವಾರವೇ ಆಗಬೇಕು ಇಂತಹ ವಾರಿಗೆ ವರುಣನು ಅಭಿಮಾನಿ ದೇವತೆಯು. ರಸರೂಪವಿಶಿಷ್ಟನಾತ ಶ್ರೀಹರಿಯು ಉದಕತತ್ತ್ವದಲ್ಲಿದ್ದು. ಉದಕಾಭಿಮಾನಿ ವರುಣಾಂತರ್ಗದ ನಾಗಿದ್ದು ತನ್ನಾಮದಿಂದ "ವಾರಿ"ಶಬ್ದವಾಚ್ಯನಾಗಿದ್ದಾನೆ. ಇಂತಹ ವಾರಿ ವಾಚ್ಯನಾದ ಶ್ರೀಹರಿಯು ಆರು ರಸಗಳಲ್ಲಿ ತದಾಕಾರ, ತದ್ರೂಪ, ತತ್ತ್ಚಬ್ದ ವಾಚ್ಯನಾಗಿ ತನ್ನಾಮಕನಾಗಿ ಇದ್ದು ಷಡ್ರಸೋಪೇತನಾಗಿದ್ದಾನೆ. **ಇಂತಹ** ಷಡ್ರಸಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲ ಕೊಟ್ಟಿದೆ.

| ಕ್ರಮ ಸಂಖ್ಯೆ | ರಸಗಳು | ಅಭಿಮಾನಿ ದೇವತೆಗಳು | ಭಗವದ್ರೂಪಗಳು |
|---|---|---|---|
| ೧ | ಉಪ್ಪು | ನಿರ್ಋತಿ | ಜನಾರ್ದನ |
| ೨ | ಹುಳಿ | ಪಾರ್ವತಿ | ದಾಮೋದರ |
| ೩ | ಖಾರ | ದಕ್ಷಪ್ರಜಾಪತಿ | ನರಸಿಂಹ |
| ೪ | ಸಿಹಿ | ಇಂದ್ರ | ವಾಸುದೇವ |
| ೫ | ಕಹಿ | ಯಮ | ಅನಿರುದ್ಧ |
| ೬ | ಒಗರು | ಭಾಗೀರಥಿ ದೇವಿ | ಹರಿನಾಮಕ ಪರಮಾತ್ಮ |

ಪೂರ್ವೋಕ್ತ ಷಡ್ರಸಗಳು ಯಾವ ಯಾವ ದ್ರವದಲ್ಲಿವೆಯೋ ಆದಕ್ಕೆಲ್ಲಾ ಉದಕವೇ ಆಶ್ರಯವು. ಆ ಆಧಿಷ್ಠಾನವಿಶೇಷಗಳಲ್ಲಿ ಶ್ರೀಪರಮಾತ್ಮನು ಉದಕಾಂತರ್ಗತನಾಗಿ ವಾರಿವಾಚ್ಯನೆನಿಸಿದ್ದಾನೆ. ವಾರಿವಾಚ್ಯನಾದ ಶ್ರೀಹರಿಯು ಷಡ್ರಸಗಳಲ್ಲಿ ರಸಪದವಾಚ್ಯನಾಗಿದ್ದು ಸ್ಥೂಲದೇಹಗತ ಎಪ್ಪತ್ತೆರಡು ಸಾವಿರ ನಾಡಿಗಳ ದ್ವಾರಾ ರಸವಿಭಾಗಮಾಡಿ ದೇಹಕ್ಕೆ ಉಪಚಯವನ್ನು ಕೊಡುತ್ತಾನೆ. ಈ ನಾಡಿಗಳ ವಿವರ ಇಂತಿದೆ.

(೧) ದೇಹದ ಬಲಭಾಗದಲ್ಲ ೩೬೦೦೦ ಪುರುಷನಾಡಿಗಳು, ಇವುಗಳಲ್ಲಿ ಪುರುಷರೂಪದಿಂದ ಶ್ರೀ ಪರಮಾತ್ಮನು ವ್ಯಾಪಾರಮಾಡುವನು.

(೨) ದೇಹದ ಬಲಭಾಗದಲ್ಲಿ ೩೬೦೦೦ ಸ್ತ್ರೀ ನಾಡಿಗಳು. ಇವುಗಳಲ್ಲಿ ಶ್ರೀ ಹರಿಯು ಸ್ತ್ರೀರೂಪದಿಂದ ಕ್ರಿಯಾವಿಶಿಷ್ಟನಾಗಿದ್ದಾನೆ,

ಅಂತು ಒಟ್ಟು ೭೨೦೦೦ ನಾಡಿಗಳಲ್ಲಿ ಆತದಾಕಾರ, ತದ್ರೂಪ, ತನ್ನಾಮಕನಾಗಿ ಆ ನಾಡಿಗಳಿಗೆ ಪ್ರಾಣಾಧಾರಕನಾಗಿ ಇದ್ದು. ದೇಹಸಂರಕ್ಷಣೆಮಾಡುತ್ತಿರುವನು.

ಸಮಸ್ತ ಜೀವರ ಶರೀರಗಳಲ್ಲಿ ಶ್ರೀ ಹರಿಯು ನಾಡಿಗತ ತತ್ವಾಭಿಮಾನಿ ದೇವತೆಗಳಲ್ಲಿದ್ದು, ಅವರ ಧಾರಕನಾಗಿ (ಆಶ್ರಯದಾತನಾಗಿ) "ಬೃಹತಿ" — ಎಂಬ ಮಂಗಳನಾಮ ಧೇಯನಾಗಿ ಹಗಲು ಮತ್ತು ರಾತ್ರಿ ಅಂದರೆ ಸರ್ವಕಾಲಗಳಲ್ಲೂ ಮತ್ತು ಸರ್ವಾವಸ್ಥೆಗಳಲ್ಲಯೂ ವಿಹರಿಸುತ್ತಾ ನಾಡಿಗತ ಕ್ರಿಯಗಳನ್ನು ಮಾಡಿ ಮಾಡಿಸುತ್ತಿರುವನು.

೭೨೦೦೦ ಸಂಖ್ಯಾಕವಾದ ನಾಡಿಗಳ ವಿವರಗಳನ್ನು ಕಾಲಮಾನ ರೀತ್ಯಾ ತಿಳಿಯಬಹುದು:—

(೧) ಒಂದು ವರ್ಷಕ್ಕೆ ೩೬೦ ದಿನಗಳು. ಅಂದರೆ ೩೬೦ ಹಗಲು ಮತ್ತು ೩೬೦ ರಾತ್ರಿಗಳು.

(೨) ಮನುಷ್ಯನ ಆಯುಃ ಪ್ರಮಾಣವನ್ನು ೧೦೦ ವರ್ಷಗಳೆಂದು ಪರಿಗಣಿಸಿದರೆ, ೩೬೦೦೦ ಹಗಲು ಮತ್ತು ೩೬೦೦೦ ರಾತ್ರಿಗಳಾಗುವುವು.

(೩) ದಿವಾ ನಾಡಿಗಳು (ಹಗಲು ಕಾಲ) = ೩೬೦೦೦ (ಪುರುಷ ನಾಡಿಗಳು)

ರಾತ್ರಿ ನಾಡಿಗಳು (ರಾತ್ರಿಕಾಲ) = ೩೬೦೦೦ (ಸ್ತ್ರೀ ನಾಡಿಗಳು

ಒಟ್ಟು ನಾಡಿಗಳ ಸಂಖ್ಯೆ = ೭೨೦೦೦ ಆಯಿತು

**"ಬಹುಪೂರ್ಣತಾಯಂ"**—ಎಂಬ ಧಾತುವಿನಿಂದ ಪೂರ್ವೋಕ್ತ ೭೨೦೦೦ ನಾಡಿಗಳಲ್ಲಿ ಪರಿಪೂರ್ಣನಾಗಿರುವುದರಿಂದ ಆಭಗವದ್ರೂಪಕ್ಕೆ **"ಬೃಹತಿ"** ಎಂದು ಶುಭನಾಮ. ಈ ಬೃಹತೀ ಛಂದಸ್ಸು ೧೧ ಅಕ್ಷರಗಳಿಂದ ಯುಕ್ತವಾಗಿದೆ. ಇಂತಹ ಬೃಹತೀ ಸಾಂಕೇತವಾದ ದೇವ ಋಕ್ಕುಗಳು ೧೦೦ ವರ್ಣಮಾಲೆಯಲ್ಲಿ ೫೧ ವರ್ಣಗಳ ಪೈಕಿ "ಅ" ಕಾರದಿಂದ ಪ್ರಾರಂಭಿಸಿ "ಅಃ" ವರೆಗೆ ೧೬ ಸ್ವರಾಕ್ಷರಗಳು. "ಕ" ವರ್ಣದಿಂದ ಆರಂಭಿಸಿ, "ಕ್ಷ" ವರೆಗೆ ೩೫ ವ್ಯಂಜನಾಕ್ಷರಗಳು. ಈ ವರ್ಣಸಂಯೋಜನೆಯಿಂದ ೭೨೦೦೦ ನಾಡಿಗಳ ಸಂಖ್ಯೆಯನ್ನು ಈ ರೀತಿ ವಿವರಿಸಬಹುದು:—

(೧) ಬಲಭಾಗದ ಪುರುಷನಾಡಿಗಳಲ್ಲಿ ಬೃಹತೀಸಹಸ್ರ ಸ್ವರಾಕ್ಷರ ವಾಚ್ಯರೂಪಗಳು = ೩೬೦೦೦

(೨) ಎಡಭಾಗದ ಸ್ತ್ರೀನಾಡಿಗಳಲ್ಲಿ ಬೃಹತೀ ಸಹಸ್ರ ವ್ಯಂಜನಾಕ್ಷರ ವಾಚ್ಯ ರೂಪಗಳು = ೩೬೦೦೦

ಅಂತು ಒಟ್ಟನಲ್ಲಿ ೭೨೦೦೦ ಬೃಹತೀಸಹಸ್ರ ಭಗವದ್ರೂಪಗಳು. ಸ್ವರ ಮತ್ತು ವ್ಯಂಜನಾಕ್ಷರಗಳ ವಿವಿಕ್ಷಾ ಈ ರೀತಿಯಲ್ಲಿಯೂ ವಿವರಿಸಬಹುದು:–

(೧) ೧೬ ಸ್ವರಾಕ್ಷಗಳು × ವಿಶ್ವಾದಿ ಸಹಸ್ರರೂಪಗಳು = ೧೬೦೦೦

(೨) ೩೫ ವ್ಯಂಜನಾಕ್ಷರಗಳು × ವಿಶ್ವಾರಿ ಸಹಸ್ರರೂಪಗಳು = ೩೫೦೦೦

(೩) ಬೃಹತೀ ಛಂದಸ್ಸಿನ ೧೧ ಅಕ್ಷರಗಳು × ವಿಶ್ವಾದಿ ಸಹಸ್ರ ರೂಪಗಳು = ೧೧೦೦೦

(೪) ೧೦೦ ದೇವ ಋಕ್ಕುಗಳು × ವಿಶ್ವಾದಿ ಸಹಸ್ರರೂಪಗಳು ೧೦೦೦೦

ಒಟ್ಟು ರೂಪಗಳು ೭೨೦೦೦

ಅಂತು ಒಟ್ಟನಲ್ಲಿ = ೭೨೦೦೦ ಭಗವದ್ರೂಪಗಳು, ಏತಾದೃಶಮಹಿಮಾಸಂಪನ್ನನಾದ ನಿತ್ಯತೃಪ್ತನು ವಾರಿವಾಚ್ಯನಾಗಿ, ಉದಕದಲ್ಲಿದ್ದು ಆರು ರಸಗತರೂಪನಾಗಿ, ದೇಹಗತ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ತದ್ರೂಪ, ತದಾಕಾರನಾಗಿ, ಆ ನಾಡಿಗಳಿಗೆ ಆಧಾರಭೂತನಾಗಿ, ರಸವಿಭಾಗಮಾಡುತ್ತಾ ಸ್ಥೂಲದೇಹಕ್ಕೆ ಉಪಚಯದ್ವಾರಾ, ದೇಹ ರಕ್ಷಣೆಮಾಡುತ್ತಾ, ಬೃಹತಿ" ಎಂಬ ಶುಭನಾಮಧೇಯನಾಗಿ ವಿಶ್ವಾದಿ ಸಹಸ್ರರೂಪಗಳಿಂದ ಕ್ರೀಡಾವಿಶಿಷ್ಟನಾಗಿರುವ ಶ್ರೀ ಹರಿಯ ಪರಮೋಪಕಾರವನ್ನು ಎಷ್ಟು ಕೊಂಡಾಡಿದರೂ ಸಾಲದು ! ॥ ೩ ॥

# ಪದ್ಯ (೪)

**ಮೂಲ :**

**ಆರುರಸ ಸತ್ತ್ವಾದಿ ಭೇದದಿ ।**
**ಆರುಮೂರಾಗಿಹವು ಸಾರಾ ।**
**ಸಾರ ನೀತಾಪ್ರಚುರ ಖಂಡಾಖಂಡ ಚಿತ್‌ಪ್ರಚುರ ॥**
**ಈರಧಿಕ ಎಪ್ಪತ್ತುಸಾವಿರ ।**
**ಮೂರಮೂಣನೆ ರಸಾಖ್ಯರೂಪ ಶ ।**
**ರೀಶದಲಿ ಭೋಜ್ಯಸುಪಾರ್ಥದಿ ತಿಳಿದು ಭುಂಜಿಪುದು ॥ ೪ ॥**

**ಅವತರಿಣಿಕೆ :**

ಷಡ್ರಸಗಳು ಸತ್ತ್ವಾದಿ ತ್ರಿಗುಣಗಳ ದೆಸೆಯಿಂದ ೬×೩=೧೮ ಪ್ರಕಾರವಾಗಿ ವಿಭಕ್ತವಾಗಿವೆ. ಈ ರಸವಿಶೇಷಗಳ ವಿವರಣೆ ಮತ್ತು ದೇಹಗತ ಎಪ್ಪತ್ತೆರಡು ಸಹಸ್ರನಾಡಿಗಳಲ್ಲಿ ರಮಾಧವನು ರಸಾಖ್ಯರೂಪನಾಗಿ ಇದ್ದು ವ್ಯಾಪಾರಾದಿಗಳನ್ನು ಮಾಡುವ ಕ್ರಮವನ್ನೂ ಮತ್ತು ಸುಭೋಜ್ಯ ಪದಾರ್ಥಾಂತರ್ಗತ ಭಗವದ್ರೂಗಳ ವಿಚಾರವನ್ನು ಹೇಳುತ್ತಾರೆ. "ಆರುರಸ"-ಎಂಬ ಈ ಪದ್ಯದಿಂದ ॥ ೪ ॥

**ಪ್ರತಿಪದಾರ್ಥ :—**

**ಆರು ರಸ**=ಪೂರ್ವೋಕ್ತ ಉಪ್ಪು, ಹುಳಿ, ಸಿಹಿ, ಕಹಿ, ಖಾರ,ಮತ್ತು ಒಗರು ಎಂಬ ಷಡ್ರಸಗಳು **ಸತ್ತ್ವಾದಿ ಭೇದದಿ**=ಸತ್ವಗುಣ, ರಜೋಗುಣ ಮತ್ತು ತಮೋಗುಣ ಎಂಬ ಗುಣತ್ರಯಗಳಿಂದ ಯುಕ್ತವಾಗಿ **ಆರುಮುರಾಗಿಹವು**=ಆರುರಸಗಳು × ತ್ರಿಗುಣಗಳು=ಹದಿನೆಂಟು ರಸಗಳಾಗಿ ವಿಭಕ್ತವಾಗಿವೆ. **ಸಾರಾಸಾರ**=ಅದರಲ್ಲಿ ಸಾರರಸ ಮತ್ತು ಅಸಾರಸವೆಂತಲೂ

**ನೀತ**=ಪ್ರತಿರಸದಲ್ಲಿಯೂ ಇರುವ "ನೀತ" ಎಂಬ ರಸವಿಶೇಷ, **ಅಪ್ರಚುರ**=ಅಪ್ರಚುರವೆಂತಲೂ **ಖಂಡಾಖಂಡ**=ಖಂಡರಸ ಮತ್ತು ಅಖಂಡರಸವೆಂತಲೂ **ಚಿತ್ರಪ್ರಚುರ**=ಚಿತ್ರಪ್ರಚುರ ರಸವೆಂತಲೂ ವಿಭಕ್ತವಾಗಿ **ಈರಧಿಕ ಎಪ್ಪತ್ತೆರಡು ಸಾವಿರ**=ಎಪ್ಪತ್ತೆರಡು ಸಾವಿರ ಸಂಖ್ಯಾಕವಾದ (ಈರಧಿಕ=ಎರಡು ಹಚ್ಚಾದ—ಎಪ್ಪತ್ತೆರಡು ಸಾವಿರ, ಅದರೆ ೭೨೦೦೦) ರಸಗಳಾಗುವುವು. **ನಾರಮಣ**=ಲಕ್ಷ್ಮೀಪತಿ ಶ್ರೀಮನ್ನಾರಾಯಣನು **ರಸಾಖ್ಯರೂಪ**=ರಸಪದಶಬ್ದವಾಚ್ಯನಾಗಿ ತದ್ರೂಪನಾಗಿದ್ದು **ಶರೀರದಲಿ**=ಸ್ಥೂಲಶರೀರದಲ್ಲಿ ವಿದ್ಯಮಾನಗಳಾದ ೭೨೦೦೦ ನಾಡಿಗಳಲ್ಲಿ **ಸುಭೋಜ್ಯ ಪದಾರ್ಥದಿ**=ಭೋಜನಯೋಗ್ಯವಾದ ಉತ್ತಮವಾದ ಅನಿಷಿದ್ಧ ಪದಾರ್ಥಗಳಲ್ಲಿ **ತಿಳಿದು**=ಅನುಸಂಧಾನಕ್ರಮದಿಂದ ತದ್ಗತ ಭಗವದ್ರೂಪಗಳನ್ನು ಅರಿತು ಚಿಂತಿಸುತ್ತಾ **ಭುಂಜಿಪುದು**=ಭೋಜನ ಮಾಡಬೇಕು ಎಂದು ತಾತ್ಪರ್ಯ ॥ ೪ ॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪೂರ್ವೋಕ್ತ ಆಮ್ಲಾದಿ ಷಡ್ರಸಗಳು ಸತ್ವಗುಣ, ರಜೋಗುಣ, ಮತ್ತು ತಮೋಗುಣಗಳಿಂದ ಯುಕ್ತವಾಗಿ ಅವೆ. ಗುಣಭೇದಗಳ ಅನುಸರಿಸಿ, ರಸ ಭೇದಗಳೂನು ಅದೇ ಪ್ರಕಾರ ಭೇದಗಳಿಂದ ಯುಕ್ತವಾಗಿ, ಪ್ರತಿಯೊಂದು ರಸದಲ್ಲೂನು ಹದಿನೆಂಟುರಸಗಳಾಗಿ ಅವೆ (ಆರುಮೂರಾಗಿಹವು) ಆದರಲ್ಲಿ ಸಾರರಸ ಸತ್ವಗುಣಾಶ್ರಯ ಮಾಡಿದ್ದು. ಅಸಾರ ರಜೋಗುಣ, ತಮೋಗುಣ ಆಶ್ರಯಮಾಡಿದ್ದು. ಆದರಲ್ಲಿ ತಮೋಗುಣ ಆಶ್ರಯಮಾಡಿದ್ದು ರಸಸಾರ ತಮವು ಎಂತ ತಿಳಿಯಬೇಕು. ಈ ಪ್ರಕಾರ ಷಡ್ರಸಗಳಲ್ಲಿ ಪ್ರತಿಪ್ರತಿ ರಸದಲ್ಲಿ ಇರೋಣ ಎಂಬದು ನೀತವಾದದ್ದು. ಆದರೆ ಅದರ ಒಳಗೆ ಸರ್ವವು

ಸಂಸೃಷ್ಟಗಳಾದ್ದರಿಂದ ಈ ಪ್ರಕಾರ ನೀತವಾಗಿ ಇರುತ್ತವೆ. ಅಂಡಗತಗಳೂ ಸಂಸೃಷ್ಟಗಳಾದ್ದರಿಂದ ಪ್ರತಿಯೊಂದು ರಸಕ್ಕೂ ಅಸಂಸೃಷ್ಟವಲ್ಲದೇ ಪ್ರತಿಯೊಂದು ರಸದಲ್ಲಿಯೂ ಆರಾರು ರಸಗಳು ಸಂಸೃಷ್ಟಗಳಾಗಿ ಅವೆ. ಅದರಲ್ಲಿ ಐದು ರಸಗಳಿಗೆ ಅಪ್ರಚುರ, ಒಂದು ರಸಕ್ಕೆ ಮಾತ್ರ ಪ್ರಚುರ. ಹ್ಯಾಂಗೆ ಅಂದರೆ, ಆಮ್ಲದಲ್ಲಿ ಆಮ್ಲರಸ ಪ್ರಚುರ; ಅವಶಿಷ್ಟ ಐದುರಸಗಳು ಅಪ್ರಚುರವಾದ್ದರಿಂದ ಐದು ರಸಗಳು ವ್ಯಕ್ತವಾಗಿ ತಿಳಿಯೋದಿಲ್ಲ, ಖಂಡ. ಅಂದರೆ, ಬ್ಯಾರೆಬ್ಯಾರೆ ಆಗಿರುವವರಗೂ "ಖಂಡರಸ" ಎಂತ ಕರಿಸೋದಾಗತದೆ. ಆರು ರಸಗಳು ಸೇರಿ ಒಂದು ಭೋಜನಯೋಗ್ಯಪದಾರ್ಥ ನಿರ್ಮಿತವಾದರೆ, ಅದಕ್ಕೆ "ಅಖಂಡರಸ" ಎಂದು ಹೆಸರು. ಅಂತು ಭೇದವಿವಕ್ಷಯೂ ಖಂಡರಸಗಳು. ಸಮೂಹವಿವಕ್ಷಯೂ ಅಖಂಡರಸಗಳು. ಮೇಳನವಿವಕ್ಷಯಾ ಷಡ್ರಸಗಳೂ ಸೇರಿ ೭೨೦೦೦ ರಸಗಳು ಆಗೋದಾಗತದೆ. ಆಗೋ ಬಗೆ ಹ್ಯಾಂಗೆ ಅಂದರೆ, ಸಂಧ್ಯಂತರವಾದ ಸ್ಥಾವರಜಂಗಮಸಂಧಿ ೭ನೆಯ ಶ್ಲೋಕದಲ್ಲಿ ವಿವರಮಾಡಿದ ಸುರುಚಿ, ರುಚಿರ, ಸುಗಂಧ, ಶುಚಿ ಎಂತ ನಾಲ್ಕು ರಸಗಳನ್ನು ಷಡ್ರಸವಾದ ಆರರಿಂದ ಗುಣಿಸಿದರೆ ೨೪ ಆಗುತ್ತದೆ. ಇದರಲ್ಲಿ ಸಾತ್ವಿಕಾದಿ ಮೂರುಗುಣ, ಮೂರರಿಂದ ಗುಣಿಸಿದರೆ, ೭೨ ಆಗತದೆ. ವಿಶ್ವಾದಿಸಹಸ್ರರೂಪಗಳು ಸೇರಿಕೊಂಡರೆ, ೭೨೦೦೦ರಸಂಖ್ಯಾ ಭಗವದ್ರೂಪಗಳಾಯಿತು. ಇದು ಒಂದು ಪ್ರಕಾರ ವಿಭಾಗ ಒಂದೊಂದು ರಸದಲ್ಲಿ ಎರಡು ಪ್ರಕಾರ ರಸವಾಗಿ ಆರೆರಡು ಅಂದರೆ ಹನ್ನೆರಡ ರಸವಾಗಿ, ಹನ್ನೆರಡು ಆರುಗಳು ೭೨. ವಿಶ್ವಾದಿರೂಪಗಳು ಸೇರಿದರೆ ೭೨೦೦೦ ರಸವಾಚ್ಯ ಭಗವದ್ರೂಪಗಳಾಗುತ್ತವೆ. ಇನ್ನೂ ಅನೇಕ ವಿಧ ಮಾರ್ಗಾನುಸಂಧಾನವಿದೆ. ಈ ಪ್ರಕಾರ ಪ್ರತಿ ಪ್ರತಿ ರಸದಲ್ಲಿಯೂ ಪರಮಾತ್ಮ ನಿಂದ ಸೃಷ್ಟಿಕಾಲದಲ್ಲಿ ಸಂಸೃಷ್ಟಿಗಳು ಮಾಡಲ್ಪಟ್ಟಿದೆ. ಅದದು ಪ್ರಚುರ ರಸವೆಂದು ಆದೇ ಲೋಕರಿಗೆ ಗೋಚರವೂ, ತದನ್ಯ ತದಭಿಮಾನಿ ದೇವತೆ ಗಳಿಗೆ ಗೋಚರವೂ, ಮಾನುಷ ಗೋಚರವಲ್ಲ. ಈ ಪ್ರಕಾರ ಖಂಡಾಖಂಡ ರಸಗಳು. ಈ ೭೨ ರಸಗಳಲ್ಲಿ ಚಿದಾನಂದರೂಪಿಯಾದ [ಚಿತ್] ಗುಣಪೂರ್ಣ ನಾದ ಶ್ರೀಪರಮಾತ್ಮ, ಆಯಾ ರಸಗಳಂತೆ ಅಧಿಷ್ಠಾಗನತನಾಗಿ ಇದ್ದು ಆಯಾ ರಸಗಳ ಪ್ರಚುರಮಾಡುತ್ತಾ [ಚಿತ್ಪ್ರಚುರ]—

**"ರಸಶಬ್ದೇನ ವಿಶೇಷಣಾತ್ ತತ್ತತ್ಸಾರಭೂತಂ ಚಿನ್ಮಾತ್ರಮೇ ವೋಚ್ಯತೇ"-ಎಂತ ಶ್ರೀಬ್ರಹ್ಮಸೂತ್ರ ಭಾಷ್ಯದಲ್ಲಿ** ವಿವರ ಇರುವುದರಿಂದ, ೭೨೦೦೦ ಸಂಖ್ಯಾಕವಾದ [ಈರಧಿಕರ ಎಪ್ಪತ್ತುಸಾವಿರ] ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನ [ಮಾರಮಣನ], ಸಂಸೃಷ್ಟ ರಸಾಂತರ್ಗತಳಾಗಿ "ರಸ" ಎಂಬ ಪ್ರಸಿದ್ಧಗಳಾದ [ರಸಾಖ್ಯ] ೭೨೦೦೦ ರೂಪಗಳು ಸ್ಥೂಲಶರೀರದಲ್ಲಿ ವಿದ್ಯಮಾನಗಳಾದ ೭೨೦೦೦ ನಾಡಿಗಳಲ್ಲಿ, ಪ್ರತಿನಾಡಿಯಲ್ಲಿ ಒಂದೊಂದು ರೂಪದ ವ್ಯಾರಿಗೆ ೭೨೦೦೦ ರೂಪಗಳು ಗ್ರಾಹ್ಯ. ಸಮೀಚೀನಗಳಾದ, ಅನಿಷಿದ್ಧಗಳಾದ ಭೋಜನಾರ್ಹವಾದ ಪ್ರತಿಪ್ರತಿಪದಾರ್ಥದಲ್ಲೂ, [ಭೋಜ್ಯ ಸುಪದಾರ್ಥದಿ] ೭೨೦೦೦ ರಸಗಳ ಭಗವದ್ರೂಪಗಳನ್ನು ಅನುಸಂಧಾನಮಾರ್ಗದಿಂದ ತಿಳಿದು ಭೋಜನಮಾಡುವುದು ಎಂಬ ತಾತ್ಪರ್ಯ.

ಪ್ರತಿಪದಾರ್ಥದಲ್ಲೂ ೧೬ ಕಳಾಕ್ಕೆ ಉಪಚಯವಾಗತಕ್ಕ ರಸಭೇದಗಳು ೭೨೦೦೦ ನಾಡಿಗಳಿಗೆ ಉಪಚಯವಾಗತಕ್ಕ ರಸಭೇದಗಳು ಇರೋದಾಗಿ ಅದದು ಅವದಕ್ಕೆ ಸೇರತದೆ, ಪ್ರಥಮಶ್ಲೋಕದ ವರೆಗೆ ದೇಹಗತ ದೇವತೆಗಳಿಗೆ, ದೈತ್ಯರಿಗೆ, ನಿತ್ಯಸಂಸಾರಿಗಳಿಗೆ ಜೀವಗೆ ಸೇರುವ ಕ್ರಮ ತಿಳಿಯಬೇಕು.

(೧) ದೇಹದಲ್ಲಿ ಸತ್ವಗುಣಾಶ್ರಿತರು ದೇವತೆಗಳು ಸತ್ವರಸ.

(೨) ರಜೋಗುಣಾಶ್ರಿತರು ನಿತ್ಯ ಸಂಸಾರಿಗಳು ರಜೋರಸ.

ಮತ್ತು (೩) ತಮೋಗುಣಾಶ್ರಿತರು ದೈತ್ಯರು ತಮೋರಸ.

ಈ ಪ್ರಕಾರ ರಸಗಳಲ್ಲಿ ದೇಹದಲ್ಲಿ ಅಭಿಮಾನಿಗಳಾಗಿ ಇದ್ದಾರೆ. ಅವರವರಿಗೆ ಆಯಾ ರಸಗಳು ಸೇರೋದಾಗತದೆ ಎಂದು ಅನುಸಂಧಾನದಿಂದ ಭೋಜನ ಮಾಡತಕ್ಕದ್ದು ಎಂತ ತಾತ್ಪರ್ಯ.

**ವಿಶೇಷಾರ್ಥ :**

ಆರು ರಸ ದಾವದೆಂದರೆ:- ಮಧುರ, ಆಮ್ಲ, ಲವಣ, ಕಟು, ಕಷಾಯ, ತಿಕ್ತ- ಎಂಬ ಆರು ರಸಗಳ ಒಳಗೆ ಸಾರದಿ ಷಡ್ರಸಗಳು ಅವೆ. ಇವಕ್ಕೆ ಪ್ರಮಾಣ, ಶ್ರೀ ವಿಜಯದಾಸರಾಯರ ಸುಳಾದಿ-

**"ವಾರೀಲಿ ಮಧುರವೇ ಪ್ರಾಮುಖ್ಯವೆನಿಸುವುದು ।**
**ಸಾರವೆ ಮಧುರಾದಿಗತ ಸಾರಾಸಾರ ।**
**ಖಂಡಾಖಂಡ ಮೂರರೆಡು ರಸಗಳು ಇಪ್ಪದಯ್ಯಾ ।**
**ಧೀರರು ತಿಳಿವದು ಸತ್ವಾದಿಭೇದದಿಂದ ।**
**ಮೂರಾರುರಸವೆನಿಸಿ ರಾಜಿಪುದು ಪಾಲಿಜನಯನ ।**
**ಸಿರಿವಿಜಯವಿಠ್ಠಲತಾನೆ ಸಾರಭೂತವಾದ ಚಿತ್ರ್ಯಚುರ ಸ್ವೀಕರಿಷಾ॥**

ಇದೇ ಅರ್ಥವನ್ನು ಶ್ರೀ ಜಗನ್ನಾಥದಾಸರಾಯರು ಪದ್ಯರೂಪವಾಗಿ ಹೇಳಿದ್ದಾರೆ. ಈ ಸಾರಾಖ್ಯರಸದಲ್ಲಿ ಶುಭಾಶುಭವೆಂತಲೂ, ಶುಭದಲ್ಲಿ ಪ್ರಾಕೃತ, ಅಪ್ರಾಕೃತವೆಂತಲೂ, ಆ ಅಪ್ರಾಕೃತದಲ್ಲಿ ಖಂಡಾಖಂಡವೆಂತಲೂ ರಸಗಳು ಇವೆ. ಇದಕ್ಕೆ ಪ್ರಮಾಣ ;

**"ಶುಭಾಶುಭಾವಿಭೇದೇನ ಸಾರೋಹಿ ದ್ವಿವಿಧೋ ಮತಃ ।**
**ಹರಿಸ್ತತ್ರ ಶುಭಂ ಸಾರಂ ಸ್ವೀಕರೋತಿ ನ ಚಾಪರಮ್॥**
**ಶುಭಸಾರೋ ದ್ವಿಧಾಪ್ರೋಕ್ತಃ ಪ್ರಾಕೃತೋಽಪ್ರಾಕೃತಸ್ತಥಾ ॥**
**ಅಪ್ರಾಕೃತರಸೋನಾಮ ಪದಾರ್ಥಾಕಾರರೂಪತಃ ॥**
**ಚಿದಾನಂದಸ್ವರೂಪಮೇವ ನ ಚಾಪರಃ ।**
**ಅಪ್ರಾಕೃತರಸಸ್ಯಾಪಿ ದ್ವೈವಿಧ್ಯಂ ಸರ್ವಸಮ್ಮತಂ"**
**ಖಂಡಾಖಂಡರೂಪಾಭ್ಯಾಮಿತಿ॥**

**—ಪ್ರಮೇಯಮಾಲಿಕಾ ॥**

ಈ ಸಾರಾಖ್ಯ ಒಂದು ರಸದಲ್ಲಿ ಶುಭಾದಿರಸಗಳು ಇರೋದಲ್ಲದೇ ಶ್ರೀಪರಮಾತ್ಮ ಭೋಗಾರ್ಹವಾದಂಥಾ ಅನಂತಾನಂತರಸಗಳು ಅವೆಎಂದು ಹೇಳತದೆ ಅದಕ್ಕೆ ಪ್ರಮಾಣ :

ಏಕೈಕ ಜಾತೀಯೇಪಿ ರಸಜಾತೀಯೇಷ್ವೇವ ವಿಶದ,ಸ್ಥಿರ, ತೀಕ್ಷ್ಣಾದಿ ಹೃದ್ಯಾದಿ ವೈಲಕ್ಷಣ್ಯವತ್ ಅನಾಂತರಾನಂತ ವೈಲಕ್ಷಣ್ಯೋಪೇತಾನಿ ರಸಾನಿರ್ವತಂತೇ ||"

—ಇತಿ ಶ್ರೀಮಜ್ಜಯ ತೀರ್ಥೀಯ ಪ್ರಮೇಯ ದೀಪಿಕಾ||

ಈ ಅನಂತಾನಂತರಸಗಳು ಶ್ರೀಹರಿ ಒಬ್ಬನೇ ಸ್ವೀಕರಿಸುತ್ತಾನೆ. ರಮಾಬ್ರಹ್ಮಾದಿಗಳಿಗ ಸಿಗೋದಿಲ್ಲಿ. ಇದಕ್ಕೆ ಪ್ರಮಾಣ:-

"ಅನಂತೇಂದ್ರಿಯಸಂಭೋಗ್ಯಾನ್ ಅತರ್ಕ್ಯಾಂಶ್ಚ ರಮಾದಿಭಿಃ|
ಪೃಥಕ್ ಪೃಥಗನಂತಾನ್ನಿಜಾತೀಯಾಂಶ್ಚ ಸರ್ವತಃ|
ಸ್ವಯಮೇವ ಹರಿರ್ಭುಂಕ್ತೇ ಸರ್ವಾನ್ ಸರ್ವವಿಲಕ್ಷಣಾನ್||"

—ಇತಿ ಸತ್ತತ್ವ ರತ್ನಮಾಲಾಯಾಂ|| ||೪||

(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ:—

ಷಡ್ರಸಗಳಲ್ಲಿ ಭಗವದ್ರೂಪಗಳನ್ನು ಚಿಂತನಮಾಡಬೇಕಾದ ಕ್ರಮವನ್ನು ಹೇಳುತಾರೆ. ರಸಗಳು ಉಪ್ಪು, ಹುಳಿ, ಖಾರ, ಸಿಹಿ, ಕಹಿ ಮತ್ತು ಒಗರು ಎಂದು ಆರು ಪ್ರಕಾರಗಳಿರುವುವು. ಇವುಗಳಲ್ಲಿ ಒಂದೊಂದರಲ್ಲಿಯೂ ಸಾತ್ವಿಕ ಭಾಗವೆಂತಲೂ, ರಾಜಸಭಾಗವೆಂತಲೂ ಮತ್ತು ತಾಮಸಭಾಗವೆಂತಲೂ ಮೂರು ಭಾಗಗಳಾಗಿರುವುವು. ಹೀಗೆ ೬×೩=೧೮ ಭಾಗಗಳಾಗಿರುವುವು. ಅದರಲ್ಲಿಯೂ ಸಾರಸಾರ, ನೀತಾಪ್ರಚುರ, ಖಂಡಾಖಂಡ ಮತ್ತು ಚಿತ್ರಚುರಗಳೆಂಬ ನಾಲ್ಕು ದ್ವಂದ್ವಗಳು ಸಂಬಂಧಿಸಿರುವುವು.

ಅದರ ವಿವರ ಹೀಗಿದೆ:—ಸಾತ್ವಿಕಭಾಗವೂ ರಾಜಸದಲ್ಲಿ ಅರ್ಧಭಾಗ ಮಿಶ್ರವಾದ ಸಾತ್ವಿಕಭಾಗವೂ ಸೇರಿದ ಭಾಗವು "ಸಾರ" ವೆಂದೆನಿಸಿಕೊಳುವುವು "ಅಸಾರ" ವೆಂದರೆ,ತಾಮಸಭಾಗ, ರಾಜಸಮಿಶ್ರವಾದ ತಾಮಸಭಾಗವು, ಹೇಗೆ ರಜೋಗುಣವನ್ನು ಎರಡು ವಿಧಮಾಡಿ ಸತ್ವಗುಣದಲ್ಲ ಅರ್ಧವನ್ನೂ ತಮೋಗುಣದಲ್ಲ ಅರ್ಧವನ್ನೂ ಸೇರಿಸುವುರಿಂದ ಸಾರ ಮತ್ತು ಅಸಾರವೆಂದು

ಎರಡುವಿಧ ಏರ್ಪಡುವುದು. ಈ ಸಾರಾಸಾರಗಳೆರಡೂ ೧೮ರಲ್ಲಿ ೧ ಪಾಲಾಯಿತು. ಇದರಲ್ಲಿ "ನೀತ"ವೆಂತಲೂ ಮತ್ತು "ಅಪ್ರಚುರ"ವೆಂತಲೂ ಎರಡು ಪ್ರಕಾರವಾದ ದ್ವಂದ್ವವು ಮತ್ತೊಂದು ಭಾಗವಾಗಿ ಸೇರುವುದು. ಹೇಗೆಂದರೆ "ನೀತ"ವೆಂದರೆ ನಾಲಿಗೆಗೆ ಚೆನ್ನಾಗಿ ಗೋಚರವಾಗುವ ಸಿಹಿ ಮೊದಲಾದವು. "ಅಪ್ರಚುರ"ವೆಂದರೆ ಸಿಹಿ ಮೊದಲಾದವುಗಳಲ್ಲಿ ಸಂಬಂಧಿಸಿ ಭುಂಜಿಸುವವರಿಗೆ ಗೋಚರಿಸಿರುವ ಕಹಿ ಮೊದಲಾದವು ಎಂದರ್ಥ. ಅಂದರೆ, ಸಿಹಿ ಕಹಿ ಮೊದಲಾದ ಒಂದೊಂದು ರಸದಲ್ಲಿಯೂ ಚೆನ್ನಾಗಿ ಗೋಚರಿಸುವ ಉಪ್ಪಿನಲ್ಲಿನ ಉಪ್ಪು, ಹುಳಿಯೊಳಗಿನ ಹುಳಿ ರಸಗಳ ಹೊರತು ಉಳಿದ ೫ ರಸಗಳೂ ಸಹ ಮಿಶ್ರವಾಗಿಯೇ ಇರುವುವು. ಅವು ನಮಗೆ ಗೋಚರವಾಗುವುದಿಲ್ಲ. ಉಪ್ಪಿನಲ್ಲಿರುವ ಉಪ್ಪಿನ ರಸಕ್ಕೆ "ನೀತ"ವೆಂತಲೂ, ಅದರಲ್ಲಡಗಿರುವ ಉಳಿದ ೫ ರಸಗಳಿಗೆ "ಅಪ್ರಚುರ"ವೆಂತಲೂ ಹೆಸರು. ಇವೆರಡೂ ಒಂದರಲ್ಲಿಯೇ ಅಡಗಿರುವುದರಿಂದ ಈ ಎರಡನ್ನೂ ಒಂದೇ ಭಾಗವೆಂದು ತೆಗೆದುಕೊಳ್ಳಬೇಕು, ಇದರಲ್ಲಿ "ಖಂಡ"ವೆಂತಲೂ ಮತ್ತು "ಅಖಂಡ"ವೆಂತಲೂ ದ್ವಂದ್ವ ಭಾಗವು ಏರ್ಪಡುವುದು. "ಖಂಡ"ವೆಂದರೆ, ಒಂದು ರಸದಲ್ಲಿ ಮತ್ತೊಂದು ರಸವನ್ನು ಸೇರಿಸಿ ಆ ರಸದ ರುಚಿಯನ್ನು ಖಂಡಿಸುವುದಕ್ಕೆ ಹೆಸರಾಗುವುದು. ಸಾರು ಮೊದಲಾದ ಪದಾರ್ಥದಲ್ಲಿನ ಹುಳಿಯನ್ನು ಹಾಕಿ, ಅದನ್ನು ಖಂಡಿಸುವುದಕ್ಕಾಗಿ ಉಪ್ಪನ್ನೂ ಖಾರವನ್ನೂ ಹಾಕುವರು, ಹೀಗೆ ಪದಾರ್ಥಾಂತರದ ಸಮ್ಮೇಳನದಿಂದ ರುಚಿಭೇದ ಏರ್ಪಡುವುದಕ್ಕೇನೇ "ಖಂಡ" ಎನ್ನುವರು. ಒಂದರಲ್ಲಿ ರಸಾಂತರ ಮಿಶ್ರಮಾಡದಿರುವ ಸಿಹಿ ಮೊದಲಾದ ರಸಕ್ಕೆ "ಅಖಂಡ" ಎಂದು ಹೆಸರು. ಹೀಗೆ ಇವೆರಡೂ ಸೇರಿ ಒಂದು ಭಾಗವಾಗುವುದು. ಸತ್ವರಜಸ್ಸಂಬಂಧವಾದ ಸಾರಪದಾರ್ಥವು ಭಗವದ್ಭಕ್ತರಿಗೆ ಸುಖಕರವಾಗಿರುವುದರಿಂದ "ಚಿತ್" ಎಂದು ಹೆಸರಾಗುವುದು, ತಾಮಸ ರಾಜಸ ಸಂಬಂಧವಾದ ಅಸಾರ ಪದಾರ್ಥವು ನೀಚರಿಗೆ ಚೆನ್ನಾಗಿ ಗೋಚರವಾಗುವುದರಿಂದ "ಪ್ರಚುರ" ವೆನಿಸಿಕೊಳ್ಳುವುದು. ಅಂತು, ಈ ನಾಲ್ಕು ದ್ವಂದ್ವಗಳು ಆ ೧೮ ರಸಗಳಲ್ಲಿ ಅರ್ಧ ಸಾತ್ವಿಕ ರಾಜರಸವಾಗಿಯೂ, ಅರ್ಧತಾಮಸರಾಜಸವಾಗಿಯೂ ಎರಡು ಭಾಗವಾಗಿರುವುದರಿಂದ ಸಾರಾಸಾರಾದಿ ನಾಲ್ಕು ದ್ವಂದ್ವಗಳಲ್ಲಿ **ಸಾರಾದಿಗಳು ಸಾತ್ವಿಕರಾಜಸಕ್ಕೂ, ಅಸಾರಾದಿಗಳು ರಾಜಸತಾಮಸಕ್ಕೂ ಸೇರಿ**

ರುವುವು. ಆದ್ದರಿಂದ ಈ ನಾಲ್ಕು ದ್ವಂದ್ವಗಳನ್ನು 18 ರಿಂದ ಗುಣಿಸಲು $4 \times 18 = 72$ ಆಗುವುದು. ಈ 72 ರಸಗಳಲ್ಲಿ ಒಂದೊಂದರಲ್ಲಿ ವಿಶ್ವಾದಿ ಸಹಸ್ರ ಭಗವದ್ರೂಪಗಳನ್ನು ಚಿಂತಿಸಬೇಕು. ಅಂತು ೭೨೦೦೦ ಸಂಖ್ಯಾಕವಾದ್ದರಲ್ಲಿ ಲಕ್ಷ್ಮೀಪತಿಯಾದ ಶ್ರೀಪರಮಾತ್ಮನು ನಮ್ಮ ಶರೀರದಲ್ಲಿ ೭೨೦೦೦ ರಸರೂಪದಿಂದಲೂ, ಭೋಜ್ಯವಾದ ಪದಾರ್ಥಗಳಲ್ಲಿಯೂ ಇರುತ್ತಾನೆಂದು ಚಿಂತಿಸಿ, ಭೋಜನಮಾಡಬೇಕು ॥ ೪ ॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :-

ಈಗ ಹಿಂದಿನ ಪದ್ಯದಲ್ಲಿ ಉದಕಗತ ಷಡ್ರಸಗಳು ಸತ್ವಾದಿ ಭೇದದಿಂದ ಆಗತಕ್ಕಂಥ ಅಷ್ಟಾದಶರೂಪಗಳನ್ನು ದ್ವಾಸಪ್ತತಿಸಹಸ್ರ ನಾಡಿಗತ ರಸನಾಮಕ ರೂಪಗಳನ್ನು ಭೋಜ್ಯಪದಾರ್ಥಗತ ರಸರೂಪಗಳನ್ನೂ ಸಹ ವಿವರದಿಂದ ತಿಳಿದು, ಭೋಜನಮಾಡತಕ್ಕದ್ದೆಂದು ಸೌಹಾರ್ದದಿಂದ ಅಧಿಕಾರಿಗಳಿಗೆ ಪುನಃ ವಿವರದಿಂದ ತಿಳಿಸುತ್ತಾರೆ. "ಆರು ರಸ"- ಎಂಬ ಪದ್ಯದಿಂದ.

ಮಧುರ, ಆಮ್ಲ, ಲವಣ, ಕಟು, ಕಷಾಯ ಮತ್ತು ತಿಕ್ತ ಎಂಬಂಥ ಆರು ರಸಗಳ ಒಳಗೆ ಸಾರಾದಿಷಡ್ರಸಗಳು ಇರುತ್ತವೆಂದು ಯಾವ ಆಧಾರದ ಮೇಲೆ ಹೇಳುತ್ತಾರೆಂದರೆ, ಸುಳಾದಿ, **ಉತ್ತಂಟಿ ಶ್ರೀವಿಜಯದಾಸರಾಜ್ಞೀ "ನಾರಿಲಿ ಮಧುರಾನೇ ಪ್ರಾಮುಖ್ಯವೆನಿಸುದು..............................................................ಸಾರಭೂತವಾದ ಚಿತ್ರ್ಯಚತುರ ಸ್ವೀಕರಿಪ"॥** (ಈ ಸುಳಾದಿಯ ಪೂರ್ಣಪಾಠವನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ. ನೋಡುವುದು) ಎಂದು ಹೇಳಿದ ಸುಳಾದಿಯ ಅರ್ಥವನ್ನೇ ಇಲ್ಲಿ ಪದ್ಯರೂಪದಿಂದ ಹೇಳಿರುತ್ತಾರೆ.

ಸತ್ವಾದಿಭೇದದಿಂದ ಆರುಮೂರು [ಹದಿನೆಂಟು] ರಸಗಳು ಆಗಿರೋದು. ಈ ಸಾರಾಖ್ಯರಸದಲ್ಲಿ [ಇಲ್ಲಿಂದ ಪ್ರಾರಂಭಿಸಿ **ಸ್ವಯಮೇವ ಹರಿರ್ಭುಂಕ್ತೇ ಸರ್ವಾನ್ ಸರ್ವವಿಲಕ್ಷಣಾನ್||**"— ಎಂಬ

**ಸತ್ತತ್ವರತ್ನಮಾಲೆಯ** ಪ್ರಮಾಣವಚನದವರೆಗೂ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ. ಪುನರಾವರ್ತನೆಯಾಗುವುದರಿಂದ ಮುದ್ರಿಸಿಲ್ಲ. ಅಲ್ಲಿ ನೋಡುವುದು)

ಪೂರ್ವೋಕ್ತ ಪ್ರಮಾಣಗಳ ರೀತ್ಯಾ ಒಂದೊಂದು ರಸದಲ್ಲೇ ಅನಂತ ರಸಗಳು ಸಿದ್ಧವಾಯಿತು. ನಾನು ಅಲ್ಪಮತಿಯಾದ ಪ್ರಯುಕ್ತ ಈ ಸಾರಾದಿಷಡ್ರಸಗಳಲ್ಲಿ ಎಷ್ಟೆಷ್ಟು ರಸಗಳು ಹೊರಡುತ್ತವೆಯೋ ಅಷ್ಟು ನನಗೆ ತೋರದು, ಮಹಂತರೇ ನಿರ್ಣಯಿಸತಕ್ಕದ್ದು ಎಂದು ಅನಂತಾನಂತ ವಿಜ್ಞಾಪನಾ ಮಾಡಿಕೊಳ್ಳುತ್ತೇನೆ. ಚಿತ್ರಚುರ ಎಂದರೆ "ಜ್ಞಾನಪ್ರಚುರ" ಎಂದರ್ಥ. ಈರಧಿಕ ಎಪ್ಪತ್ತುಸಾವಿರ ರಸರೂಪನಾಗಿ ಲಕ್ಷ್ಮೀರಮಣನು [ಮಾರಮಣನು] ದ್ರವರೂಪನೆಂದೆನಿಸುತ್ತಾನೆ. [ರಸಾಖ್ಯರೂಪ].

**"ಗರಳದ್ರವಪಾರದೇಷು ರಸಸ್ಯಾತ್"** ಎಂದು **ರತ್ನಮಾಲಾನಿಘಂಟು.** ಕಿಂಚ ರಸ ಎಂಬಂಥ ವರ್ಣದ್ವಯದಿಂದ ವಾಮಾಂಕರೀತಾ ನಾಡೀಗತ ಭಗವದ್ರೂಪಗಳು ಎಪ್ಪತ್ತೆರಡು ಸಾವಿರ ಎಂದು ಹೇಳುತ್ತಾರೆ [ರ=೨. ಸ=೭. ವಾಮಾಂಕಕ್ರಮದಿಂದ ೭೨ ಸಂಖ್ಯಾಕವಾಗುವುದು.] ಇಲ್ಲಿ "ಸಹಸ್ರ" ಎಂಬ ಸಂಖ್ಯೆಗೆ ಆಧಾರ : **ಉಕ್ತಂಚ ಆನಂದಮಯಾಧಿಕರಣ ಸುಧಾಯಾಂ– "ಭೀಮಸೇನಃ"–ಭೀಮಃ, ಬಲಭದ್ರೋಬಲಃ. ಸತ್ಯಭೀಮಾಸತ್ಯ, ಕಾಕಮಾಚೀ ಮಾಚೀ, ಇತ್ಯಾದಿನಾಮ್ನೈಕದಶೇ ನಾಮಗ್ರಹಣಂ ಎಂಬ ಪ್ರಮಾಣಾನುಸಾರ** ಎಪ್ಪತ್ತೆರಡು ಸಾವಿರ ಸಂಖ್ಯಾ ಆಯಿತೆಂದು ತಿಳಿಯತಕ್ಕದ್ದು. ಇಂಥ ನಾಡೀಗತ ಭಗವದ್ರೂಪಗಳು ನೈರಂತರದಲ್ಲಿ ಅವಶ್ಯೋಪಾಸನ ಮಾಡತಕ್ಕದೆಂದು ಪ್ರಮಾಣಃ.

**ಉಕ್ತಂಚ ಐತರೇಯ ಭಾಷ್ಯೇ :—**

**"ದ್ವಾಸಪ್ತತಿ ಸಹಸ್ರಾಣಾಂ ರೂಪಾಣಾಂ ಪರ್ಯೋಪಾಸನಾತ್ ||** ಎಂತ ಇರೋಣದರಿಂದ ಹೀಗೆ ತಿಳಿದು ಉಪಾಸನಾ ಮಾಡತಕ್ಕದೆಂದು ಪೂರ್ವೇಣಾನ್ವಯ: ‖ ೪ ‖

## (೪) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :—

ಮೇಲೆ ಹೇಳಿದ ಸಿಹಿ ಮೊದಲಾದ ಆರು ರಸಗಳು, ಸತ್ವ, ರಜಸ್ಸು ಮತ್ತು ತಮೋಗುಣ ಭೇದಗಳಿಂದ ಹದಿನೆಂಟುರಸಗಳಾಗುವುವು. ಈ ಹದಿನೆಂಟು ರಸಗಳನ್ನು ಸವಿ, ಇಂಪು, ಸುವಾಸನೆ ಮತ್ತು ಶುಚಿ ಎಂಬ ನಾಲ್ಕು ರಸಾಂತರ್ಗತ ರೂಪಗಳಿಂದ ಹೆಚ್ಚಿಸಿ, ಗುಣಿಸಿದರೆ, ಎಪ್ಪತ್ತೆರಡು ರಸಗಳಾಗುವುವು. ಈ ಒಂದೊಂದು ರಸವನ್ನು ವಿಶ್ವಾದಿ ಸಹಸ್ರರೂಪಗಳಿಂದ ಗುಣಿಸಿದರೆ, ಎಪ್ಪತ್ತೆರಡುಸಹಸ್ರರೂಪಗಳಾಗುತ್ತವೆ. ೭೨೦೦೦ ನಾಡಿಗಳಲ್ಲಿರುವ ಲಕ್ಷ್ಮೀಪತಿಯ ಈ ರಸಸ್ವರೂಪವನ್ನು ಚಿತ್ರಚುರ ಎಂದರೆ, ಶುದ್ಧ ಪೂರ್ಣಜ್ಞಾನಸ್ವರೂಪವಾದದ್ದನ್ನು **ಸಾರ** ಎಂದರೆ ಕ್ಷೀರಾದಿಗತರೂಪ. **ಅಸಾರ** ಎಂದರೆ ತೃಣಾದಿಗತರೂಪ, **ನೀತ** ವೆಂದರೆ ಗೊತ್ತಾಗಿರುವ ಧಾನ್ಯಾದಿಗತ ರೂಪ, **ಅಪ್ರಚುರ** ಎಂದರೆ, ಪಾನವಿಶೇಷವುಳ್ಳ ಶರ್ಕರಾದಿಗತ ರೂಪ, **ಖಂಡ** ಎಂದರೆ, ಒಂದೊಂದಗಳಿನಲ್ಲಿ ಅನಂತಾಂಶದಿಂದಿರುವ ರೂಪ. **ಅಖಂಡ** ಎಂದರೆ ಭೋಜನಪೂರ್ತಿ ಗ್ರಾಸಗತರೂಪ, ಸಹ ಆರು ಶ್ರೀಹರಿ ರೂಪಗಳ್ನು, ಭೋಜನಮಾಡುವ ಪದಾರ್ಥಗಳಲ್ಲಿ ತಿಳಿದು, ಭುಂಜಿಪುದು ಎಂದರೆ, ನಾಡೀಗತ, ಭೋಜನಪದಾರ್ಥಗತ ಪೂರ್ವೋಕ್ತ ೭೨೦೦೦ ರೂಪಗಳನ್ನು ಸ್ಮರಿಸುವುದರಿಂದ, ಜೀವಭೋಗ್ಯರಸಗಳು ಭಗವತ್ಸಂಬಂಧ ದ್ವಾರಾ ತದ್ಭುಕ್ತಿಶೇಷವಾಗುದೆಂದು ತಾತ್ಪರ್ಯ ॥ ೪ ॥

### ಸರ್ವವ್ಯಾಖ್ಯಾನಸಾರಸಂಗ್ರಹ :

ಉಪ್ಪು, ಹುಳಿ, ಖಾರ, ಸಿಹಿ, ಕಹಿ ಮತ್ತು ಒಗರು ಎಂದು ರಸಗಳು ಆರು ಪ್ರಕಾರ ಇವೆ. ಸತ್ವ, ರಜೋ ಮತ್ತು ತಮೋಗುಣಗಳೆಂದು ಗುಣತ್ರಯಗಳು, ಈ ಷಡ್ರಸಗಳನ್ನು ಗುಣತ್ರಯಗಳಿಂದ ಹೆಚ್ಚಿಸಿದರೆ, ಅಂದರೆ ಗುಣಿಸಿದರೆ,೬ × ೩ = ೧೮ ರಸವಿಭಾಗಗಳಾಗುವುವು. [ಆರುಮೂರಾಗಿಹುವು]

ಈ ಹದಿನೆಂಟು ರಸಗಳಲ್ಲಿ ಒಂದೊಂದರಲ್ಲಿಯೂ ಪುನಃ ನಾಲ್ಕು ಪ್ರಕಾರ ವಿಭಾಗ:—

1. ರಸನೇಂದ್ರಿಯಕ್ಕೆ ಆನಂದಪ್ರದವಾದ ಸವಿ ಎಂಬ **'ಸುರುಚಿ'**

2. ನೇತ್ರೇಂದ್ರಿಯಕ್ಕೆ ಆನಂದದಾಯಕವಾದ ಇಂಪು ಎಂಬ **'ರುಚಿರ'.**

3. ನಾಸಿಕೇಂದ್ರಿಯಕ್ಕೆ ಸಂತೋಷ ಕೊಡುವ ಸುವಾಸನೆ ಎಂಬ **'ಸುಗಂಧ'.**

4. ತ್ವಗಿಂದ್ರಿಯಕ್ಕೆ ಆನಂದಪ್ರದವಾದ **'ಶುಚಿ'** ಎಂಬ ರಸವಿಶೇಷ.

ಇಂತು ಮೇಲಿನ ೧೮ ರಸಭೇದಗಳನ್ನು ಈ ನಾಲ್ಕು ರಸಾಂತರ್ಗದ ರೂಪಗಳಿಂದ ಗುಣಿಸಿದರೆ, ೧೮ × ೪ = ೭೨ ಆಗುವುದು.

ಈ ಪ್ರಕಾರ ೭೨ ರಸವಿಶೇಷಗಳನ್ನು ವಿಶ್ವಾದಿ ಸಹಸ್ರರೂಪಗಳಿಂತ ಹೆಚ್ಚಿಸಿದರೆ ಆಗ ೭೨ × ೧೦೦೦ = ೭೨೦೦೦ ರೂಪಗಳಾಯಿತು.

ಅಂದರೆ ಷಡ್ರಸಗಳು × ಗುಣತ್ರಯಗಳು × ರಸಾಂತರ್ಗತ ರೂಪ ಚತುಷ್ಟಯಗಳು × ವಿಶ್ವಾದಿ ಸಹಸ್ರರೂಪಗಳು = ಎಪ್ಪತ್ತೆರಡು ಸಹಸ್ರ ಸಂಖ್ಯಾಕವಾಯಿತು.

ಹೀಗೆ ಶರೀರದಲ್ಲಿ ಓತಪ್ರೋತವಾಗಿ ೭೨೦೦೦ ನಾಡಿಗಳ ವ್ಯೂಹ ಈ ನಾಡ್ಯಭಿಮಾನಿ ದೇವತೆಗಳು ೭೨೦೦೦ ಇದ್ದಾರೆ. ಪ್ರತಿ ಅಭಿಮಾನಿ ದೇವತೆಗಳಲ್ಲಿ ನಿಯಾಮಕರಾಗಿರುವ ಶ್ರೀ ಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ ಶ್ರೀ ಹರಿಯು ಬೃಹತೀನಾಮಕನಾಗಿ ಭೋಜ್ಯಪದಾರ್ಥಗತ ರಸಗಳನ್ನು ವಿಧಾಗಮಾಡಿ. ಜಡರಸ ದ್ವಾರಾ ದೇಹಕ್ಕೆ ಉಪಚಯ ಮಾಡಿಸುತ್ತಾ, ಶರೀರದ ಪುಷ್ಟಿ ಮತ್ತು ಬೆಳವಣಿಗೆಗೆ ಕಾರಣನಾಗಿ ದೇಹಸಂರಕ್ಷಣೆ ಮಾಡುತ್ತಿರುವನು. ಇದೇ ಭೋಜನರಸವಿಭಾಗ ಸಂಧಿಯ ಮುಖ್ಯಾರ್ಥವು.

ಅಲ್ಲದೆ **"ರಸ"** ಎಂಬ ಶಬ್ದಾರ್ಥವನ್ನು ಸಂಖ್ಯಾಕ್ರಮದಿಂದಲೂ ವಿವರಿಸಬಹುದು.

[೧] "ರ" ಕಾರವು ಅವರ್ಗೀಯ ವ್ಯಂಜನಾಕ್ಷರಗಳಲ್ಲಿ ೨ನೆಯಸ್ಥಾನದಲ್ಲಿದೆ.
[೨] "ಸ" ಕಾರವು ಅವರ್ಗೀಯ ವ್ಯಂಜನಾಕ್ಷರಗಳಲ್ಲಿ ೭ನೆಯಸ್ಥಾನದಲ್ಲಿದೆ,

ಅಲ್ಲಿಗೆ ೨೭ ಎಂಬ ಸಂಖ್ಯೆಯಾಯಿತು. **"ಅಂಕಾನಾಂ ವಾಮತೋ-ಗತಿಃ"** ಎಂಬ ನಿಯಮದಂತೆ ವಾಮಾಂಕಕ್ರಮದಿಂದ ೭೨ ಆಗುವುದು. ವಿಶ್ವಾದಿಸಹಸ್ರ ರೂಪಗಳಿಂದ ಯುಕ್ತವಾಗಿ ರಸಪದವಾಚ್ಯ ಭಗವದ್ರೂಪಗಳು ೭೨೦೦೦ ಆಗುವುವು.

ಪೂರ್ವೋಕ್ತ ೧೮ ರಸವಿಭಾಗಳಲ್ಲಿ ನಾಲ್ಕು ಬಗೆಯ ದ್ವಂದ್ವ ರಸವಿಶೇಷ ಗಳು ಅಡಕವಾಗಿವೆ. ಅವುಗಳ ವಿವರ ಇಂತಿದೆ :-

(೧) ಸಾರ ಮತ್ತು ಅಸಾರ (೨) ನೀತ ಮತ್ತು ಅಪ್ರಚುರ-(3) ಖಂಡ ಮತ್ತು ಅಖಂಡ ಮತ್ತು (4) ಚಿತ್ ಮತ್ತು ಪ್ರಚುರ.

ಇವುಗಳ ವಿವರ :—

(೧) ಕ್ಷೀರಾದಿಗತ ರಸವಿಶೇಷವು **"ಸಾರ"** ವೆಂದೆನಿಸುವುದು. ಇದು ಸತ್ವಗುಣವನ್ನು ಆಶ್ರಯಿಸಿದೆ. ಸತ್ವಗುಣ+ರಜೋಗುಣದ ಅರ್ಧಾಂಶ ಸೇರಿ "ಸಾರ"ವುಂಟಾಗಿದೆ.

ತೃಣಾದಿಗತರಸವಿಶೇಷವು **"ಅಸಾರ"**ವೆಂದು ಕರೆಯಿಸಲ್ಪಡುವುದು. ಇದು ತಮೋಗುಣವನ್ನು ಆಶ್ರಯಿಸಿದೆ. ತಮೋಗುಣ+ರಜೋಗುಣದ ಉಳಿದರ್ಧ ಭಾಗಸೇರಿ "ಅಸಾರ"ದ ಉತ್ಪತ್ತಿ.

(೨) ಇಂತಹುದೇ ಎಂದು ನಿರ್ದಿಷ್ಟವಾದ (ಗೊತ್ತಾದ) ರಸ ವಿಶೇಷಕ್ಕೆ **"ನೀತ"** ಎಂದು ಹೆಸರು. ಉದಾಹರಣಾಗಿ ಸಕ್ಕರೆ, ಬೆಲ್ಲ ಮುಂತಾದ ಪದಾರ್ಥಗಳಲ್ಲಿ "ಸಿಹಿ" ಅಥವಾ "ಮಧುರ"ವು ನೀತರಸವೆಂದೆನಿಸುವುದು. ದ್ರವ್ಯಗತ ಪ್ರಮುಖ ರಸವು, ಇದು ಧಾನ್ಯಾದಿಗತರಸ ವಿಶೇಷವು.

ದ್ರವ್ಯಗತ ಪ್ರಮುಖರಸವಾದ ನೀತರಸಕ್ಕೆ ಸಂಬಂಧಿಸಿದಂತೆ, ರಸ ನೇಂದ್ರಿಯಕ್ಕೆ ನೇರವಾಗಿ ಗೋಚರಿಸದ 5 ಅವಶಿಷ್ಟ ರಸಗಳು. ದೃಷ್ಟಾಂತವಾಗಿ

ಹುಣಸೇಹಣ್ಣಿನಲ್ಲಿ "ಹುಳಿ"ಯು ನೀತವಾದದ್ದು. ಉಳಿದ ಸಿಹಿ, ಕಹಿ ಮುಂತಾದ ಐದು ರಸಗಳು ಮೇಳನವಾಗಿದ್ದರೂ ನೇರವಾಗಿ ರಸನೇಂದ್ರಿಯಕ್ಕೆ ಗೋಚರವಲ್ಲ. ಇದಕ್ಕೆ "**ಅಪ್ರಚುರ**" ಎಂದು ಹೆಸರು. ಅಂದರೆ ಪ್ರಚುರವಲ್ಲದ್ದು (ಅಗೋಚರ). ಇದು ಪಾನವಿಶೇಶವುಳ್ಳ ಶರ್ಕರಾದಿಗತ ರಸರೂಪವು.

(೩) ಪೃಥಕ್ಕಾಗಿರುವ (ಸೂಕ್ಷ್ಮಾಂಶ) ದ್ರವ್ಯಗತ ಅಂಶವಿಶೇಷಗಳಿಗೆ "**ಖಂಡ**" ಎಂದು ವ್ಯವಹಾರವು. ಉದಾಹರಣೆಗೆ, ಅನ್ನದಲ್ಲಿನ ಪ್ರತಿಯೊಂದು ಅಗಳಿನಲ್ಲಿರುವ ರಸವಿಶೇಷ. ಇದರಲ್ಲಿ ಶ್ರೀ ಪರಮಾತ್ಮನು ಅನಂತಾಂಶದಿಂದ ಪೂರ್ಣನಾಗಿದ್ದಾನೆ. ಇದು ಅನಂತಾಂಶಯುಕ್ತವಾದ ರಸರೂಪವಿಶೇಷವು. ಸಮಗ್ರ ಅಥವಾ ಪೂರ್ಣರೂಪಕ್ಕೆ "**ಅಖಂಡ**"ವೆಂದು ಹೆಸರು. ಪದಾರ್ಥಾಂತರದ ಸಮ್ಮೇಳನದಿಂದ ರುಚಿಭೇದ ಉಂಟಾಗುವುದೇ "ಖಂಡರಸವು" ರಸಾಂತರವಾಗದಿರುವ ಪೂರ್ಣ ರಸವಿಶೇಷವು "ಅಖಂಡರಸವು"

(೪) "**ಚಿತ್**" ಎಂದರೆ ಜ್ಞಾನವು. ಜ್ಞಾನಾನಂದಸ್ವರೂಪಿಯಾದ ಶ್ರೀಪರಮಾತ್ಮನು ಈ ಶುಭಾಖ್ಯರಸವನ್ನು ಸ್ವೀಕರಿಸುವುದರಿಂದಲೇ, ಇದಕ್ಕೆ "ಚಿತ್" ಎಂದು ಹೆಸರು. ಸತ್ವಗುಣಸಂಬಂಧವಾದ ಈ ಸಾರಪದಾರ್ಥವು ಭಗವದ್ಭಕ್ತರಿಗೆ ಭೋಜನಕ್ರಿಯೆಯಿಂದ ಸುಖಕರವಾಗಿರುವುದು.

ತಮೋ ಮತ್ತು ರಜಸ್ಸಂಬಂಧವಾದ ಅಸಾರಪದಾರ್ಥವು "**ಪ್ರಚುರ**"ವೆನಿಸುವುದು. ನೀಚರಿಂದ ಗ್ರಾಹ್ಯ.

ಇಂತು ೧೮ ರಸವಿಭಾಗಗಳಲ್ಲಿ ನಾಲ್ಕು ಪ್ರಕಾರವಾದ ರಸದ್ವಯಗಳ, ಯುಕ್ತವಾಗಿ, ೧೮ × ೪ = ೭೨ ವಿಭಾಗಗಳಾಗಿ, ವಿಶ್ವಾದಿ ಸಹಸ್ರರೂಪಗಳಿಂದ ೭೨೦೦೦ ರಸಾಖ್ಯರೂಪಗಳಾಗುವುವು. ಇಂತು ರಸಪದವಾಚ್ಯನಾದ ರಸಾಖ್ಯರೂಪನಾದ ಶ್ರೀ ಲಕ್ಷ್ಮೀಪತಿಯು ದೇಹಗತ ೭೨೦೦೦ ನಾಡಿಗಳಲ್ಲಿ ಸಂಚರಿಸುತ್ತಾ, ಕ್ರೀಡಾವಿಶಿಷ್ಟನಾಗಿ, ದೇಹಕ್ಕೆ ಉಪಚಯಕೊಡುತ್ತಾ, ಸಾಧನ ಶರೀರವಾದ ಈ ದೇವಮಂದಿರವನ್ನು ಸಂರಕ್ಷಿಸುತ್ತಿರುವ ಎಂತಹ ಪರಮ ಕರುಣಾಳು ! ಹೀಗೆ ೭೨೦೦೦ ಪ್ರಕಾರವಾಗಿ ಶ್ರೀ ಪರಮಾತ್ಮನ ರಸಾಖ್ಯ

ರೂಪಗಳನ್ನು ಈ ಶರೀರಗತ ನಾಡಿಗಳಲ್ಲಿಯೂ, ತದಭಿಮಾನಿ ದೇವತೆಗ ಳಲ್ಲಿಯೂ ಮತ್ತು ಸುಭೋಜನ ಪದಾರ್ಥಗಳಲ್ಲಿಯೂ ಚಿಂತಿಸುತ್ತಾ ಅನುಸಂಧಾನಪೂರ್ವಕವಾಗಿ ಭೋಜನಮಾಡುವ ಕ್ರಿಯೆಯೇ ಮಹಾಸುಯಜ್ಞ ವೆನಿಸುವುದು. ಈರೀತಿ ತಿಳಿದು ಜ್ಞಾನಿಗಳು ಭೋಜನಮಾಡುವರು ॥೪॥

## ಪದ್ಯ (೫)

**ಮೂಲ :**

**ಕ್ಷೀರಗತ ರಸರೂಪಗಳು ಮು ।**
**ನ್ನೂರು ಮ್ಯಾಲೈವತ್ತುನಾಲಕು ।**
**ಚಾರು ಘೃತಗತ ರೂಪಗಳು ಇಪ್ಪತ್ತರೊಂಭತ್ತು ॥**
**ಸಾರ ಗುಡದೊಳಗೈದು ಸಾವಿರ ।**
**ನೂರವೊಂದು ಸುರೂಪ ದ್ವಿಸಹ ।**
**ಸ್ರಾರೆರಡು ಶತ ಪಂಚವಿಂಶತಿ ರೂಪಫಲಗಳಲಿ ॥ ೫ ॥**

**ಅವತರಣಿಕೆ :—**

ಹಾಲಿನಲ್ಲಿ, ತುಪ್ಪದಲ್ಲಿ ಮತ್ತು ಬೆಲ್ಲ ಮುಂತಾದ ಶರ್ಕರಾದಿ ವಸ್ತು ಗಳಲ್ಲಿ ಅಂತರ್ಗತವಾಗಿರುವ ಭಗವದ್ರೂಪಗಳು, ಅವುಗಳ ಸಂಖ್ಯಾವಿವರ ಗಳನ್ನು ಮತ್ತು ಚಿಂತನಾಕ್ರಮವನ್ನೂ ಹೇಳುತ್ತಾರೆ. "ಕ್ಷೀರಗತ" ಎಂಬ ಈ ಐದನೆಯ ಪದ್ಯದಿಂದ ॥೫॥

**ಪ್ರತಿಪದಾರ್ಥ :**

**ಕ್ಷೀರಗತ**=ಹಾಲಿನಲ್ಲಿರುವ (ಪ್ರಥಮ ಹಂತದಲ್ಲಿ ಎಳೇಹೀಚುಕಾಯಿ ಯಾಗಿರುವುದು. ಮುಂದೆ ರಸಭರಿತಫಲವಾಗುವುದು ಎಳೇಕಾಯಿಯಾಗಿರು ವಾಗ ವಿದ್ಯಮಾನವಾಗಿರುವ ರಸವಿಶೇಷಕ್ಕೆ "**ಕ್ಷೀರರಸ**"—ಎಂದು ಸಾಂಕೇತ) ಈ ರಸವಿಶೇಷಕ್ಕೆ "**ವಿಶದ**"- ಎಂದು ನಾಮಧೇಯ. ಈ ವಿಶದ ಸಾಂಕೇತ ರಸಗತ, ರಸಪದದ ಭಗವದ್ರೂಪಗಳು ೩೫೪ ಆಗುವುವು. **ಮುನ್ನೂರು**

**ನ್ಯಾಲೆ**=ಮುನ್ನೂರಾದಮೇಲೆ **ಐವತ್ತನಾಲಕು**=೫೪, ಅಂದರೆ ೩೫೪, ಸಂಖ್ಯೆಯಾಯಿತು (ವಿ=೪, ಶ=೫, ದ=೩ ವಾಮಾಂಕ ಕ್ರಮದಿಂದ ೩೫೪) **ಚಾರು**=ಮನೋಜ್ಞವಾದ (ಮನೋಹರ) **ಘ್ಸೃತರಸರೂಪಗಳು**= ತುಪ್ಪದಲ್ಲಿರುವ ಭಗವದ್ರೂಪಗಳು (ಎಳೇಕಾಯಿ ಸ್ವಲ್ಪ ಬಲಿತು, ಕಾಲಾನಂತರ ಪರಿಣಮಿಸುವ ರಸವಿಶೇಷಕ್ಕೆ **"ಘೃತರಸ"**—ಎಂದು ಸಾಂಕೇತ) ಈ ರಸವಿಶೇಷವನ್ನು **"ಸ್ಥಿರ"**—ಎನ್ನುವರು. ಇದರಲ್ಲಿ ಭಗವದ್ರೂಪಗಳ ಸಂಖ್ಯೆ ೨೯, **ಇಪ್ಪತ್ತೊಂಭತ್ತು**=೨೯ ಎಂಬ ಸಂಖ್ಯೆ (ಸ್ಥಿ- ಸ=೭ ಮತ್ತು ಥ=೨ ಸಂಯುಕ್ತಾಕ್ಷರವಾದ್ದರಿಂದ ೭+೨=೯ ಎಂದು ಪರಿಗಣನೆ. ರ=೨ ಅಲ್ಲಿಗೆ ೯೨ ಆಗುವುದು ವಾಮಾಂಕ ಕ್ರಮದಿಂದ ೨೯ ಸಂಖ್ಯೆಯಾಗುವುದು) **ಸಾರಗುಡದೊಳು**=ಸಾರ ವಿಶಿಷ್ಟವಾದ ಬೆಲ್ಲದೊಳಗೆ [ಫಲವು ಇನ್ನೂ ಬಲಿತ ಮೇಲೆ ಫಲಗತರಸಕ್ಕೆ **"ಗುಡರಸ"**—ಎಂದು ಸಾಂಕೇತ] ಈ ರಸವಿಶೇಷಕ್ಕೆ **"ತೀಕ್ಷ್ಣ"**—ಎಂದು ಹೆಸರು **ಐದುಸಾವಿರದನೂರು ಒಂದು ಸುರೂಪ**= ಇಂತಹ ಗುಡರಸಾತ್ಮಕವಾದ "ತೀಕ್ಷ್ಣ" ರಸದಲ್ಲಿ ೫೧೦೧ ಸಮೀಚೀನವಾದ ಭಗವದ್ರೂಪಗಳಿವೆ [ತೀ=೧, ಕ್ಷ=೧೦ ಮತ್ತು ಣ=೫ ಅಂದರೆ ೧೧೦೫ ಆಯಿತು. ವಾಮಾಂಕ ಕ್ರಮದಿಂದ ೫೧೦೧] **ಫಲಗಳಲಿ**=ಫಲಗಳಲ್ಲಿ [ಚೆನ್ನಾಗಿ ಪಕ್ವವಾಗಿರುವ ಫಲಗತರಸಕ್ಕೆ **"ನಿರಹರ"**—ಎಂದು ಹೆಸರು]. ಈ ನಿರಹರವೆಂಬ ಫಲಗತರಸವಿಶೇಷದಲ್ಲಿ **ದ್ವಿಸಹಸ್ರ**=ಎರಡು ಸಾವಿರ **ಆರೆರಡು ಶತ** =ಎಂಟು ನೂರು [ಆರೆರಡು=೬+೨=೮ ಶತ ಎಂದರೆ ನೂರು.] **ಪಂಚವಿಶಂತಿ**=ಇಪ್ಪತ್ತೈದು ಅಂದರೆ, ೨೮೨೫ ಭಗವದ್ರೂಪಗಳಿವೆ. [ನಿ=೫, ರ=೨, ಹ=೮ ಮತ್ತು ರ=೨, ಅಲ್ಲಿಗೆ ೫೨೮೨ ಆಯಿತು ವಾಮಾಂಕ ಕ್ರಮದಿಂದ ೨೮೨೫ ಆಗುವುದು]

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪೂರ್ವೋಕ್ತ ಆಮ್ಲಾದಿ ಆರು ರಸಗಳಿಗೆ ಅಧಿಷ್ಠಾನಭೂತಗಳಾದ ಫಲಾದಿಗಳು. ತದ್ಗತ ರಸಗಳು ಪಕ್ವವಾಗಬೇಕಾದರೆ ಆದಿಯಾರಭ್ಯ ಅಂತ್ಯದ

ವರೆಗೆ ಅದರದರಲ್ಲಿ ವ್ಯಕ್ತವಾಗತಕ್ಕ ರಸಗಳಿಗೆ ಸಾಂಕೇತನಾಮಗಳ ಅಕ್ಷರವಾಚ್ಯ ಭಗವದ್ರೂಪಗಳನ್ನು ಹೇಳುತ್ತಾರೆ ಈ ಪದ್ಯದಿಂದ

[೧] ಒಂದು ಫಲವಾಗಬೇಕಾದರೆ ಪ್ರಥಮದಲ್ಲಿ ಎಳೇಹೀಚು ಕಾಯಾಗಿ, ಇರೋಕಾಲದಲ್ಲಿ ವಿದ್ಯಮಾನರಸ ದಾವದದೇ ಅದಕ್ಕೆ **ಕ್ಷೀರರಸ** ಎಂತ ಸಾಂಕೇತ. ಅದಕ್ಕೆ ಪ್ರತಿನಾಮ **"ವಿಶದ"** ಎಂತ ಹೆಸರು. ಈ ವಿಶದ ಸಾಂಕೇತ ರಸಗತ, ರಸಪದಶಬ್ದವಾಚ್ಯ ಭಗವದ್ರೂಪಗಳು ಎಷ್ಟು ಎಂದರೆ ಮೂನ್ನೂರಐವತ್ತನಾಲ್ಕು, ವಿಶದ ಎಂಬ ಅಕ್ಷರತ್ರಯ ಸಾಂಕೇತ ದಿಂದ [ವಿ-೪, ಶ-೫. ದ-೩] ೩೫೪ ರೂಪಗಳು, ಬಲದಿಂದ ಎಡಕ್ಕೆ ಲೆಕ್ಕ ಮಾಡಬೇಕು. **"ಅಂಕಾನಾಂ ವಾಮತೋಗತಿಃ"**— ಎಂಬ ನಿಯಮದ ಪ್ರಕಾರ.

[೨] ಅದೇ ಫಲ ಪೂರ್ವದಕ್ಕಿಂತಲೂ ಸ್ವಲ್ಪಕಾಲಾನಂತರ ಬಲಿತ ಮ್ಯಾಲೆ, ಆಗ ಇರತಕ್ಕ ರಸಕ್ಕೆ **"ಘೃತರಸ"**— ಎಂತ ಸಾಂಕೇತ. ಇದರ ಪ್ರತಿನಾಮ **"ಸ್ಥಿರ"** ಎಂತ. ಈ ಸ್ಥಿರ ಸಾಂಕೇತವಾದ ರಸಗತ ರಸಪದ ವಾಚ್ಯ ಭಗವದ್ರೂಪಗಳು ಇಪ್ಪತ್ತೊಂಬತ್ತು–ಮನೋಹರ ರೂಪಗಳು. [ಸ್ಥಿ—೯, ರ—೨] ೨೯ ರೂಗಳು. ಸ್ಥಿರ ಎಂಬ ಅಕ್ಷರಸಾಂಕೇತ ರೂಪಗಳು ಅಕ್ಷರದ್ವಯ ಯುಕ್ತವಾದದ್ದು.

[೩] ಈ ಪೂರ್ವೋಕ್ತಫಲ ಇನ್ನೂ ಸ್ವಲ್ಪ ಹೆಚ್ಚು ಕಾಲ ಬಲಿತ ನಂತರ ವಿದ್ಯಮಾನವಾಗಿರುವ ರಸಕ್ಕೆ **'ಗುಡರಸ"**— ಎಂತ ಸಾಂಕೇತ ಇದಕ್ಕೆ ಪ್ರತಿನಾಮ **"ತೀಕ್ಷ್ಣ"**–ಎಂತ. ಈ ತೀಕ್ಷ್ಣಸಾಂಕೇತವಾದ ರಸಗತ. ರಸಪದವಾಚ್ಯರೂಪಗಳು ಐದುಸಾವಿರದನೂರಾವಂದುರೂಪ[ಶ್ರೀ—೧. ಕ್ಷ—೧೦, ಣ—೫] ವಾಮಾಂಕಗತಿಯಿಂದ ೫೧೦೧ ಭಗವದ್ರೂಪಗಳಾಗುವುವು. ಹೀಗೆ ಶ್ರೀಪರಮಾತ್ಮನ ಸಮೀಚೀನವಾದ ಸಾರಭೂತ ರೂಪಗಳು ಇರೋದಾಗಿ ಅವೆ. ದ್ವಿಸಹಸ್ರ–ಎರಡುಸಾರ [೨೦೦೦]. ಆರೆರಡುಶತ–ಎಂಟನೂರು [೮೦೦], ಪಂಚವಿಂಶತಿ— ಇಪ್ಪತ್ತೈದು [೨೫] ರೂಪಗಳು. ಅಂದರೆ ೨೮೨೫ ಭಗವದ್ರೂಪಗಳು ಚೆನ್ನಾಗಿ ಪಕ್ವಾನಂತರ ಇರತಕ್ಕ **"ಫಲರಸ"**ದಲ್ಲಿ

ಇವೆ. ಇದಕ್ಕೆ ಪ್ರತಿನಾಮ "ನಿರಹರ" ಎಂತ [ನಿ–೫, ರ–೨, ಹ-೮, ರ-೨, =೨೮೨೫ ವಾಮಾಂಕ ಕ್ರಮದಿಂದ]

ಈ ಪೂರ್ವೋಕ್ತ ನಾಲ್ಕುರಸಗಳಲ್ಲಿ [ವಿಶದ-ಸ್ಥಿರ-ತೀಕ್ಷ್ಣ ಮತ್ತು ನಿರಹರ] ವರ್ಣಸಾಂಕೇತರೂಪಗಳು. ಖಂಡರೂಪಗಳು, ತದಾಕಾರರೂಪ ಗಳು, ಅಖಂಡರೂಪಗಳು, ಉಭಯವಿಧರೂಪಗಳು ಇರೋದಾಗಿ ಅವೆ. ೭೨೦೦೦ ರಸಭೇದಗಳು ಹ್ಯಾಂಗೆ ಆಯಿತೆಂದರೆ, ಅನೇಕ ಪ್ರಕಾರ ವಿಷಯ ದಿಂದ ಷಡ್ರಸಗಳು ಪರಸ್ಪರ ಮೇಳನವಾಗಿ ಸಂಸ್ಪೃಷ್ಟಗಳ ದೆಸೆಯಿಂದ ರಸ ಭೇದಗಳು ಉಂಟಾಗಿ ೭೨೦೦೦ ರಸಗಳು ಆಗೋದಾಗಿ ಅದೆ. ಆ ಭೇದಗಳು ಅಭಿಮಾನೀ ದೇವತೆಗಳಿಗೆ ವೇದ್ಯವು. ಶ್ರೀಪರಮಾತ್ಮನೇ ಬಲ್ಲನು. ಪ್ರಾಚುರ್ಯಾಪ್ರಾಚುರ್ಯದಿಂದ ಇರೋದಾಗಿ ಅದೇ ಎಂತ ತಾತ್ಪರ್ಯ ॥೫॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :

ಮೇಲಿನ ಪದ್ಯದಿಂದ ಸಾಮಾನ್ಯವಾಗಿ ಷಡ್ರಸಗತ ಭಗವದ್ರೂಪ ಗಳನ್ನು ಹೇಳಿ ಈಗ ಕ್ಷೀರಾದಿಗತ ಭಗವದ್ರೂಪಗಳನ್ನು ಪ್ರತ್ಯೇಕ ಪ್ರತ್ಯೇಕ ವಾಗಿ ಹೇಳುತ್ತಾರೆ. ಕ್ಷೀರದಲ್ಲಿನ ಮಧುರ ರಸದಲ್ಲಿ ೩೫೪ ಭಗವದ್ರೂಪ ಗಳನ್ನು ಚಿಂತಿಸಬೇಕು. ಉತ್ತಮವಾದ ತುಪ್ಪದೊಳಗೆ ಇಪ್ಪತ್ತೊಂದು ಭಗವದ್ರೂಪಗಳನ್ನೂ, ಬೆಲ್ಲದೊಳಗೆ ೫೦೦೦ ರೂಪಗಳನ್ನು ಮತ್ತು ಫಲಗತ ರಸಗಳಲ್ಲಿ ೨೮೨೫ ರೂಪಗಳನ್ನು ಚಿಂತಿಸಬೇಕು. ॥೪॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ ;

ಕಾದಿಚತುಃ ಚಾದಿಚತುಃ ಷ್ಟಾದಿಪಂಚ ತಾದಿಂಪಚ ಪಾದಿಪಂಚ ಯಾದಿ ದಶ—ಎಂಬಂಥಾ **ಗುರುವೃತ್ತಸಂಜ್ಞಾ**ವನ್ನು **"ಅಂಕಾನಾಂ ವಾಮತೋ-ಗತಿಃ"**–ಎಂಬಂಥ ವಚನವನ್ನು ಸಹ ಅನುಸರಿಸಿ ಪದ್ಮನಾಭತೀರ್ಥಾದಿ ಶಿಷ್ಯ ಚತುಷ್ಟಯರಿಗೆ **"ವಿಷ್ಣು"** ಶಬ್ದದಿಂದ **ಬ್ರಹ್ಮಸೂತ್ರ ೫೭೪** ಎಂದು ಹ್ಯಾಂಗ **ಶ್ರೀಸರ್ವಜ್ಞಾಚಾರ್ಯ**ರು ತಿಳಿಸಿಕೊಟ್ಟರೋ ತದ್ವತು ದಾಸಾರ್ಯರು

ಕ್ಷೀರಾದಿಪದಾರ್ಥಗಳಲ್ಲಿದ್ದಂಥ ಭಗವದ್ರೂಪಗಳನ್ನು ತಿಳಿಸುತ್ತಾರೆ. "**ಕ್ಷೀರಗತ**" ಎಂಬ ಈ ಪದ್ಯದಿಂದ.

(೧) ಕ್ಷೀರದಲ್ಲಿರೋದು ೩೫೪, (೨) ಘೃತದಲ್ಲಿ ೨೯. [೩] ಗುಡದಲ್ಲಿ ೫೧೦೧ ಮತ್ತು [೪] ಫಲದಲ್ಲಿ ೨೮೨೫ ಭಗವದ್ರೂಪಗಳ ಚಿಂತನಾಕ್ರಮ. ಅಂದರೆ ಕ್ಷೀರಾದಿವರ್ಣಗಳಿಗೆ ಸಂಖ್ಯಾ ಆಗತಕ್ಕದ್ದು - ಕ್ಷೀರ= ೨೧೦ [ಕ್ಷೀ=೧೦, ರ=೨, ವಾಮಾಂಕದಿಂದ ೨೦೧] ಘೃತ=೧೬ [ಘೃ= ೪+೨=೬ ಮತ್ತು ತ=೧, ವಾಮಾಂಕದಿಂದ ೧೬], ಗುಡ=೩೩ [ಗು=೩ ಡ=೩] ಮತ್ತು ಫಲ=ಫಲ=೩೨ [ಫ=೨, ಲ=೩—ವಾಮಾಂಕದಿಂದ ೩೨] ಈ ರೀತಿ ಸಂಖ್ಯಾ ಸೂಚಕವಾಗುತ್ತೆ, ಈ ಸಂಖ್ಯಾವ್ಯತ್ಯಾಸಕ್ಕೆ ಸಮಾಧಾನವನ್ನು ಆಯಾಯಾ ಪದಾರ್ಥಗತ ವಿಶದ, ಸ್ಥಿರ, ತೀಕ್ಷ್ಣ ಮತ್ತು ನಿರಹರ ವೆಂಬ ಶಬ್ದವರ್ಣವಾಚ್ಯಸಂಖ್ಯಗಳಿಂದ ಮುಂದಿನ ಪದ್ಯದಲ್ಲಿ ವಿಶದೀಕರಿಸುತ್ತಾರೆ ॥ ೫ ॥

## (೪) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ

"**ಅಂಕಾನಾಂ ವಾಮತೋಗತಿ**"—ಎಂಬ ಜ್ಯೋತಿಶ್ಯಾಸ್ತ್ರರೀತ್ಯಾ ಅಕ್ಷರಗಳನ್ನು ಲೆಕ್ಕವಾಗಿ ಎಡದಿಂದ ಬಲಕ್ಕೆ ಎಣಿಸುವ ಬಗೆಯಿಂದ ದೇವರ ರಸಗತ ರೂಪಗಳನ್ನು ಸ್ಮರಿಸಬೇಕೆಂದು ತಿಳಿಸುತ್ತಾರೆ, "ಕ್ಷೀರವೆಂದು".

ಕ್ಷೀರಗತರಸವೆಂದರೆ, ಕ್ಷೀರ ಎಂಬ ಹಾಲಿನಲ್ಲಿ **ವಿಶದ** ಎಂಬ ರಸದ ಅಕ್ಷರದ ಸಂಖ್ಯೆ ಎಡದಿಂದ ಬಲಕ್ಕೆ ೩೫೪ ರೂಪಗಳಾಗುತ್ತವೆ. ಚಾರು ಎಂದರೆ ಮನೋಹರವಾದ ಘೃತ—ತುಪ್ಪದಲ್ಲಿ **ಸ್ಥಿರರಸ** ೨೯ ಭಗವದ್ರೂಪಗಳು ಸಾರಗುಡದೊಳಗೆ, ಎಂದರೆ, ಸಿಹಿ ಬೆಲ್ಲದಲ್ಲಿ **ತೀಕ್ಷ್ಣ** ರಸ, ಇದರಲ್ಲಿ ೫೧೦೧ ರೂಪಗಳಾಗುತ್ತವೆ. ಫಲವೆಂಬ ಹಣ್ಣುಗಳಲ್ಲಿ **ನಿರಹರ** ರಸ. ಇದರಲ್ಲಿ ೨೮೨೫ ರಸರೂಪಗಳೂ, ಒಟ್ಟು ನಾಲ್ಕೂ ರಸಗತರೂಪಗಳು ಸೇರಿದರೆ, ೮೩೦೯ ಭಗವದ್ರೂಪಗಳಾಗುವುವೆಂದು ಚಿಂತಿಸಬೇಕೆಂದು ಹೇಳುತ್ತಾರೆ ॥೫ ॥

## (ಇ) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

ತತ್ತದ್ರಸಗತ ರೂಪಾಣಿ ಮಾನೋಕ್ತ್ಯಾನ್ಯನುಕ್ರಮಿಷ್ಯತಿ ॥ ಕ್ಷೀರೇತಿ ॥ ವಿಶದೀಕೃತ ಕೀರ್ತಿತ್ವಾತ್ ಉತ್ತಮತ್ವಾತ್ ತಥೋದಿತಃ ॥ ಸ್ಥಿರತಾ ಬಿಂಬ ರೂಪೇಷು ದೇಹತ್ವೈಕ್ಷ್ಣ್ಯಪದೋ ಯತಃ॥ ಅತ್ಯಂತಂ ನಿರ್ಹರತ್ಯೇವ ಪಾಪಾನೀತಿ ತಥೋದಿತಃ॥ ಪ್ರಸಿದ್ಧ ಶಬ್ದಂ ವಿನಾ ಅಪ್ರಸಿದ್ಧ ಶಬ್ದಾಃ ಕುತಃ ಪ್ರಯುಜ್ಯಂತೇ ಇತಿ ಚೇತ್॥ ಅತಾಕಿತಾರ್ಥಸ್ಯ ಯಥಾಗಮಂ ಗ್ರಾಹ್ಯತ್ವಾತ್ ಯಥೋಕ್ತಂ ಶಬ್ದನಿರ್ಣಯೇ॥ ವಿಶದಂ ಕ್ಷೀರ ಮಾಧುರ್ಯಂ ಸ್ಥಿರಮಾಜ್ಯಸ್ಯ ತೀಕ್ಷ್ಣಕಂ॥ ಗುಡಸ್ಯ ಪನಸಾದೀನಾಂ ನಿರ್ಹಾರೇತ್ಯಭಿಧೀಯತೇ ॥ ಇತಿ ಸೂದಶಾಸ್ತ್ರೋಕ್ತಾವಪಿ ಸಿತಸ್ಯೇತಿ ಪೂರ್ವ ಗ್ರಂಥಪಾಠಃ ॥ ಅತೋನ ವಿರೋಧಃ॥ ಪ್ರವೃತ್ತಗ್ರಂಥ ಏವಾತ್ರ ಸಂಧೌ ಮಾನತ್ವಮಶ್ನುತೇ ॥ ತ್ರಿಂಶೋತ್ತರ ಪಂಚಾಶದ್ರೂಪೈಃ ಕ್ಷೀರಗತಃ ಪ್ರಭುಃ ॥ ಚತುರಾತ್ಮಾ ಸರ್ಪಿಷಿ ಕ್ರೀಡತೇ ದೇವಃ ಏಕೋನ ತ್ರಿಂಶದಾತ್ಮಭಿಃ ॥ ಸಹಸ್ರ ಪಂಚಕಂ ತ್ವೇಕಂ ಶತಂ ತೀಕ್ಷ್ಣಾತ್ಮನೋ ಹರೇಃ॥ ಸಹಸ್ರದ್ವಿತಯಂ ಪಂಚ ವಿಂಶತೀತ ಶತಾಬ್ದಕಂ॥ ಫಲಪ್ರದೋ ವಾಸುದೇವಃ ಫಲಾತ್ಮಾ ಫಲಗಃ ಪ್ರಭುಃ॥ ಪಂಚರಾತ್ರೇಚ॥ ಕ್ಷೀರೇತು ತ್ರಿಸಹಸ್ರಂ ಚಚತುಃ ಪಂಚಾಶದುತ್ತರಂ॥ ಘೃತೇ ತು ವಿದ್ಧಿ ಜ್ಞೇಯಂ ಸ್ಯಾದೇಕೋನ ತ್ರಿಂಶದೇವಹಿ॥ ಏಕೋತ್ತರ ಶತಂ ಪಂಚ ಸಹಸ್ರಂತು ಸಗುಡೇಸ್ಮೃತಂ॥ ದ್ವಿಸಹಸ್ರಂ ಚಾಷ್ಟ ಶತಂ ತಥಾಷ್ಟೈ ಪಂಚವಿಂಶಕಂ॥ಚಿಂತನೀಯಂ ತು ರೂಪಂ ಸ್ಯಾತ್ ಫಲೇಷು ಪರಮಾತ್ಮನಃ ಇತಿ ತಸ್ಮಾನ್ ಮೌಲಶತಪದಂ ಸಹಸ್ರ ಪರಂ ಶಬ್ದಶತಮಿತ್ಯುಕ್ತೇಃ॥೫॥

**ಕನ್ನಡಾರ್ಥ :—**

ಆಯಾಯಾ ರಸಪದಾರ್ಥಗಳಲ್ಲಿರುವ ಭಗವದ್ರೂಪಗಳ ವಿವರಗಳನ್ನು ಸಪ್ರಮಾಣವಾಗಿ ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ. ಹಾಲು, ತುಪ್ಪ, ಬೆಲ್ಲ ಮತ್ತು ಹಲಸು ಈ ರಸಪದಾರ್ಥಗಳಲ್ಲಿ ಕ್ರಮವಾಗಿ ವಿಶದ, ಸ್ಥಿರ,ತೀಕ್ಷ್ಣ ಮತ್ತು ನಿರಹರ ಎಂಬ ರಸವಿಶೇಷಗಳಿವೆ. ಈ ವಿಷಯವು ಸೂದಶಾಸ್ತ್ರದಲ್ಲಿ ಉಕ್ತವಾಗಿದೆ ಉತ್ತಮವಾದ ಸ್ವಾದುವಿಶೇಷವಿರುವುದರಿಂದ ಕ್ಷೀರಗತ ಮಾಧು

ರ್ಯಕ್ಕೆ "ವಿಶದ"-ಎಂದು ಹೆಸರು. ಘೃತಗತಮಾಧುರ್ಯ ರಸವಿಶೇಷಕ್ಕೆ "ಸ್ಥಿರ"- ಎಂದು ಪ್ರಸಿದ್ಧಿ. ಈ ರಸವಿಶೇಷವು ಸ್ಥೈರ್ಯಪ್ರದವು. ಶರೀರದಲ್ಲಿ ತೀಕ್ಷ್ಣತೆಯನ್ನುಂಟುಮಾಡುವ ಗುಡಗತ ಮಾಧುರ್ಯರಸವಿಶೇಷವು "ತೀಕ್ಷ್ಣ" ವೆಂದೆನಿಸುವುದು. ಪಾಪಕ್ಷಾಳನಗೈಯುವ ಶಕ್ತಿ ಉಳ್ಳದ್ದಾದರಿಂದ ಪನಸಗತ ಮಾಧುರ್ಯ ರಸವಿಶೇಷಕ್ಕೆ "ನಿರಪರ"- ಎಂದು ಕರೆಯುವರು. **ಶಬ್ದನಿರ್ಣಯ** ವೆಂಬ ಪ್ರಮಾಣದಲ್ಲಿ **"ವಿಶದಂ ಕ್ಷೀರಮಾಧುರ್ಯಂ"**-ಎಂದು ಹೇಳಲ್ಪಟ್ಟಿದೆ. ಶ್ರೀ ಹರಿಯು ಕ್ಷೀರದಲ್ಲಿ ೩೫೪ ರೂಪಗಳಿಂದಲೂ, ಘೃತಗತ ಸ್ಥಿರ ರಸವಿಶೇಷದಲ್ಲಿ ೨೯ ರೂಪಗಳಿಂದಲೂ, ಗುಡಗತ ತೀಕ್ಷ್ಣ ರಸವಿಶೇಷದಲ್ಲಿ ೫೧೦೧ರೂಪಗಳಿಂದಲೂ ಮತ್ತು ಫಲಗತ ನಿರಪರ ರಸವಿಶೇಷದಲ್ಲಿ ೨೮೨೫ ರೂಪಗಳಿಂದ ಇರುತ್ತಾನೆ-ಎಂಬ ಭಗವದ್ರೂಪಗಳ ಅಕ್ಷರಸಾಂಕೇತ ವಿವರಗಳನ್ನು **ಶಬ್ದನಿರ್ಣಯ**ದಲ್ಲಿ ಹೇಳುತ್ತಾರೆ. **ಪಂಚರಾತ್ರಾಗಮ**ದಲ್ಲಿಯೂ ಸಹ ಇದೇ ತತ್ತ್ವವು ಉಕ್ತವಾಗಿದೆ॥೫॥

## ಸರ್ವವ್ಯಾಖ್ಯಾನ ಸಾರ ಸಂಗ್ರಹ:-

ಹಾಲು, ತುಪ್ಪ, ಮಧುರವಾದ ಬೆಲ್ಲ ಮತ್ತು ಪರಿಪಕ್ವವಾದ ಫಲಗಳಲ್ಲಿ ಪ್ರಮುಖವಾಗಿರುವ ರಸಾಂತರ್ಗತ, ರಸಪದವಾಚ್ಯ ಭಗವದ್ರೂಪಗಳ ವಿವರಣೆಯನ್ನು ತಿಳಿಸುತ್ತಾರೆ ಸಂಧಿಗತ ಈ ಐದನೆಯ ಪದ್ಯದಿಂದ.

(೧) ಹಾಲಿನಲ್ಲಿರುವ ಮಧುರ ರಸವಿಶೇಷಕ್ಕೆ **ವಿಶದ** ಎಂದು ಹೆಸರು. ಮುಂದೆ ಪಕ್ವವಾಗಿರುವ ಫಲವು ಪ್ರಥಮ ಹಂತದಲ್ಲಿ ಎಳೇ ಹೀಚುಕಾಯಿಯಾಗಿರುವುದು. ಅದರಲ್ಲಿ ವಿದ್ಯಮಾನವಾಗಿರುವ ರಸವಿಶೇಷವೇ **ವಿಶದವು** ಈ ಪದದಲ್ಲಿ ಮೂರು ಅಕ್ಷರಗಳಿವೆ.

ವಿ ಎಂಬುದು ಅವರ್ಗೀಯಾ ವ್ಯಂಜನಾಕ್ಷರಗಳ ಶ್ರೇಣಿಯಲ್ಲಿ 4ನೆಯ ಸ್ಥಾನವನ್ನು ಹೊಂದಿದೆ (೪)

**ಶ** ಎಂಬ ಅವರ್ಗೀಯ ವ್ಯಂಜನಾಕ್ಷರ ಶ್ರೇಣಿಗತ ಅಕ್ಷರದ ಸ್ಥಾನ ೫

**ದ** ಎಂಬ ವರ್ಣವು ತ ವರ್ಗೀಯ ವ್ಯಂಜನಾಕ್ಷರ ಶ್ರೇಣಿಯಲ್ಲಿ ಸ್ಥಾನ ೩. ಅಲ್ಲಿಗೆ ೪೫೩ ಎಂಬ ಸಂಖ್ಯೆಯಾಯಿತು. **"ಅಂಕಾನಾಂ ವಾಮತೋಗತಿಃ"** —ಎಂಬ ನಿಯಮದ ರೀತ್ಯಾ, ವಾಮಾಂಕದಿಂದ ೩೫೪ ರೂಪಗಳಾಗುವುವು.

(೨) ತುಪ್ಪವು ಮನೋಹರವಾದ (ಚಾರು) ಸುವಾಸನೆಯಿಂದ ಯುಕ್ತವಾದ ಭೋಗ್ಯ ವಸ್ತು. ಇದರ ರಸವಿಶೇಷಕ್ಕೆ **ಸ್ಥಿರ** ಎಂದು ಹೆಸರು ಎಳೆಯ ಕಾಯಿಯು ಸ್ವಲ್ಪ ಬಲಿತ ನಂತರ, ಅದರಲ್ಲಿರುವ ರಸವಿಶೇಷವೇ **ಸ್ಥಿರವು.**

ಎರಡು ಅಕ್ಷರಗಳಿಂದ ಯುಕ್ತವಾದ ಈ ಪದದಲ್ಲಿ.

**ಸ್ಥಿ** ಎಂಬುದು ಸಂಯುಕ್ತಾಕ್ಷರವು. ಇದರಲ್ಲಿ ಸ ಮತ್ತು ಥ ಎಂಬ ಎರಡು ವರ್ಣಗಳು ಸಂಯೋಜನೆಯಾಗಿವೆ. **ಸ**=ಅವರ್ಗೀಯ ವ್ಯಂಜನಾಕ್ಷರ ಸ್ಥಾನ-೭ **ಥ**=ತವರ್ಗೀಯ ವ್ಯಂಜನಾಕ್ಷರದ ಸ್ಥಾನ ೨. ಈ ಸಂಖ್ಯಾಗಳ ಮೊತ್ತ=೭+೨=೯ **ರ**=ಅವರ್ಗೀಯ ವ್ಯಂಜನಾಕ್ಷರಗಳಲ್ಲಿ ೨ನೆಯ ಸ್ಥಾನ. ಅಲ್ಲಿಗೆ ೯೨ ಆಯಿತು ವಾಮಾಂಕ ಕ್ರಮದಿಂದ ೨೯ ಭಗವದ್ರೂಪಗಳ ಚಿಂತನೆ.

(೩) ಬೆಲ್ಲದಲ್ಲಿ ಸಾರಭೂತವಾದ ಗುಡರಸಕ್ಕೆ **ತೀಕ್ಷ್ಣ** ಎಂದು ನಾಮಧೇಯ. ಇದರಲ್ಲಿ **ತೀ**=ತವರ್ಗೀಯ ವ್ಯಂಜನಾಕ್ಷರ (೧) **ಕ್ಷ್ಣ** ಎಂಬ ಸಂಯುಕ್ತಾಕ್ಷರದಲ್ಲಿ **ಕ್ಷ** (ಅವರ್ಗೀಯ ವ್ಯಂಜನಾಕ್ಷರ ೧೦) **ಣ** (ಟ ವರ್ಗವು ವ್ಯಂಜನಾಕ್ಷರ ೫) ಅಲ್ಲಿಗೆ **ಕ್ಷ್ಣ**=೧೦೫. ಆಯಿತು. ಈ ಅಕ್ಷರ ಸಂಖ್ಯಾ ವಿನ್ಯಾಸ ೧೧೦೫. ವಾಮಾಂಕಗತಿಯಿಂದ ೫೧೦೧ (ಇಲ್ಲಿ ೧೦ ವಾಮಾಂಕದಿಂದ ೦೧ ಆಗುವುದು) ಸಂಖ್ಯಾಕವಾದ ಭಾಗವದ್ರೂಪಗಳ ಚಿಂತನೆ.

(೪) ಪರಿಪಕ್ವವಾಗಿರುವ [ಮಾಗಿದ] ಫಲರಸವಿಶೇಷಕ್ಕೆ **ನಿರಹರ** ಎಂದು ಹೆಸರು.

[೨] ಅಲ್ಲಿಗೆ ಸಂಖ್ಯಾ ಜೋಡಣೆ ೫೨೮೨ ಆಯಿತು. ವಾಮಾಂಕ ರೀತ್ಯಾ ೨೮೨೫ ಭಗವದ್ರೂಪಗಳಾಗುವುವು. ಈ ಸಂಖ್ಯೆಯನ್ನು ದಾಸರಾಯರು **ದ್ವಿಸಹಸ್ರಾರೆರಡು ಶತ ಪಂಚವಿಂಶಂತಿ** ಎಂದು ಚಮತ್ಕಾರದಿಂದ ನಿರೂಪಿಸಿರುತ್ತಾರೆ [ದ್ವಿಸಹಸ್ರ=೨೦೦೦, ಆರೆರಡು ಶತ=ಎಂಟನೂರು. ಪಂಚವಿಶಂತಿ=೨೫. ಅಲ್ಲಿಗೆ ೨೦೦೦+೮೦೦+೨೫=೨೮೨೫ ಆಗುವುದು] ಪೂರ್ವೋಕ್ತ ನಾಲ್ಕೂ ರಸವಿಶೇಷಗತ ಭಗವದ್ರೂಪಗಳ ವಿವಿರಗಳ ಪಕ್ಷಿನೋಟವನ್ನು ಈ ಕೆಳಗಿನಪಟ್ಟಿಯಲ್ಲಿ ಸುಲಭವಾಗಿ ಗ್ರಹಿಸುವಂತೆ ಕೊಟ್ಟಿದೆ.

| ಕ್ರಮ ಸಂಖ್ಯೆ | ದ್ರವ್ಯ | ರಸ ವಿಶೇಷ | ಅಕ್ಷರ ಸಂಖ್ಯಾ ಗಣನೆ | ಸಂಖ್ಯೆ | ವಾಮಾಂಕ ಗತಿಯಿಂದ |
|---|---|---|---|---|---|
| ೧ | ಕ್ಷೀರ | ವಿಶದ | ವಿ=೪ ಶ=೫ ದ=೩ | ೪೫೩ | ೩೫೪ |
| ೨ | ಘೃತ | ಸ್ಥಿರ | ಸ್ಥಿ=ಸ+ಥ= ೭+೨=೯ ರ=೨ | ೯೨ | ೨೯ |
| ೩ | ಗುಡ | ತೀಕ್ಷ್ಣ | ತೀ=೧ ಕ್ಷ್ಣ= ಕ್ಷ=೧೧, ಣ=೫ | ೧೧೦೫ | ೫೦೧೧ |
| ೪ | ಫಲ | ನಿರಹರ | ನಿ=೫ ರ=೨ ಹ=೮ ರ=೨ | ೫೨೮೨ | ೨೮೨೫ |
| | | | | ಒಟ್ಟು | ೮೩೦೯ |

# ಪದ್ಯ (೬)

**ಮೂಲ :**

**ವಿಶದ ಸ್ಥಿರ ತೀಕ್ಷ್ಣಣವು ನಿರಹರ |**
**ರಸದೊಳು ಮೂರೈದು ಸಾವಿರ |**
**ತ್ರಿಶತನವ ರೂಪಗಳ ಚಿಂತಿಸಿ, ಭುಂಜಿಪುದು ವಿಷಯ||**
**ಶ್ವಸನ ತತ್ತ್ವೇಶರೊಳಗಿದ್ದೀ|**
**ಪಸರಿನಿಂದಲಿ ಕರೆಸುವನು ಧೇ|**
**ನಿಸಿದರೀ ಪರಿ ಮನಕೆ ಪೊಳೆವನು ಬಲ್ಲ ವಿಬುಧರಿಗೆ ||೬||**

**ಅವತರಿಣಿಕೆ :**

ಕ್ಷೀರಗತ ವಿಶದ, ಘೃತಗತ ಸ್ಥಿರ,ಗುಡಗತ ತೀಕ್ಷ್ಣ ಮತ್ತು ಫಲಗತ ನಿರಹರ ಈ ಪ್ರಕಾರವಾದ ನಾಲ್ಕು ರಸವಿಶೇಷಗಳಲ್ಲಿ ಶ್ರೀ ಪರಮಾತ್ಮನು ರಸ ಪದವಾಚ್ಯನಾಗಿ ಒಟ್ಟು ೧೫೩೦೯ ಅಖಂಡ ಭಗವದ್ರೂಪಗಳಿಂದ ಇದ್ದು ಮುಖ್ಯ ಪ್ರಾಣರು ಮತ್ತು ಅವರಿಂದ ನಿಯಮ್ಯರಾದ ತತ್ವಾಭಿಮಾನಿದೇವತೆಗಳಲ್ಲಿ ತನ್ನಾಮಕನಾಗಿ, ತತ್ತಚ್ಛಬ್ದವಾಚ್ಯನಾಗಿ ಅಂತರ್ಯಾಮಿರೂಪತ್ವೇನ ಇದ್ದು ಮನೋಮಂದಿರದಲ್ಲಿ ಪ್ರಕಾಶಿಸುವನು ಎಂಬ ಈ ತತ್ವಾರ್ಥವನ್ನು ತಿಳಿದವರೇ ಕೋವಿದೋತ್ತಮರು–ಎಂದು ಹೇಳುತ್ತಾರೆ– "ವಿಶದಸ್ಥಿರ" ಎಂಬ ೬ನೆಯ ಈ ಪದ್ಯದಿಂದ.||೬||

**ಪ್ರತಿಪದಾರ್ಥ :—**

**ವಿಶದ**= ಕ್ಷೀರಗತ ರಸವಿಶೇಷ **ಸ್ಥಿರ**= ಘೃತಗತ ರಸವಿಶೇಷ **ತೀಕ್ಷ್ಣಣವು**= ಬೆಲ್ಲದಲ್ಲಿರುವ ಮಾಧುರ್ಯ ರಸವಿಶೇಷವು **ನಿರಹರ**= ಫಲಗತ ರಸವಿಶೇಷ

**ರಸಗಳೊಳು**= ಪೂರ್ವೋಕ್ತ ನಾಲ್ಕು ಪ್ರಕಾರವಾದ ರಸವಿಶೇಷಗಳಲ್ಲಿ **ಮೂರ್ಹೈದುಸಾವಿರ ತ್ರಿಶತ ನವರೂಪಗಳ**= ಎಂಟುಸಾವಿರದಮುನ್ನೂರ ಒಂಭತ್ತು (೮೩೦೯) ಭಗವದ್ರೂಪಗಳನ್ನು **ಮೂರ್ಹೈದು**=ಮೂರು+ ಐದು =ಎಂಟು, ಮೂರ್ಹೈದುಸಾವಿರ=೮೦೦೦, **ತ್ರಿಶತನವ**=ತ್ರಿಶತ=೩×೧೦೦ =೩೦೦ ಮತ್ತು ನವ=೯ ಅಂದರೆ ೩೦೯, ಈ ಸಮಗ್ರ ಸಂಖ್ಯೆ ೮೦೦೦+ ೩೦೯=೮೩೦೯ ಆಗುವುವು **ಚಿಂತಿಸಿ**=ಅನುಸಂಧಾನಪೂರ್ವಕವಾಗಿ ಧ್ಯಾನ ಮಾಡಿಕೊಂಡು **ವಿಷಯು**=ಭೋಜನಕ್ಕೆ ಯೋಗ್ಯವಾದ ಅನಿಷಿದ್ಧ ಪದಾರ್ಥ ಗಳನ್ನು **ಭುಂಜಿವುದು**= ಭೋಜವಮಾಡಬೇಕು **ಶ್ವಸನ**=ವಿಜ್ಞಾನ ತತ್ವಾಭಿಮಾನಿ ಮುಖ್ಯಪ್ರಾಣ ದೇವರು **ತತ್ವೇಶದೊಳು**=ಪ್ರತಿ ಭೋಜ್ಯ ವಸ್ತುಗಳಲ್ಲಿರುವ ಚತುರ್ವಿಂಶಂತಿ ತತ್ವಗಳು, ತದಭಿಮಾನಿ ದೇವತೆಗಳಲ್ಲಿ **ಇದ್ದು**= ಅಂತರ್ಯಾಮಿ ರೂಪದಿಂದ ಇದ್ದು **ಈಪಸರಿನಿಂದಲಿ**= ವಿಶದ ಸ್ಥಿರ ಮೊದಲಾದ ಹೆಸರಿನಿಂದಲೇ ರಸಪದವಾಚ್ಯನಾಗಿ **ಕರೆಸುವನು**=ಕರೆಯಿಸಲ್ಪಡುತ್ತಾನೆ, **ಈಪರಿಧ್ಯೇನಿಸಿದರೆ**=ಪೂರ್ವೋಕ್ತ ರೀತಿಯಲ್ಲಿ ಅನುಸಂಧಾನ ಮಾರ್ಗದಿಂದ ಧ್ಯಾನಮಾಡಿದರೆ **ಬಲ್ಲ**=ಈ ತತ್ವಾರ್ಥವನ್ನು ಗುರೂಪದೇಶ ದ್ವಾರಾ ತಿಳಿದ **ವಿಬುಧರಿಗೆ**= ಜ್ಞಾನಿಗಳಿಗೆ **ಮನಕೆ**= ಅವರ ಮನೋ ಮಂದಿರದಲ್ಲಿ **ಪೊಳೆವನು**=ದರ್ಶನಭಾಗ್ಯರೂಪದಿಂದ ಪ್ರಕಟನಾಗುತ್ತಾನೆ.

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ವಿಶದಾದಿ ರಸವಿಶೇಷಗಳಲ್ಲಿ ೮೩೦೯ ರೂಪಗಳನ್ನು ಭೋಜನಮಾಡತಕ್ಕ ಪ್ರತಿಯೊಂದು ಫಲರೂಪವಾದ ಪದಾರ್ಥದಲ್ಲೂ ಆಲೋಚಿಸಿ ತಿಳಿದು. ಪೂರ್ವೋಕ್ತ ಪ್ರಕಾರ ನಾಲು ವಿಧರಸಗಳು ವೃಕ್ಷಗತ ಫಲಾಂತರ್ಗತನಾಗಿ ಶ್ರೀ ಪರಮಾತ್ಮ ಇದ್ದು, ಪೂರ್ವೋಕ್ತಪ್ರಕಾರ ರಸಾಭಿವ್ಯಕ್ತ ಮಾಡತಾನೆ. ಅನಭಿವ್ಯಕ್ತವಾಗಿ ಬಾಲ್ಯದಲ್ಲಿ ಇದ್ದ ಪುಂಸ್ತ್ವ, ಯೌವ್ವನಕಾಲದಲ್ಲಿ ಅಭಿವ್ಯಕ್ತ

ಮಾಡಿದಂತೆ ಇದ್ದು ಅನಭಿವ್ಯಕ್ತವಾಗಿ ಅದೆ. ಭೋಜನಕ್ಕೆ ವಿಷಯವಾದ ಅನಿಷಿದ್ಧ ಪದಾರ್ಥಗಳಲ್ಲಿ ಆಯಾಯಾ ಭಗವದ್ರೂಪಗಳ ಚಿಂತಿಸಬೇಕಾದರೆ, ಪ್ರತಿಪ್ರತಿ ಪದಾರ್ಥದಲ್ಲೂ ಚತುರ್ವಿಂಶತಿತತ್ತ್ವಗಳು. ತದಭಿಮಾನಿಗಳಾದ ದೇವತೆಗಳು, ತಾರತಮ್ಯಾನುಸಾರ ಗೋಳಕತ್ವೇನ ಇದ್ದಾರೆ. ಅದರಲ್ಲಿ ವಿಜ್ಞಾನ ತತ್ತ್ವಾಭಿಮಾನಿ ವಾಯುದೇವರು ನೀಚಕ್ರಮದಿಂದ ಉತ್ತಮರಲ್ಲಿ ಅಂತ್ಯಗೋಳಕನೂ, ಇಂಥಾ ವಾಯುದೇವರು, ವಾಯುಗೋಳಾಂತರ್ಗತ ನಾಗಿ ಇದ್ದವರಾಗಿ, ವಿಶದ ಸ್ಥಿರಾದಿ ನಾಮಗಳಿಂದ ಅಖಂಡರಸರೂಪನಾಗಿದ್ದು ವರ್ಣಸಾಂಕೇತದಿಂದ ಖಂಡರೂಪನಾಗಿ, ವರ್ಣಸಾಂಕೇತನಾಮಗಳಿಂದ ಕರಿಸತಾನೆ. ತದ್ವತ್ ದೇಹಾಂತರ್ಗತನಾಗಿಯೂ ಇದ್ದಾನೆ. ಈ ಪೂರ್ವೋಕ್ತ ನಾಲ್ಕುವಿಧ ರಸಗಳಿಗೆ ದೃಷ್ಟಾಂತ ದೇಹದಲ್ಲಿ ಹ್ಯಾಂಗೆಂದರೆ:—(೧) ಬಾಲ್ಯ [೨] ಯೌವ್ವನ [೩] ಕೌಮಾರ ಮತ್ತು [೪] ವಾರ್ಧಿಕ್ಯ, ನಾಲ್ಕೂ ಕಾಲಗಳಲ್ಲಿ ನಾಲ್ಕುವಿಧರಸ ವಿಶೇಷಗಳಿಂದ ಯುಕ್ತವಾಗಿ ಇರುತ್ತದೆ. ತದ್ವತ್ ಫಲಾದಿ ಗಳಲ್ಲಿ ಬಾಲ್ಯ, ಯೌವನ, ಕೌಮಾರ, ವಾರ್ಧಿಕ್ಯ-ಈ ನಾಲ್ಕೂ ಕಾಲಗಳಲ್ಲಿ ನಾಲ್ಕು ವಿಧ ರಸಗಳಿರುತ್ತವೆ. ಎಂತ ತಾತ್ಪರ್ಯ. ಉಭಯತ್ರದಲ್ಲಿ ಈ ಪ್ರಕಾರ ನಾಮಗಳಿಂದ ಕರಿಸುತ, ಅನುಸಂಧಾನದಿಂದ ಈ ಪ್ರಕಾರ ತನ್ನ ಮನೋವಾಸನಾದಿಂದ ಧ್ಯಾನ ಮಾಡಿದರೆ, ಮನಸ್ಸಿಗೆ ಹೊಳೆಯುತ್ತಾನೆ. ದಾರಿಗೆಂದರೆ, ಅನುಸಂಧಾನ ಮಾರ್ಗ ಗುರುಗಳಿಂದ ಛಂದಾಗಿ ಅರಿತು, ಅಹಂ ಮಮತಾದಿಗಳನ್ನು ತ್ಯಜಿಸಿ ತಾರತಮ್ಯ, ಪಂಚಬೇಧ, ಮಹಾತ್ಮ್ಯಜ್ಞಾನ ಪೂರ್ವಕ ಸುದೃಢಸ್ನೇಹ ಶ್ರೀ ಪರಮಾತ್ಮನಲ್ಲಿ ಮಾಡುವಂಥಾ ಭಗವದ್ಭಕ್ತರಿಗೆ ಹೊಳೆಯುತ್ತಾನೆ. ದಾರ್ಢ್ಯ ವಿಲ್ಲದವರಿಗೆ ಮನಸ್ಸಿಗೆ ಹೊಳೆಯೋದಿಲ್ಲ ಎಂತ ತಾತ್ಪರ್ಯ.

**ವಿಶೇಷಾರ್ಥ :**

ವಿಶದಾದಿ ಪ್ರತಿನಾಮ ಕ್ಷೀರಾದಿ ನಾಲ್ಕುರಸಗಳು ದಾವವೆಂದರೆ ಆಮ್ಲಾದಿ ಆರುರಸಗಳು ಲೋಕದಲ್ಲಿ ಪ್ರಸಿದ್ಧ ರಸಗಳು. ತದನ್ಯ ವ್ರೀಹ್ಯಾದಿ (ಬಿದಿರಕ್ಕಿ) ಫಲ ಶಾಖಾದಿ ಅನೇಕಜಾತಿ ಫಲಾದಿಗತರಸಗಳು ಎಷ್ಟು ಪ್ರಕಾರ

ವೆಂದರೆ:– [೧] ವಿಶದ– ಕ್ಷೀರಗತ ರಸಸದೃಶಯುಕ್ತದದ್ದು ಕೆಲವು [೨] ಘೃತರಸ ಸದೃಶಯುಕ್ತವಾದದ್ದು [೩] ತೀಕ್ಷಣ ಗುಡರಸ ಸದೃಶ ಮುಕ್ತವಾದದ್ದು ಕೆಲವು ಮತ್ತು (೪) ನಿರಹರ-ಫಲರಸಸದೃಶ ಯುಕ್ತ ವಾದದ್ದು ಕೆಲವು, ಅಂದರೆ ಫಲರಸ ಛಂದಾಗಿ ಪಕ್ವಾನಂತರ ಪೂರ್ಣರಸ ಯುಕ್ತವಾಗಿ ಭೋಜನಕ್ಕೆ ಉಪಯೋಗವಾಗುವ ರಸವುಳ್ಳದ್ದು ಕೆಲವು. ಅಂತೂ ಈ ದಿಕ್ಪ್ರದರ್ಶನದಿಂದ ಆಮ್ಲಾದಿ ಪ್ರಸಿದ್ಧ ರಸಗಳು ಆರು ರಸ ಗಳೋಪಾದಿ ನಾಮ ನಿರ್ಣಯ ಮಾಡೋಕ್ಕೆ ಶಕ್ಯವಲ್ಲ. ಅನೇಕವಿಧರಸಗಳು ಅನೇಕವಿಧಪದಾರ್ಥಗಳಲ್ಲಿ ಇರೋದಾಗಿ ಅದೆ. ಏತಾದೃಶರಸಗಳು ಯಾವತ್ತೂ ಆರುರಸಗಳಲ್ಲಿ ಅಂತರ್ಭೂತಗಳೆಂದು ತಾತ್ಪರ್ಯ. ೮೩೦೯ ಭಗವದ್ರೂಪಗಳು ಚಿಂತಿಸಬೇಕೆಂಬುದಕ್ಕೆ **ಪ್ರಮಾಣ** ;—

**"ನವಾಧಿಕ ತ್ರಿಶತಕ್ಯೈಃ ವಸುಸಂಖ್ಯಾಸಹಸ್ರಕ್ಯೈಃ ।**
**ವಿಶದಾದಿ ರಸಸ್ಥಾನಿ ಜ್ಞೇಯಾನಿ ಚ ಬುಭುಕ್ಷುಭಿಃ॥"—ಇತಿ**

ಮೇಲೆ ಹೇಳಿದ ವಿಶದಾದಿ ರಸಗಳು ಕ್ಷೀರಾದಿಗತ ವೆಂಬೋದಕ್ಕೆ **ಪ್ರಮಾಣ :**

**"ವಿಶದಂ ಕ್ಷೀರಮಾಧುರ್ಯಂ ಸ್ಥಿರಮಾಜ್ಯಸ್ಯ ತೀಕ್ಷ್ಣಕಮ್ ।**
**ಗುಡಸ್ಯ ಪನಸಾದೀನಾಂ ನಿರಾಹಾರ್ಯಭಿಧೀಯತೇ॥"**
**—ಇತಿ ಐತರೇಯ ಭಾಷ್ಯೇ ॥**

ಈ ಪದಾರ್ಥಗಳಲ್ಲಿ ತನ್ನಾಮ, ತದ್ರೂಪ, ತದಾಕಾರನಾಗಿದ್ದಾನೆಂದು ಚಿಂತಿಸಬೇಕೆಂದು ತಾತ್ಪರ್ಯ.

**೮೩೦೯ ರೂಪಗಳ ವಿವರ :—**

(೧) ವಿಶದ-ಕ್ಷೀರಗತ ರಸವಿಶೇಷ............೩೫೪ ರೂಪಗಳು
[೨] ಸ್ಥಿರ-ಘೃತಗತರಸವಿಶೇಷ............೨೯ ರೂಪಗಳು
(೩) ತೀಕ್ಷಣ– ಗುಡಗತ ರಸವಿಶೇಷ........೫೦೦೧ ರೂಪಗಳು
(೪) ನಿರಹರ– ಫಲಗತ ರಸವಿಶೇಷ........೨೮೨೫ ರೂಪಗಳು

ಒಟ್ಟು ಭಗವ ದ್ರೂಪಗಳಸಂಖ್ಯೆ....೮೩೦೯

ಇದನ್ನು ಮೂರ್ರೈದು ಸಾವಿರ ತ್ರಿಶತನವರೂಪಗಳು--ಎಂದು ದಾಸರಾಯರು ತಿಳಿಸಿದ್ದಾರೆ.

· ಮೂರ್ರೈದು = ಮೂರು + ಐದು = ಎಂಟು. ಮೂರ್ರೈದುಸಾವಿರ = ೮೦೦೦
ತ್ರಿಶತ = ೩ × ೧೦೦ = ೩೦೦ (ಮುನ್ನೂರು) ನವ = ೯
ಅಲ್ಲಿಗೆ ೮೦೦೦ + ೩೦೦ + ೯ = ೮೩೦೯ ರಸಪದವಾಚ್ಯ ಭಗವದ್ರೂಪಗಳು॥೬॥

**(೨) "ಭಾವಪ್ರಕಾಶಿಕೆ" ವ್ಯಾಖ್ಯಾನ:–**

ಅಕ್ಷರಗಳ ಮೇಲೆ ಸಂಖ್ಯಾಸೂಚಿಸುವ ಸಂಪ್ರದಾಯವು ಜ್ಯೋತಿಷ್ಯಕಾರರು,ಶಾಸ್ತ್ರಕಾರರೂ ಸಹ ಹೇಳಿರುವರು.ಆದರ ಕ್ರಮ ಹೇಗೆಂದರೆ:ಕಾದಿನವ, ಟಾದಿಪಂಚ, ತಾದಿಪಂಚ, ಪಾದಿಪಂಚ,ಯಾದಿದಶ,ಇದರರ್ಥವೇನೆಂದರೆ- "ಕ" ಮೊದಲು "ಙ" ಎಂಬ ಅಕ್ಷರಬಿಟ್ಟು "ಞ" ವರೆಗೂ ಎಣಿಸಿದರೆ ೯ ಅಕ್ಷರಗಳು ಆಗುವುವು. "ಟ" ಮೊದಲು "ಣ" ವರೆಗೆ ೫ ಅಕ್ಷರಗಳು. "ತ" ಮೊದಲು "ನ" ವರೆಗೆ ೫ ಅಕ್ಷರಗಳು. "ಪ" ಮೊದಲು "ಮ" ವರೆಗೆ ೫ ಅಕ್ಷರಗಳು. "ಯ" ಮೊದಲು "ಕ್ಷ" ವರೆಗೆ ೧೦ ಅಕ್ಷರಗಳು. ಹೀಗೆ ಸಂಖ್ಯಾಮಾಡುವ ಪದ್ಧತಿ ಇರುವುದು. "**ಅಂಕಾನಾಂ ವಾಮತೋ ಗತಿ:**"– ಎಂಬ ಪ್ರಮಾಣದಿಂದ ಕ್ರಮವಾಗಿ ಅಕ್ಷರ ಸಂಖ್ಯೆಯನ್ನು ಬರೆದು, ಎಡದಿಂದ ಗಣನೆಮಾಡಬೇಕು. ಹಾಗೆ ಇಲ್ಲಿ ವಿಶದ, ಸ್ಥಿರ ತೀಕ್ಷ್ಣ ಮತ್ತು ನಿರಪರ ಎಂದು ಹೇಳಿರುವರು. ಇದರಲ್ಲಿ "ವಿಶದ"– ಎಂಬ ಪದದಲ್ಲಿ ವಿ = ೪ ಶ = ೫ ದ = ೩ ಹೀಗೆ ೪೫೩ ಆಯಿತು. ಇದನ್ನು ಎಡದಿಂದ ಓದಿದರೆ, ೩೫೪ ಎಂದಾಗುವುದು. ಇವು ಕ್ಷೀರಗತರೂಪಗಳೆಂದು ಮೇಲಿನ ಪದ್ಯದಿಂದ ಹೇಳಿರುವರು. "ಸ್ಥಿರ"– ಇದರಲ್ಲಿ "ಸ್" ಎಂಬ ಅಕ್ಷರವನ್ನು ಗ್ರಹಣ ಮಾಡಿದರೆ ೭ ಆಯಿತು, "ಥಿ" = ೨,"ಸ್ಥಿ" ಒತ್ತಕ್ಷರವಾದ್ದರಿಂದ, ಎರಡನ್ನೇ ಒಂದಾಗಿ ಸೇರಿಸಬೇಕು. ಅಂದರೆ, ೭ + ೨ = ೯ ಎಂದು ಭಾವ, ರ = ೨ ಅಂತು ೯೨ ಆಯಿತು. ಇದನ್ನು ಎಡದಿಂದ ಓದಿದರೆ ೨೯ ಆಗುವುದು. ಇವು ಘೃತದಲ್ಲಿನ ಭಗವದ್ರೂಪಗಳು . "ತೀಕ್ಷ್ಣ"– ಇದರಲ್ಲಿ ತೀ = ೧. ಕ್ಷ = ೧೦ ಮತ್ತು ಣ = ೫. ಇದನ್ನು ಎಡಮಾಡಬೇಕು. ಇದರಲ್ಲಿ ೧೦ ಎರಡುಸ್ಥಾನವುಳ್ಳದಾದುದರಿಂದ, ಅದನ್ನು ಎಡದಿಂದ ಓದಿದರ ೦೧ ಹೀಗಾಗುವುದು ಅಂತು, ೧೦೧೫ ಆಯಿತು. ಎಡದಿಂದ ಓದಿದಾಗ,

೫೦೦೧ ಆಗುವುದು. ಇದು ಗುಡಗತ ರಸಾಂತರ್ಗತ ಭಗವದ್ರೂಪಗಳ ಸಂಖ್ಯೆ "ನಿರಹರ" ಎಂಬಲ್ಲಿ ನಿ=೫ ರ=೨, ಹ=೮ ಮತ್ತು ರ=೨ ಅಂತು೫೨೮೨ ಆಗುವುದು. ಎಡದಿಂದ ಎಣಿಸಿದರೆ, ೨೮೨೫ ಆಗುವುದು. ಇವುಫಲಗತರಸ ವೆಂದು ಭಾವಿಸಬೇಕು ಹೀಗೆ ಮೇಲಿನ ಸಂಖ್ಯೆಗಳನ್ನು ಒಟ್ಟುಗೂಡಿಸಿದರೆ, ೮೩೦೯ ಆಗುವುದು, ಭೋಜನಕ್ಕೆ ಯೋಗ್ಯವಾದ ಪದಾರ್ಥಗಳನ್ನು ಭುಂಜಿಸು ವಾಗ, ಈ ರೂಪಗಳನ್ನೇ ಆಯಾ ರಸಗಳಲ್ಲಿ ಚಿಂತಿಸಿ ಭುಂಜಿಸಬೇಕು, ಈ ದೇಹದೊಳಗೆ ಇರುವ ಚಿತ್ತಾಭಿಮಾನಿಯಾದ ವಾಯುದೇವರು ಮೊದಲಾದ ೨೪ ತತ್ವೇಶರೊಳಗಿದ್ದು. ವಿಶದಾದಿ ನಾಮಗಳಿಂದ ಕರೆಸಿಕೊಳ್ಳಲ್ಪ ಡುವನು. ಹೀಗೆ ಧ್ಯಾನಮಾಡಿದರೆ. ತಿಳಿದ ಜ್ಞಾನಿಗಳಿಗೆ ಮನಸ್ಸಿನಲ್ಲಿ ಅಲ್ಲಲ್ಲಿ ಆ ರೂಪಗಳು ಗೋಚರವಾಗುವುವು ಎಂತ ತಾತ್ಪರ್ಯ॥೬॥

**(೨)"ಭಾವದರ್ಪಣಟೀಕಾ"– ವ್ಯಾಖ್ಯಾನ:–**

ವಿಶದಾದಿ ರಸವಿಶೇಷಗಳಲ್ಲಿ ರಸಪದಶಬ್ದವಾಚ್ಯನಾಗಿರುವ ಸಂಖ್ಯಾ ವಾಚಕ ಭಗದ್ರೂಪಗಳನ್ನೇ ಹೇಳುತ್ತಾರೆ –"**ವಿಶದ**"– ಎಂಬ ಪದ್ಯದಿಂದ,

ಬಲ್ಲಂಥ ಜ್ಞಾನಿಗಳಿಗೆ ಪೂಳೆವನು ಎಂತ ಅನ್ವಯ. ಪೂಳೆಯತಕ್ಕದ್ದು ದಾವದೆಂದರೇ, ವಿಶದಾದಿನಾಮವುಳ್ಳಂಥಾ ಭಗವದ್ರೂಪಗಳು ಎಂತರ್ಥ. ಎಂಥ ಭಗವದ್ರೂಪಗಳು ಎಂದರೇ, ವಿಶದ=೩೫೪, ಸ್ಥಿರ=೨೯, ತೀಕ್ಷಣ =೫೦೦೧ ಮತ್ತು ನಿರಹರ=೨೮೨೫, ಅಂತು. ಎಂಟುಸಾವಿರದ ಮುನ್ನೂರ ಒಂಭತ್ತು ಭಗವದ್ರೂಪಗಳು ಆಗುತ್ತವೆಂದು ಚಿಂತಿಸತಕ್ಕದೆಂದು ಹೇಳಿದ್ದಾರೆ,

**ಪ್ರಮಾಣ:—**

**"ನವಾಧಿಕತ್ರಿಶತಕೈ: ವಸುಸಂಖ್ಯಾಸಹಸ್ರಕೈ:"।**
**ವಿಶದಾತಿರಸಸ್ಥಾನಿ ಜ್ಞೇಯಾನಿಚ ಬುಭುಕ್ಷುಭಿರಿತಿ॥– ಇತಿ ಉಕ್ತಂಚ ಗುರುವೃತ್ತೇ॥.**

ಮೇಲೆ ಕಂಡ ವಿಶದಾದಿ ರಸಗಳು ಕ್ಷೀರಾದಿಪದಾರ್ಥಗತವೆಂದು ದಾವ ಆಧಾರ ಮೇಲೆ ಹೇಳಿದ್ದಾರೆ–

**"ವಿಶದಂ ಕ್ಷೀರಮಾಧುರ್ಯ ಸ್ಥಿರಮಾಜ್ಯಸ್ಯ ತೀಕ್ಷ್ಣಕಮ್।**
**ಗುಡಸ್ಯ ಪನಸಾದೀನಾಂ ನಿರಹಾರ್ಯಭಿದೀಯತೇ"॥**
**–ಉಕ್ತಂಚ ಐತರೇಯ ಭಾಷ್ಯೇ॥**

ಈ ಪದಾರ್ಥಗಳಲ್ಲಿ ತನ್ನಾಮ, ತದ್ರೂಪ, ತದಾಕಾರನಾಗಿದ್ದಾನೆಂದು ಚಿಂತಿಸಿ ಬೇಕೆಂಬೋ ತಾತ್ಪರ್ಯ. ಚಾರು= ಮನೋಹರ ಶ್ವಸನ= ವಾಯು ॥೬॥

## (೪) "ಗುರುಹೃದಪ್ರಕಾಶಿಕೆ"–ವ್ಯಾಖ್ಯಾನ:–

ಹಿಂದಿನ ಪದ್ಯದಲ್ಲಿ ಹೇಳಿದ ಕ್ಷೀರ, ಘೃತ, ಗುಡ ಮುತ್ತು ಫಲಗಳ ರಸಗಳು ವಿಶದ, ಸ್ಥಿರ, ತೀಕ್ಷ್ಣ ಮತ್ತು ನಿರಹರ ಎಂಬ ನಾಲ್ಕು ರಸಗಳಲ್ಲಿ ಒಟ್ಟು ೮೩೦೯ ಭಗವದ್ರೂಪಗಳನ್ನು ಈ ಪದಾರ್ಥಗಳು ಭೋಜನಮಾಡುವ ಕಾಲದಲ್ಲಿ ಜ್ಞಾನಿಗಳು, ಧ್ಯಾನಿಸಿ, ವಾಯುದೇವರೇ ಮೊದಲಾದ ತತ್ವೇಶರೊಳಗೆ ದೇವರು ಸನ್ನಿಹಿತನಾಗಿ, ಈ ವಿಶದಾದಿ ರಸನಾಮದಿಂದ ಕರೆಸುವನು– ಎಂದು ಅನುಸಂಧಾನ ಪೂರ್ವಕವಾಗಿ, ಭೋಜನ ಪದಾರ್ಥಗಳನ್ನು ಸ್ವೀಕರಿಸಿದರೆ, ಈ ಜ್ಞಾನಕ್ಕೆ ಫಲವಾಗಿ ದೇವರು ಮನಸಿಗೆ ಪ್ರತ್ಯಕ್ಷನಾಗುವನು,ಎಂದರೆ, ಧ್ಯಾನಕ್ಕೆ ವಿಷಯನಾಗುವನೆಂದರ್ಥ.

**"ವಿಶದಂ ಕ್ಷೀರಮಾಧುರ್ಯಂ ಸ್ಥಿರಮಾಜ್ಯಸ್ಯ ತೀಕ್ಷ್ಣಕಮ್ ।**
**ಗುಡಸ್ಯ ಪನಸಾದೀನಾಂ ನಿಹಾರ್ರೀತ್ಯಭೀಯತೇ ॥**
**—ಎಂಬ ಉಪನಿಷದ್ಭಾಷ್ಯಾರ್ಥವು ವಿವರಿಸಲ್ಪಟ್ಟಿತು ॥ ೬ ॥**

## (೫) ಶ್ರೀವಾದಿರಾಜಾಚಾರ್ಯ ವ್ಯಾಖ್ಯಾನ :

ಸಂಖ್ಯಾಂ ವಿಭಾಗಯತಿ ವಿಶದೇತೀ ಭಗವದ್ರೂಪಗಳ ಸಂಖ್ಯಾವಿಭಾಗ

**ಮೂಲ॥** ವಿಶದ=೩೫೪. ಸ್ಥಿರ=೨೯. ತೀಕ್ಷ್ಣ=೫೧೦೧ ಮತ್ತು ನಿರಹರ=೨೮೨೫. ಒಟ್ಟು ೮೩೦೯ ರಸಗಳೊಳು ಮೂರೈದುಸಾವಿರ ತ್ರಿಶತನವ,

ವಿಶದಾದಿ ರಸವಿಶೇಷಗಳಲ್ಲಿ ಅಂತರ್ಗತ ಭಗವದ್ರೂಪಗಳ ಒಟ್ಟು ಸಂಖ್ಯೆಯನ್ನು (೮೩೦೯) ನಿರ್ಣಾಯತ್ಮಕವಾಗಿ ಹೇಳುತ್ತಾರೆ– "ವಿಶದ"-ಎಂಬ ಈ ಪದ್ಯದಿಂದ ॥ ೬ ॥

**ಸರ್ವವ್ಯಾಖ್ಯಾನಸಾರ ಸಂಗ್ರಹ :**

ಪೂರ್ವೋಕ್ತ ಪದ್ಯದಲ್ಲಿ ಕ್ಷೀರ, ಘೃತ, ಗುಡ ಮತ್ತು ಫಲಗತ ರಸ ವಿಶೇಷಗಳು. ಅವುಗಳ ಪರ್ಯಾಯನಾಮ, ಅಕ್ಷರಸಂಖ್ಯಾಗತಿಯಿಂದ ಆಯಾಯಾ ರಸವಿಶೇಷಗಳಲ್ಲಿ ನಿಯಾಮಕ ಭಗವದ್ರೂಪಗಳ ಚಿಂತನ ಇತ್ಯಾದಿ ವಿವರಗಳನ್ನು ಹೇಳುತ್ತಾರೆ "**ವಿಶದ**"-ಎಂಬ ಈ ಪದ್ಯದಿಂದ.

ವೃಕ್ಷಗತ ಫಲಗಳು ಪಕ್ವದೆಶೆಯನ್ನು ಹೊಂದಿ ಫಲರಸಭರಿತವಾಗಲು, ನಾಲ್ಕು ಹಂತಗಳಲ್ಲಿ ಈ ಕ್ರಿಯಾವಿಶೇಷವು ಭಗವದ್ವ್ಯಾಪ್ತಿಯಿಂದ ನಡೆಯುವುದು:–

(೧) ಪ್ರಥಮ ಹಂತದಲ್ಲಿ ಎಳೇಕಾಯಿಯ ರೂಪದಲ್ಲಿ ಹೀಚುಕಾಯಿಯಾಗಿರುವುದು.

(೨) ಸ್ವಲ್ಪ ಕಾಲದನಂತರ, ಬಲಿತು, ರಸೋತ್ಪತ್ತಿಯಾಗುವುದು.

(೩) ಇನ್ನೂ ಮಾಗಿದನಂತರ, ರಸವು ಮಾಧುರ್ಯವನ್ನು ಹೊಂದುವ ಸ್ಥಿತಿಗೆ ಬರುವುದು.

(೪) ಅಂತ್ಯ ಘಟ್ಟದಲ್ಲಿ ಚೆನ್ನಾಗಿ ಪಕ್ವವಾಗಿ, ಫಲರಸಭರಿತವಾಗಿ ಪರಿಪಕ್ವದೆಶೆಗೆ ಬರುವುದು. ಇದಕ್ಕೆ "ಫಲ" ಎಂದು ವ್ಯವಹಾರ

ಪೂರ್ವೋಕ್ತ ರಸವಿಶೇಷಗಳನ್ನು ನಾಲ್ಕು ಪ್ರಕಾರವಾಗಿ ವಿವರಿಸ ಬಹುದು :—

(೧) **ಕ್ಷೀರಗತ** ರಸವಿಶೇಷವು. ಇದಕ್ಕೆ "**ವಿಶದ**"-ಎಂದು ಪ್ರತಿನಾಮ

(೨) **ಘೃತಗತ** ರಸವಿಶೇಷವು ಇದಕ್ಕೆ "**ಸ್ಥಿರ**"- ಎಂದು ಪ್ರತಿನಾಮ

(೩) **ಗುಡಗತ** ರಸವಿಶೇಷವು, ಬೆಲ್ಲ ಮತ್ತು ಪನಸ [ಹಲಸಿನ ಹಣ್ಣು.] ಮುಂತಾದ ದ್ರವ್ಯಗತ ಮಾಧುರ್ಯರಸವಿಶೇಷಕ್ಕೆ "**ತೀಕ್ಷ್ಣ**" ಎಂದು ಪ್ರತಿನಾಮ.

[೪] **ಫಲಗತ** ರಸವಿಶೇಷವು. ಇದಕ್ಕೆ "**ನಿರಹರ**"-ಎಂದು ಪ್ರತಿನಾಮ

"ಫಲ" ಎಂದರೆ ಕೇವಲ "ಹಣ್ಣು" ಎಂಬರ್ಥವಲ್ಲ. ಭತ್ತ, ರಾಗಿ, ಗೋಧಿ, ಮಾವು, ಪನಸ-ಇತ್ಯಾದಿ ಫಲಪ್ರದ ವೃಕ್ಷವಿಶೇಷಗಳು ಅಂತ್ಯದಲ್ಲಿ ಕೊಡುವ ಪಕ್ವರೂಪವಾದ "ಬೆಳೆ" ಎಂದರ್ಥ. ಈ ಸಾರಿ ಭತ್ತದ, ರಾಗಿಯ ಫಲ ಚೆನ್ನಾಗಿ ಬಂದಿದೆ- ಎಂದು ಹೇಳುವುದು ರೂಢಿ. ಈ ಬೆಳಸಿಗೆ "ಫಲ" ಎಂದು ವ್ಯವಹಾರ.

ಅಕ್ಷರ ಸ್ಥಾನದ ಆಧಾರದ ಮೇಲೆ ಸಂಖ್ಯಾಗತಿ ಕ್ರಮದಿಂದ ಗಣನ ಮಾಡಿದರೆ.

(೧) **ವಿಶದ** ರಸಾಂತರ್ಗತ ರಸಪದ ವಾಚ್ಯ ಭಗವದ್ರೂಗಳು =೩೫೪

(೨) **ಸ್ಥಿರ** ರಸಾಂತರ್ಗತ ರಸಪದ ವಾಚ್ಯ ಭಗವದ್ರೂಪಗಳು = ೨೯

[೩] **ತೀಕ್ಷ್ಣ**ರಸಾಂತರ್ಗತ ರಸಪದವಾಚ್ಯ ಭಗವದ್ರೂಪಗಳು =೫೧೦೬

[೪] ನಿರಹರ ರಸಾಂತರ್ಗತ ರಸಪದವಾಚ್ಯಭಗವದ್ರೂಪಗಳು = ೨೮೨೫

ಪೂರ್ವೋಕ್ತ ನಾಲ್ಕು ರಸಗಳ ಅಂತರ್ಗತ ಒಟ್ಟು ಭಗವದ್ರೂಪಗಳು = ೮೩೦೯

ಈ ಒಟ್ಟು ಸಂಖ್ಯೆಯನ್ನು ದಾಸರಾಯರು ಮೂರ್ಕೈದು ಸಾವಿರ ತ್ರಿಶತನವ ರೂಪಗಳು-ಎಂದು ಹೇಳಿರುತ್ತಾರೆ. ಈ ಸಂಖ್ಯಾವಿವರ:-

| | | |
|---|---|---|
| ಮೂರ್ಕೈದು ಸಾವಿರ = (ಮೂರು + ಐದು) ಸಾವಿರ | | = ೮೦೦೦ |
| ತ್ರಿಶತ = ಮೂರು (ತ್ರಿ) × ನೂರು (ಶತ) | | = ೩೦೦ |
| ನವ = ಒಂಭತ್ತು | | = ೯ |
| | ಕೂಡಿದರೆ | = ೮೩೦೯ ಭಗವದ್ರೂಪಗಳು |

ವಿಜ್ಞಾನ ತತ್ತ್ವಕ್ಕೆ ಅಭಿಮಾನಿಗಳಾದ ಶ್ರೀ ಮುಖ್ಯ ಪ್ರಾಣದೇವರು ಇತರ ತತ್ವಾಭಿಮಾನಿ ದೇವತೆಗಳಿಗೆ ನಿಯಾಮಕರು, ಆಯಾಯಾ ದ್ರವ್ಯಗತ ರಸವಿಶೇಷ ಗಳಲ್ಲಿ ಅಂತರ್ಗತ ರೂಪದಿಂದ, ತನ್ನಾಮ ಮತ್ತು ತತ್ತದ್ವಾಚ್ಯ ರೂಪಗಳಿಂದ ವಿರಾಜಮಾನನಾಗಿರುವ ಶ್ರೀ ಪರಮಾತ್ಮನ ೮೩೦೯ ರಸಪದ ವಾಚ್ಯ ಭಗವದ್ರೂಪಗಳನ್ನೇ ಶ್ರೀಮುಖ್ಯ ಪ್ರಾಣದೇವರು ಮತ್ತು ಅವರಿಂದ ನಿಯಮ್ಯರಾದ ಇತರ ತತ್ವೇಶರಲ್ಲಿ ಅಂತರ್ಯಾಮಿರೂಪದಿಂದ ಇದ್ದು. ಶ್ರೀ ಪರಮಾತ್ಮನು ಆಯಾಯಾ ರಸವಿಶೇಷಗಳಿಗೆ ಪ್ರವರ್ತನ ರೂಪದಿಂದ, ಆಯಾಯಾ ರಸವಿಶೇಷಗಳ ಹೆಸರಿನಿಂದಲೇ (ವಿಶದಾದಿ) ಕರೆಯಿಸಿಕೊಳ್ಳು ತ್ತಾನೆ. ಈ ರೀತಿಯಲ್ಲಿ ಮನಸ್ಸಿನಲ್ಲಿ ಅನುಸಂಧಾನಪೂರ್ವಕವಾಗಿ ಧ್ಯಾನ ಪ್ರಕರಣ ಕ್ರಮದಿಂದ ತಿಳಿದು. ಯಾರು ಭೋಜನ ಮಾಡುತ್ತಾರೋ ಅಂತ ಹವರೇ ಪರಮ ಜ್ಞಾನಿಗಳು [ವಿಭುದರು] ಅಂತಹ ವಿಭುದರ ಮದಸ್ಸಿನಲ್ಲಿ ಆ ವಿಶಿಷ್ಟ ರೂಪಗಳಿಂದಲೇ ಪ್ರಕಟನಾಗುತ್ತಾನೆ ಎಂದು ತಾತ್ಪರ್ಯ ॥೬॥

# ಪದ್ಯ (೭)

**ಮೂಲ :**

**ಕಪಿಲ ನರಹರಿ ಭಾರ್ಗವತ್ರಯ ।**
**ವಪುಷ ನೇತ್ರದಿ ನಾಸಿಕಾಸ್ಯದಿ ।**
**ಕಪರನಾಮಕ ಜಿಹ್ವೆಯಲಿ ದಂತದಲಿ ಹಂಸಾಖ್ಯ ॥**
**ತ್ರಿಪದಿವಾಚ್ಯ ಹಯಾಸ್ಯ ವಾಚ್ಯದೊ ।**
**ಳಪರಿಮಿತ ಸುಖಪೂರ್ಣ ಸಂತತ ।**
**ಕೃಪಣರೊಳಗಿದ್ದವರವರ ರಸ ಸ್ವೀಕರಿಸಿ ಕೊಡುವ ॥ ೭ ॥**

**ಅವತರಣಿಕೆ :**

ಆಪಾದಮೌಲಿ ಪರ್ಯಂತ ಇರುವ ಸ್ಥೂಲದೇಹದಲ್ಲಿ, ಎರಡು ಕಣ್ಣುಗಳಲ್ಲಿ, ಮೂಗಿನ ಹೊಳ್ಳೆಗಳಲ್ಲಿ, ನಾಲಿಗೆಯಲ್ಲಿ, ಹಲ್ಲಿನಲ್ಲಿ, ವಾಗಿಂದ್ರಿಯದಲ್ಲಿ ವ್ಯಾಪ್ತನಾಗಿರುವ ಕಪಿಲಾದಿ ಭಗವದ್ರೂಪಗಳ ಚಿಂತನೆಯನ್ನು ಮತ್ತು ಸಕಲ ಭೋಜ್ಯ ವಸ್ತುಗಳಲ್ಲಿರುವ ತತ್ತತ ರಸವಿಶೇಷಗಳನ್ನು ಸ್ವಾಖ್ಯರೂಪದಿಂದ್ದು ಸ್ವೀಕರಿಸಿ, ಜೀವರಿಗೆ ತರ್ಪಕನಾಗಿದ್ದಾನೆ ಎಂದು ವಿವರಿಸುತ್ತಾರೆ– **"ಕಪಿಲ"**– ಎಂಬ ಈ ಏಳನೆಯ ಪದ್ಯದಿಂದ ॥೭॥

**ಪ್ರತಿಪದಾರ್ಥ :—**

**ಕಪಿಲ**= ಕಪಿಲನಾಮಕ ಶ್ರೀ ಪರಮಾತ್ಮನು **ನರಹರಿ**= ಶ್ರೀನರಸಿಂಹರೂಪಿ ಪರಮಾತ್ಮನು **ಭಾರ್ಗವ**= ಶ್ರೀ ಪರಶುರಾಮದೇವರು **ತ್ರಯ** =ಪೂರ್ವೋಕ್ತ ಮೂರು ಭಗವದ್ರೂಪಗಳು ಕ್ರಮವಾಗಿ **ವಪುಷ**= ಉಂಗುಷ್ಠ ಆರಂಭ ಮಾಡಿಕೊಂಡು ಶಿರಃ ಪರ್ಯಂತ ಈ ಸ್ಥೂಲದೇಹದ

**ನೇತ್ರದಿ**=ಎರಡು ಕಣ್ಣುಗಳಲ್ಲಿಯೂ, **ನಾಸಿಕ**=ಮೂಗಿನಲ್ಲಿಯೂ ಮತ್ತು **ಆಸ್ಯದಿ**= ಮುಖದಲ್ಲಿಯೂ ಇವೆ. **ಶಫರನಾಮಕ** =ಮತ್ಸ್ಯರೂಪೀ ಪರಮಾತ್ಮನು **ಜಿಹ್ವೆಯಲಿ**=ನಾಲಿಗೆಯಲ್ಲಿಯೂ **ಹಂಸಾಖ್ಯ**— ಹಂಸ ರೂಪೀ ಪರಮಾತ್ಮನು **ದಂತದಲಿ**= ಹಲ್ಲುಗಳಲ್ಲಿಯೂ **ತ್ರಿಪದಿಪಾದ್ಯ**= ಮೂರು ಪಾದಗಳಿಂದ ಯುಕ್ತವಾದ ಗಾಯತ್ರೀ ಮಂತ್ರ ಪ್ರತಿಪಾದ್ಯನಾದ **ಹಯಾಸ್ಯ** = ಶ್ರೀಹಯಗ್ರಿವ ದೇವರು [ಹಯ=ಕುದುರೆಯಂತೆ ಆಸ್ಯ= ಮುಖವುಳ್ಳ] **ವಾಚ್ಯದೊಳು**=ವಾಕ್ಯಗಳಲ್ಲಿ [ವಾಗ್ವ್ಯಾಪಾರರೂಪವಾದ ಕ್ರಿಯೆ] **ಅಪರಿಮಿತ**=ಪತಿಮಿತಿ ಇಲ್ಲದ [ಅಗಣಿತ, ಅಪರಿಚ್ಛಿನ್ನವಾದ] **ಸುಖಪೂರ್ಣ**= ಆನಂದ ಪೂರ್ಣನಾದ ಶ್ರೀ ಪರಮಾತ್ಮನು **ಸಂತತ**=ಯಾವಾಗಲೂ [ಎಡಬಿಡದೆ] **ಕೃಪಣರೊಳಗಿದ್ದು**=ದೀನರಾದ ಶರಣಜನರಲ್ಲಿದ್ದು [ಕೃಪಣ ಎಂಬ ಶಬ್ದಕ್ಕೆ ದೇಹದಲ್ಲಿ ಎಂತ ಒಂದು ಅರ್ಥ ; ನಿಷ್ಕಿಂಚನರು ಅಥವಾ ದೇವತೆಗಳು ಎಂತ ಒಂದು ಅರ್ಥ ; ಅನ್ನಾತುರನಾದ ಕ್ಷುದ್ಬಾಧೆಯಿಂದ ಪೀಡಿತನಾದ ಪುರುಷ ಎಂತ ಇನ್ನೊಂದು ಅರ್ಥ] **ಅವರವರ**=ಆಯಾಯಾ ಜೀವರ ಭೋಜ್ಯ ಪದಾರ್ಥಗತ **ರಸ**=ರಸವಿಶೇಷಗಳನ್ನು **ಸ್ವೀಕರಿಸಿ**=ಸ್ವಾಖ್ಯರಸ ಸ್ವೀಕರಿಸಿ **ಕೊಡುವ**—ಬಿಂಬಕ್ರಿಯಾದ್ವಾರಾ ಜೀವರಿಗೆ ಕೊಟ್ಟು, ತೃಪ್ತಿಪಡಿಸುವನು [ರಸವಿಭಾಗಮಾಡುತ್ತಾನೆ.] ॥ ೭ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಕಪಿಲನಾಮಕ ಶ್ರೀ ಪರಮಾತ್ಮನು ಉಂಗುಷ್ಠ ಆರಂಭಮಾಡಿ, ಶಿರಃಪರಿಯಂತ ಸ್ಥೂಲದೇಹಾಕಾರನಾಗಿ ಮಾನುಷ ಪಶ್ವಾದಿ ಶಬ್ದವಾಚ್ಯನಾಗಿ, ತ್ವಗಿಂದ್ರಿಯಾಂತರ್ಗತನಾಗಿ ಇರೋವನಾಗಿದ್ದಾನೆ. ಶ್ರೀ ನರಸಿಂಹ ರೂಪಿ ಪರಮಾತ್ಮ ನೇತ್ರದ್ವಯಗಳಲ್ಲಿದ್ದಾನೆ. ಶ್ರೀ ಪರಶುರಾಮದೇವರು ಮೂಗಿನ ಮುಖಭೂತವಾದ ದ್ವಾರ ದ್ವಯಗಳಲ್ಲಿ ಇದ್ದಾರೆ. ಈ ಮೂರು ಭಗವದ್ರೂ

ಷಗಳು ಮೂರು ಇಂದ್ರಿಯಗಳಲ್ಲಿ ಭೋಜನಾದಿಗಳಿಗೆ ಸಾಧನಭೂತವಾದ ಕಾರ್ಯಪ್ರೇರಕರಾಗಿದ್ದಾರೆ [ಒಂದು ಪದಾರ್ಥ ಭೋಜನಮಾಡಬೇಕಾದರೆ, ಕಠಿಣ, ಮೃದು, ಶೀತೋಷ್ಣಗಳು ತಿಳಿಯಬೇಕು, ಅದು ತ್ವಗಿಂದ್ರಿಯದ ಕಾರ್ಯ. ತದ್ಗತನಾಗಿ ಕಪಿಲನಾಮಕ ಪರಮಾತ್ಮ ತಿಳಿಸತಾನೆ.] ನಂತರ ಆ ಪದಾರ್ಥಗಳ ವರ್ಣಭೇದಗಳೇನು, ಭೋಜನೋದ್ದೇಶ್ಯ ನೋಡೋಣವೇನು, ನೇತ್ರಗಳಿಗೆ ಪದಾರ್ಥಸೌಷ್ಠವ ಇಂಪಣವಾಗಿದೆಯೋ ಇಲ್ಲವೇ ಎಂತ ಇತ್ಯಾದಿ ವ್ಯಾಪಾರಗಳು ನೇತ್ರೇಂದ್ರಿಯದಲ್ಲಿ ನೃಸಿಂಹರೂಪೀ ಪರಮಾತ್ಮ ಇದ್ದು ಆ ಕಾರ್ಯ ನಡಸುತ್ತಾನೆ. ನಾಸಿಕೇಂದ್ರಿಯದಲ್ಲಿ ಪರಶುರಾಮದೇವರು ಇದ್ದು, ಭೋಜನದ್ರವ್ಯಗತ ಸುಗಂಧ ದುರ್ಗಂಧಗಳ ತಿಳಿಸತಾನೆ. ಮತ್ಸ್ಯರೂಪಿ ಪರಮಾತ್ಮ ಜಿಹ್ವಾಂತರ್ಗತನಾಗಿ ಸುರಸ ದುಷ್ಟರಸಗಳ ಪ್ರಾಚುರ್ಯಾಪ್ರಾಚುರ್ಯಗಳ ತಿಳಿಸುತಾನೆ. ಮುಖಗತ ಹಲ್ಲುಗಳಲ್ಲಿ ಹಂಸರೂಪೀ ಪರಮಾತ್ಮ ಇದ್ದು, ಕಠಿಣದ್ರವ್ಯಗಳು ದಂತಗಳ ದ್ವಾರಾ ಅಗಿಸಿ, ರಸವ್ಯಕ್ತಮಾಡಿ, ಕಂಠದ್ವಾರಾ ಉದರಪ್ರವೇಶಕ್ಕೆ ಅನುಕೂಲಮಾಡಿಕೊಡುತ್ತಾನೆ. ಮೂರುಪಾದವುಳ್ಳದ್ದು "ತ್ರಿಪದಿ"– ಎಂತ ಸಾಂಕೇತವು. ನಾಲ್ಕು ವೇದಗಳು ನಾಲ್ಕು ಪಾದಗಳು. ಅದರಲ್ಲಿ ಅಥರ್ವಣವೇದ ವ್ಯತಿರಿಕ್ತವಾಗಿ ಋಗಾದಿ ವೇದಗಳಿಂದ ಮತ್ತು ಗಾಯತ್ರೀ ಪಾದತ್ರಯಗಳಿಂದ ಪ್ರತಿಪಾದ್ಯನಾದ ಶ್ರೀ ಹಯಗ್ರೀವದೇವರು ಮುಖದಲ್ಲಿ ಇದ್ದವನಾಗಿ, ಭೋಜನ ಪದಾರ್ಥಗಳಿಗೆ ಮುಖದಲ್ಲಿ ಅವಕಾಶ ಕೊಡತಾನೆ. ಅಪರಿಚ್ಛಿನ್ನವಾದ ಆನಂದವೇ ಶರೀರವಾಗಿ ಸುಗುಣಗಳಿಂದ ಪೂರ್ಣನಾದವನಾದ್ದರಿಂದ ಆಯಾಯಾ ಅಧಿಷ್ಠಾನಗತ ಅಪರಿಮಿತ ಸುಖಪೂರ್ಣಗಳಾದ, ತನ್ನ ಸ್ವಾಖ್ಯಗಳ ತಾನು ಸ್ವೀಕರಿಸುತಾ, "ಕೃಪಣ"ರೊಳಗೆ ಅಂದರೆ, ದೇಹದೊಳಗೆ ಎಂತ ಒಂದು ಅರ್ಥ, ನಿಷ್ಕಿಂಚನರು ಎಂತಲೂ ಒಂದು ಅರ್ಥ, ದೇವತೆಗಳು ಎಂತಲೂ ಅರ್ಥ. ಪ್ರಕೃತ ಕೃಪಣನಾದ ಅನ್ನಾತುರನಾಗಿ ಜಠರಾಗ್ನಿಯ ಪ್ರಜ್ವಲನದಿಂದ ಅನ್ನಾಕಾಂಕ್ಷನಾಗಿ ಇದ್ದ ಪುರುಷನಲ್ಲಿ ಪೂರ್ವೋಕ್ತ ರೂಪಗಳಿಂದ ಇದ್ದವನಾಗಿ, ಆಯಾ ಪ್ರಾಣಿಗಳಾದ ಮಾನುಷ ಪಶ್ವಾದಿ ಜೀವರ ಭೋಜ್ಯಪದಾರ್ಥಗಳ ತದ್ಗತ ರಸಗಳಲ್ಲಿ ಸ್ವಾಖ್ಯರಸವಿಶೇಷ ವಸ್ತುವ ಮಾತ್ರ ತಾನು ಸ್ವೀಕರಿಸಿ, ಯಾವಾಗಲೂ ಅವರವರ ರಸ ಅವರವರಿಗೆ ಕೊಡತಾನೆ.

ಅಧಿಕಾರಿಗಳು ದಾವದು ಭಕ್ಷಣಮಾಡಿದ ಕಾಲಕ್ಕೂ ಮೇಲೆ ಹೇಳಿದ ಪ್ರಕಾರ ಆಯಾಯಾ ಇಂದ್ರಿಯಗತ ಭಗವದ್ರೂಪಗಳ ವ್ಯಾಪಾರ ಅನುಸಂಧಾನ ಪೂರ್ವಕವಾಗಿ ಭೋಜನಮಾಡಬೇಕು. ಅದೇ ಪ್ರಕಾರ ಅನ್ಯರಿಗೆ ಭೋಜನಮಾಡಿಸಿದರೂ, ಈ ಅನುಸಂಧಾನ ಮಾಡಬೇಕು ಎಂತ ತಾತ್ಪರ್ಯ ॥ ೭ ॥

**(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :–**

ಕಪಿಲನಾಮಕನಾದ ಶ್ರೀಪರಮಾತ್ಮನು ಈ ಶರೀರದ ನೇತ್ರಗಳಲ್ಲಿಯೂ ನರಸಿಂಹರೂಪಿಯಾದವನು ಮೂಗಿನೊಳಗೂ, ಪರಶುರಾಮನು ಬಾಯಿಯೊಳಗೂ ಹೀಗೆ ಮೂರು ಮೂರ್ತಿಗಳು ಈ ಮೂರು ಇಂದ್ರಿಯಂಗಳಲ್ಲಿರುವರು. ಮತ್ಸ್ಯನಾಮಕ ಪರಮಾತ್ಮನು ನಾಲಿಗೆಯಲ್ಲಿಯೂ, ಹಂಸನಾಮಕನು ದಂತಗಳಲ್ಲಿಯೂ ಇರುವನು. "ತ್ರಿ"–ಎಂದರೆ ವೇದಗಳಿಗೆ ಹೆಸರು,

**ಭಾಗವತಪ್ರಥಮಸ್ಕಂಧಲ್ಲಿ-**

**"ಸ್ತ್ರಿ ಶೂದ್ರ ದ್ವಿಜ ಬಂಧೂನಾಂ ತ್ರಯೀ ನ ಶ್ರುತಿ ಗೋಚರಾ:"** –ಎಂದರೆ, ಸ್ತ್ರಿಯರು, ಶೂದ್ರರು ಮತ್ತು ಬ್ರಾಹ್ಮಣಾಭಾಸರು ಇವರುಗಳಿಗೆ **ತ್ರಯೀ = ವೇದವು** ಶ್ರುತಿಗೋಚರವಲ್ಲವೆಂದು ಹೇಳಿರುವರು. ಅದೇ "**ತ್ರಯೀ**" ಶಬ್ದವನ್ನು ಇಲ್ಲಿ "ತ್ರಿ"–ಎಂದು ಉಪಯೋಗಿಸಿರುವರು. ಇಂತಹ ವೇದಪ್ರತಿಪಾದ್ಯನಾದ ಹಯಗ್ರೀವನು ವಾಕ್ಯದೊಳಗೆ ಇರುವನು. ಹೀಗೆ ಶಾಶ್ವತವಾದ ಅಪರಿಮಿತಾನಂದಪೂರ್ಣನಾದ ಶ್ರೀ ಪರಮಾತ್ಮನು "**ಕೃಪಣೋಯೋ ಅಜಿತೇಂದ್ರಿಯಃ**"-ಎಂಬ **ಭಾಗವತ ವಾಕ್ಯಾನುಸಾರ** "ಕೃಪಣ"ನೆಂದರೆ ಇಂದ್ರಿಯ ನಿಗ್ರಹಮಾಡಲು ಶಕ್ತನಲ್ಲದವನು. ಎಂದರ್ಥ. ಇಂತಹ ಜನರೊಳಗಿದ್ದು, ಅವರವರ ರಸ ಸ್ವೀಕರಿಸುವನು, ಅಂದರೆ, ವಿಷಯಭೋಗವೆಂದರ್ಥ.

ಕಣ್ಣೊಳಗಿದ್ದು, ನೋಡುವನು, ಮೂಗಿನೊಳಗಿದ್ದು ಆಘ್ರಾಣಿಸುವನು, ಬಾಯೊಳಗಿದ್ದು ಭುಂಜಿಸುವನು. ಈ ಕಾರ್ಯಗಳನ್ನು ಶ್ರೀಪರಮಾತ್ಮನು

ಮಾಡಿ ಅವರನ್ನು ತೃಪ್ತಿಪಡಿಸುವನು. ಅಜಿತೇಂದ್ರಿಯರೊಳಗಿದ್ದು-ಎಂದು ಏಕೆ ಹೇಳಿದರೆಂದರೆ-ಜಿತೇಂದ್ರಿಯರಿಗೆ ಭಗವದ್ವ್ಯತಿರಿಕ್ತ ವಸ್ತುಗಳಲ್ಲಿ ಅಭಿಲಾಷೆ ಇರುವುದಿಲ್ಲವಾದ್ದರಿಂದ, ಅಜಿತೇಂದ್ರಿಯರೊಳಗಿದ್ದು ಆ ವಿಷಯ ಗಳನ್ನು ಸ್ವೀಕರಿಸುವನು. ತಾನು ಸ್ವೀಕರಿಸುವುದರಿಂದ ಜೀವರಿಗೆ ತೃಪ್ತಿ ಯಾಗುವುದು ॥ ೭ ॥

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಸಜ್ಜನರ ಅವಯವಗಳಲ್ಲಿ ನಾನಾರೂಪದಿಂದ ನಿಂತು ಶ್ರೀಹರಿ ಪದಾರ್ಥ ಗತ ಅವರವರ ರಸ ಸ್ವೀಕರಿಸಿ ಕೊಡುವನೆಂದು ಹೇಳುತ್ತಾರೆ- **"ಕಪಿಲ"**- ಎಂಬ ಪದ್ಯದಿಂದ.

ಕಪಿಲ, ನರಹರಿ, ಭಾರ್ಗವ [ಪರಶುರಾಮ] ಈ ಮೂರು ಭಗವ ದ್ರೂಪಗಳು ಕಣ್ಣು [ನೇತ್ರ], ಮೂಗು [ನಾಸಿಕ] ಮತ್ತು ಮುಖ (ಆಸ್ಯದಿ) ಇವುಗಳಲ್ಲಿ, ಮತ್ಸ್ಯನಾಮಕ (ಶಫರ) ನಾಲಿಗೆಯಲ್ಲಿ, ದಂತದಲ್ಲಿ ಹಂಸ ಮೂರ್ತಿ, ಗಾಯತ್ರೀ ಪ್ರತಿಪಾದ್ಯ ಹಯಗ್ರೀವ ವಾಕ್ಯದಲ್ಲಿ, ಏವಂ ರೀತ್ಯಾ ಇರುತ್ತಾನೆಂದು ತಿಳಿಯತಕ್ಕದ್ದು. ಸಂತತ = ನಿರಂತರ ॥೭॥

## (೪) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ :

ಕಪಿಲೇತಿ॥ ತ್ರಯವಪುಷ = ದೇಹತ್ರಯ॥ ಐತರೇಯ ಭಾಷ್ಯೇ ॥ ವ್ಯಾಪ್ತತ್ವಾಜ್ಜೀವ ದೇಹೇಷು ಮುಖೇ ವಿಷ್ಣೋರ್ಮುಖಂ ಸ್ಮೃತಂ॥ ನಾಸಯೋಃ ನಾಸಿಕಾ ವಿಷ್ಣೋಃ ಅಕ್ಷ್ಣೋರೇವ ತದಕ್ಷಿಣೀ ವಿಷ್ಣೋರ್ವಾ ಭಾರ್ಗವೋ ರಾಮಃ ಘ್ರಾಣೋಸ್ಯ [ಪ್ರಾಣ್ಯೋಸ್ಯ] ನರಕೇಸರಿ| ಚಕ್ಷುಸ್ತು ಕಪಿಲೋ ವಿಷ್ಣುಃ ಇತ್ಯೈಶ್ವರ್ಯಾತ್ ಅಂಗಾಂಗಿತ್ವೋಕ್ತೇಶ್ಚ॥ ಮತ್ಸ್ಯೋ ಜಿಹ್ವಾಗತೋ ಹಂಸೋ ದಂತಾನಾಶ್ರಿತ್ಯ ತಿಷ್ಠತಿ॥ ಗಂಧರ್ವಾಸ್ಯಃ ಸದಾವಾ ಚೀತಿ॥ ತ್ರಿಪದಾ = ಗಾಯತ್ರೀ॥ ಕೃಪಣ = ದೀನ ॥೭॥

## (ಆ) "ಗುರುಹೃದಯಪ್ರಕಾಶಿಕೆ"ವ್ಯಾಖ್ಯಾನ :

ದೇವರು ನೇತ್ರವೆಂಬ ಕಣ್ಣಿನಲ್ಲಿ ಕಪಿಲರೂಪನೂ, ನಾಸಿಕವೆಂಬ ಮೂಗಿನಲ್ಲಿ ಭಾರ್ಗವನೆಂಬ ಪರಶುರಾಮರೂಪನೂ, ಆಸ್ಯವೆಂಬ ಬಾಯಿಯಲ್ಲಿ ನೃಸಿಂಹರೂಪನೂ ಆಗಿರುವನು. ನಾಲಿಗೆಯಲ್ಲಿ ಮತ್ಸ್ಯಮೂರ್ತಿ, ಹಲ್ಲುಳಲ್ಲಿ ಹಂಸರೂಪನು, ವಾಕ್ಯಗಳಲ್ಲಿ ತ್ರಿಪದಿಪಾದ್ಯನೆಂಬ ಗಾಯತ್ರೀಪ್ರತಿಪಾದ್ಯ ಹಯಗ್ರೀವರೂಪನೂ ಇದ್ದು, ತಾನು ಅಪರಿಮಿತಸುಖಪರಿಪೂರ್ಣನಾದಾಗ್ಯೂ, ಕೃಪಣರೆಂದರೆ, ದೀನರಾದ ಜೀವರಲ್ಲಿದ್ದು ಆಯಾಯಾ ಜೀವ ಯೋಗ್ಯರಸಗಳನ್ನು ತಾನು ಸ್ವೀಕರಿಸಿ, ಕೊಡುವನು–ಎಂದರೆ, ಜೀವರಿಗೆ ಭೋಗಶಕ್ತಿವ್ಯಕ್ತಮಾಡುವನು. ಪ್ರತಿಬಿಂಬಕ್ರಿಯವು ಬಿಂಬಾಧೀನವಾದುದರಿಂದ ಈ ರೀತಿ ಚಿಂತಿಸಬೇಕೆಂದರ್ಥ,

**"ಕಪಿಲಾತ್ಮಕ ದಿವ್ಯೇನ ಚಕ್ಷುಷಾತ್ವವಲೋಕಯ"**
—ಎಂಬುದೇ ಮೊದಲಾದ **ಮಂತ್ರಾರ್ಥ** ವಿವರಿಸಿತು. ॥ ೭ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ :

ಭೋಜನಕ್ರಿಯೆ ಎಂಬುದೊಂದು ಸುಯಜ್ಞ, ಈ ಯಜ್ಞರೂಪವಾದ ಸುಕ್ರಿಯೆಯಲ್ಲಿ ತತ್ಸಂಬಂಧವಾದ ಇಂದ್ರಿಯವಿಶೇಷಗಳು. ಅವುಗಳಲ್ಲಿ ನಿಯಾಮಕನಾಗಿರುವ ಶ್ರೀಪರಮಾತ್ಮನ ಭಗವದ್ರೂಪಗಳ ಚಿಂತನಾದಿ ವಿವರಗಳನ್ನು ತಿಳಿಸುತ್ತಾರೆ **"ಕಪಿಲ"**—ಎಂಬ ಸಂಧಿಗತ ಈ ಏಳನೆಯ ಪದ್ಯದಿಂದ.

[೧] ನಮ್ಮ ಮುಖಗತ **ನೇತ್ರ ದ್ವಯಗಳಲ್ಲಿ ಕಪಿಲ** ನಾಮಕ ಪರಮಾತ್ಮನು ಇದ್ದು, ಭೋಜನಯೋಗ್ಯವಾದ ಪದಾರ್ಥಗಳನ್ನು ತಾನು ನೋಡಿ. ತದ್ಗತಸ್ವಾಖ್ಯರಸಗಳನ್ನು ಸ್ವೀಕರಿಸಿ, ಭೋಜನಮಾಡುವ ಜೀವನ ಕಣ್ಣುಗಳಿಗೆ ತಜ್ಜನ್ಯವಾದ ತೃಪ್ತಿರೂಪವಾದ ಸುಖವನ್ನೀಯುವನು, **ಈ ಕಾರಣದಿಂದಲೇ ನೈವೇದ್ಯ ಸಮರ್ಪಣ ಕಾಲದಲ್ಲಿ ಶ್ರೀ ಪರಮಾತ್ಮನ ಮುಂದೆ ಪಾಕಗೈದ ಸುಭೋಜನಪದಾರ್ಥಗಳನ್ನಿಟ್ಟು,**

**"ಕಪಿಲಾತ್ಮಕ ದಿವ್ಯೇನ ಚಕ್ಷುಷಾ ತ್ವ ವಿಲೋಕಯ" ॥ [ತಂತ್ರ ಸಾರ]** ಎಂದು ಪ್ರಾರ್ಥಿಸುತ್ತೇವೆ.

(೨) ಘ್ರಾಣೇಂದ್ರಿಯವಾದ **ಮೂಗಿನಲ್ಲಿ ನರಸಿಂಹರೂಪೀ** ಶ್ರೀ ಪರಮಾತ್ಮನು ಇದ್ದು, ಪದಾರ್ಥಗತ ಸುಗಂಧ ರಸವಿಶೇಷಗಳಲ್ಲಿ ಸ್ವರೂಪರಸವನ್ನು ತಾನುಸ್ವೀಕರಿಸಿ, ತದ್ವಾರಾ ದೋಷಪರಿಹಾರಮಾಡಿ, ಜೀವರಿಗೆ ಘ್ರಾಣೇಂದ್ರಿಯದ್ವಾರಾ ಗಂಧಸ್ವೀಕಾರ ರೂಪವಾದ ತೃಪ್ತಿಯನ್ನೀಯುವನು.

**"ನೃಸಿಂಹಾತ್ಮಕರೂಪೇಣ ದಿವ್ಯ ಘ್ರಾಣೇಂದ್ರಿಯೇಣ ತು ।**
**ತದ್ವಸ್ತುನಿಷ್ಠಗಂಧಂ ಚ ದಿವ್ಯಮಾಜಿಘ್ರ ಚಿನ್ಮಯ ॥"**
**[ತಂತ್ರಸಾರ]**

(೩) ಬಾಯಿಯಲ್ಲಿ,[ಆಸ್ಯ]ಪರಶುರಾಮರೂಪೀ ಶ್ರೀ ಪರಮಾತ್ಮನು ಇದ್ದು ಸ್ವಾಖ್ಯರಸಸ್ವೀಕಾರಮಾಡಿ, ತದ್ವಾರಾ ಜೀವರಿಗೆ ತೃಪ್ತಿಯನ್ನೀಯುವನು.

**"ಭೃಗುರಾಮಸ್ವರೂಪೇಣ ದಿವ್ಯವಾಗಿಂದ್ರಿಯೇಣ ತು ॥"**
**[ತಂತ್ರಸಾರ]**

(೪) ರಸನೇಂದ್ರಿಯವಾದ **ನಾಲಿಗೆಯಲ್ಲಿ** ಶಫರನಾಮಕನಾದ ಮತ್ಸ್ಯರೂಪೀ ಶ್ರೀಪರಮಾತ್ಮನು ಸನ್ನಿಹಿತನಾಗಿದ್ದು. ರಸನೇಂದ್ರಿಯ ವ್ಯಾಪಾರರೂಪವಾದ ರುಚಿಯನ್ನು ಜೀವರಿಗೆ ಕೊಟ್ಟು, ತದ್ವಾರಾ ಸುಖ ರೂಪವಾದ ತೃಪ್ತಿಯನ್ನು ಕೊಡುವನು.

[೫] ಆಹಾರವನ್ನು ಚೆನ್ನಾಗಿ ಅಗಿದು ನಾಲಿಗೆಗೆ ಅಣಿಮಾಡಿಕೊಡುವ **ಹಲ್ಲುಗಳಲ್ಲಿ ಹಂಸರೂಪೀ** ಶ್ರೀ ಪರಮಾತ್ಮನಿದ್ದು, ಖಾದ್ಯರೂಪವಾದ ಆಹಾರವಿಶೇಷಗಳು ಚೆನ್ನಾಗಿ ಚೂರ್ಣವಾಗುವಂತೆ ಮಾಡಿಸುವನು. ಈ ಹಂಸಾಖ್ಯ ಶ್ರೀಪರಮಾತ್ಮನು ಕಠಿಣದ್ರವ್ಯಗಳನ್ನು ದಂತದ್ವಾರಾ ಅಗಿಸಿ,

ರಸಾಭಿವ್ಯಕ್ತಿಮಾಡಿ, ಕಂಠದ್ವಾರಾ ಉದರಪ್ರವೇಶಕ್ಕೆ ಅನುಕೂಲ ಮಾಡಿಕೊಡುತ್ತಾನೆ.

[೬] ಮೂರುಪಾದವುಳ್ಳದ್ದಕ್ಕೆ **"ತ್ರಿಪದಿ"**- ಎಂದು ಸಾಂಕೇತವು. ಅಥರ್ವಣವೇದ ವ್ಯತಿರಿಕ್ತವಾದ ಋಗ್ವೇದ, ಯಜುರ್ವೇದ ಮತ್ತು ಸಾಮ ವೇದಗಳೆಂಬ ವೇದತ್ರಯಗಳು. **ಗಾಯತ್ರಿ** ಮಂತ್ರವು ಮೂರುಪಾದ ಉಳ್ಳದ್ದು. ವೇದೋಕ್ತ ತ್ರಿಪಾದಗಳಿಂದ ಯುಕ್ತವಾದ ಗಾಯತ್ರಿ ಪ್ರತಿ ಪಾದ್ಯನಾದ **ಶ್ರೀಹಯಗ್ರೀವ** ದೇವರು **ವಾಕ್ಯಗಳಲ್ಲಿ** ಇದ್ದು ವಾಗ್ವ್ಯಾಪಾರ ರೂಪವಾದ ಕ್ರಿಯಾವಿಶೇಷವನ್ನು ನಡೆಯಿಸುವನು. ಅಪರಿಮಿತ ಮಹಿಮಾ ಸಂಪನ್ನನಾದ ಶ್ರೀಪರಮಾತ್ಮನು ಇಂತು ನಾನಾರೂಪವಿಶಿಷ್ಟನಾಗಿ ಮುಖ ಗತ ಇಂದ್ರಿಯಗಳಲ್ಲಿದ್ದು, ಕ್ರಿಯಾವಿಶೇಷಗಳನ್ನು ನಡೆಯಿಸಿದರೂ. ತಜ್ಜನ್ಯ ವಾದ ಫಲಗಳಿಂದ ನಿರ್ಲಿಪ್ತನಾಗಿರುವನು. ಇಂತು ಸಮಸ್ತ **ಅಧಿಷ್ಠಾನ** ಗಳಲ್ಲಿ ಅಂತರ್ಯಾಮಿರೂಪತ್ವೇನ ಇದ್ದರೂ, ಅವುಗಳಿಂದ ಅತ್ಯಂತ **ಭಿನ್ನ** ವಾಗಿರುವ ಶ್ರೀ ಪರಮಾತ್ಮನು ಜಗದ್ವಿಲಕ್ಷಣನು. ಅಪರಿಚ್ಛಿನ್ನವಾದ ಆನಂದವೇ ಶರೀರವಾಗಿ ಅನಂತಕಲ್ಯಾಣ ಗುಣಗಣಗಳಿಂದ ಪರಿಪೂರ್ಣನಾದ ವನು. ಏತಾದೃಶಮಹಿಮೋಪೇತನಾದ ಅಪರಿಮಿತ ಸುಖಪೂರ್ಣರೂಪನಾದ ಶ್ರೀಪರಮಾತ್ಮನು ನಿತ್ಯಾನಂದ ಉದ್ರಿಕ್ತನು. ದೀನರಾದ ಶರಣಾಗತ ಜನರಲ್ಲಿ [ಕೃಪಣ] ನಿರಂತರ ತಾನು ಅಧಿಷ್ಠಿತನಾಗಿದ್ದು ಆಯಾಯಾ ಜೀವರ ಭೋಜ್ಯ ಪದಾರ್ಥಗಳ ತದ್ಗತರಸಗಳಲ್ಲಿ ಸ್ವಾಖ್ಯರಸವಿಶೇಷವನ್ನು ಮಾತ್ರ ತಾನು ಸ್ವೀಕರಿಸಿ, ಬಿಂಬಕ್ರಿಯಾದ್ವಾರಾ ಆಯಾಯಾ ಜೀವರುಗಳಿಗೆ ಭೋಗಶಕ್ತಿ ಅಭಿವ್ಯಕ್ತಮಾಡಿ, ತೃಪ್ತಿಯನ್ನು ಕೊಡುತ್ತಾನೆ,

**"ಕೃಪಣ"**–ಎಂಬ ಪದಕ್ಕೆ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ "ದೇಹ" ಎಂತಲೂ,"ದೇವತೆಗಳು" (ನಿಷ್ಕಿಂಚನರು) ಎಂತಲೂ ಹೇಳಿರುವರು. ಭೋಜನಕ್ರಿಯಾರೂಪವಾದ ಈ ಮಹಾಸುಯಜ್ಞದಲ್ಲಿ ಶ್ರೀಪರಮಾತ್ಮನು ರಸವಿಭಾಗಮಾಡಿ, ಜಡರಸದ್ವಾರಾ ದೇಹಕ್ಕೆ ಉಪಚಯಮಾಡಿಸುವನು ಆಯಾಯಾ ತತ್ತ್ವದೇವತೆಗಳಿಗೆ "ಆತ್ಮಪ್ರದರ್ಶನ" ರೂಪವಾದ ಆನಂದ ರಸವನ್ನೀಯುವನು. ಇದರಿಂದ ಎರಡು ಅರ್ಥಗಳೂ ಗ್ರಾಹ್ಯ. ಅನ್ನಾತುರ

ನಾಗಿ, ಜಠರಾಗ್ನಿಯ ಪ್ರಜ್ವಲನದಿಂದ ಅನ್ನಾಕಾಂಕ್ಷನಾಗಿರುವ ಪುರುಷನಿಗೆ "ಕೃಪಣ"ನೆಂತಲೂ ಹೆಸರು. ಜಿತೇಂದ್ರಿಯರಲ್ಲದ ದೀನರೇ ಕೃಪಣರು. "ವಪುಷ" ಎಂಬ ಪದಕ್ಕೆ ಇತರ ವ್ಯಾಖ್ಯಾನಕಾರರು ಶರೀರಗತ ಕಣ್ಣು ಮೂಗು ಬಾಯಿ, ನಾಲಿಗೆ,ಹಲ್ಲುಗಳು ಎಂಬ ಅವಯುವಗಳನ್ನು ಪರಿಗಣಿಸಿ, ತದ್ಗತ ಭಗವದ್ರೂಪಗಳು. ಅವುಗಳ ವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ ಆದರೆ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಉಂಗುಷ್ಠ ಆರಂಭಮಾಡಿ ಶಿರ: ಪರ್ಯಂತ ವ್ಯಾಪ್ತವಾಗಿರುವ ಸ್ಥೂಲ ದೇಹವೆಂದು ಅರ್ಥಮಾಡಿರುತ್ತಾರೆ. ಸ್ಥೂಲದೇಹದ (ವಪುಷ) ತ್ವಗಿಂದ್ರಿಯವು (ಚರ್ಮ), ಭೋಜ್ಯ ಪದಾರ್ಥ ಗಳ ಕಾಠಿಣ್ಯ, ಮೃದುತ್ವ ಮತ್ತು ಶೀತೋಷ್ಣಗಳ ಅನುಭವನ್ನು ತಿಳಿಯುವ ಜ್ಞಾನೇಂದ್ರಿಯುವಾದ್ದರಿಂದ ತದ್ಗತನಾಗಿ [**ಕಪಿಲ** ನಾಮಕ ಪರಮಾತ್ಮನು ಸ್ಥೂಲದೇಹಾಕಾರನಾಗಿ ತ್ವಗಿಂದ್ರಿಯಾಂತರ್ಗತನಾಗಿ ಇದ್ದಾನೆ ಎಂದು ವಿವರಿಸಿರುವರು. ಶ್ರೀ ಪರಮಾತ್ಮನು ಖಂಡಾಖಂಡ ರೂಪಪಳಿಂದ ಇದ್ದು. ಕ್ರಿಯಾ ವಿಶೇಷಗಳನ್ನು ನಡಿಯಿಸುತ್ತಾನಾದ್ದರಿಂದ. ಕಪಿಲನಾಮಕನು ಖಂಡ ರೂಪದಿಂದ ನೇತ್ರದ್ವಯಗಳಲ್ಲಿ ಇದ್ದರೂ. ದೇಹಾದ್ಯಂತ ವ್ಯಾಪ್ತವಾಗಿರುವ ತ್ವಗಿಂದ್ರಿಯದಲ್ಲಿ ಅಂಖಡರೂಪದಿಂದ್ದಾನೆ ಎಂದು ಅನುಸಂಧಾನಿಸಬಹೂದು.

## ಪೂರ್ವೋಕ್ತ ಭಗವದ್ರೂಪಗಳ ಚಿಂತನಾಕ್ರಮ :

| ಕ್ರಮ ಸಂಖ್ಯೆ | ಇಂದ್ರಿಯ | ಭಗವದ್ರೂಪ | ಭಗವದ್ವ್ಯಾಪಾರ |
|---|---|---|---|
| ೧ | ಎರಡು ಕಣ್ಣುಗಳು | ಕಪಿಲನಾಮಕ ಶ್ರೀಪರಮಾತ್ಮ | ಭೋಜಪದಾರ್ಥಗಳನ್ನು ತನ್ನ ದಿವ್ಯ ದೃಷ್ಟಿಯಿಂದ ವೀಕ್ಷಿಸಿ ದೋಷಪರಿಹಾರ ಮಾಡುವನು. ಜೀವನ ಕಣ್ಣಿಗೆ ಇಂಪಿನ ರಸ ವಿಶೇಷ. |
| ೨ | ಮೂಗಿನಲ್ಲಿ | ನರಸಿಂಹರೂಪೀ ಶ್ರೀಪರಮಾತ್ಮ | ಪದಾರ್ಥಗತ ಸುಗಂಧ ರೂಪ ವಾದ ರಸವಿಶೇಷಗಳ ಸ್ವೀಕಾರ |
| ೩ | ಬಾಯಿ | ಪರಶುರಾಮರೂಪೀ ಶ್ರೀಪರಮಾತ್ಮ | ಭೋಜ್ಯಯೋಗ್ಯ ದ್ರವ್ಯಗತ ಸ್ವಾದ್ಯರಸ ಸ್ವೀಕಾರ |
| ೪ | ನಾಲಿಗೆ | ಮತ್ಸ್ಯರೂಪೀ ಶ್ರೀಪರಮಾತ್ಮ | ರಸನೇಂದ್ರಿಯದ ವ್ಯಾಪಾರ. ಜೀವರಿಗೆ ರಸಾಸ್ವಾದನೆ. |
| ೫ | ಹಲ್ಲುಗಳು | ಹಂಸನಾಮಕ ಶ್ರೀಪರಮಾತ್ಮ | ಕಠಿಣ ಆಹಾರ ದ್ರವ್ಯಗಳನ್ನು ಚೆನ್ನಾಗಿ ಅಗಿದು, ನಾಲಿಗೆಗೆ ಒದಗಿಸುವ ಕ್ರಿಯೆ. |
| ೬ | ವಾಕ್ಯ (ಮಾತು) | ಶ್ರೀ ಹಯಗ್ರೀವ ದೇವರು (ಗಾಯಿತ್ರಿ ಪ್ರತಿಪಾದ್ಯ) | ವಾಗ್ವ್ಯಾಪಾರರೂಪವಾದ ಕ್ರಿಯಾವಿಶೇಷ. |

# ಪದ್ಯ (೮)

**ಮೂಲ :**

**ನಿರುಪಮಾನಂದಾತ್ಮ ಹರಿ ಸಂ।**
**ಕರುಷಣ ಪ್ರದ್ಯುಮ್ನ ರೂಪದಿ।**
**ಇರುತಿಹನು ಭೋಕ್ತೃಗಳೊಳಗೆ ತಚ್ಛಕ್ತಿದನು ಯೆನಿಸಿ॥**
**ಕರೆಸುವನು ನಾರಾಯಣನಿರು।**
**ದ್ಧರಡು ನಾಮದಿ ಭೋಜ್ಯ ವಸ್ತುಗ।**
**ನಿರುತ ತರ್ಪಕನಾಗಿ ತೃಪ್ತಿಯನೀವ ಚೇತನಕೆ ॥೮॥**

**ಅವತರಣಿಕೆ :—**

ಭೋಜನಮಾಡುವ ಭೋಕ್ತೃಗಳಲ್ಲಿ ಅಪರಿಮಿತಾನಂದ ಪೂರ್ಣ ಸ್ವರೂಪಿಯಾದ ಶ್ರೀ ಪರಮಾತ್ಮನು ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪಗಳಿಂದ ಇದ್ದು. ಅವರಿಗೆ ಶಕ್ತಿ ಪ್ರದಾತನಾಗಿ, ಆನಿರುದ್ಧ ಮತ್ತು ನಾರಾಯಣ ನಾಮಕನಾಗಿ ಭೋಜನ ಯೋಗ್ಯವಾದ ಸುಭೋಜ್ಯ ಪದಾರ್ಥಗಳಲ್ಲಿದ್ದು, ಜೀವರಿಗೆ ತೃಪ್ತಿಯನೀವನು ಎಂದು ಹೇಳುತ್ತಾರೆ–"**ನಿರುಪಮಾನಂದಾತ್ಮ**"–ಎಂಬ ಸಂಧಿಗತ ೮ನೆಯ ಈ ಪದ್ಯದಿಂದ॥೮॥

**ಪ್ರತಿಪದಾರ್ಥ :**

**ನಿರುಪಮ**= ಉಪಮಾನರಹಿತವಾದ (ಅಸದೃಶವಾದ) **ಆನಂದಾತ್ಮ** = ಆನಂದವನ್ನೇ ದೇಹವನ್ನಾಗಿ ಉಳ್ಳ, ಅಂದರೆ ಆನಂಸ್ವರೂಪಿಯಾದ **ಹರಿ**= ಶ್ರೀ ಪರಮಾತ್ಮನು **ಸಂಕರುಷಣ**= ಸಂಕರ್ಷಣ ರೂಪಧಿಂದ ಜ್ಞಾನೇಂದ್ರಿಯಗಳಲ್ಲಿ **ಪ್ರದ್ಯುಮ್ನ**=ಪ್ರದ್ಯುಮ್ನ ರೂಪದಿಂದ **ಕರ್ಮೇಂದ್ರಿ**

ಗಳಲ್ಲಿ **ರೂಪದಿ**= ಈ ರೂಪದ್ವಯಗಳಿಂದ **ಭೋಕ್ತೃಗಳೊಳಗೆ**= ಭೋಜನಮಾಡುವವರೊಳಗೆ **ತಚ್ಛಕ್ತಿದನು**= ಭೋಜನಕ್ರಿಯೆಗೆ ತಕ್ಕ ಸಾಮರ್ಥ್ಯವಿಶೇಷವನ್ನು ಕೊಡತಕ್ಕವನು **ಯೆನಿಸಿ**= ಎಂಬುದಾಗಿ **ಕರೆಸುವನು** = ಪ್ರಖ್ಯಾತನಾಗಿ ಕರೆಯಿಸಲ್ಪಡುತ್ತಾನೆ. **ನಾರಾಯಣ**= ನಾರಾಯಣನೆಂಬ ಹೆಸರಿನಿಂದಲೂ **ಅನಿರುದ್ಧ**= ಅನಿರುದ್ಧನೆಂಬ ಹೆಸರಿನಿಂದಲೂ **ಈ ಎರಡು ನಾಮದಿ**= ಈ ನಾಮದ್ವಯಗಳಿಂದ **ಭೋಜ್ಯವಸ್ತುಗ**= ಭೋಜನಕ್ಕೆ ಯೋಗ್ಯವಾದ ಅನ್ನದಲ್ಲಿ ನಾರಾಯಣನೂ ಮತ್ತು ಉದಕದಲ್ಲಿ ಅನಿರುದ್ಧನೂ ಇದ್ದವನಾಗಿ (ಸುಭೋಜ್ಯ ಪದಾರ್ಥಾಂತರ್ಗತ ರೂಪದಿಂದ ಇದ್ದು) **ನಿರುತ** = ಯಾವಾಲೂ (ನಿತ್ಯದಲ್ಲೂ) **ತರ್ಪಕನಾಗಿ**= ಕ್ಷುತ್ತು (ಹಸಿವೆ) ಮತ್ತು ತೃಷೆ (ನೀರಡಿಕೆ) ಇವುಗಳನ್ನು ಶಮನ ಮಾಡತಕ್ಕವನಾಗಿ **ಚೇತನಕೆ**= ಸರ್ವಜೀವ ಗಣಕ್ಕೆ **ತೃಪ್ತಿಯನು**= ಭೋಜನ ಕ್ರಿಯಾದ್ವಾರಾ, ಕ್ಷುತ್ ತೃಷಾದಿಗಳನ್ನು ಶಮನಮಾಡಿ ತೃಪ್ತಿಯನ್ನು **ಈವ**= ಕೊಡುವನು ॥೮॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:–

ಉಪಮಾನ ರಹಿತನಾದ ಸಂತೋಷ ಸಮೂಹಗಳೇ ಶರೀರವಾಗಿ ಉಳ್ಳ ಹಾಂಗೆಯೇ ಬಲಜ್ಞಾನಾದಿಗಳು, ದಿವ್ಯ ಸೌಂದರ್ಯ ರೂಪಗಳು ಉಳ್ಳ ಶ್ರೀ ಪರಮಾತ್ಮನು (ಹರಿ) ಮನದಲ್ಲಿ, ಸಂಕರ್ಷಣ ದೇವರು ಜ್ಞಾನೇಂದ್ರಿಯಪಳಲ್ಲಿ (ಸಂಕರುಷಣ), ಪ್ರದ್ಯುಮ್ನ ದೇವರು ಕರ್ಮೇಂದ್ರಿಯುಗಳಲ್ಲಿ (ಪ್ರದ್ಯುಮ್ನ) ಈ ರೂಪಗಳಿಂದ (ರೂಪದಿ), ಭೋಕ್ತೃಗಳು ದೇಹ ಅಧಿಷ್ಠಿತ ಜೀವ, ತತ್ತ್ವ ದೇವತೆಗಳಾದ ದೇವ, ದೈತ್ಯ, ನಿತ್ಯ ಸಂಸಾರಿಗಳು ಇಷ್ಟು ಮಂದಿ ಒಂದೇ ಪದಾರ್ಥಗತ ತಮ್ಮ ತಮ್ಮ ಭೋಜಯೋಪಯೋಗ್ಯಗಳ ಭೋಜನ ಮಾಡತಕ್ಕವರು, ಆದ್ದರಿಂದ ಏತಾದೃಶ ಭೋಕ್ತೃಗಳ ಪೂರ್ವೋಕ್ತ ಇಂದ್ರಿಯುಗಳೊಳಗಿದ್ದು, (ಭೋಕ್ತೃಗಳೊಳಗೆ) ಅವರವರ ಆಯಾಯಾ ಇಂದ್ರಿಯುಗತಳಾದ್ದ

ಶಿಂದ(ತತ್) ಪೂರ್ವೋಕ್ತ ರೂಪತ್ರಯಗಳಿಂದಅವರವರಯೋಗ್ಯವಾದ ಶಕ್ತಿಗಳ ತನ್ನ ವ್ಯತಿರಿಕ್ತ ಅನಭಿವ್ಯಕ್ತಿಯಾಗಿ ಇರುವದರನ್ನ ವ್ಯಕ್ತಮಾಡಿ ಕೊಡತಕ್ಕವನು (ಶಕ್ತಿದ) ಎಂತ ಅನಿಸಿದವನಾಗಿ (ಎನಿಸಿ) ದೇಹದಲ್ಲಿ ಇರೋವನಾಗಿ ಇದ್ದಾನೆ (ಇರುತಿಹನು). ಸ್ವಾತಂತ್ರ್ಯೇಣ ಭೋಜನಾದಿಕ್ರಿಯಾಶಕ್ತಿಹೀನರಾದ (ಶೂನ್ಯರಾದ) ಪ್ರಯುಕ್ತ ಈ ಪ್ರಕಾರ ರಸೋವನಾಗ ಥಾನೆ. ಜ್ಞಾನಶಕ್ತಿ ಎಂತಲೂ, ಕರ್ಮಶಕ್ತಿ ಎಂತಲೂ ಮತ್ತು ಇಚ್ಛಾ ಶಕ್ತಿ ಎಂತಲೂ ಕರಿಸಥಾನೆ ಎಂತ ಅರ್ಥ. (ಕರೆಸುವನು) ನಾರಾಯಣ ಎಂತಲೂ. ಅನಿರುದ್ಧ ಎಂತಲೂ ಈ ಎರಡು ನಾಮಗಳಿಂದ (ನಾರಾಯಣ ನಿರುದ್ಧರೆಡುನಾಮದಿ) ಭೋಜನಕ್ಕೆ ಯೋಗ್ಯವಾದ ಅನ್ನದಲ್ಲಿ ನಾರಾಯಣ.ಉದಕದಲ್ಲಿ ಅನಿರುದ್ಧ (ಭೋಜ್ಯ ವಸ್ತುಗ) ಈ ಎರಡರಲಿ ಎರಡು ರೂಪದಿಂದ ಇರತಕ್ಕವನಾಗಿ. ನಿರಂತರ (ನಿರುತ) ಕ್ಷುತ್ತು ತೃಷಾದಿಗಳ ಶಮನ ಮಾಡತಕ್ಕದ್ದು, ತೃಪ್ತಿಗೆ ಹೇತು ಭೂತವಾದದ್ದು ದಾವದೋ ಅದಕ್ಕೆ "ತರ್ಪಕ" –ಎಂತ ನಾಮ. ಆ ಎರಡು ಗುಣ ಅನ್ನೋದಕಾದಿಗಳಲ್ಲಿ ಅದೆ. ಆದ್ದರಿಂದ ತರ್ಪಕವಾಯಿತು. ಅವುಗಳಿಗೆ ಸ್ವತ: ತರ್ಪಕಶಕ್ತಿ ಇಲ್ಲ. ಆದ್ದರಿಂದ ಅದರಲ್ಲಿ ತರ್ಪಕಶಬ್ದವಾಚ್ಯನಾಗಿದ್ದು, ಪೂರ್ವೋಕ್ತ ಪ್ರಕಾರ, ಜಹ್ವೆ ದಂತಾದಿಗಳಲ್ಲಿದ್ದು. ಭೋಜನಮಾಡಿಸಿ, ಕ್ಷುತ್ ಪಿಪಾಸಾದಿಗಳನ್ನು ಹೋಗಲಾಡಿಸಿ, ತೃಪ್ತಿಯನ್ನು [ತೃಪ್ತಿಯ] ಸರ್ವಜೀವರಿಗೆ, ಅನ್ನೋದಕಾದಿಗಳಿಂದ ಅಂತರ್ಗತನಾಗಿದ್ದು ತೃಪ್ತಿ ಪಡಿಸುವನಾಗಥಾನೆ [ತೃಪ್ತಿಯನೀವ]

**ವಿಶೇಷಾರ್ಥ :—**

ಶ್ರೀ ಪರಮಾತ್ಮನು ಸಚ್ಚಿದಾನಂದಸ್ವರೂಪಿಯು. ಆದರೆ ತ್ರಿವಿಧ ಜೀವರೂ ಸ್ವಾತಂತ್ರ್ಯೇಣ ಭೋಜನಾದಿ ಕ್ರಿಯಾಶಕ್ತಿ ಶೂನ್ಯರು. ಈ ಕಾರಣ ದಿಂದ ಶ್ರೀ ಪರಮಾತ್ಮನು ಮನದಲ್ಲಿ ಹರಿ ರೂಪಕನಾಗಿಯೂ, ಜ್ಞಾನೇಂದ್ರಿಯ ಗಳಲ್ಲಿ ಸಂಕರ್ಷಣ ರೂಪನಾಗಿಯೂ ಕರ್ಮೇಂದ್ರಿಯಗಳಲ್ಲಿ ಪ್ರದ್ಯುಮ್ನ ರೂಪನಾಗಿಯೂ ಇದ್ದಾನೆ. ತ್ರಿವಿಧ ಜೀವರ ಇಂದ್ರಿಯಗಳಲಿದ್ದು, ಜ್ಞಾನಶಕ್ತಿ ಕರ್ಮಶಕ್ತಿ ಮತ್ತು ಇಚ್ಛಾ ಶಕ್ತಿ ಎಂತಲೂ ಕರೆಯಿಸುವನು. ಆಯಾಯಾ

ಇಂದ್ರಿಯಗಳ ಯೋಗ್ಯತಾನುಸಾರ ಭೋಜ್ಯವಸ್ತುಗಳಲ್ಲಿ ಅನ್ನದಲ್ಲಿ ನಾರಾಯಣರೂಪದಿಂದಲೂ, ಪಾನಕ್ಕೆ ಯೋಗ್ಯವಾದ ಉದಕದಲ್ಲಿ ಅನಿರುದ್ಧ ರೂಪದಿಂದಲೂ ಇದ್ದಾನೆ. ತರ್ಪಕ ವಾಚ್ಯನಾಗಿ ಜೀವರ ಜಿಹ್ವೆ. ದಂತಾದಿಗಳಲ್ಲಿದ್ದು ಭೋಜನ ಮಾಡಿಸುವನು. ತದ್ವಾರಾ ಕ್ಷುತ್ಪಿಪಾಸಾದಿಗಳನ್ನು ಹೋಗಲಾಡಿಸಿ ತೃಪ್ತಿಕೊಡುತ್ತಾನೆ. ದೇಹಗತ ತ್ರಿವಿಧ ತತ್ವೇಶರಿಗೆ ಆತ್ಮ ಪ್ರದರ್ಶನ ದಿಂದಲೂ,ವ್ಯಾಪ್ತನಾದ ಜೀವನಿಗೆ ಸಂತೋಷದಿಂದಲೂ. ದೇಹಕ್ಕೆ ಉಪಚಯ ರೂಪದಿಂದಲೂ, ಜಠರಾಗ್ನಿಗೆ ಅಗ್ನಿಪ್ರಜ್ವಲನ ರಹಿತಾದಿಗಳಿಂದಲೂ ತೃಪ್ತಿ ಪಡಿಸುಥಾನೆ ಎಂತ ತಾತ್ಪರ್ಯ ॥೮॥

**ಪ್ರಮಾಣ:—**

**"ಸಂಕರ್ಷಣಶ್ಚ ಪ್ರದ್ಯುಮ್ನೌ ತತ್ರ ಭೋಕ್ತೃಸು ಸಂಸ್ಥಿತೌ॥**
**ಭೋಕ್ತೃ ಶಕ್ತಿಪ್ರದೌ ನಿತ್ಯಂ ಭೋಕ್ತಾ ರಾಂತ ವಿಶೇಷತಃ॥೧॥**

**ನಾರಾಯಣಾನಿರುದ್ಧೌ ತು ಭೋಜ್ಯವಸ್ತುಷು ಸಂಸ್ಥಿತೌ।**
**ತರ್ಪಕೌ ಸರ್ವಜೀವಾಂ ತಸ್ಮಾ ದ್ಭೋಜೌನ ಚಾನ್ಯಥೇತಿ!!೨॥**

## [೨] "ಭಾವಪ್ರಕಾಶಿಕೆ" —ವ್ಯಾಖ್ಯಾನ:—

ಉಪಮಾನ ರಹಿತವಾದ ಆನಂದ ಸ್ವರೂಪಿಯಾದ ಶ್ರೀ ಪರಮಾತ್ಮನು ಸಂಕರ್ಷಣ ಮತ್ತು ಪ್ರದ್ಯುಮ್ನ ಎರಡು ರೂಪಗಳಿಂದ ಭೋಜನ ಮಾಡುವವರೊಳಗಿದ್ದು ಭೋಜನಮಾಡುವ ಶಕ್ತಿಯನ್ನು ಜೀವರಿಗೆ ಕೊಟ್ಟು ಭೋಜನ ಶಕ್ತಿಪ್ರದನೆಂಬ ಹೆಸರನ್ನು ಪಡೆದಿರುವನು. ನಾರಾಯಣ ಮತ್ತು ಅನಿರುದ್ಧ ಈ ಎರಡು ರೂಪಗಳಿಂದ ಭೋಜನ ಪಾನಾದಿಗಳನ್ನು ಮಾಡಲರ್ಹವಾದ ಅನ್ನೋದಕಗಳಲ್ಲಿದ್ದು ಜೀವರನ್ನು ಭಂಜಿಸುವಂತೆ ಮಾಡಿ ಆ ಜೀವರನ್ನು ತೃಪ್ತಿ ಪಡಿಸುವನು॥೮॥

## [೩] "ಭಾವದರ್ಪಣ ಟೀಕಾ"—ವ್ಯಾಖ್ಯಾನ:—

ದೃಷ್ಟಾಂತ ರಹಿತವಾದ ಆನಂದವುಳ್ಳಂಥಾ ಗಾತ್ರನು ಚೇತನರಿಗೆ ತೃಪ್ತಿ ಪಡಿಸತಕ್ಕ ವಿಧಾನ ಹೇಳುತ್ತಾರೆ– "ನಿರುಪಮ"– ಎಂಬ ಪದ್ಯದಿಂದ

**ಉಕ್ತಂಚ ಐತರೇಯ ಭಾಷ್ಯೇ:—**

**"ಸಂಕರ್ಷಣ ಪ್ರದ್ಯುಮ್ನೌ ತತ್ರ ಭೋಕ್ತೃಷು ಸಂಸ್ಥಿತೌ।**
**ಭೋಕ್ತೃ ಶಕ್ತಿ ಪ್ರದಾತಾರೌ ಭೋಕ್ತಾರಾಂತ ವಿಶೇಷತ:॥**
**ನಾರಾಯಿಣಾನಿರುದ್ಧೌತು ಭೋಗ್ಯವಸ್ತುಷು ಸಂಸ್ಥಿತೌ।**
**ತರ್ಪಕೌ ಸರ್ವಜೀವಾನಾಂ ತಸ್ಮಾದ್ಭೋಜೌ ನ ಚಾನ್ಯಥೇ ॥**

ವಸ್ತುಗ = ವಸ್ತುವಿನಲ್ಲಿದ್ದವ ಎಂತರ್ಥ, ಅಪರಿಮಿತ = ಗಣನೆ ಇಲ್ಲದೆ ||೮||

**(೪) "ಗುರುಹೃದಯಪ್ರಕಾಶಿಕೆ"-ವ್ಯಾಖ್ಯಾನ:-**

ಅಸದೃಶಾನಂದ ರೂಪನಾದ ಶ್ರೀ ಹರಿಯು ಸಂಕರ್ಷಣ, ಪ್ರದ್ಯುಮ್ನ ಎಂಬ ಎರಡು ರೂಪಗಳಿಂದ ಭೋಜನ ಮಾಡುವವರಲ್ಲಿ ಶಕ್ತಿಪ್ರದನಾಗಿ ರುವನು. ಭೋಜನ ಪದಾರ್ಥಗಳಲ್ಲಿ ನಾರಾಯಣ ಅನಿರುದ್ಧನೆಂಬ ಎರಡು ರೂಪಗಳಿಂದದ್ದು, ಜೀವರಿಗೆ ತೃಪ್ತಿಕೊಟ್ಟು ತರ್ಪಕನೆಂದೆನಿಸಿಕೊಳ್ಳುವನು.

**"ಸಂಕರ್ಷಣಶ್ಚ........................**

**........................ತಸ್ಮಾದ್ಭೋಜೌನಚಾನ್ಯಥಾ"॥**

[ಈ ಪ್ರಮಾಣದ ಪೂರ್ಣ ವಾಕ್ಯ ರೂಪವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ] -ಎಂಬ ಅರ್ಥವು ವಿವರಿಸಲ್ಪಟ್ಟಿತು ॥೮॥

**ಸರ್ವವ್ಯಾಖ್ಯಾನ ಸಾರ ಸಂಗ್ರಹ:—**

ಶ್ರೀ ಪರಮಾತ್ಮನು ಸಚ್ಚಿದಾನಂದ ಸ್ವರೂಪಿಯು. ನಿತ್ಯಾನಂದ ಉದ್ರಿಕ್ತನು. ಅಸದೃಶವಾದ ಜ್ಞಾನ. ಆನಂದ, ಬಲ, ದಿವ್ಯ ಸೌಂದರ್ಯ

ಯುಕ್ತವಾದ ದೇಹವುಳ್ಳವನು. ಚಿದಾನಂದೈಕ ದೇಹಿಯಾದ ನಿರುಪಮಾತ್ಮಕನಾದ ಶ್ರೀ ಪರಮಾತ್ಮನು ಭೋಜನಮಾಡುವ ಚೇತನದೊಳಗೆ ಸಂಕರುಷಣ ಮತ್ತು ಪ್ರದ್ಯುಮ್ನ ಎಂಬ ಎರಡು ರೂಪಗಳಿಂದಿದ್ದಾನೆ. ಹರಿನಾಮಕ ಶ್ರೀ ಪರಮಾತ್ಮನು ಚೇತನರ ಮನಸ್ಸಿನಲ್ಲಿದ್ದಾನೆ. ಸಂಕರುಷಣ ರೂಪದಿಂದ ಜೀವರ ಜ್ಞಾನೇಂದ್ರಿಯಿಗಳಲ್ಲಿಯೂ, ಪ್ರದ್ಯುಮ್ನ ರೂಪದಿಂದ ಚೇತನರ ಕರ್ಮೇಂದ್ರಿಗಳಲ್ಲಿ ಸ್ಥಿತನಾಗಿದ್ದು, ಭೋಜನ ಕ್ರಿಯಾದಿಗಳನ್ನು ನಡೆಯಿಸುವದಕ್ಕೆ ಜೀವರಿಗೆ ಶಕ್ತಿ ಪ್ರದನಾಗಿದ್ದಾನೆ, ಜೀವರು ಸ್ವಾತಂತ್ರೇಣ ಭೋಜನ ಕ್ರಿಯಾದಿ ಶಕ್ತಿ ಹೀನರಾಗಿದ್ದಾರಿಂದ, ಮನದಲ್ಲಿ ಇದ್ದು ಇಚ್ಛಾ ಶಕ್ತಿ ಪ್ರದನೂ, ಜ್ಞಾನೇಂದ್ರಿಯಗಳಲ್ಲಿದ್ದು ಜ್ಞಾನ ಶಕ್ತಿ ಪ್ರದನೂ ಮತ್ತು ಕರ್ಮೇಂದ್ರಿಯಗಳಲ್ಲಿದ್ದು ಕರ್ಮಶಕ್ತಿ ಪ್ರದನಾಗಿಯೂ ಇದ್ದು. "**ತಚ್ಛಕ್ತಿದ**"ನು ಎಂದೆನಿಸಿ, ಮನಸ್ಸು ಜ್ಞಾನ ಮತ್ತು ಕ್ರಿಯಾ ರೂಪವಾದ ವ್ಯಾಪಾರ ವಿಶೇಷಗಳನ್ನು ಬಿಂಬಕ್ರಿಯಾದ್ವಾರಾ ನಡೆಯಿಸುವನು ಏತಾ ದೃಶ ಮಹಿಮೋಪೇತನಾದ ಶ್ರೀ ಪರಮಾರ್ಥತ್ಮನು "**ಭೋಜನ ಶಕ್ತಿ ಪ್ರದ**"– ಎಂದು ಪ್ರಖ್ಯಾತನಾಗಿರುವನು ಭೋಜನಕ್ಕೆ ಯೋಗ್ಯವಾದ (ಅನಿಷಿದ್ಧವಾದ) ಸುಭೋಜನ ಪದಾರ್ಥಗಳಲ್ಲಿ ನಾರಾಯಣ ಮತ್ತು ಅನಿರುದ್ಧ ಎಂಬ ಎರಡು ರೂಪಗಳಿಂದ ವಿರಾಜಮಾನನಾಗಿದ್ದಾನೆ. ಜೀವರಿಗೆ ಜಠರಾಗ್ನಿಯ ಪ್ರಜ್ವಲನ ಕ್ರಿಯೆಯಿಂದಾಗಿ, ಹಸಿವು (ಕ್ಷುತ್) ಮತ್ತು ನೀರಡಿಕೆ (ತೃಷ) ಉಂಟಾಗುವುವು. ಈ ಕ್ಷುತ್ಪಿಪಾಸೆಗಳಿಗೆ ಉಪಶಮನರೂಪವಾದ ಅನ್ನದಲ್ಲಿ ನಾರಾಯಣ ರೂಪದಿಂಲೂ, ಪಾನಾದಿ ರೂಪವಾದ ನೀರಿನಲ್ಲಿ ಅನಿರುದ್ಧ ರೂಪದಿಂದಲೂ ಇರುತ್ತಾನೆ, ಈ ರೂಪದ್ವಯಗಳಿಂದ ಶ್ರೀ ಪರಮಾತ್ಮನು ಸುಭೋಜ್ಯವಾದ ಅನ್ನೋದಕಗಳಿಲ್ಲದ್ದು ಜಠರಾಗ್ನಿಯ ಪ್ರಜ್ವಲನವನ್ನು ಉತ್ಪತ್ತಿಮಾಡಿ, ಜೀರ್ಣ ಶಕ್ತಿ ಪ್ರದನಾಗಿದ್ದು (ವೈಶ್ವಾನರ ರೂಪದಿಂದ) ಪಚನಾದಿಕ್ರಿಯಗಳನ್ನು ಮಾಡಿಸಿ, ತದ್ವಾರಾ ಕ್ಷುತ್ಪಿ ಪಾಸೆಗಳನ್ನು ಉಪಶಮನಗೊಳಿಸಿ, ಜೀವರಿಗೆ ತೃಪ್ತಿಯನ್ನೀವನು. ತ್ರಿವಿಧ ಜೀವರ ದೇಹಗತ ತತ್ವ ದೇವತಾವರ್ಗಕ್ಕೆ .ಆತ್ಮ ಪ್ರದರ್ಶನದಿಂದಲೂ ದೇಹದಲ್ಲಿ ಪ್ರಕಾಶಿತೋವ್ಯಾಪ್ತನಾದ ಜೀವನಿಗೆ ಆನಂದ ದಿಂದಲೂ, ದೇಹಕ್ಕೆ ಉಪಚಯರೂಪದಿಂದಲೂ, ಜಠರಾಗ್ನಿಗೆ ಅಗ್ನಿಪ್ರಜ್ವಲನದಿಂದಲೂ ತೃಪ್ತಿಪಡಿಸಿ, "**ತರ್ಪಕ**" ನೆನಸಿದ್ದಾನೆ.

**ಭಗವದ್ರೂಪಗಳ ವಿವರಗಳು :—**

| ಕ್ರಮ ಸಂಖ್ಯೆ | ಅಧಿಷ್ಠಾನ | ಭಗವದ್ರೂಪ | ವ್ಯಾಪಾರವಿಶೇಷ |
|---|---|---|---|
| ೧ | ಜೀವರ ಮನಸ್ಸಿನಲ್ಲಿ | ಶ್ರೀಹರಿ | ಇಚ್ಛಾಶಕ್ತಿ ಪ್ರದತ್ವ |
| ೨ | ಜೀವರ ಜ್ಞಾನೇಂದ್ರಿಯಗಳಲ್ಲಿ | ಶ್ರೀ ಸಂಕರ್ಷಣ | ಜ್ಞಾನಶಕ್ತಿ ಪ್ರದತ್ವ |
| ೩ | ಜೀವರ ಕರ್ಮೇಂದ್ರಿಯಗಳಲ್ಲಿ | ಶ್ರೀ ಪ್ರದ್ಯುಮ್ನ | ಕ್ರಿಯಾಶಕ್ತಿ ಪ್ರದತ್ವ |
| ೪ | ಅನ್ನದಲ್ಲಿ | ಶ್ರೀನಾರಾಯಣ | ಹಸಿವೆಯ ಉಪಶಮನ |
| ೫ | ಸ್ನಾನಾದಿಯೋಗ್ಯವಾದ ಉದಕದಲ್ಲಿ | ಶ್ರೀ ಅನಿರುದ್ಧ | ನೀರಡಿಕೆಯ ಉಪಶಮನ |
| ೬ | ಜಠರಾಗ್ನಿ | ಪೂರ್ವೋಕ್ತ ರೂಪ ದ್ವಯಗಳು | ಜಠರಾಗ್ನಿಯ ಪ್ರಜ್ವಲನದಿಂದ ಪಚನಕ್ರಿಯೆ |

# ಪದ್ಯ (೯)

**ಮೂಲ :**

ವಾಸುದೇವನು ಒಳಹೊರಗೆ ಅವ।
ಕಾಶ ಕೊಡುವ ನಭಸ್ಥನಾಗಿ ರ।
ಮಾಸನೋತ ವಿಹಾರ ಮಾಳ್ಪನು ಪಂಚರೂಪದಲಿ॥
ಆ ಸರೋರುಹ ಸಂಭವ ಭವ।
ವಾಸವಾದ್ಯಮರಾದಿ ಚೇತನ ।
ರಾಶಿಯೊಳಗಿಹನೆಂದು ಅರಿತವನೆ ಕೋವಿದನು ॥೯॥

**ಅವತರಣಿಕೆ :**

ವಾಸುದೇವ ರೂಪಿಯಾದ ಶ್ರೀ ಪರಮಾತ್ಮನು ಮಾಯಾ ದೇವಿಯಿಂದ ಸಹಿತನಾಗಿ, ಕಂಠಪ್ರದೇಶದಲ್ಲಿದ್ದು ಅವಕಾಶಪ್ರದನಾಗಿ, ಭೋಜನಪದಾರ್ಥಗಳು ಗಂಟಲಿನದ್ವಾರಾ ಉದರ ಪ್ರವೇಶಮಾಡುವುದಕ್ಕೆ ಸಹಾಯಕನಾಗಿ, ಆನಿರುದ್ಧಾದಿ ಪಂಚರೂಪಗಳಿಂದ ಬ್ರಹ್ಮಾದಿ ಚೇತನರಾಶಿಗಳಲ್ಲಿ ವಿರಾಜಮಾನನಾಗಿ, ವಿಶಿಷ್ಟನಾಗಿದ್ದಾನೆ ಎಂದು ಹೇಳುತ್ತಾರೆ- **"ವಾಸುದೇವನು"**- ಎಂಬ ಪ್ರಸಕ್ತ ಸಂಧಿಗತ ೯ ನೆಯ ಈ ಪದ್ಯದಿಂದ ॥೯॥

**ಪ್ರತಿಪದಾರ್ಥ :**

**ವಾಸುದೇವನು**= ವಾಸುದೇವರೂಪೀ ಶ್ರೀ ಪರಮಾತ್ಮನು **ಒಳಗೆ**= ಶರೀರದ ಒಳಗಿನ ಭಾಗಗಳಲ್ಲಿಯೂ (ಭೋಜನ ಮಾಡಿದ ಪದಾರ್ಥಗಳು ಗಂಟಲಿನ ದ್ವಾರಾ ಉದರ ಪ್ರವೇಶಕ್ಕೆ) **ಹೊರಗೆ**= ಶರೀರದ ಹೊರಗಿನ ಬಹಿ ಪ್ರದೇಶದಲ್ಲಯೂ (ಉದರಗತ ಆಕಾಶದಲ್ಲಿಯೂ ಮತ್ತು ಬಹಿರ್ಗತ ಮುಖ

ದಲ್ಲಿಯೂ) **ಅವಕಾಶಕೊಡುವ** = ಅವಕಾಶ ಪ್ರದನಾಗಿ ಅಂದರೆ, ಒಳಭಾಗ ಶ್ವಾಸಾದಿಗಳನ್ನು ಸೆಳೆದು ಕೊಳ್ಳುವುದು. ಹೊರಗೆ ಶ್ವಾಸಾದಿಗಳನ್ನು ಬಿಡುವುದು ಈ ಕ್ರಿಯಾದಿಗಳಿಗೆ ಅವಕಾಶವನ್ನು ಕೊಡುವನು. **ನಭಸ್ಥನಾಗಿ** = ಕಂಠಗತ ಆಕಾಶದಲ್ಲಿ (ನಭ) ವಿದ್ಯಮಾನನಾಗಿದ್ದು (ಸ್ಥ) **ರಮಾಸಮೇತ**—ಶಾಂತಿ, ಕೃತಿ, ಜಯಾ, ಮಾಯಾ ಮತ್ತು ಮಹಲಕ್ಷ್ಮೀ ಎಂಬ ಶ್ರೀ ರಮಾದೇವಿಯರ ಪಂಚರೂಪಗಳಿಂದ ಸಹಿತನಾಗಿ **ಪಂಚರೂಪದಲಿ** = ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಸ್ವಾಭಿನ್ನವಾದ ಐದು ರೂಪಗಳಿಂದ **ವಿಹಾರ ಮಾಳ್ಪನು** = ಶರೀರಗತನಾಗಿದ್ದು ಕ್ರೀಡಾವಿಶಿಷ್ಟನಾಗಿ **ಆಸರೋರುಹಸಂಭವ** = ಚತುರ್ಮುಖ ಬ್ರಹ್ಮ ದೇವರು (ಸರೋರುಹ = ಶ್ರೀ ಪದ್ಮನಾಭ ದೇವರ ನಾಭಿ ಕಮಲದಲ್ಲಿ; ಸಂಭವ = ಉತ್ಪನ್ನರಾದ ಬ್ರಹ್ಮ ದೇವರು) **ಭವ** = ಪಾರ್ವತೀ ಪತಿಯಾದ ಶ್ರೀ ರುದ್ರದೇವರು **ವಾಸವ** = ಶಚೀಪತಿ ಇಂದ್ರದೇವರು **ಆದಿ** = ಇವರೇ ಮೊದಲಾದ **ಚೇತನರಾಶಿಯೊಳಗೆ** = ದೇವ ದೈತ್ಯ ಉರಗ ಮನುಷ್ಯಾದಿ ಸಮಸ್ತ ಜೀವರಾಶಿಗಳೊಳಗೆ **ಇಹನೆಂದು** = ಅಂತರ್ಯಾಮಿ ರೂಪದಿಂದ ಇರುತ್ತಾನೆಂದು **ಅರಿತವನೆ** = ತಿಳಿದು ಉಪಾಸನೆ ಮಾಡುವವನೇ **ಕೋವಿದನು**—ನಿಜವಾದ ಜ್ಞಾನಿಯು॥೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ವಾಸುದೇವ ರೂಪಿಯಾದ ಶ್ರೀ ಪರಮಾತ್ಮನು, ತನ್ನ ಪತ್ನಿಯಾದ ಮಾಯಾ ದೇವಿಯಿಂದ ಯುಕ್ತನಾಗಿ, ಕಂಠಗತ ಆಕಾಶದಲ್ಲಿ ವಿದ್ಯಮಾನನಾಗಿ, ಭೋಜನ ಮಾಡಿದ ದ್ರವ್ಯಗಳು ಉದರ ಪ್ರದೇಶಕ್ಕೂ ಒಳಗೆ ಪ್ರವೇಶವಾಗಿ, ಆದರ ಉದರಗತ ಆಕಾಶದಲ್ಲಿಯೂ, ಬಹಿರ್ಗತ ಮುಖದಲ್ಲಿ ವಿದ್ಯಮಾನವಾದ ಆಕಾಶದಲ್ಲಯೂ ಇದ್ದು, ಅನ್ನೋದಕಾದಿ ಭೋಜನಕ್ಕೂ, ಉದರದಲ್ಲಿ ಧಾರಣೆಗೂ, ವಿರಾಮ (ಅವಕಾಶ) ಕೊಡುತ್ತಾನೆ. ಗುಣಪೂರ್ಣನಾದ ಒಬ್ಬ

ಪರಮಾತ್ಮನೇ ತನ್ನ ಅನೇಕ ಅಭಿನ್ನಾಂಶ ರೂಪಗಳಿಂದ ಪೂರ್ವೋಕ್ತ ಪ್ರಕಾಶ ಪ್ರಾಣಿಗಳ ಸಂರಕ್ಷಣಾರ್ಥ ಆಟಗಳ ಆಡೋವವನಾಗಿದ್ದಾನೆ (ವಿಹಾರ ಮಾಳ್ಪನು) ಪೂರ್ವೋಕ್ತ ಅನಿರುದ್ಧಾದಿ ಐದು ರೂಪಗಳಿಂದ ಎಂದರ್ಥ. "ಪಂಚ" ಎಂಬುದಕ್ಕೆ- (೧)ಬ್ರಹ್ಮಾದಿ ಋಜುಗಳು (೨] ರುದ್ರಾದಿ ಶತಸ್ಥಾಂತೆ (೩) ಕರ್ಮಜ ಪುಷ್ಕರಾಂತ (೪) ಆಜಾನಜರು, ದೇವಗಂಧರ್ವಾಂತ ಮತ್ತು (೫) ಮಾನುಷರು ತೃಣಾಂತ– ಈ ಪಂಚವಿಧ ಜೀವರಲ್ಲಿ ಎಂತಲೂ ಅರ್ಥ ಮಾಡಬಹುದು. ಇದರಲ್ಲಿ ಪೂರ್ವೋಕ್ತ ಹರಿ ಮತ್ತು ಸಂಕರ್ಷಣಾದಿ ಆರು ರೂಪಗಳಿಂದ ವಿಹಾರ ಮಾಡುಥಾನೆ (ವಿವಿಕ್ಷಾ ಭೇದದಿಂದ ಐದು, ಆರು, ಹೀಗೆಂದು ಎರಡು ಪ್ರಕಾರ ಗ್ರಾಹ್ಯವು) ಈ ಪೂರ್ವೋಕ್ತ ಜೀವರಲ್ಲಿ, ಪದ್ಮನಾಭದೇವರ ನಾಭಿಕಮಲದಿಂದ ಉತ್ಪನ್ನರಾದ ಬ್ರಹ್ಮದೇವರು ಇವರಿಂದ ಸರ್ವ ಋಜುಗಳೂ ಗ್ರಾಹ್ಯ. ಪಾರ್ವತೀ ಪತಿಯಾದ ರುದ್ರ ದೇವರು.ಶಚೀ ಪತಿಯಾದ ಇಂದ್ರದೇವರು. ಮೊದಲಾದ ನಾಲ್ಕು ವಿಧವಾದ ದೇವತೆಗಳು ದೇವಗಂಧರ್ವರ ಪರ್ಯಂತ ದೇವತಾ ಸಮೂಹವೇ ಆದಿಯಾಗಿ, ತದನ್ಯರಾದ ಐದನೇವರಾದ ಪೂರ್ವೋಕ್ತ ನಿರಂಶ ತೃಣಾಂತ ಸರ್ವಚೇತನರ ಸಮೂಹ ದೊಳಗೆ (ಚೇತನ ರಾಶಿಯೊಳಗೆ) ಪೂರ್ವೋಕ್ತ ಪ್ರಕಾರ ಇದ್ದಾನೆ ಎಂದು ತಿಳಿದು, ಅನುಷ್ಠಾನ ಮಾಡತಕ್ಕವನೇ ಸಮರ್ಥನಾದ ಜ್ಞಾನಿಯು (ಕೋವಿದನು). ಅವನೇ ಭಗವದ್ಭಕ್ತನು ಎಂತ ತಾತ್ಪರ್ಯ

**ವಿಶೇಷಾರ್ಥ :**

**"ಅವಕಾಶಪ್ರದೋ ನಿತ್ಯಂ ವಾಸುದೇವೋ ನಭಸ್ಥಿತಃ।**
**ಪಂಚರೂಪಾತ್ಮಕಂ ವಿಷ್ಣುಂ ಯ ಉಪಾಸ್ತೇ ಸದೈವ ಹಿ– ॥**
**ಇತಿ ಐತರೇಯೇ ॥೯॥**

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :–

ವಾಸುದೇವನಾಮಕ ಶ್ರೀ ಪರಮಾತ್ಮನು ಈ ದೇಹಗಳ ಪಾಂಚಭೌತಿಕ ಸಂಬಂಧವಾದ ಆಕಾಶದಲ್ಲಿಯೂ ಹೊರಗಣ ಆಕಾಶದಲ್ಲಿಯೂ ಇದ್ದು,

ಒಳಗೆ ಅನ್ನೋದಕಗಳನ್ನು ಸ್ವೀಕರಿಸಲಿಕ್ಕೂ ಮತ್ತು ಶ್ವಾಸೋಚ್ಛ್ವಾಸ ಬಿಡಲಿಕ್ಕೂ, ಹೊರಗಿನ ಗಾಳಿಯನ್ನು ಸ್ವೀಕಾರ ಮಾಡಲಿಕ್ಕೂ ಅವಕಾಶ ಕೊಡುತ್ತಿರುವನು. ಹೀಗೆ ಶ್ರೀ ಪರಮಾತ್ಮನು ಶಾಂತಿ, ಕೃತಿ, ಜಯಾ, ಮಾಯಾ ಮತ್ತು ಲಕ್ಷ್ಮೀ ಎಂಬ ಐದು ರಮಾರೂಪಗಳಿಂದ ಸಮೇತನಾಗಿ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚ ರೂಪಗಳಿಂದ ಈ ಶರೀರದೊಳಗಿದ್ದು ಲೀಲಾ ಮಾಡುತ್ತಿರುವನು. ಹೀಗೆ ಬ್ರಹ್ಮದೇವರು ಮೊದಲು ರುದ್ರ ಇಂದ್ರಾದಿ ಸಕಲದೇವತೆಗಳಲ್ಲಿಯೂ, ಕಲಿ ಮೊದಲಾದ ದೈತ್ಯರಲ್ಲಿಯೂ, ಮನುಷ್ಯ ಪಕ್ಷಿ ಮೃಗಾದಿ ಸಕಲಚೇತನರಲ್ಲಿಯೂ ಇದ್ದು, ವಿಹಾರಮಾಡುವನೆಂದು ತಿಳಿದಿರುವ ಮನುಷ್ಯನೇ ಜ್ಞಾನಿಯೆಂದು ತಿಳಿಯಬೇಕು ॥ ೯ ॥

(೩) **"ಭಾವದರ್ಪಣಟೀಕಾ"–ವ್ಯಾಖ್ಯಾನ :—**

**ಉಕ್ತಂಚ ಐತರೇಯೇ :–**

**"ಅವಕಾಶಪ್ರದೋ ಸದ್ವೈವಹಿ ॥"**

**(ಈ ಪ್ರಮಾಣದ ಪೂರ್ಣವಾಕ್ಯರೂಪವನ್ನು ಹಿಂದಿನ ವ್ಯಾಖ್ಯಾನದಲ್ಲಿ ಕೊಟ್ಟಿದೆ)**

ಸಮೇತ = ಯುಕ್ತನಾಗಿ. ಕೋವಿದನು = ಪರಬ್ರಹ್ಮನನ್ನು ತಿಳಿದವನು ಎಂದರ್ಥ. ಆಸರೋರುಹಸಂಭವ = ಬ್ರಹ್ಮಾ. ಭವ = ರುದ್ರ. ವಾಸವ = ಇಂದ್ರ. ಅರಿತವ = ತಿಳಿದವನು ॥೮॥

(೪) **ಶ್ರೀ ವಾದಿರಾಜಾಚಾರ್ಯ ವ್ಯಾಖ್ಯಾನ:—**

ವಾಸುದೇವ ಇತಿ। ಆಕಾಶಗೋ ವಾಸುದೇವ: ಇತಿಚ। ವಾಹನಾದಿ ಯತೋ ಮುಕ್ತಾ ಭವೇ ದೇತದುಪಾಸಕ: ಇತಿ ಚ ॥೯॥

"ವಾಸುದೇವನು ಒಳಹೊರಗೆ"–ಎಂಬ ಪ್ರಸಕ್ತ ಪದ್ಯದಲ್ಲಿ–

"ವಾಸುದೇವ ರೂಪೀ ಶ್ರೀ ಪರಮಾತ್ಮನು ಅವಕಾಶಪ್ರದನಾಗಿ ಆಕಾಶದಲ್ಲಿ ವಿಹಾರಮಾಡುತ್ತಾನೆ–" ಎಂಬ ತಾತ್ಪರ್ಯಾರ್ಥವನ್ನು ತಿಳಿಸಿರುತ್ತಾರೆ. ಅಂತಹ ಆಕಾಶಗತನಾದ ಶ್ರೀ ವಾಸುದೇವನನ್ನು ಉಪಾಸನೆಮಾಡುವವರು ಮುಕ್ತ ದಶಾದಲ್ಲಿ ವಾಹನಾದಿ ಸುಖಭೋಗ ಗಳನ್ನು ಹೊಂದುವರು. ಇದಕ್ಕೆ "**ಆಕಾಶಗೋ**" ಮತ್ತು "**ವಾಹನಾದಿಯುತೋ**"– ಎಂಬ ವಾಕ್ಯಗಳೇ ಪ್ರಮಾಣ ಭೂತವಾಗಿವೆ ॥೯॥

[೫] "ಗುರುಹೃದಯಪ್ರಕಾಶಿಕೆ"– ವ್ಯಾಖ್ಯಾನ:—

ವಾಸುದೇವ ರೂಪದಿಂದ ಒಳಹೊರಗೆ ಅವಕಾಶ ಪ್ರದನಾಗಿ, ಆಕಾಶದಲ್ಲಿ ಇರುವನು. ಹೀಗೆ ಹಿಂದೆ ಹೇಳಿದ ಪದ್ಯಗತ ನಾಲ್ಕು ರೂಪ ಸಹಾ ಐದು ರೂಪಗಳಿಂದ, ಬ್ರಹ್ಮ ರುದ್ರೇಂದ್ರಾದಿ ಜೀವರಲ್ಲಿ ವಾಸವಾಗಿದ್ದು ವಿಹಾರಮಾಡುವನು. ಎಂದರೆ, ಕ್ರೀಡೆಯಾಡುವನೆಂದು ತಿಳಿದವನೇ ಜ್ಞಾನಿ ಎಂದರ್ಥ

"ಅವಕಾಶಪ್ರದೋ ....................................ಸದೈವಹಿ"॥
[ಈ ಪ್ರಮಾಣದ ಪೂರ್ಣ ರೂಪವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ]

ಈ ವಾಸುದೇವನು, ತನ್ನ ಭಾರ್ಯೆಯಾದ ಮಾಯಾದೇವಿ ಎಂಬ ರಮಾರೂಪಸಹಿತ ಸನ್ನಿಹಿತನಾಗಿರುವನೆಂದು ಚಿಂತಿಸಬೇಕೆಂದು ನಿರೂಪಿಸಿ ರುತ್ತಾರೆ ॥೯॥

**ಸರ್ವವ್ಯಾಖ್ಯಾನಸಾರ ಸಂಗ್ರಹ:–**

ವಾದೇವರೂಪಿಯಾದ ಶ್ರೀ ಪರಮಾತ್ಮನು ತನ್ನ ಪತ್ನಿಯಾದ ಮಾಯಾದೇವಿ ಯಿಂದ ಯುಕ್ತನಾಗಿ ಕಂಠಗತ ಆಕಾಶದಲ್ಲಿ ವಿದ್ಯಮಾನನಾಗಿದ್ದಾನೆ, ಚೇತನರು ಭೋಜನಮಾಡತಕ್ಕ ಪದಾರ್ಥಗಳನ್ನು ಹಲ್ಲಿನಿಂದ ಚನ್ನಾಗಿ ಅಗಿಯಲ್ಪಟ್ಟ ನಂತರ, ಗಂಟಲಿನ ದ್ವಾರಾ ಉದರದೊಳಗೆ ಪ್ರವೇಶ ಮಾಡಿಸಲು ಅನುಕೂಲ

ವಾಗುವಂತೆ ಕಂಠಗತ ಪ್ರದೇಶದಲ್ಲಿ (ಆಕಾಶದಲ್ಲಿ) ಅವಕಾಶ ಪ್ರದನಾಗಿದ್ದಾನೆ ಬಾಯಿಯ ಒಳ ಭಾಗ, ಗಂಟಲು ಮತ್ತು ಆಹಾರನಾಳದಲ್ಲಿ ವಿದ್ಯಮಾನವಾದ ಪ್ರದೇಶದಲ್ಲಿ (ಒಳಗೆ) ವ್ಯಾಪ್ತರೂಪದಿಂದದ್ದ, ಉದರಗತ ಆಕಾಶದಲ್ಲಿಯೂ ಮತ್ತು ಬಹಿರ್ಗತ ಮುಖದಲ್ಲಿಯೂ (ಹೊರಗೆ) ಸ್ಥಿತನಾಗಿದ್ದು ಅನ್ನೋದಕಾದಿ ಭೋಜನ ಕ್ರಿಯೆಯನ್ನು ನಡೆಯಿಸುವನು. ಉದರಪ್ರವೇಶವಾದ ಭೋಜ್ಯ ಪದಾರ್ಥಗಳ ಧಾರಣೆಗೂ ಅವಕಾಶ ಪ್ರದನಾಗಿದ್ದಾನೆ. ವಾಸುದೇವರೂಪಿ ಶ್ರೀಪರಮಾತ್ಮನು. ಇದಲ್ಲದೆ, ವಾಸುದೇವಾತ್ಮಕನು ಶ್ವಾಸೋಚ್ಛ್ವಾಸ ಕ್ರಿಯೆಗೂ ಅವಕಾಶ ಪ್ರದನಾಗಿದ್ದಾನೆ. ಹೊರಗಿನ ಗಾಳಿಯನ್ನು ಒಳಗೆ ತೆಗೆದುಕೊಳ್ಳುವುವದು ಮತ್ತು ಗಾಳಿಯನ್ನು ಹೊರಗೆ ಬಿಡುವುದಕ್ಕೂ. ಅವಕಾಶ [ವಿರಾಮ] ಅತ್ಯಗತ್ಯ, ಅವಕಾಶ ಪ್ರದರೂಪವಾದ ಈ ಕ್ರಿಯಯೂ ಸಹ ವಾಸುದೇವರೂಪೀ ಶ್ರೀ ಪರಮಾತ್ಮನ ಕ್ರೀಡಾವಿಲಾಸವೇ. ಇಂತು ಶ್ರೀ ಪರಮಾತ್ಮನು, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ ಶಾಂತಿ, ಕೃತಿ, ಜಯಾ. ಮಾಯಾ ಮತ್ತು ಲಕ್ಷ್ಮೀ ಎಂಬ ಶ್ರೀ ರಮಾದೇವಿಯರ ಪಂಚರೂಗಳಿಂದ ಸಹಿತ ನಾಗಿದ್ದು, ಈ ಶರೀರದಲ್ಲಿ ಅವಕಾಶ ಪ್ರದನಾಗಿ ಕ್ರೀಡಾವಿಶಿಷ್ಟನಾಗಿ ಭೋಜನಕ್ರಿಯಾ ರೂಪವಾದ ವ್ಯಾಪಾರಗಳನ್ನು ನಡೆಯಿಸುತ್ತಿದ್ದಾನೆ. ಪದ್ಮನಾಭರೂಪೀ ಶ್ರೀ ಪರಮಾತ್ಮನ ನಾಭಿಕಮಲದಿಂದ ಉತ್ಪನ್ನವಾದ ಕಮಲದಲ್ಲಿ ಹುಟ್ಟಿದ ಶ್ರೀ ಚತುರ್ಮುಖ ಬ್ರಹ್ಮದೇವರು [ಆಸರೋರುಹಭವ], ಶ್ರೀ ರುದ್ರದೇವರು. ಇಂದ್ರಾದಿ ದೇವತಾ ವರ್ಗದಲ್ಲಿಯೂ, ದೇವಗಂಧರ್ವಾದಿ ಪಂಚವಿಧಜೀವರಲ್ಲಿರೂ, ನಿರಂಶ ತೃಣಾಂತ ಸಮಸ್ತ ತ್ರಿವಿಧ ಜೀವರ ಸಮೂಹದಲ್ಲಿಯೂ [ಚೇತನರಾಶಿಯೊಳಗೆ] ಶ್ರೀ ಪರಮಾತ್ಮನು ಪೂರ್ವೋಕ್ತ ಪ್ರಕಾರ ಅನಿರುದ್ಧಾದಿ ಪಂಚರೂಪಗಳಿಂದ ರಮಾಸಹಿತನಾಗಿ ಅಧಿಷ್ಠಿತ ನಾಗಿದ್ದು. ಭೋಜನ ಕ್ರಿಯಾದಿ ವ್ಯಾಪಾರ ವಿಶೇಷಗಳನ್ನು ನಡೆಸುತ್ತಾ, ತಾನುಮಾತ್ರ ನಿರ್ಲಿಪ್ತನಾಗಿ ಜಗದ್ವಿಲಕ್ಷಣನಾಗಿ, ಕ್ರೀಡಾವಿಶಿಷ್ಟನಾಗಿದ್ದಾನೆ, ಈ ವಿಷಯವನ್ನು ಜ್ಞಾನಪೂರ್ವಕವಾಗಿ ತಿಳಿದು. ತದನುಗುಣವಾಗಿ ಉಪಾಸನೆಮಾಡುತ್ತಿರುವವನೇ ನಿಜವಾದ ಜ್ಞಾನಿಯು. ಅಂತಹ ಕೋವಿದನೇ

ಶ್ರೀ ಹರಿವಾಯುಗಳ ಪೂರ್ಣಾನುಗ್ರಹಕ್ಕೆ ಪಾತ್ರನಾಗುವನು ಎಂತ ತಾತ್ಪರ್ಯ ॥೯॥

## ಪದ್ಯ (೧೦)

ಮೂಲ:–

ವಾಸುದೇವನು ಅನ್ನದೊಳು ನಾ।
ನಾ ಸುಭಕ್ಷ್ಯದಿ ಸಂಕರುಷಣ ಕೃ।
ತೀಕ ಪರಮಾನ್ನದೊಳು ಘೃತದೊಳಗಿಪ್ಪನನಿರುದ್ಧ॥
ಆ ಸುಪಾರ್ಣಂಸಗನು ಸೂಪದಿ।
ವಾಸುವಾನುಜ ಶಾಕದೊಳು ಮೂ।
ಲೇಶ ನಾರಾಯಣನು ಸರ್ವತ್ರದಲಿ ನೆಲೆಸಿಹನು॥೧೦॥

**ಅವತರಣಿಕೆ;–**

ಅನ್ನಾದಿ ವಿವಿಧ ಭೋಜ್ಯವಸ್ತುಗಳಲ್ಲಿ ವಾಸುದೇವಾದಿ ರೂಪಗಳಿಂದ ವಿರಾಜಮಾನನಾಗಿ, ತದ್ಗತ ರಸವಿಶೇಷಗಳನ್ನು ಭೋಜನಕ್ರಿಯಾದ್ವಾರಾ ಜೀವರ ರಸನೇಂದ್ರಿಯಕ್ಕೆ ತಂದುಕೊಡುತ್ತಾ. ಮೂಲರೂಪಿಯಾದ ಶ್ರೀಮನ್ನಾರಾಯಣನು ಅಂತರ್ಬಹಿಶ್ಚ ಸರ್ವತ್ರ ವ್ಯಾಪ್ತನಾಗಿದ್ದು. ಸಮಸ್ತ ಪದಾರ್ಥಗಳಲ್ಲಿಯೂ ನೆಲೆಸಿರುವನು ಎಂದು ವಿವರಿಸುತ್ತಾರೆ–"ವಾಸುದೇವನು" -ಎಂಬ ಸಂಧಿಗತ ೧೦ನೆಯ ಈ ಪದ್ಯದಿಂದ. ॥೧೦॥

**ಪ್ರತಿಪದಾರ್ಥ :—**

**ವಾಸುದೇವನು**=ಮಾಯಾಪತಿಯಾದ ಶ್ರೀ ವಾಸುದೇವನಾಮಕ ಪರಮಾತ್ಮನು **ಅನ್ನದೊಳು**=ಅನ್ನದಲ್ಲಿ **ನಾನಾಸುಭಕ್ಷ್ಯದಿ**= ನಾನಾ

ಪ್ರಕಾರವಾದ ಲಾಡು, ಹೋಳಿಗೆ ಮುಂತಾದ ಭಕ್ಷ್ಯಪದಾರ್ಥಗಳಲ್ಲಿ **ಸಂಕರುಷಣ** = ಜಯಾರಮಣನಾದ ಶ್ರೀ ಸಂಕರ್ಷಣ ನಾಮಕ ಪರಮಾತ್ಮನು **ಕೃತೀಶ** = ಕೃತಿನಾಮಕ ಲಕ್ಷ್ಮೀದೇವಿಯರ ಪತಿಯಾದ ಶ್ರೀ ಪ್ರದ್ಯುಮ್ನ ರೂಪೀ ಪರಮಾತ್ಮನು **ಪರಮಾನ್ನದೊಳು** = ಪರಿಮಳಯುಕ್ತವಾದ ಪಾಯಸದಲ್ಲಿಯೂ **ಅನಿರುದ್ಧ** = ಶಾಂತೀಪತಿಯಾದ ಅನಿರುದ್ಧನಾಮಕ ಪರಮಾತ್ಮನು **ಘೃತದೊಳಗೆ** = ತುಪ್ಪದಲ್ಲಿ **ಇಪ್ಪ** = ಇರುವನು **ಆ ಸುಪರ್ಣಾಂಸಗನು** = ಗರುಡವಾಹನನಾದ ಶ್ರೀ ಕೃಷ್ಣರೂಪೀ ಪರಮಾತ್ಮನು [ಸುಪರ್ಣ = ಗರುಡದೇವರ ಅಂಸ = ಹೆಗಲಿನಮೇಲೆ ಗ = ಸಂಚರಿಸುವ ಅಂದರೆ ಗಮನಮಾಡುವ ಗರುಡಗಮನ ಎಂದರ್ಥ] **ಸೂಪದಿ** = ತೊವ್ವೆಯೊಳಗೂ **ವಾಸವಾನುಜ** = ಇಂದ್ರನ ತಮ್ಮನಾದ ಉಪೇಂದ್ರನಾಮಕ ಪರಮಾತ್ಮನು **ಶಾಕದೊಳು** = ಕಾಯಿ ಪಲ್ಯಗಳಲ್ಲಿ (ತರಕಾರಿ–ಅನಿಷಿದ್ಧವಾದದ್ದು ಮಾತ್ರಗ್ರಾಹ್ಯ) **ಮೂಲೇಶ** = ಮೂಲಪ್ರಕೃತಿಗೆ ನಿಯಾಮಕನಾದ **ನಾರಾಯಣನು** = ಲಕ್ಷ್ಮೀಪತಿಯಾದ ಮೂಲರೂಪೀ ಶ್ರೀಮನ್ನಾರಾಯಣನು **ಸರ್ವತ್ರದಲಿ** = ಸರ್ವ ಭೋಜ್ಯ ಪದಾರ್ಥಗಳಲ್ಲಿಯೂ **ನೆಲೆಸಿಹನು** = ಅಂತರ್ಗತರೂಪದಿಂದ ಆವಾಸನಾಗಿ ವ್ಯಾಪ್ತನಾಗಿದ್ದಾನೆ ॥೧೧॥

## ವ್ಯಾಖ್ಯಾನಗಳು

### ೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಭೋಜನಕ್ಕೆ ಸಿದ್ಧವಾದ ಪಚನವಾದ ಪದಾರ್ಥಗತ ಭಗವದ್ರೂಪಗಳ ಅನುಸಂಧಾನಕ್ರಮ ಹೇಳುತಾರೆ.

ಮಾಯಾನಾಮಕ ಲಕ್ಷ್ಮೀದೇವರ ಪತಿಯಾದ ಶ್ರೀ ವಾಸುದೇವನು ತಂಡುಲದಿಂದ ಪಚನವಾದ ಅನ್ನದಲ್ಲಿ ಇದ್ದಾನೆ. ಪೂರ್ವದಲ್ಲಿ ಫಲರೂಪವಾದ ವ್ರೀಹ್ಯಾದಿಗಳಲ್ಲಿ ಭಗವದ್ರೂಪಗಳ ಹೇಳಿ ಈಗ ಪಚನವಾದ ಪದಾರ್ಥಗಳಲ್ಲಿ ಭಗವದ್ರೂಪಗಳ ಹೇಳತಾರೆ. ಕಾರಣವೇನೆಂದರೆ, ಸರ್ವಪದಾರ್ಥಗಳೂ

ಈಶ್ವರನಿಂದ ನಿರ್ಮಿತವಾದದ್ದು. ಆಯಾ ಪದಾರ್ಥಗಳು ತದಂಗರ್ತತ ಭಗವದಧೀನ. ಆದಕಾರಣದಿಂದ ಸರ್ವತ್ರ ಭಗವದ್ರೂಪ ಚಿಂತನ ಇರಬೇಕಂತ ಅರ್ಥ. ಅನೇಕವಿಧವಾದ ಅನಿಷಿದ್ಧಗಳಾದ ಲಾಡು. ಹೋಳಿಗೆ ಮೊದಲಾದ ಭಕ್ಷ್ಯಗಳಲ್ಲಿ ಜಯನಾಮಕ ಲಕ್ಷ್ಮೀದೇವೇರ ಪತಿಯಾದ ಸಂಕರ್ಷಣರೂಪೀ ಪರಮಾತ್ಮ ಇದ್ದಾನೆ. ಕೃತಿನಾಮಕ ಲಕ್ಷ್ಮೀದೇವೇರ ಪತಿಯಾದ ಪ್ರದ್ಯುಮ್ನ ರೂಪೀ ಪರಮಾತ್ಮನು, ಉತ್ತಮವಾದ ಕ್ಷೀರದಿಂದ ಯುಕ್ತವಾಗಿ, ಗೋಧಿ ಅಥವಾ ತಂಡುಲಾದಿಗಳು ಯುಕ್ತವಾಗಿ, ದಿವ್ಯಶರ್ಕರದಿಂದ ಯುಕ್ತವಾಗಿರುವ ಸುವಾಸಿತವಾದ ಪಾಯಸದಲ್ಲಿ ಇರೋವನಾಗಿದ್ದಾನೆ.ತುಪ್ಪದಲ್ಲಿ ಶಾಂತಿನಾಮಕ ಲಕ್ಷ್ಮೀದೇವೇರ ಪತಿಯಾದ ಅನಿರುದ್ಧನಾಮಕ ಪರಮಾತ್ಮ ಇದ್ದಾನೆ. ಅಹಂಕಾರ ತತ್ವಾಭಿಮಾನಿಯಾದ ಗರುಡದೇವರ ಭುಜದ ಮ್ಯಾಲೆ ಕೂತು ಕೊಂಡು ಸಂಚಾರಮಾಡತಕ್ಕ ಶ್ರೀ ಕೃಷ್ಣ ದೇವರು ತೊವ್ವಿಯೊಳಗೆ ಇರೋ ವವನಾಗಿದ್ದಾನೆ. ಉಪೇಂದ್ರ ಶ್ರೀ ಪರಮಾತ್ಮ ಕಾಯಿಗಳಿಂದಲೂ ತೊಪ್ಪಲು ಗಳಿಂದಲೂ ಪಚನಮಾಡಿದೆ ಪಲ್ಯಗಳಲ್ಲಿ ಇದ್ದಾನೆ. ಅವತಾರರೂಪಗಳಿಗೆ ಮೂಲಭೂತನಾದ ಲಕ್ಷ್ಮೀದೇವೇರ ಪತಿಯಾದ ಅಂಶಿಸಾಂಕೇನಾದ ಶ್ರೀಮನ್ನಾ ರಾಯಣನು, ಭಗವದ್ರೂಪಗಳು ಹೇಳದೇ ಇರುವ ಭೋಜನಕ್ಕೆ ಯೊಗ್ಯವಾದ ಗೊಜ್ಜು ಕೋಸುಂಬರಿ, ಮೊದಲಾದ ಅನೇಕ ಪದಾರ್ಥಗಳಲ್ಲಿ ಅಂತರ್ಗತ ನಾಗಿದ್ದಾನೆ. ಸಮಸ್ತ ಭೋಜನ ಪದಾರ್ಥಗಳಲ್ಲೂ ಇದ್ದಾನೆ.

ಪೂರ್ವೋಕ್ತ ಭೋಜ್ಯಪದಾರ್ಥಗತ ಭಗವದ್ರೂಪಗಳ ವಿವರಣೆಯ ಪಟ್ಟಿಯನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

**ತಾತ್ಪರ್ಯ :**

| ಕ್ರಮ ಸಂಖ್ಯೆ | ಭೋಜನ ಪದಾರ್ಥಗಳು | ಅಂತರ್ಗತ ಭಗವದ್ರೂಪಗಳು |
|---|---|---|
| ೧ | ಅನ್ನ | ವಾಸುದೇವಮೂರ್ತಿ |
| ೨ | ಸುಭಕ್ಷ್ಯಾದಿಗಳು | ಸಂಕರ್ಷಣ |
| ೩ | ಪರಮಾನ್ನ | ಪ್ರದ್ಯುಮ್ನ |
| ೪ | ಘೃತ | ಅನಿರುದ್ಧ |
| ೫ | ತೊವ್ವೆ | ಶ್ರೀ ಕೃಷ್ಣ |
| ೬ | ಶಾಕ | ಉಪೇಂದ್ರ |
| ೭ | ಸರ್ವಭೋಜ್ಯ ವಸ್ತುಗಳು | ಶ್ರೀಮನ್ನಾರಾಯಣ |

ಈಪ್ರಕಾರ ಅಂತರ್ಗತನಾಗಿದ್ದಾನೆ ಎಂದು ಅನುಸಂಧಾನಪೂರ್ವಕ ಭೋಜನಮಾಡಬೇಕು.

**ವಿಶೇಷಾರ್ಥ:–**

(೧) ಮೇಲೆ ಹೇಳಿದ ವಿಷಯಗಳಿಗೆ ಪ್ರಮಾಣಃ–

**"ವಾಸುದೇವಸ್ತು ಚಾನಸ್ಥೋ ಭಕ್ಷ್ಯೇ ಸಂಕರ್ಷಣಸ್ತಥಾ।**
**ಪ್ರದ್ಯುಮ್ನಃ ಪರಮಾನ್ನಸ್ಥೋ ಹ್ಯನಿರುದ್ಧೋ ಘೃತೇಸ್ಥಿತಃ।**
**ನಾರಾಯಣಸ್ತು ಸರ್ವತ್ರ"॥– ಇತಿ ಐತರೇಯೇ.**

(೨) "ಪ್ರದ್ಯುಮ್ನ" ಪದಕ್ಕೆ ನಿರ್ವಚನ:—

"ಪ್ರಕೃಷ್ಟಂ ದ್ಯುಮ್ನಂ ಹಿರಣ್ಯಮೇವ ರೂಪಂ ಯಸ್ಯ ಸಃ ಪ್ರದ್ಯುಮ್ನ:"॥

[೩] "ಅನಿರುದ್ಧ" ಪದಕ್ಕೆ ನಿರ್ವಚನ:—

"ನ ಕೇನಾಪಿನಿರುದ್ಧ ಇತ್ಯನಿರುದ್ಧ:। ಅನೋ ಮುಖ್ಯಪ್ರಾಣ: ಸೋಸ್ಯಾಸ್ತೀತ್ಯನೀ। ತೇನಾನಿನಾ ಮುಖ್ಯ ಪ್ರಾಣಪ್ರಸಾದವತಾ ಪುರುಷೇಣ ರುದ್ಧಾ: ವಶೀಕೃತಾ ಇತಿವಾ ಅನಿರುದ್ಧ:। ಸಂಸಾರಿ ಮುಕ್ತಾಸ್ತಾನ್ ದದಾತಿ ಧಾರಯತಿ ಪೋಷಯತಿ ವಾ ಅನಿರುದ್ಧ:॥ ಇತಿ.

[೪] "ಸಂಕರ್ಷಣ"——ಎಂಬ ಪದಕ್ಕೆ ನಿರ್ವಚನ:—

"ಸಮ್ಯಕ್ ಪಾಪಕರ್ಷಣ ಶೀಲತ್ವಾತ್ಸಂಕರ್ಷಣ:॥"

"ಸಮೀಚೀನಂ ಕರಂ ಸನೋತಿ ದದಾತಿ ಇತಿವಾ ಸಂಕರ್ಷಣ: ॥"

—ಎಂತ ಈ ಪ್ರಕಾರ ಶ್ರೀ ಭಾಗವತ ಪ್ರಥಮ ವಿಜಯಧ್ವಜೀಯ ಟೀಕಾ ದಲ್ಲಿ ಉಕ್ತವಾಗಿದೆ. ॥೧೦॥

[೨] "ಭಾವಪ್ರಕಾಶಿಕೆ"– ವ್ಯಾಖ್ಯಾನ:–

ಅನ್ನದೊಳಗೆ ವಾಸುದೇವಮೂರ್ತಿಯೂ, ನಾನಾವಿಧ ಭಕ್ಷ್ಯಗಳಲ್ಲಿ ಸಂಕರ್ಷಣ ಮೂರ್ತಿಯೂ, ಕೃತಿಪತಿಯಾದ ಪ್ರದ್ಯುಮ್ನ ಮೂರ್ತಿಯು. ಪರಮಾನ್ನದೊಳಗೂ, ತುಪ್ಪದೊಳಗೆ ಅನಿರುದ್ಧ ಮೂರ್ತಿಯೂ ಇರುವನು ಗರುಡವಾಹನನಾದ ಶ್ರೀ ಕೃಷ್ಣನು ತೊವ್ವೆಯಲ್ಲಿಯೂ, ಉಪೇಂದ್ರನು ಪಲ್ಯದೊಳಗೂ, ಲಕ್ಷ್ಮೀಪತಿಯಾದ ಶ್ರೀ ನಾರಾಯಣನು ಸಕಲ ಭೋಜ್ಯ ಪದಾರ್ಥಗಳಲ್ಲಿಯೂ ವ್ಯಾಪ್ತನಾಗಿರುವನು. ಈ ಸಂಧಿಯ ಪ್ರಥಮ ಪದ್ಯಾರಂಭ ಈ ವರೆವಿಗೂ ಇನ್ನು ಮುಂದೆ ಹೇಳಿರುವ ಎಲ್ಲಾ ವಿಷಯವನ್ನೂ ಐತರೇಯ

ಭಾಷ್ಯ ದಲ್ಲಿ ವಿಸ್ತಾರವಾಗಿ ಹೇಳಿರುವರು. ಅದೇ ಅಭಿಪ್ರಾಯವನ್ನೇ ಇಲ್ಲಿ ಹೇಳಿರುವರು. ಅದರಲ್ಲಿ "ನಿರುಪಮಾನಂದಾತ್ಮ" ಎಂಬ ೮ನೆಯ ಪದ್ಯ ಮೊದಲು ೧೦ನೆಯ ಪದ್ಯದವರೆಗೂ ಹೇಳಿರುವ ಆಧಾರ ಭೂತವಾದುದ ಐತರೇಯೋಪನಿಷದ್ವಾಕ್ಯಗಳು:—

"ಸಂಕರ್ಷಣಸ್ಯ ಪ್ರದ್ಯುಮ್ನ್ ತತ್ರ ಭೋಕ್ತೃಷು ಸಂಸ್ಥಿತೌ।
ಭೋಕ್ತೃ ಶಕ್ತಿ ಪ್ರದಾ ನಿತ್ಯಂ ಭೋಕ್ತಾರಾಚ ವಿಶೇಷತಃ॥
ನಾರಾಯಣಾನಿರುದ್ಧೌ ಚ ಭೋಜ್ಯ ವಸ್ತುಷು ಸಂಸ್ಥಿತೌ।
ತರ್ಪಕೋ ಸರ್ವಜೀವಾನಾಂ"॥

(ಇತ್ಯಾದಿಗಳಿಗೆ ೮ನೆಯ ಪದ್ಯವು ವ್ಯಾಖ್ಯಾನರೂಪವಾದುದು.)

"ಅವಕಾಶಪ್ರದೋ ನಿತ್ಯಂ ವಾಸುದೇವೋ ನಭಃಸ್ಥಿತಃ।
ಪಂಚರೂಪಾತ್ಮಕಂ ವಿಷ್ಣುಂ ಯ ಉಪಾಸ್ತೇಸದೈವಹಿ॥"

[ಇದು ೯ನೆಯ ಪದ್ಯದ ವ್ಯಾಖ್ಯಾನರೂಪವಾದುದು.]

"ವಾಸುದೇವಸ್ತು ಚಾನ್ನಸ್ಥೋ ಹ್ಯನಿರುದ್ಧೋ ಘೃತೇಸ್ಥಿತಃ।
ನಾರಾಯಣಸ್ತು ಸರ್ವತ್ರ॥"

[ಇದು ೧೦ನೆಯ ಪದ್ಯದ ವ್ಯಾಖ್ಯಾನರೂಪವಾದುದು, ಇದರರ್ಥಗಳೇ ಮೇಲಿನ ಪದ್ಯಗಳಲ್ಲಿ ಬಂದಿರುವುದರಿಂದ ಈ ಶ್ಲೋಕಗಳಿಗೆ ಅರ್ಥವಿವರಿಸ ಲಿಲ್ಲ.] ॥೧೦॥

(೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :—

ಈಗ ಪದಾರ್ಥಗಳಲ್ಲಿದ್ದಂಥ ಭಗವದ್ರೂಪ ಹೇಳುತ್ತಾರೆ– "ವಾಸು ದೇವನು"– ಎಂಬ ಪದ್ಯದಿಂದ.

"ವಾಸುದೇವಸ್ತು........ ನಾರಾಯಣ ಸರ್ವತ್ರ॥"

**–ಇತಿ ಐತರೇಯೇ** [ಈಪ್ರಮಾಣದ ಪೂರ್ಣವಾಕ್ಯರೂಪವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ.]

ಆ ಸುಪರ್ಣಾಂಗನು=ಗರುಡನ ಹೆಗಲಿನಲ್ಲಿರುವಂಥ ಶ್ರೀ ಕೃಷ್ಣನು ವಾಸುವಾನುಜ=ಉಪೇಂದ್ರನಾಮಕ ಶ್ರೀ ಹರಿಯು ॥೧೦॥

## ೪) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ :

ವಾಸುದೇವ ಇತಿ॥ ಮಾಯೇಶನ್ನಗತೋ ಭಕ್ಷ್ಯೇ ಜಯೇಶ: ಪರಮೋದನೇ॥ ಕೃತೀಶ್ಯೋ ಘೃತಗ: ಸ್ವೀಯವಶ್ಯ: ಸೂಪೇ ವಿಪಶ್ಚಿತ:॥ ವಾಮನ: ಶಾಕಗ: ಸರ್ವಗತೋ ನಾರಾಯಣೋರಿಹಾ ॥೧೦॥

**ಕನ್ನಡಾನುವಾದ :—**

"**ವಾಸುದೇವನು ಅನ್ನದೊಳು**"– ಎಂಬ ಈ ಪದ್ಯದಲ್ಲಿ–ಅನ್ನದಲ್ಲಿ ವಾಸುದೇವನು, ಭಕ್ಷ್ಯದಲ್ಲಿ ಸಂಕರ್ಷಣರೂಪೀ ಶ್ರೀ ಪರಮಾತ್ಮನೂ ಪಾಯಸದಲ್ಲಿ. ಶಾಂತೀಶ ಅನಿರುದ್ಧನು ತುಪ್ಪದಲ್ಲಿ, ತೊವ್ವೆಯಲ್ಲಿ ಗರುಡಗಮನನಾದ ಶ್ರೀ ಕೃಷ್ಣನು. ಶಾಕಗಳಲ್ಲಿ ವಾಮನನಾಮಕ ಶ್ರೀ ಪರಮಾತ್ಮನು [ಉಪೇಂದ–ವಾಸುವಾನುಜ] ಸರ್ವತ್ರ ನಾರಾಯಣನು ವ್ಯಾಪ್ತನಾಗಿದ್ದಾನೆ– ಇಂತು ಭಗವದ್ರೂಪಗಳ ಚಿಂತನೆ- ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಮಾಯಾಪತಿ ಶ್ರೀ ವಾಸುವೇವನು ಅನ್ನದಲ್ಲಿ, ಜಯಾಪತಿ ಸಂಕರ್ಷಣನು ಭಕ್ಷ್ಯದಲ್ಲಿ ಪರಮಾನ್ನದಲ್ಲಿ ಕೃತೀಶನಾದ ಪ್ರದ್ಯುಮ್ನನು, ಶಾಂತೀಪತಿ ಅನಿರುದ್ಧನು ತುಪ್ಪದಲ್ಲು, ಗರುಡವಾಹನಾದ ಶ್ರೀಹರಿಯು ಸೂಪದಲ್ಲಿಯೂ, ವಾಮನನು ಶಾಕದಲ್ಲಿಯೂ, ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನು ಸರ್ವತ್ರ ಇರುತ್ತಾನೆ"-ಎಂದು ಹೇಳಿರುವ **ಮಾಯೇಶನ್ನಗತ:**"ಮತ್ತು"**ಸರ್ವಾಂತರ್ಯಾಮಿ ವಾಸುದೇವಂ**"–ಇತ್ಯಾದಿ ವಚನಗಳು ಪ್ರಮಾಣವಾಗಿರುತ್ತವೆ ॥೧೦॥

೪) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ:–

ಅನ್ನದಲ್ಲಿ ವಾಸುದೇವರೂಪ, ಬಹುವಿಧ ಭಕ್ಷ್ಯಗಳಲ್ಲಿ ಸಂಕರ್ಷಣರೂಪ, ಪರಮಾನ್ನದಲ್ಲಿ ಕೃತಿದೇವೀಪತಿ ಪದ್ಯುಮ್ನರೂಪ, ತುಪ್ಪದಲ್ಲಿ ಅನಿರುದ್ಧ ರೂಪ, ಗರುಡಧ್ವಜರೂಪ ತೊವ್ವೆಯಲ್ಲಿ, ಉಪೇಂದ್ರರೂಪ ಶಾಕದಲ್ಲಿ, ಮೂಲರೂಪ ನಾರಾಯಣನು ಸರ್ವಪದಾರ್ಥಗಳಲ್ಲಿ, ಈ ರೀತಿಯಾಗಿರುವ ನೆಂದು ಚಿಂಸಬೇಕು.

"ವಾಸುದೇವಾತ್ಮಾನ್ನ ಸಂಸ್ಥ: ಭಕ್ಷ್ಯೇ ಸಂಕರ್ಷಣಸ್ತಥಾ॥"

ಇತ್ಯಾದ್ಯರ್ಥವು ವಿವರಿಸಲ್ಪಟ್ಟಿತು ॥೧೦॥

ಸರ್ವವ್ಯಾಖ್ಯಾನಸಾರಸಂಗ್ರಹ:—

ಅಗ್ನಿಯಿಂದ ಚನ್ನಾಗಿ ಪಕ್ವವಾದ ಸುಭೋಜ್ಯ ಪದಾರ್ಥಗಳಲ್ಲಿ ಚಿಂತಿಸಬೇಕಾದ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ– "ವಾಸುದೇವನು–ಎಂಬ ಈ ಸಂಧಿಗತ ೧೦ನೆಯ ಪದ್ಯದಿಂದ.

ಚನ್ನಾಗಿ ಪಕ್ವವಾದ ಅನ್ನದಲ್ಲಿ ಮಾಯಾರಮಣನಾದ ವಾಸುದೇವ ನಾಮಕ ಶ್ರೀ ಪರಮಾತ್ಮನಿದ್ದಾನೆ. ಜಯಾಪತಿ ಸಂಕರ್ಷಣರೂಪೀ ಶ್ರೀ ಪರಮಾತ್ಮನು ಹೋಳಿಗೆ, ಫೇಣಿ ಇತ್ಯಾದಿ ಅತ್ಯಂತ ರುಚಿಕರವಾದ ಅನಿಷಿದ್ಧವಾದ ಭಕ್ಷ್ಯಗಳಲ್ಲಿ ಇದ್ದಾನೆ. ತಂಡುಲ, ಗೋಧಿ ಇತ್ಯಾದಿ ಧಾನ್ಯಗಳನ್ನು ಹದವಾಗಿ ಪಕ್ವಮಾಡಿ, ಉತ್ತಮವಾದ ಹಾಲು, ಯಾಲಕ್ಕಿ, ಕೇಸರಿ ಮುಂತಾದ ಸುಗಂಧ ದ್ರವ್ಯಗಳನ್ನು ಮಿಶ್ರಮಾಡಿ, ಸಕ್ಕರೆ ಅಥವಾ ಬೆಲ್ಲದಿಂದ ಯುಕ್ತವಾದ ಪರಮಾನ್ನದಲ್ಲಿ (ಪಾಯಸ) ಕೃತಿ ಪತಿಯಾದ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನಿದ್ದಾನೆ. ಶಾಂತೀಶನಾದ ಅನಿರುದ್ಧ ನಾಮಕನು ಹಸನಾದ ತುಪ್ಪದಲ್ಲಿದ್ದಾನೆ. ತೊವ್ವೆಯಲ್ಲಿ ಗರುಡಗಮನನಾದ ಶ್ರೀ ಪರಮಾತ್ಮ ನಿದ್ದಾನೆ. ವಾಮನರೂಪೀ ಉಪೇಂದ್ರನಾಮಕ ಶ್ರೀ ಪರಮಾತ್ಮನು ಚನ್ನಾಗಿ

ಪಕ್ವಮಾಡಿದ ಕಾಯಿಪಲ್ಲೆಗಳಲ್ಲಿ (ತರಕಾರಿಗಳು) ಇದ್ದಾನೆ. ಮೂಲರೂಪೀ ಶ್ರೀಮನ್ನಾರಾಯಣನು ಪೂರ್ವೋಕ್ತ ಪದಾರ್ಥಗಳಲ್ಲದೆ, ಇತರ ಸಮಸ್ತ ಅನಿಷಿದ್ಧ ಅಂದರೆ ಭೋಜನಯೋಗ್ಯವಾದ ಪದಾರ್ಥಗಳಲ್ಲಿ ಸರ್ವತ್ರ ವ್ಯಾಪಕನಾಗಿ ನೆಲೆಸಿರುವನು.

ಈ ಭಗವದ್ರೂಪಗಳ ವಿವರವನ್ನು ಈ ಕೆಳಗಿನ ಪಟ್ಟಿಯು ವಿಹಂಗಮ ನೋಟದಿಂದ ತಿಳಿಯಬಹುದು : ॥ ೧೦ ॥

| ಕ್ರಮ ಸಂಖ್ಯೆ | ಭೋಜನಪದಾರ್ಥಗಳು | ಅಂತರ್ಗತ ಭಗವದ್ರೂಪಗಳು |
|---|---|---|
| ೧ | ಅನ್ನದಲ್ಲಿ | ವಾಸುದೇವ |
| ೨ | ಸುಭಕ್ಷ್ಯಾದಿಗಳಲ್ಲಿ | ಸಂಕರ್ಷಣ |
| ೩ | ಪರಮಾನ್ನದಲ್ಲಿ | ಪ್ರದ್ಯುಮ್ನ |
| ೪ | ತುಪ್ಪದಲ್ಲಿ | ಅನಿರುದ್ಧ |
| ೫ | ತೊವ್ವೆಯಲ್ಲಿ | ಶ್ರೀಕೃಷ್ಣ |
| ೬ | ಕಾಯಿಪಲ್ಲೆಗಳಲ್ಲಿ (ಶಾಕ) | ಉಪೇಂದ್ರ |
| ೭ | ಸರ್ವಭೋಜ್ಯ ವಸ್ತುಗಳಲ್ಲಿ | ಶ್ರೀಮನ್ನಾರಾಯಣ |

# ಪದ್ಯ (೧೧)

**ಮೂಲ :**

ಅಗಣಿತಾತ್ಮ ಸುಭೋಜನ ಪದಾ ।
ರ್ಥಗಳ ಒಳಗೆ ಅಖಂಡವಾದೊಂ ।
ದಗಳಿನೊಳನಂತಾಂಶದಿಂದಲಿ ಖಂಡನೆಂದೆನಿಸಿ ॥
ಜಗದಿ ಜೀವರ ತೃಪ್ತಿ ಪಡಿಸುವ ।
ಸ್ವಗತಭೇದವಿವರ್ಜಿತನ ಇ ।
ಬ್ಬಗೆಯ ರೂಪವನರಿತು ಭುಂಜಿಸಿ ಅರ್ಪಿಸವನಡಿಗೆ ॥ ೧೧ ॥

**ಅವತರಿಣಿಕೆ :**

ಗಣನೆಯಿಲ್ಲದ ಅನಂತ ಕಲ್ಯಾಣಗುಣಗಣರತ್ನಾಕರನಾದ ಶ್ರೀಪರಮಾತ್ಮನು ಭೋಜನಕ್ಕೆ ಯೋಗ್ಯವಾದ ಸಮಸ್ತ ಪದಾರ್ಥಗಳಲ್ಲಿ ಖಂಡ ಮತ್ತು ಅಖಂಡರೂಪಗಳಿಂದ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ಖಂಡಾಖಂಡರೂಪಗಳಿಂದ ಭೋಜ್ಯಪದಾರ್ಥಗತನಾಗಿದ್ದು, ತದ್ದ್ವಾರಾ ಜೀವರಿಗೆ ತೃಪ್ತಿಯನ್ನು ನೀಡುವ ಸ್ವಗತಭೇದವಿವರ್ಜಿತನಾದ ಶ್ರೀ ಪರಮಾತ್ಮನ ರೂಪದ್ವಯ ವಿಶೇಷಗಳನ್ನು ತಿಳಿಸುತ್ತಾರೆ- "**ಅಗಣಿತಾತ್ಮ**"—ಎಂಬ ಸಂಧಿಗತ ೧೧ನೆಯ ಈ ಪದ್ಯದಿಂದ ॥ ೧೧ ॥

**ಪ್ರತಿಪದಾರ್ಥ :—**

**ಅಗಣಿತಾತ್ಮ**=ಎಣಿಕೆಗೆ ಸಾಧ್ಯವಿಲ್ಲದ (ಅಗಣಿತ) ಅಂದರೆ ಅನಂತಾನಂತ ಸಂಖ್ಯಾಕವಾದ, ಸಾಕಾರ, ಸಾವಯವರೂಪಗಳುಳ್ಳ (ಆತ್ಮ) ಶ್ರೀ ಪರಮಾತ್ಮನು **ಸುಭೋಜನ**=ಭೋಜನಮಾಡಲು ಯೋಗ್ಯವಾದ, ಅಂದರೆ ಅನಿಷಿದ್ಧಗಳಾದ **ಪದಾರ್ಥಗಳ ಒಳಗೆ**=ವಸ್ತುಗಳಲ್ಲಿ ಅಧಿಷ್ಠಿತನಾಗಿದ್ದು

**ಅಖಂಡ**=ಅಖಂಡ ರೂಪದಿಂದಲೂ (ಸಮಗ್ರ ವಸ್ತುಗತರೂಪ) **ಒಂದೊಂದಗಳಿನೊಳು**=ಆ ವಸ್ತುವಿನ ಒಂದೊಂದು ಅಂಶದೊಳಗೂ (ಅಗಳು ಅನ್ನದ ಪ್ರಥಕ್‌ಭಾಗ-ಸಣ್ಣರೂಪ) **ಅನಂತಾಂಶದಿಂದಲಿ**=ಅಸಂಖ್ಯಾತವಾದ ಅಂಶರೂಪಗಳಿಂದ ಇದ್ದು **ಖಂಡನೆಂದೆನಿಸಿ**=ಖಂಡನೆಂಬ ನಾಮಧೇಯದಿಂದ (ಅನ್ನವು ಸಮಗ್ರರೂಪ. ಅಗಳು ಅದರ ಅಂಶರೂಪ. ಇಂತಹ ಒಂದೊಂದು ಅಗಳಿನಲ್ಲಿಯೂ ಅನಂತಾಶದಿಂದ ಪರಿಪೂರ್ಣನಾಗಿರುವ ರೂಪವೇ "ಖಂಡ" ರೂಪವೆನಿಸುವುದು) **ಜಗದಿ**=ಈ ಜಗತ್ತಿನಲ್ಲಿ **ಜೀವರ**=ಚೇತನರಿಗೆ **ತೃಪ್ತಿಪಡಿಸುವ**=ಭೋಜನದ್ವಾರಾ ಸ್ವಾದ್ಯಗಳನ್ನು ತಾನು ಸ್ವೀಕರಿಸಿ, ತದ್ವಾರಾ ತೃಪ್ತಿಯನ್ನು ಕೊಡುವನು **ಸ್ವಗತಭೇದವಿವರ್ಜಿತನ**=ತನ್ನ ರೂಪ, ಅವತಾರ, ಅವಯವ ವಿಶೇಷಗಳು. ಗುಣ ಸಮೂಹಗಳು. ಕ್ರಿಯಾವಿಶೇಷಗಳು ಇವುಗಳಲ್ಲಿ (ಸ್ವಗತ) ಪರಸ್ಪರ ಭೇಧವಿಲ್ಲದಿರುವ (ಭೇದವಿವರ್ಜಿತ) ಶ್ರೀ ಪರಮಾತ್ಮನ **ಇರ್ಬಗೆಯ**=ಪೂರ್ವೋಕ್ತ ಎರಡು ವಿಧವಾದ (ಎರಡುಬಗೆ=ಇರ್ಬಗೆ) **ರೂಪವನು**=ಖಂಡ ಮತ್ತು ಆಖಂಡಗಳೆಂಬ ರೂಪವಿಶೇಷಗಳನ್ನು **ಅರಿತು**=ಅನುಸಂಧಾನಪೂರ್ವಕ ತಿಳಿದು **ಭುಂಜಿಸಿ**=ಭೋಜನಮಾಡಿ **ಅವನಡಿಗೆ**=ಅಂತಹ ಖಂಡಾಖಂಡ ರೂಪಾತ್ಮಕನಾದ ಶ್ರೀ ಪರಮಾತ್ಮನ ಪಾದಕಮಲಗಳಿಗೆ **ಅರ್ಪಿಸು**= ಸಮರ್ಪಣ ಮಾಡು ॥೧೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಭೋಜನಕ್ಕೆ ಯೋಗ್ಯವಾದ, ಅನಿಷಿದ್ಧಗಳಾದ ಪದಾರ್ಥಗಳಲ್ಲಿ (ಸುಭೋಜನ ಪದಾರ್ಥಗಳ ಒಳಗೆ), ತದಾಕಾರ ನಾಮದಿಂದ ಅಖಂಡರೂಪವೊಂದು, ಅದರಲ್ಲಿ ದೃಷ್ಟಾಂತಕ್ಕಾಗಿ ಖಂಡರೂಪವಾದ ಒಂದು ಅಗಳು, ಅದರಲ್ಲಿ ಅಗಳಿನ ಆಕಾರವಂತೆ ಅಖಂಡರೂಪವೊಂದು (ಖಖಂಡವಾದ)

ಇಖಂಡರೂಪವಾದ ಒಂದು ಅಗಳಿನೊಳು (ಒಂದೊಂದಗಳಿನೊಳು). ಅನೇಕ ತುಂಡು ತುಂಡು ಭಾಗಗಳು ಮಾಡಿದರೆ. ಅದರೊಳಗೆ ಅಂಶಸಾಂಕೇತವಾದ ಒಂದು ಭಾಗದಲ್ಲಿ ಇಂಥಾ ಪರಿಮಿತಿಯಿಂದ (ಅನಂತಾಂಶದಿಂದಲಿ), ಗಣಿತಕ್ಕೆ ಅರ್ಹವಲ್ಲದ (ಅಗಣಿತ) ಸಾಕಾರ ಸಾವಯವವುಳ್ಳವನಾಗಿ ಶ್ರೀಪರಮಾತ್ಮ ಅನಂತಾನಂತಗಳಾದ, ಸ್ವಾಭಿನ್ನಗಳಾದ, ಅತ್ಯಂತಾಭಿನ್ನಗಳಾದ ಗುಣಪೂರ್ಣ ಗಳಾದ ಖಂಡರೂಪವುಳ್ಳವ (ಅತ್ಮ), ಒಂದೊಂದಗಳಿನಲ್ಲಿ ತದಾಕಾರ ಅಖಂಡ ರೂಪ ಖಂಡರೂಪಗಳು ಅನಂತದಿಂದ ಯುಕ್ತವಾಗಿ (ಖಂಡನೆಂದೆನಿಸ), ಈ ಚತುರ್ದಶಲೋಕದೆಲ್ಲಿ ಇರುವ (ಜಗದಿ), ಪ್ರಾಣಿಗಳ [ಜೀವರ] ಆಹಾರಗಳಲ್ಲಿ ಪೂರ್ವೋಕ್ತ ಪ್ರಕಾರ ಖಂಡಾಖಂಡರೂಪಗಳಾಗಿದ್ದು, ಪಾಂಚಭೌತಿಕ ದೇಹದಲ್ಲಿ ಖಂಡಾಖಂಡರೂಪಗಳಿಂದ ಇದ್ದು ಭೋಜನದ್ವಾರಾ ತನ್ನಸ್ವಾಖ್ಯ ರಸಗಳ ತಾನು ಸ್ವೀಕರಿಸಿ, ಅವರವರಿಗೆ (ತೃಪ್ತಿಪಡಿಸುವ), ತನ್ನಲ್ಲಿ ತನ್ನ ಅವಯುವಗಳಿಗೆ, ತನ್ನ ರೋಮಾದಿ ನಖಗಳಿಗೆ, ಗುಣಗಳಿಗೆ, ಏತಾದೃಶ ಯಾವತ್ತಕ್ಕೆ (ಸ್ವಗತ), ಒಂದಕ್ಕೊಂದು ಪರಸ್ಪರ ಭೇದದಿಂದ ವಿಶೇಷಾಕಾರ ವಾಗಿ ವಿವರ್ಜಿತನಾದ ಶ್ರೀ ಪರಮಾತ್ಮನ (ಜೀವರಿಗೂ, ಜೀವೇಂದ್ರಿಯ ಗಳಿಗೂ ಪರಸ್ಪರ ಅಭೇದಗಳೇವೇ ಶ್ರೀ ಪರಮಾತ್ಮನ ಅಭೇದ ಅಂಥಾದ್ದಲ್ಲಿ. ದೇವರಸರ್ವೇಂದ್ರಿಯ ವ್ಯಾಪಾರ ಒಂದು– ಇಂದ್ರಿಯ ಮಾಡತದೆ. ಈ ರೀತ್ಯಾ ಸರ್ವೇಂದ್ರಿಯಗಳು ಸರ್ವೇಂದ್ರಿಯಗಳ ವ್ಯಾಪಾರ ಮಾಡತದೆ. ಇಂಥಾ ಅಭೇದ ಶ್ರೀ ಪರಮಾತ್ಮನದು. ಜೀವನ ಅಭೇದ ಎಂಬುದು ಜೀವನೂನೂ ಚಿದಾನಂದಮಯನು. ಅವನ ಅವಯುವವೂ ಚಿದಾನಂದಮಯಗಳು. ಇಷ್ಟು ಮಾತ್ರದಿಂದ ಅಭೇದ ಉಳ್ಳವನು. ಇಂದ್ರಿಯ ವ್ಯಾಪಾರ ಮಾತ್ರ ಭಿನ್ನವು] ಈ ಪ್ರಕಾರ ಸ್ವಗತಭೇದವಿವರ್ಜಿತನಾದ ಶ್ರೀ ಪರಮಾತ್ಮನ ಎರಡು ಪ್ರಕಾರ ವಾದ ಎಂದರೆ (ಇರ್ಬಗೆಯು] [೧] ಪದಾರ್ಥಗತ ಅಖಂಡರೂಪ ಒಂದು ಖಂಡರೂಪ ಒಂದು. [೨] ದೇಹಗತ ಅಖಂಡರೂಪ ಒಂದು. ಖಂಡರೂಪ ಒಂದು– ಅಂತು ಎರಡು ಪ್ರಕಾರ ಭಗವದ್ರೂಪಗಳನ್ನು ಅರಿತು [ರೂಪವನ ರಿತು] ಭೋಜನಮಾಡಿದವನಾಗಿ [ಭುಂಜಿಸಿ] ಶ್ರೀ ಬಿಂಬರೂಪಿಯಾದ ಶ್ರೀ ಪರಮಾತ್ಮನ ಪಾದಗಳಿಗೆ [ಅವನಡಿಗೆ], ದೇಹಾಂತರ್ಗತ ಹಾಗೂ ಪದಾರ್ಥಾಂತರ್ಗತ ಭಗವದ್ರೂಪಗಳಿಗೆ ಪರಸ್ಪರ ಮೇಳನರೂಪವಾದ

[ಭೇದವಿಲ್ಲೆಂದು] ಅನುಸಂಧಾದಿಂದ ಅರ್ಪಿಸೋವನಾಗು ಎಂತ ತಾತ್ಪರ್ಯ [ಅರ್ಪಿಸು]

ಶ್ರೀ ಪರಮಾತ್ಮ ಸಾಕಾರ ಸಾವಯುವಳ್ಳವನಾಗಿಯೂ, ಅನಂತಾನಂತಗಳಾದ ಖಂಡಾಖಂಡರೂಪಗಳಿಂದ ಜೀವರು ಭೋಜನಮಾಡತಕ್ಕ ಖಂಡಾಖಂಡಪದಾರ್ಥಗಳಲ್ಲಿಯೂ, ಪಾಂಚಭೌತಿಕ ಸ್ಥೂಲದೇಹದಲ್ಲಿಯೂ ಪೂರ್ವೋಕ್ತ ಪ್ರಕಾರ ಇದ್ದು, ಭೋಜನದ್ವಾರಾ ತನ್ನ ಸ್ವಾಖ್ಯರಸವನ್ನು ಸ್ವೀಕರಿಸಿ, ಅವರವರ ಯೋಗ್ಯತಾನುಸಾರ ಪ್ರಥಮಶ್ಲೋಕದಲ್ಲಿ ಹೇಳಿದ ರೀತಿಯಾಗಿ ತೃಪ್ತಿಪಡಿಸುತ್ತಾನೆ. ಈ ಪ್ರಕಾರ ಪದಾರ್ಥಗತ ಖಂಡರೂಪ ಒಂದು, ಅಖಂಡರೂಪ ಒಂದು, ದೇಹಗತ ಖಂಡರೂಪ ಒಂದು, ಅಖಂಡ ರೂಪ ಒಂದು, ಅಂತೂ ಈ ಎರಡು ಪ್ರಕಾರ ಭಗವದ್ರೂಪಗಳು ಇರುತ್ತವೆ ಎಂತಲೂ, ಆಯಾ ರೂಪಗಳಿಗೆ ಭೇಧವಿಲ್ಲವೆಂತಲೂ ಪದಾರ್ಥಗಳ ಭೋಜನ ಮಾಡಿ, ಶ್ರೀ ಪರಮಾತ್ಮನ ಪಾದಗಳಿಗೆ ಅರ್ಪಿಸೋವವನಾಗಬೇಕು ಎಂತ ತಾತ್ಪರ್ಯ.

**ವಿಶೇಷಾರ್ಥ ;—**

**ಪ್ರಮೇಯುಮಾಲಿಕಾ ಗ್ರಂಥದಲ್ಲಿ :–**

**"ತತ್ರ ಪ್ರಥಮರೂಪಾಣಿ ಖಂಡಾಖಂಡಸ್ವರೂಪತಃ ।**
**ಕವಳಾದಿಸ್ವರೂಪೇಣ ದ್ವಿವಿಧಾನಿ ವಿಶೇಷತಃ**
**ಭುಜ್ಯಮಾನ ಪದಾರ್ಥೇಷು ಸಾತ್ಯೇನ ವಿವಿಧಾನಿ ಚ ॥"**

ಭಗವಂತನ ಗುಣರೂಪಕ್ರಿಯಗಳಿಗೆ ಭೇದವಿಲ್ಲವೆಂಬುದಕ್ಕೆ ಪ್ರಮಾಣ :–

**"ವಿಷ್ಣೋರೇವ ಸ್ವರೂಪಾಣಾಂ ತದ್ಗುಣಾನಾಂ ತಥೈವ ಚ ।**
**ತಥೈವ ಶಿರ ಆದೀನಾಂ ನೈವ ಭೇದೋಸ್ತಿ ಕಶ್ಚನ ॥**

—ಈ ರೀತಿ ಪ್ರಮಾಣವಚನವಿದೆ ॥ ೧೧ ॥

## (೨) "ಭಾವಪ್ರಕಾಶಕ"—ವ್ಯಾಖ್ಯಾನ :—

ಅನಂತಾನಂತರೂಪಗಳುಳ್ಳ ಶ್ರೀ ಪರಮಾತ್ಮನು ಭೋಜನ ಮಾಡುವ ಭಕ್ಷ್ಯ, ಫಲ ಮುಂತಾದ ಪದಾರ್ಥಗಳಲ್ಲಿ ಚಿರೋಟಿ ಮೊದಲಾದ ನಾಮಗಳಿಂದ **ಅಖಂ**ಡರೂಪನಾಗಿಯೂ, ಅನ್ನದ ಪ್ರತಿಯೊಂದು ಅಗಳಿನಲ್ಲಿಯೂ, ಪಲ್ಯದ ಒಂದೊಂದು ಹೋಳಿನಲ್ಲಿಯೂ ಖಂಡರೂಪನಾಗಿಯೂ ಇರುವನು. ಚಿರೋಟಿ ಮುಂತಾದ ಭಕ್ಷ್ಯಸಮುದಾಯಗಳಲ್ಲಿಯೂ ಸಮುದಾಯರೂಪದಿಂದ ಅಖಂಡನಾಗಿರುವನು, ಅಂದರೆ, ೧೦೦ ಚಿರೋಟಿ ಒಟ್ಟು ಕೂಡಿದ್ದಾಗ ಚಿರೋಟಿಸಮುದಾಯದಲ್ಲಿ ಅಖಂಡನಾಗಿರುವನು. ಒಂದೊಂದು ಚಿರೋಟಿ ಯನ್ನು ಬೇರ್ಪಡಿಸಲು ಒಂದೊಂದರಲ್ಲಿಯೂ ಖಂಡರೂಪಿ ಯೆಂದೆನಿಸುವನು. ಹೀಗೆ ಖಂಡಾಖಂಡರೂಪಗಳಿಂದ ಭೋಜ್ಯವಸ್ತು ಗಳಲ್ಲಿದ್ದರೂ ಭಗವದ್ರೂಪಗಳಲ್ಲಿ ಪರಸ್ಪರ ಭೇದವಿಲ್ಲದಿರುವನು. ಚಿರೋಟಿ, ಜಿಲೇಬಿ, ಅನ್ನ, ಸ್ಸಾರು ಮೊದಲಾದ ಪದಾರ್ಥಗಳಿಗೆ ಪರಸ್ಪರ ಭೇದಗಳಿದ್ದರೂ, ಅವುಗಳಲ್ಲಿ ಆಯಾಯಾ ಆಕಾರಗಳಿಂದ ಇರುವ ಭಗವ ದ್ರೂಪಗಳಿಗೆ ಗುಣಾದಿಗಳಲ್ಲಿ ಪರಸ್ಪರ ಭೇದವಿಲ್ಲವೆಂಬ ಭಾವ. ಈ ಪ್ರಕಾರ ಖಂಡ ಮತ್ತು ಅಖಂಡಗಳೆಂಬ ರೂಪಗಳಿಂದ ಭೋಜ್ಯವಸ್ತುವಾಗಿ ಜಗತ್ತಿನಲ್ಲಿ ಸಕಲ ಪ್ರಾಣಿಗಳನ್ನು ತೃಪ್ತಿ ಪಡಿಸುವನೆಂನು ಭಾವಿಸಿ, ಭೋಜನವನ್ನು ಮಾಡಿ, ಭುಂಜಿಸಿದ ಕೃತ್ಯವನ್ನು ಪರಮಾತ್ಮನಿಗೆ ಅರ್ಪಿಸಬೇಕು. ಇದನು ಶ್ರವಣಮಾಡುವವರು, ಅನುಷ್ಠಾನಕ್ಕೆ ತರುವವರು ಬಹು ಜನವಿರಲ್ಕ ಸಮರ್ಪಿಸು–ಮಾಡು, ಏಕವಚನವಾಗಿ ಒಬ್ಬನನ್ನೇ ಸಂಭೋದಿಸಿ ಹೇಳಲು ಕಾರಣವೇನಂದರೆ ; **"ಸಮುದಾಯೈಕವಚನಮ್"**–ಎಂಬ ನ್ಯಾಯದಿಂದ ತಮ್ಮ ಶಿಷ್ಯಮಂಡಲಿಯನ್ನು ಒಂದೇ ಸಮುದಾಯವೆಂದು ದಾಸರಾಯರು ಭೋಧಿಸುತ್ತಾರೆಂದು ತಿಳಿಯಬೇಕು ॥ ೧೧ ॥

## (೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :–

ಅಗಣಿತಾತ್ಮ = ಅನಂತರೂಪವುಳ್ಳವ ಶ್ರೀಹರಿಯು ಎಂತರ್ಥ; ಅಖಂಡ– **ತದುಕ್ತಂ ಪ್ರಮೇಯಮಾಲಿಕಾಯಾಮ್ :–**

**"ತತ್ರ ಪ್ರಥಮರೂಪಾಣಿ..............ಸಂತ್ಯೇವ ವಿವಿಧಾನಿಚ ॥"**
(ಈ ಪ್ರಮಾಣದ ಪೂರ್ಣರೂಪವನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ) ಸ್ವಗತಭೇದವಿವರ್ಜಿತ= ತನ್ನ ಗುಣರೂಪಕ್ರಿಯಗಳಿಗೆ ಲೇಶ ಲೇಶವೂ ಭೇದವಿಲ್ಲ ಎಂತರ್ಥ.

**ಉಕ್ತಂಚ ಭಗವತ್ಪಾದೈಃ-**

"ವಿಷ್ಣೋರೇವ........................................... ಕಶ್ಚನ॥"
(ಈ ಪ್ರಮಾಣವನ್ನು ಪೂರ್ಣ ವಾಕ್ಯರೂಪದಲ್ಲಿ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ) ಈರ್ಬಗೆ =ಎರಡು ವಿಧವಾದ-ಈವಿವರ ತಿಳಿದು ಭೋಜನಮಾಡುತ್ತಾ ಸಮರ್ಪಿಸೆಂದು ಭಾವ ॥೧೧॥

**(೮) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನಃ—**

**"ಅಗಣಿತಾತ್ಮಸುಭೋಜನ"**—ಎಂಬ ಪದ್ಯದಲ್ಲಿ ಶ್ರೀ ಹರಿಯು ಸ್ವರಸ ಸಂತೃಪ್ತನು. ಅಂದರೆ ನಿತ್ಯತೃಪ್ತನು. ಶ್ರೀ ಹರಿಯು ಸಮಸ್ತ ಭೋಜನವಸ್ತುಗಳಲ್ಲಿ ಅಖಂಡರೂಪದಿಂದಿದ್ದು, ಅನಂತಾಂಶಗಳಿಂದ ಜೀವರಿಗೆ ತೃಪ್ತಿ ಕೊಡುವನು ಸ್ವಗತಭೇದವಿವರ್ಜಿತನಾದ (ತನ್ನ ರೂಪಗಳಲ್ಲಿ ಪರಸ್ಪರ ಭೇದವಿಲ್ಲದಿರುವ) ಶ್ರೀ ಪರಮಾತ್ಮನ ಖಂಡ ರೂಪಗಳ ಪ್ರಕಾರವನ್ನು ತಿಳಿದು. ಭೋಜನಗೈದು ಶ್ರೀ ಹರಿಯು ಪಾದಾರವಿಂದಗಳಲ್ಲಿ ಸಮರ್ಪಿಸಬೇಕೆಂದು ಹೇಳುತ್ತಾರೆ. ಇರ್ಬಗೆ= ಈ ಎರಡೇಪ್ರಕಾರವಾನ ಅಡಿ= ಪಾದಗಳು ॥೧೧॥

**(೯) "ಗುರುಹೃದಯ ಗ್ರಕಾಶಿಕೆ"—ವ್ಯಾಖ್ಯಾನಃ—**

ಅನಂತರೂಪನಾದ ಶ್ರೀ ಹರಿಯು ಒಳ್ಳೆಯ ಭೋಜನಪದಾರ್ಥಗಳಲ್ಲಿ ಅಖಂಡರೂಪ, ಒಂದೊಂದು ಅಗಳಿನಲ್ಲಿಯೂ ಅನಂತಾಂತದಿಂದ ಖಂಡ ರೂಪನೆನಿಸಿ, ಜಗತ್ತಿನಲ್ಲಿ ಜೀವರನ್ನು ತೃಪ್ತಿಪಡಿಸುವನು, ತನ್ನ ರೂಪ

ಗಳಲ್ಲಿ ಭೇದರಹಿತನಾದ ಶ್ರೀ ಪರಮಾತ್ಮನ ಭೋಕ್ತೃ ಭೋಜ್ಯವೆಂಬ ಎರಡು ರೂಪಗಳನ್ನು ತಿಳಿದು, ಭೋಜನಮಾಡಿ, ಈ ಜ್ಞಾನವು ದೇವರಧೀನವೆಂದು ಆವನ ಪಾದಕ್ಕೆ ಅರ್ಪಿಸುವುದೆಂದರ್ಥ ॥೧೧॥

**ಸರ್ವವ್ಯಾಖ್ಯಾನಸಾರಸಂಗ್ರಹ:—**

ಶ್ರೀಪರಮಾತ್ಮನು ಅನಂತ ಕಲ್ಯಾಣಗುಣಗಣರತ್ನಾಕರನು. ಆತನ ಗುಣರೂಪ ಕ್ರಿಯಾವಿಶೇಷಗಳು ಅನಂತಾನಂತ. ಎಣಿಗೆ ಸಾಧ್ಯವಿಲ್ಲದ್ದು. ಇಂತು ಅನಂತಾನಂತ ಗುಣರೂಪ ಕ್ರಿಯಾವಿಶೇಷವಳುಳ್ಳ, ಅಂದರೆ ಅಗಣಿತಾತ್ಮನಾದ ಶ್ರೀ ಹರಿಯು ಭೋಜನಕ್ಕೆ ಯೋಗ್ಯವಾದ, ಅಂದರೆ, ನಿಷಿದ್ಧವಲ್ಲದ ಭೋಜನಪದಾರ್ಥಗಳಲ್ಲಿ ಇದ್ದಾನೆ. ಹಾಗೆ ಭೋಜ್ಯಪದಾರ್ಥಗತ ಶ್ರೀ ಪರಮಾತ್ಮನ ರೂಪಗಳು ಎರಡು ಪ್ರಕಾರ (೧) ಖಂಡರೂಪ ಮತ್ತು (೨) ಅಖಂಡರೂಪ. ಅನ್ನದ ರಾಶಿ ಅಖಂಡ (ಸಮುದಾಯ) ರೂಪವಾದದ್ದು. ಅಂತೆಯೇ ಇತರ ಭೋಜನಪದಾರ್ಥಗಳ ರಾಶಿ ಅಥವಾ ಸಮುದಾಯದಲ್ಲಿ ಸಮಗ್ರ ರೂಪದಿಂದು "ಅಖಂಡ" ನೆನಿಸುತ್ತಾನೆ, ಅನ್ನದ ಒಂದೊಂದು ಅಗಳೂ ಸಮುದಾಯದ ಭಾಗ, ಹೀಗೆ ಪೃಥಕ್ಕಾಗಿರುವ ಭಾಗರೂಪವಾಗಿರುವ ಆಹಾರ ಪದಾರ್ಥಗಳಲ್ಲಿ "ಖಂಡರೂಪ" ದಿಂದಿರುವನು. ಅಖಂಡ ರೂಪದಿಂದಿದ್ದರೂ ಅನಂತಾಂಶದಿಂದ ಪರಿಪೂರ್ಣನಾಗಿರುವನು. ಭೋಜನಪದಾರ್ಥಗತ ಖಂಡ ಮತ್ತು ಅಖಂಡರೂಪಗಳಿರುವಂತೆಯೇ ದೇಹಗತವಾದ ಖಂಡಾಖಂಡರೂಪಗಳಿವೆ. ಸಮಗ್ರ ದೇಹ ಅಖಂಡರೂಪ. ಪ್ರತಿಯೊಂದ ಅವಯವವೂ ಖಂಡರೂಪ. ಸಮಗ್ರ ದೇದಾದ್ಯಂತ ವ್ಯಾಪ್ತರೂಪವು ಅಖಂಡರೂಪ. ಅವಯವಗತ ರೂಪಗಳು ಖಂಡರೂಪವು. ಹೀಗೆ ದೇಹೀದ್ಯಂತ ಖಂಡಾಖಂಡ ರೂಪಗಳಿಂದ ವ್ಯಾಪ್ತನಾಗಿದ್ದು. ಭೋಜನಕ್ರಿಯಾದ್ವಾರಾ ರಸವಿಭಾಗಗೈ, ದೇಹಕ್ಕೆ ಉಪಚಯದ್ವಾರಾ ತೃಪ್ತಿ ಕೊಡುವನು. ಇಂತು ಖಂಡಾಖಂಡರೂಪಗಳಿಂದ ಭೋಜ್ಯವಸ್ತುಗೂ ರಸಾಂತರ್ಗತನಾಗಿ ತನ್ನ ಸ್ವಾನ್ನಾಂಶಗಳಾದ ಸ್ವಾಖ್ಯರಸವನ್ನು ಸ್ವೀಕರಿಸುವನು, ತನ್ದ್ವಾರಾ ದೇಹಾಂತರ್ಗತ ಪ್ರಕಾಶತೋ ವ್ಯಾಪ್ತನಾದ ಜೀವರಿಗೆ ಉಂಡು ಉಣಿಸಿ,

ಬಿಂಬಕ್ರಿಯಾ ದ್ವಾರಾ ತೃಪ್ತಿಪಡಿಸುವನು. ಇಂತು ಜಗದಿ ಜೀವರ ತೃಪ್ತಿ ಪಡಿಸುವ ಸರ್ವಸಾರ ಭೋಕ್ತನಾದ ಶ್ರೀ ಪರಮಾತ್ಮನ ಗುಣ, ರೂಪ, ಕ್ರಿಯಾ, ಅವತಾರ, ಅವಯವಗಳಿಗೆ ಪರಸ್ಪರ ಭೇದವಿಲ್ಲ. ಅಂದರೆ, ಶ್ರೀ ಪರಮಾತ್ಮನ ಒಂದೊಂದು ಗುಣವೂ ಅನಂತಾನಂತ ಗುಣಗಳಿಂದ ಪರಿಪೂರ್ಣವಾದುದು. ಅಂತೆಯೇ ಭಿನ್ನ ಭಿನ್ನ ಅಧಿಷ್ಠಾನಗಳಲ್ಲಿ ತದ್ರೂಪ, ತದಾಕಾರ ತದ್ವಾಚ್ಯ ಮತ್ತು ತನ್ನಾಮಕವಾದ ಭಗವದ್ರೂಪಗಳಿಗೆ ಪರಸ್ಪರ ಭೇದವಿಲ್ಲ, ಶ್ರೀಪರಮಾತ್ಮನ ಕ್ರಿಯಾವಿಶೇಷಗಳೂ ಪರಿಪೂರ್ಣವೇ. ಮತ್ಸ್ಯ, ರಾಮಕೃಷ್ಣಾದ್ಯ ವತಾರಗಳಿಗೆ ಲವಲೇಶವೂ ಭೇದವಿಲ್ಲ. ಶ್ರೀ ಪರಮಾತ್ಮನ ನಖ, ರೋಮಾದಿ ಸಮಸ್ತ ಅಂಗಗಳೂ, ಅವಯವ ವಿಶೇಷಗಳು ಅಭೇದವೇ ಶ್ರೀ ಹರಿಯ ಒಂದು ಅಂಗವು ದೇಹದ ಇತರ ಸಮಸ್ತ ಇಂದ್ರಿಯಗಳ ವ್ಯಾಪಾರಗಳನ್ನು ಮಾಡಬಲ್ಲುದು. ಅಂದರೆ ಶ್ರೀ ಪರಮಾತ್ಮನು ತನ್ನ ಕರಗಳಿಂದ ನೋಡಬಲ್ಲನು. ಕಾಲುಗಳಿಂದ ಕೇಳಬಲ್ಲನು. ಜ್ಞಾನಾನಂದಸ್ವರೂಪ ದೇಹವುಳ್ಳವನಾದ್ದರಿಂದ, ಇಂತಹ ಅಚಿಂತ್ಯಾದ್ಭುತ ಶಕ್ತಿ ವಿಶೇಷ ಶ್ರೀ ಪರಮಾತ್ಮನದು. ಜೀವರೂ ಚಿದಾನಂದಸ್ವರೂಪರಾದರೂ, ಅವರ ಸ್ವರೂಪ ದೇಹಗತ ಪ್ರತಿ ಅವಯವವೂ ಪರಿಮಿತಶಕ್ತಿವುಳ್ಳದ್ದು ಮತ್ತು ಒಂದು ಅವಯವವು ಇತರ ಅವಯುವಗಳ ಕೆಲಸಮಾಡಲಾರದು. ಈ ಕಾರಣದಿಂದಲೇ ಈಶನು ಜೀವರಿಂದ ಅತ್ಯಂತ ವಿಲಕ್ಷಣನು. ಇಂತು ಜೀವ ಜಡವರ್ಗದಿಂದ ಅತ್ಯಂತ ಭಿನ್ನವಾದ ಶ್ರೀ ಪರಮಾತ್ಮನು ಸ್ವಗತಭೇದವಿವರ್ಜಿತನು ಇದರಿಂದ ಶ್ರೀ ಪರಮಾತ್ಮನ ಭೋಜ್ಯಪದಾರ್ಥಗತ ಮತ್ತು ಶರೀರಗತ ಖಂಡ ಮತ್ತು ಅಖಂಡರೂಪಗಳಿಗೆ ಪರಸ್ಪರ ಅಭೇದ. (೧) ಭೋಜ್ಯ ವಸ್ತುಗಳಲ್ಲಿ ಅಂತರ್ಗತ ರಸರೂಪ ಮತ್ತು [೨] ಭೋಕ್ತೃಗಳಲ್ಲಿರುವ ಭಗವದ್ರೂಪ-ಈ ರೀತಿಯಲ್ಲಿ ಎರಡು ಪ್ರಕಾರವಾದ ರೂಪಗಳನ್ನು ಚಿಂತಿಸಬಹುದು. ಇಂತಹ ಸುಭೋಜ್ಯವಸ್ತುಗತ, ದೇಹಾಂತರ್ಗತ, ಖಂಡ ಮತ್ತು ಅಖಂಡರೂಪಗಳ ಹಾಗೂ ಭೋಕ್ತೃ ಮತ್ತು ಭೋಜ್ಯ ವಸ್ತುಗತ ಭಗವದ್ರೂಪಗಳು ಈ ಪ್ರಕಾರ ಎರಡು ವಿಧವಾದ ಭಗವದ್ರೂಪಗಳನ್ನು [ಇರ್ಬಗೆಯ := ಎರಡು ಬಗೆಯ] ಶಾಸ್ತ್ರಾಧ್ಯಯನ ಮತ್ತು ಗುರೂಪದೇಶ ದ್ವಾರಾ ತಿಳಿದು, ಆ ಅನುಸಂಧಾನ ಪೂರ್ವಕವಾದ ಜ್ಞಾನದಿಂದ, ಭೋಜನಮಾಡಬೇಕು, ಬಿಂಬ

ಕ್ರಿಯಾದ್ವಾರಾ, ಶ್ರೀಪರಮಾತ್ಮನು ಸರ್ವಸಾರಭೋಕ್ತನಾಗಿದ್ದು, ತನ ಸ್ವಾಖ್ಯರಸಗಳನ್ನು ಸ್ವೀಕರಿಸಿ, ಪ್ರತಿಬಿಂಬಾಂಶರಾದ ಜೀವರಿಗೆ ತೃಪ್ತಿಯನು ನೀಡುತ್ತಾನೆಂದು ತಿಳಿದು, ಈ ಭೋಜನ ಕ್ರಿಯಾರೂಪವಾದ ಮಹಾಯಜ್ಞದ ಫಲವನ್ನು ನಿತ್ಯತೃಪ್ತನ ಪಾದಕಮಲಗಳಿಗೆ ಅರ್ಪಿಸಿ, ಧನ್ಯರಾಗಬೇಕೆಂದು ದಾಸರಾಯರ ಅಭಿಪ್ರಾಯ ॥೧೧॥

# ಪದ್ಯ (೧೨)

**ಮೂಲ :–**

**ಈ ಪರಿಯಲರಿತುಂಬ ನರ ನಿ ।**
**ತ್ಯೋಪವಾಸಿ ನಿರಾಮಯನು ನಿ ।**
**ಷ್ಪಾಪಿ ನಿತ್ಯ ಮಹತ್ಸುಯಜ್ಞಗಳಾಚರಿಸಿದವನು ॥**
**ಶ್ರೀಪುದಿಪ್ಪುದು ಬಪ್ಪುದೆಲ್ಲ ರ ।**
**ಮಾಪತಿಗಧಿಷ್ಠಾನವೆನ್ನು ಕೃ ।**
**ಪಾಪಯೋನಿಧಿ ಮಾತನಾಲಿಸುತಿಹ ಜನನಿಯಂತೆ ॥೧೨॥**

**ಅವತರಣಿಕೆ:–**

ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸಿರುವಂತೆ, ಸುಭೋಜನಪದಾರ್ಥಗಳಲ್ಲಿ ಅಂತರ್ಗತನಾಗಿರುವ ಶ್ರೀ ಪರಮಾತ್ಮನ ವಾಸುದೇವಾದಿ ಭಗವದ್ರೂಪಗಳನ್ನು ಆಯಾಯಾ ವಸ್ತುಗಳಲ್ಲಿ ಚಿಂತಿಸುತ್ತಾ, ಭೋಜನಕ್ರಿಯಾ ದ್ವಾರಾ ಉಂಡು ಉಣಿಸಿ, ಜೀವರಿಗೆ ತೃಪ್ತಿಯನ್ನೀವ ಶ್ರೀಹರಿಯ ನಾನಾ ಪ್ರಕಾರವಾದ ಗುಣರೂಪ ಕ್ರಿಯಾವಿಶೇಷಾದಿಗಳನ್ನು ಜ್ಞಾನದ್ವಾರಾ ತಿಳಿದು, ಅನುಸಂಧಾನಪೂರ್ವಕವಾಗಿ ಧ್ಯಾನಮಾಡುತ್ತಿರುವ ಸಾಧಕನು ನಿತ್ಯೋಪವಾಸಿಯೂ, ರೋಗಗಳಿಂದ ಬಾಧಿತನಾಗದೆ ಆರೋಗ್ಯವಂತನಾದವನೂ, ಪಾಪರಹಿತನೂ, ಮಹತ್ತಾದ ಸುಯಜ್ಞಗಳನ್ನು ಮಾಡಿದ ಫಲಪ್ರಾಪ್ತಿಯುಳ್ಳವನೂ ಆಗುತ್ತಾನೆ.

ಜೀವನಪಥದಲ್ಲಿ ಇರುವುದು, ಹೋಗುವುದು, ಮುಂದೆ ಪ್ರಾಪ್ತವಾಗಲಿರುವುದು ಈ ಸಮಸ್ತ ಪ್ರಸಂಗ ವಿಶೇಷಗಳೂ ಇಂದಿರಾಧವನ ಸಂಕಲ್ಪದಂತೆ ನಡೆಯುಗ ತ್ತಿರುವುವು ಎಂಬ ಅನುಸಂಧಾನದಿಂದ ಉಪಾಸನೆ ಮಾಡುವ ಅಂತರಂಗ ಭಕ್ತನ ಪ್ರಾರ್ಥನೆಯನ್ನು ಪರಮಕರುಣಾಸಮುದ್ರನಾದ ಶ್ರೀ ರಮಾಪತಿಯು ತಾಯಿಯಾದವಳು ತನ್ನ ಮಗುವಿನ ಮಾತುಗಳನ್ನು ಆಲಿಸುವಂತೆ, ಆತ್ಮ ಪ್ರಾರ್ಥನೆಗೆ ಓಗೊಟ್ಟು ಸಂರಕ್ಷಿಸುವನು-ಎಂದು ಹೇಳುತ್ತಾರೆ- **"ಈ ಪರಿಯು ಲರಿತುಂಬ"** ಎಂಬ ಸಂಧಿಗತ ೧೨ನೆಯ ಈ ಪದ್ಯದಿಂದ ॥೧೨॥

**ಪ್ರತಿಪದಾರ್ಥ :**

**ಈ ಪರಿಯುಲಿ**=ಪೂರ್ವೋಕ್ತ ಪ್ರಕಾರದಿಂದ **ಅರಿತು**=ಅನುಸಂಧಾನ ಪೂರ್ವಕ ತಿಳಿದು **ಉಂಬ**=ಭೋಜನಮಾಡುವ **ನರ**=ಮನುಷ್ಯನನ **ನಿತ್ಯೋಪವಾಸಿ**=ಪ್ರತಿದಿನವೂ ಉಪವಾಸ ವ್ರತಾಚರಣೆ ಮಾಡಿದಮ· ಫಲವನ್ನು ಹೊಂದುವನು [ನಿತ್ಯ ಭೋಜನಮಾಡಿದರೂ, ಉಪವಾಸ ವ್ರತಾ ಚರಣೆಯ ಫಲಪ್ರಾಪ್ತಿ] **ನಿರಾಮಯನು**=ರೋಗರಹಿತನು **ನಿಷ್ಪಾಪಿ**= ಪಾಪರಹಿತನು **ನಿತ್ಯ**=ಪ್ರತಿದಿನದಲ್ಲಿಯೂ [ನಿರಂತರ] **ಮಹತ್**=ಶ್ರೇಷ್ಠ ಗಳಾದ **ಸುಯಜ್ಞಗಳ**=ಭಗವತ್ಪ್ರೀತಿಕರವಾದ ಸಮೀಚೀನವಾದ ಯಜ್ಞ ಗಳನ್ನು **ಆಚರಿಸಿದವನು**=ಮಾಡಿದ ಫಲವನ್ನು ಹೊಂದುವನು **ಪೋಪುದು**=ಅಂತಹ ಅಧಿಕಾರಿಗೆ ತನ್ನ ಕೈಬಿಟ್ಟುಹೋಗುವ ಪದಾರ್ಥಗಳು [ಅಹಂ ಮಮ ಎಂಬುದೂ ಮತ್ತು ಅಜ್ಞಾನವೂ ಹೋಗುವುದು ಎಂಬುದು ವಿಶೇಷಾರ್ಥ] **ಇಪ್ಪುದು**=ವರ್ತಮಾನಕಾಲದಲ್ಲಿ ತನ್ನಲ್ಲಿಯೇ ಇರುವ ಪದಾ ರ್ಥಗಳು [ಶ್ರೀ ಪರಮಾತ್ಮನು ಸ್ವತಂತ್ರ-ನಾನು ಅಸ್ವತಂತ್ರ ಎಂಬ ಜ್ಞಾನಾ ನುಷ್ಠಾನವಿರುವುದು ಎಂಬುದು ವಿಶೇಷಾರ್ಥ] **ಬಪ್ಪುದು**=ಮುಂದೆ ತನಗೆ ಪ್ರಾಪ್ತವಾಗಲಿರುವ ವಸ್ತುಗಳು [ಜ್ಞಾನ, ಭಕುತಿ ಮತ್ತು ವೈರಾಗ್ಯಪ್ರಾಪ್ತಿ, ತದ್ವಾರಾ ಅಪರೋಕ್ಷಪ್ರಾಪ್ತಿ ಎಂಬುದು ವಿಶೇಷಾರ್ಥ] **ಎಲ್ಲ**=ಈ ಸಮಸ್ತ ಪ್ರಸಂಗವಿಶೇಷಗಳು **ರಮಾಪತಿಗೆ**=ಶ್ರೀ ಲಕ್ಷ್ಮೀರಮಣನಾದ ಶ್ರೀ ಪರಮಾ ತ್ಮನಿಗೆ **ಅಧಿಷ್ಠಾನ**=ವಾಸಸ್ಥಾನವೆಂದು [ಈ ಪ್ರಸಂಗ ವಿಶೇಷಗಳೆಲ್ಲವೂ

ಭಗವದಧೀನ. ಅವುಗಳಿಗೆ ಶ್ರೀ ಹರಿಯೇ ನಿಯಾಮಕನು] **ಎನ್ನು**=ಎಂದು ಅನುಸಂಧಾನಪೂರ್ವಕ ತಿಳಿ. **ಕೃಪಾಪಯೋನಿಧಿ**=ಕರುಣಾಸಮುದ್ರನಾದ ಶ್ರೀ ಪರಮಾತ್ಮನು **ಜನನಿಯಂತೆ**=ತಾಯಿಯೋಪಾದಿಯಲ್ಲಿ **ಮಾತನು**= ಭಕ್ತರ ಯೋಗ್ಯತಾನುಸಾರ ಅವರ ಪ್ರಾರ್ಥನಾರೂಪವಾದ ಮಾತುಗಳನ್ನು **ಆಲಿಸುತಿಹ**=ಪ್ರೀತಿಯಿಂದ ಕೇಳುವನು ॥ ೧೨ ॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಪೂರ್ವೋಕ್ತ ಪ್ರಕಾರದಿಂದ [ಈ ಪರಿಯಲಿ], ದೇಹಗತ, ಪದಾರ್ಥಗತ ಭಗವದ್ರೂಪಗಳ ಅನುಸಂಧಾನದಿಂದ ಐಕ್ಯಚಿಂತನೆಯಿಂದಲೂ, ಪಂಚ ಪ್ರಾಣಾಗ್ನಿಹೋತ್ರ ಖಂಡಪ್ರಕಾರದಿಂದಲೂ, ಸರ್ವತ್ರ ಭಗವಚ್ಚಿಂತನಿ ಇಂದಲೂನೂ [ಅರಿತು], ಭೋಜನಮಾಡತಕ್ಕ ಮನುಷ್ಯ [ಉಂಬ ನರ], ಪ್ರತಿ ದಿನದಲ್ಲಿಯೂ ಉಪವಾಸಿ ಎಂತ ಕರೆಸಥಾನೆ [ನಿತ್ಯೋಪವಾಸಿ] (ಹ್ಯಾಂಗೆ ಅಂದರೆ ದೇಹಧಾರಿಯಾದ ನಿರಂಶಜೀವಗೆ ಸೇರತಕ್ಕ ರಸಪದಾರ್ಥಗಳಲ್ಲಿ, ಇಲ್ಲಿ ನಿರಂಶನಾದ ಪ್ರಯುಕ್ತ, ಈ ಲಕ್ಷಣಗಳಲ್ಲಿ ನಿತ್ಯೋಪವಾಸಿ, ಇನ್ನೂ ಪ್ರತಿ ದಿನದಲ್ಲೂ) ನಿತ್ಯವಾದ ಸ್ವರೂಪದಲ್ಲೂ, ಬಾಹ್ಯದಲ್ಲೂ, ಶ್ರೀ ಪರಮಾತ್ಮನ ಸಮೀಪದಲ್ಲಿ ಆವಾಸಉಳ್ಳ ಸ್ವರೂಪ ಜ್ಞಾನವುಳ್ಳವನು ಎಂತ ಅರ್ಥ.] ಶ್ರೀಪರಮಾತ್ಮನಲ್ಲಿ ದ್ವೇಷವೆಂಬ ರೋಗರಹಿತನು. [ನಿರಾಮಯನು] ಪಾಪಗಳಿಂದ ರಹಿತನಾದವನು. (ನಿಷ್ಪಾಪಿ). ಪ್ರತಿದಿನದಲ್ಲೂ [ನಿತ್ಯ] ಶ್ರೇಷ್ಠಗಳಾದ [ಮಹತ್], ಸಮೀಚೀನಗಳಾದ, ಭಗವತ್ಪ್ರೀತಿಕರಗಳಾದ ಯಜ್ಞಗಳು (ಸುಯಜ್ಞಗಳ) (ಮಾಡಿದವನು ಎಂತ ಕರೆಸಥಾನೆ(ಆಚರಿಸಿದವನು) ಇಂಥಾ ಅಧಿಕಾರಿಗೆ ಅಹಂ ಮಮ ಎಂಬುದೂನೂ, ಅಜ್ಞಾನವೂ ಹೋಗೋ ದಾಗತದೆ (ಪೋಪುದು). ಶ್ರೀ ಪರಮಾತ್ಮ ಸ್ವತಂತ್ರ, ನಾನು ಅವನ ಅಧೀನ ಅಸ್ವತಂತ್ರ ಎಂಬ ಜ್ಞಾನಾನು ಪ್ಯಾನ ಇರತದೆ, (ಇಪ್ಪದು)] ಶ್ರೀಪರಮಾತ್ಮ ಅಪರೋಕ್ಷಾರ್ಥ ಬರೋದಾಗತದೆ (ಬಪ್ಪದು]. ಮತ್ತು ಜ್ಞಾನ, ಭಕುತಿ

ವೈರಾಗ್ಯಗಳು ಅತಿಶಯವಾಗಿ ಮನಸ್ಸಿಗೆ ಒದಗಿ ಬರೋದಾಗತೆ. ಸರ್ವಾಂತ ರ್ಯಾಮಿಯಾದ ಜೀವಾಂತರ್ಗತ ಬಿಂಬನು ರಮಾದೇವೇರ ಅಧಿಷ್ಠಿತನಾಗಿದ್ದು, [ರಮಾಪತಿಗಧಿಷ್ಠಾನ] ಸ್ವರೂಪ ದೇಹದಲ್ಲಿ ಇಚ್ಛಾದಿಗಳು ಹುಟ್ಟಿಸಿ. ಆ ಇಚ್ಛಾವನ್ನು ಬಾಹ್ಯ ಸ್ಥೂಲದೇಹದಲ್ಲಿ ವ್ಯಾಪ್ತನಾದ ಜೀವಗೆ ಇಚ್ಛಾ ಹುಟ್ಟಿಸಿ, ಬ್ರಹ್ಮಾದಿ ತತ್ವೇಶರ ದ್ವಾರಾ ಸ್ಥೂಲದೇಹದಿಂದ ಕಾರ್ಯಗಳ ನಡೆಸಥಾನೆ ಎಂತ ಸರ್ವದಾ ಅನುಷ್ಠಾನಾನುಸಂಧಾನದಿಂದ ಅಂಬೋವನಾಗು [ಎನ್ನು]. ಇದರಿಂಧ ಶ್ರೀ ಪರಮಾತ್ಮನು ಎಂಥಾವನೆಂದರೆ. ತನ್ನ ಕೃಪಾದಿಂದ ತನ್ನ ವಿಷಯಕವಾದ ಜ್ಞಾನಾದಿಗಳೆಂಬೋ ಹಾಲನ್ನು ಸಮುದ್ರ ಸದೃಶನಾಗಿ ಪಾನಮಾಡಿಸತಕ್ಕ ಇಂಥಾ ಶ್ರೀ ಪರಮಾತ್ಮನು[ಕೃಪಾಪಯೋನಿಧಿ] ಭಕ್ತರು ಮಾಡುವ ಪ್ರಾರ್ಥನಾರೂಪವಾದ ಮಾತುಗಳನ್ನ ಕರ್ಣಪುಟಗಳಿಂದ ಕೇಳುತ್ತಾ, ದೇಹ ಜೀವಾಂತರ್ಗಗನಾಗಿ ಇದಾನೆ [ಮಾತನಾಲಿಸುತಿಹ] ಇಂಥಾ ದೇವರು ಲೋಕಜನನಿಯಾದ ರಮಾದೇವೇರ ಮಾತು ದಾವ ಪ್ರಕಾರ ಆಲೈ ಸಥಾನೋ. ಅದರಂತೆ ಭಕ್ತರ ಯೋಗ್ಯತಾನುಸಾರ ಅವರವರ ಮಾತುಗಳನ್ನು ಕೇಳುಥಾನೇ ಹೊರತು ವಿಮುಖನಾಗೋದಿಲ್ಲ ಎಂತ ತಾತ್ಪರ್ಯ [ಜನನಿಯಂತೆ].

**ವಿಶೇಷಾರ್ಥ:—**

ಭವಪತ್ಕ್ರೀತಿಕರಗಳಾದ ಯಜ್ಞಗಳು ಎಂದರೆ, ಅದು ಭೋಜನಯಜ್ಞ ವನ್ನು ಕುರಿತು ಹೇಳಿದ್ದು. ಅದು ದಾವದೆಂದರೆ ಈ ದೇಹವೇ ಶಾಲಾ, ಬಾಯಿಯೇ ಈ ಯಜ್ಞದ ಕುಂಡ. ಅಗ್ನಿಗಳು ದಾವದೆಂದರೆ :—

"ಮುಖೇ ಆಹವನೀಯಾಗ್ನಿ : ಹೃದಯೇ ಗಾರ್ಹಪತ್ಯಂ ನಾಭೌ ದಕ್ಷಿಣಾಗ್ನಿಃ ದಕ್ಷಿಣ ಕುಕ್ಷೌ ಸುರಭಿಃ ಉತ್ತರಕುಕ್ಷೌ ಸೋಮಾಗ್ನಿಃ ||"
—ಇವು ಪಂಚಾಗ್ನಿಗಳು. ಪ್ರಾಣಾಪಾನಾದಿ ಮುಖ್ಯಪ್ರಾಣಾದಿರೂಪಗಳೇ ಹೋತಾ ಉದ್ಗಾತಾದಿ ಋತ್ವಿಕ್ಕುಗಳು. ಆಹುತಿಕೊಡತಕ್ಕ ಸೃಕು ಸ್ರುವಗಳು ಎರಡು ಬಾಹುಗಳು. ಭೋಜನದ್ರವ್ಯಗಳು ಆಹುತಿ ಪದಾರ್ಥಗಳು. ಜೀವನೇ

ಯಜಮಾನ. ಬುದ್ಧಿ ಎಂಬುವಳೇ ಪತ್ನಿ. ದೇಹಗತರಾದ ತತ್ವೇಶರು ಮತ್ತು ಶ್ರೀಪರಮಾತ್ಮ ಬ್ರಾಹ್ಮಣರು. ಅರಿಷಡ್ವರ್ಗಗಳು ಮತ್ತು ಅಹಂಮಮತಾದಿಗಳೇ ಯಜ್ಞಪಶುಗಳು. ಮಧ್ಯೆ ಮಧ್ಯೆ ಪಾನಮಾಡತಕ್ಕ ಉದಕ ಪರಿಷಿಂಚಾಮಿ ಪ್ರಾಣಾಗ್ನಿಹೋತ್ರ ಖಂಡ ಪ್ರಕಾರದಿಂದ ಭಗವಚ್ಚಿಂತನ ಮಾಡಬೇಕು. ಈ ರೀತಿ ಭೋಜನಮಾಡಬೇಕು.

ಈ ವಿಷಯದಲ್ಲಿ ಶ್ರೀ ವಿಜಯದಾಸರಾಯರು ಎರಡು ಸುಳಾದಿಗಳನ್ನು ಮಾಡಿದ್ದಾರೆ.

[೧] ಪಂಚಪ್ರಾಣಾಗ್ನಿ ಸುಳಾದಿ ಮತ್ತು [೨] ಪಂಚಾಗ್ನಿಹೋತ್ರ ಸುಳಾದಿ. ಮೇಲೆ ಹೇಳಿದ ಪಂಚಾಗ್ನಿ ಹೋತ್ರ ಖಂಡದ ವಿವರಗಳೇ ಅವುಗಳಲ್ಲಿ ಅವೆ.

(೧) ಪಂಚಪ್ರಾಣಾಗ್ನಿ ಸುಳಾದಿ

ಆಹುತಿಕೊಡುವುದು ಪಂಚಪ್ರಾಣರಿಗೆ ಸಂ ।
ದೇಹ ಮಾಡದಲೆ ಮನಸು ಪೂರ್ವಕದಿಂದ ।
ದೇಹದೊಳಗೆ ಐದು ಸ್ಥಾನಂಗಳು ತಿಳಿದು ।
ಸ್ವಾಹಾಲೋಲನ ಪ್ರೀತಿ ಬಡಿಸಿ ಉಣಿಸು ।
ಆಹಾರ ಮೆಲುವಾಗ ಮರೆಯಲಾಗದು ಅತಿ ।
ಸ್ನೇಹಭಾವದಿಂದ ಸರ್ವದಲ್ಲಿ ।
ಮಹಪುಣ್ಯ ಬಪ್ಪುದು ಮಾಡಿದ ಅಘಾರಣ್ಯ ।
ದಹನವಾಗುವುದು ತಡವಿಲ್ಲದೆ ।
ಗಹನವಿದು ಕೇಳಿ ಕಂಡವರಿಗಿಲ್ಲ ।
ಇಹಲೋಕದಲ್ಲಿ ಸಿದ್ಧಾಂತ ತಿಳಿದು ।
ಮೋಹಕಶಾಸ್ತ್ರ ಜರಿದು ಮದ ಮತ್ಸರ ಹರಿದು ।
ಕುಹಕಬುದ್ಧಿ ಬಿಟ್ಟು ಉಚಿತದಲ್ಲಿ ।
ಶ್ರೀಹರಿ ವೈಶ್ವಾನರನೆಂಬೋ ನಾಮ ಚತುರ ।

ವ್ಯೂಹಗಳಿಪ್ಪವೆನ್ನು ಅಲ್ಲಿಗಲ್ಲಿ ।
ಬಹಳಾಧಿಷ್ಠಾನದಲ್ಲಿ ಶುಭಸಾರ ಭುಂಜಿಸುವ ।
ದ್ರೋಹಿಮಾನವರ ತೊರೆದು ತಿಳಿಯಗೊಡದಲೆ ।
ಅಹಂಕಾರ ಮಮಕಾರ ತೊರೆದು ದೈನ್ಯದಲ್ಲಿ ದಾ ।
ಸೋಹಂ ಎಂದವಗೆ ಫಲದಾಯಕ ಕಾಣೋ ।
ದೇಹಿ ದೇಹಗಳಲ್ಲಿ ಪೂರ್ಣನಾಗಿ ಇಪ್ಪ ವಾರೀ
ರುಹಲೋಚನ ನಮ್ಮ ವಿಜಯವಿಠ್ಠಲನು ಅನು ।
ಗ್ರಹ ಮಾಡುವನರ್ಪಿತವ ಕೈಗೊಂಡು ॥ ೧ ॥

ಈ ತೆರದಿ ಭುಂಜಿಸಿದ ಮಾನವ ತನ್ನ ।
ಜಾತಿಯೊಳಗೆ ಅಧಿಕನಾಹನು ।
ತಾ ತೃಪ್ತಿಯಾಗಿ ಉಂಡ ಮಿಕ್ಕ ಎಂಜಲು ।
ದೂತ ಚಾಂಡಾಲ ಶ್ವಾನ ನಾನಾ ಯೋನಿ ।
ಜಾತರಿಗೆ ಕೊಡೆ ಅವರಲ್ಲಿ ಇದ್ದ ।
ಜಾತವೇದಸನು ತೃಪ್ತಿಯಾಗುವನಯ್ಯಾ ।
ಭೂತಳದೊಳಗೆ ಇದನು ತಿಳಿದವನು ಧನ್ಯನೋ ।
ಪಾತಕದವನಲ್ಲ ಆತನಿಗೆ ಸಲ್ಲಾ ।
ವಾತದೇವನ ದಯ ಪಡೆದು ಮಹಾಕೀ ।
ರುತಿವಂತನಾಹ ಜ್ಞಾನವಂತನಾಪ ।
ಪೂತುರೆ ಮುಕ್ತಿಲಿ ಸುಖಸಾಂದ್ರನಾಗಿಪ್ಪ ।
ಮಾತಿಗೆ ಗತಿ ಈವ ವಿಜಯವಿಠ್ಠಲರೇಯಾ ।
ನೂತನ ನೂತನ ಮಹಿಮೆಯ ತೋರುವ ॥ ೧೨ ॥

## (೨) ಪ್ರಾಣಾಗ್ನಿ ಹೋತ್ರ ಸುಳಾದಿ

ನಿತ್ಯ ಸಂತೃಪ್ತ ಸರ್ವಸಾರಭೋಕ್ತ ಪುರು ।
ಷೋತ್ತಮ ಅಚಿಂತ್ಯ ಮಹಿಮಾ ಭಕ್ತವತ್ಸಲ ।

ಸತ್ಯಸಂಕಲ್ಪ ಹರಿಗೆ ನಾಮೋಪಚಾರದಿಂದ ।
ಭಕ್ತಿವೆಗ್ಗಳನಾಗಿ ಮಜ್ಜನಾದಿಯ ಮಾಡಿ ।
ಚಿತ್ತನಿರ್ಮಲದಿಂದ ನಾನಾ ಸೌಖ್ಯವಾಗಿದ್ದ ।
ಉತ್ತಮಪದಾರ್ಥ ಸುಪಕ್ವಗೈಸಿ ।
ಆತ್ಮನ ಮುಂಭಾಗದಲ್ಲಿ ಇರಿಸಿ ಸ್ತೋತ್ರಗಳಿಂದ ।
ತುತ್ತು ಸಮರ್ಪಿಸಿ ಧ್ಯಾನಮಾಡಿ ।
ತೆತ್ತಿಗ ನಾನೆಂದು ಅಡಿಗಡಿಗೆ ಹಿಗ್ಗಿ ತನ್ನ ।
ಸತ್ಪ್ರವರ್ತಿಗಳಿಗೆ ಹರಿಯೇ ಎಂದು ।
ವಿಸ್ತಾರವಾಗಿ ತಿಳಿದು ನಿಜವಾಗಿ ಶ್ರೀಬ್ರಹ್ಮಾದಿ ದೇ ।
ವತ್ತೆಗಳಿಗೆ ಸನಕಾದಿಗಳಿಗೆ ।
ಮತ್ತೆ ಶುಕ ಮೊದಲಾದ ಅವತಾರಜನಕೆ ತಾ ।
ರತಮ್ಯದಿಂದ ಕೊಡಲೀಬೇಕೋ ಮನುಜ ।
ಇತ್ತರೆ ನಿನ್ನಿಂದ ಅವರವರು ಕೈಗೊಂಡು ಮಾ ।
ರುತ್ತ ಪರಿಯಂತ ಒಪ್ಪಿಸಿ ಕೊಡುವರೋ ।
ಅತ್ತಣಕಾರ್ಯ ಕೇಳಿ ಲಕುಮಿ ದ್ವಾರದಿಂದ ।
ಉತ್ತಮಶ್ಲೋಕನು ಕೈಕೊಂಬನಯ್ಯಾ ।
ಪ್ರತ್ತೀಕದಲ್ಲಿ ಮನಸು, ಅಗ್ನಿಯಲಿ ಪಾಕು ।
ಆತ್ಮದಲ್ಲಿ ಗಾತ್ರಧ್ಯಾನ ಅವಧಾನ ।
ಭುಕ್ತಿ ಚಿತ್ರ ವಿಚಿತ್ರ ಉಂಟು ಇದರೊಳಗನುಭವ ।
ಪುತ್ರ ಜನಕರೊಬ್ಬ ಸುಂದರನಾರಿಯ ।
ಹತ್ತಲಿ ಇದ್ದವಳ ಸ್ಪರ್ಶಮಾಡಿದರಾಗ ।
ಮಾತೃಭಾವ ಒಬ್ಬನಿಗೆ, ಪತ್ನೀಭಾವ ಒಬ್ಬನಿಗೆ ।
ಅತ್ಯಂತವಾಗಿಪ್ಪುದು ವಿವೇಕರಿಗೆ ।
ತತ್ವೇಶ ಜೀವಿಗಿಲ್ಲ ಸಮಸ್ತ ರಸದ ಜ್ಞಾನ ।
ಪ್ರತ್ಯೇಕ ಪ್ರತ್ಯೇಕ ಇಪ್ಪುದಯ್ಯ ।
ಚಿತ್ತದಲಿ ನೋಡುವುದನುಭವ ।
ಮಾತ್ರಬೇರೆ ಉಂಟು ವಿರೋಧ ವಿಲ್ಲ ।

ಹೊತ್ತು ಹೊತ್ತಿಗೆ ಇದನ ಸ್ಮರಿಸಿ ವೇಗಾದಿಂದಲಿ ।
ತೀರ್ಥದಾನವ ಮಾಡಿ ಜ್ಞಾನಿಗಳೊಡನೆ ।
ಸುತ್ತ ಬಳಗದ ಕೂಡೆ ಕುಳಿತು ಭಗ ।
ವತ್ಪಾದಿ ಪೆತ್ತದೇವನ ಸ್ಮರಣೆ ಮಾಡಿಕೊಳ್ಳುತಾ ।
ಆತ್ಮಯಜ್ಞವ ಮಾಡೋ ತುಲಸಿಮಿಳಿತದಲ್ಲಿ ।
ಹತ್ತೆಂಟುದಳ ನಿನಗೆ ಸತತ ಬೇಕೋ
ಹತ್ತದೆನೆ ಸಲ್ಲ ಕೇಶಾದಿ ದೋಷದಿಂದ ।
ಮೃತ್ಯು ಬರುತ್ತಿದ್ದರು ನಿವಾರಣ ।
ಸತ್ಯಮಾನವನೆ ನೀ ತುಲಸಿ ಮಿಶ್ರ ರಹಿತ ।
ತುತ್ತು ತೆಗೆದುಕೊಂಡರೆ ವಮನಕ್ಕೆ ಸರಿಯೋ ।
ಎತ್ತಲಾದರೆ ಏನು ತುಲಸಿ ಕರ್ಣಗಳಲ್ಲಿ ।
ನಿತ್ಯ ಧರಿಸಿದ್ದರು ಆ ಮನುಜ ।
ಉತ್ತಮನೇ ಸರಿ ಚಂಡಾಲಸ್ಪರ್ಶವಾದರೂ ।
ತತ್ತಳಿಸುವ ಪವಿತ್ರ ಕಾಣೋ ।
ಅರ್ಥಿಪುರುಷಾ ನಮ್ಮ ವಿಜಯವಿಠ್ಠಲರೇಯ ।
ಮುಕ್ತಿಯ ಕೊಡುವವನೋ ಈ ಪರಿ ಚಿಂತಿಸಿದರೆ ॥ ೧ ॥

ಹದಿನೆಂಟುದಳ ಹ್ಯಾಂಗೆಂದರೆ :—

**"ಚತುಃ ಕರ್ಣೇ ಮುಖೇ ಚೈಕಂ ನಾಭಾವೇಕಂ ತಥೈವಚ।**
**ಶಿರಸ್ಯೇಕಂ ತಥಾ ಪ್ರೋಕ್ತಂ ತೀರ್ಥೇ ತ್ರಯಂ ಉದಾಹೃತಂ।**
**ಅನ್ನೋಪರಿ ತಥಾ ಪಂಚ ಭೋಜನಾಂತೇ ದಳತ್ರಯಂ।**
**ಏವಂ ಶ್ರೀ ತುಳಸೀ ಗ್ರಾಹ್ಯಾದಷ್ಟಾದಶ ದಳ ಸದಾ॥**

ಇದರ ಅರ್ಥ :–ಕಿವಿಯಲ್ಲಿ ನಾಲ್ಕು ದಳ, ಬಾಯಿಯಲ್ಲಿ ಒಂದು ದಳ, ನಾಭಿಯಲ್ಲಿ ಒಂದು ದಳ, ಶಿರಸ್ಸಿನಲ್ಲಿ ಒಂದು, ತೀರ್ಥದಲ್ಲಿ ಮೂರು ದಳ, ಅನ್ನದ ಮ್ಯಾಲೆ ಐದುದಳ, ಭೋಜನಾಂತರದಲ್ಲಿ ಮೂರು ದಳ ಇಂತು ೧೮ ದಳಗಳು. ॥ ೧೨ ॥

## (೨) "ಭಾವಪ್ರಕಾಶಿಕೆ—ವ್ಯಾಖ್ಯಾನ :

ಮೇಲೆ ಹೇಳಿದಂತೆ ಖಂಡಾಖಂಡರೂಪಗಳಿಂದ ಶ್ರೀಹರಿಯು ಭೋಜ್ಯ ಪದಾರ್ಥಗಳಲ್ಲಿ ವ್ಯಾಪ್ತನಾಗಿರುವನೆಂದು ತಿಳಿದು, ಭೋಜನವನ್ನು ಮಾಡುವವನು ನಿತ್ಯೋಪವಾಸವ್ರತಾಚರಣೆಯಿಂದ ಬರುವ ಫಲವನ್ನು ಹೊಂದುವನು. ನಿರೋಗಿಯಾಗುವನು. ಪಾಪರಹಿತನು. ನಿತ್ಯದಲ್ಲಿಯೂ ಅಶ್ವಮೇಧಾದಿ ಮಹಾಯಜ್ಞಾಚರಣೆಯಿಂದ ಬರುವ ಫಲವನ್ನು ಹೊಂದುವನು. ಇದಲ್ಲದೆ ನನ್ನನ್ನು ಬಿಟ್ಟುಹೋದ ಪ್ರಿಯವಸ್ತುಗಳಲ್ಲಿ ಇದ್ದ ಪರಮಾತ್ಮನೇ ತದಾಕಾರನಾಗಿ ನನ್ನಲ್ಲಿದ್ದು, ನನ್ನ ಕರ್ಮಾನುಸಾರ ನನಗೆ ಭೋಗಗಳನ್ನು ಕೊಡುತ್ತಿದ್ದನು. ಈಗಲೂ ನನ್ನ ಕರ್ಮದಿಂದಲೇ ನನಗೂ ಆ ಪಾರ್ಥಗಳಿಗೂ ವಿಯೋಗಮಾಡಿಸಿದನು. ಇದು ಅವನ ಲೀಲೆಯೆಂದು ಭಾವಿಸಬೇಕು. ಇರುವುದನ್ನು ತನ್ನದೆಂದು ಹೆಚ್ಚು ಅಭಿಮಾನದಿಂದ ನೋಡದೆ, ಪರಮಾತ್ಮನೇ ದಾರಾಗಾರಾದಿ ರೂಪದಿಂದ ನನಗೆ ಭೋಗವನ್ನು ಕೊಡುತ್ತಿರುವನು. ಅವನ ಸಂಕಲ್ಪದಲ್ಲಿ ಯಾವಾಗ ಸಾಕೆಂದು ತೋರುವದೋ ಆಗ ವಿಯೋಗಪಡಿಸುವನು. ಇವೆಲ್ಲವೂ ಅವನ ಇಚ್ಛೆಎಂದು ಭಾವಿಸಬೇಕು. ಇನ್ನೂ ಅವನ ಸಂಕಲ್ಪದಿಂದಲೇ ನನಗೆ ಸುಖವನ್ನು ಕೊಡುವುದಕ್ಕಾಗಿ ಭೋಗ್ಯವಸ್ತುರೂಪದಿಂದ ನನಗೆ ಸಂಬಂಧಪಡಿಸುವನು. ಅಂತು, ಇವೆಲ್ಲವೂ ದಾರಾಗಾರಾದಿಗಳು ಭಗವದ್ರೂಪಗಳೇ ಎಂದು ಭಾವಿಸಿ, ಭಾರವನ್ನು ಪರಮಾತ್ಮನ ಮೇಲೆ ಹಾಕಿದರೆ, ಆತನು ತಾಯಿಯು ಮಕ್ಕಳ ಮಾತನ್ನು ಆಲಿಸಿ, ಪ್ರೀತಿಯಿಂದ ಅವನನ್ನು ಸಾಕುವಂತೆ ನಮ್ಮ ಮಾತುಗಳನ್ನು ಶ್ರೀಪರಮಾತ್ಮನು ಆಲಿಸಿ ನಮ್ಮನ್ನು ಪಾಲಿಸುವನು ॥ ೧೨ ॥

## (೩) "ಭಾವದರ್ಪಣ ಟೀಕಾ" –ವ್ಯಾಖ್ಯಾನ:—

ಬ್ರಹ್ಮದರ್ಶನೇಚ್ಛುಗಳಾದ ಯಾವ ಯಾವ ಪುರುಷರು ಭೋಜನವೇ ಒಂದು ಯಜ್ಞತ್ವೇನ ಚಿಂತನಮಾಡಿ, ಶ್ರೀ ಹರಿಗೆ ಸಮರ್ಪಿಸುತ್ತಾರೋ ಅವರವರ ಮಾತು ಮಾತೃವತ್ ಲಾಲಿಸುವನೆಂದು ಹೇಳುತ್ತಾರೆ–"ಈಪರಿ"– ಎಂಬ ಪದ್ಯದಿಂದ.

ಯಜ್ಞಪದಾರ್ಥ ವಿವರಣ;–ಹೋತಾ, ಉದ್ಗಾತಾ, ಬ್ರಹ್ಮಾ, ಅಧ್ವರ್ಯು, ಯಜಮಾನ, ಪಶು, ಯೂಪ, ಪತ್ನೀ, ಅರಣೀ, ವೇದೀ, ದರ್ಭ, ಸೃಕ್, ಸ್ರುವಾದಿಪದಾರ್ಥ ಸಂಗ್ರಹಮಾಡಿ ಹ್ಯಾಂಗ ಯಜ್ಞ ನಡೆಸುತ್ತಾರೋ, ತದ್ವತ್ ದೇಹಸ್ಥ ಪದಾರ್ಥಗಳನ್ನು ತಿಳಿದು, ಅನುಸಂಧಾನ ಮಾಡತಕ್ಕ ವಿವರ ಹೇಳಲ್ಪಡುತ್ತದೆ.

**ಉಕ್ತಂಚ ಪ್ರಾಣಾಗ್ನಿ ಹೋತ್ರ ಖಂಡೇ—**

"ಪ್ರಾಣಾಗ್ನಿ ಹೋತ್ರವಕ್ಷ್ಯಾಮಿ ಸರ್ವಯಜ್ಞೇಷು ದುರ್ಲಭಮ್।
ಯಜ್ಞಾತ್ವಾಮುಚ್ಯತೇಜಂತುರ್ಜನ್ಮಮೃತ್ಯು ಜರಾದಿಭಿಃ॥
ಪರಿಜ್ಞಾನೇನ ಮುಚ್ಯಂತೇ ನರಾಃ ಪಾತಕಕೋಟಿಭಿಃ।
ವಿಧಿನಾಭುಜ್ಯತೇ ಯೇನ ಮುಚ್ಯತೇ ಚಕ್ರಣತ್ರಯಾತ್॥
ಕುಲಾನ್ಯುದ್ಧರತೇ ವಿಪ್ರೋ ನರಕಾದೇಕವಿಂಶತಿ।
ಸರ್ವಯಜ್ಞ ಫಲಾವಾಪ್ತಿಂ ಬ್ರಹ್ಮಲೋಕಂ ಸ ಗಚ್ಛತಿ॥
ಹೃತ್ಪುಂಡರೀಕಮರಣಿಂ ಮನೋಮಂಥಾ ನಸಂಜ್ಞಕಮ್॥
ವಾಯುರಜ್ಜ್ವಾಮಥೇದಗ್ನಿ ಮಾತ್ಮಾಧ್ವರ್ಯುಃ ಪ್ರಕೀರ್ತಿತಃ।
ಜ್ವಲಯೇತ್ಪೂರಕೇಣಾಗ್ನಿಂ ಸಂಸ್ಥಾಪ್ಯ ಕುಂಭಕೇನತು॥
ಬ್ರಹ್ಮ ವಿಷ್ಣು ಮಹಾದೇವಾಃ ಪೂರ ಕುರೇಕಚಕಾಃ।
ನಾಡೀತ್ರಯಂ ವಿಜಾನೀಯಾತ್ಪ್ರಣವಂತ್ರ್ಯಕ್ಷರ ಮುತಮ್॥"

ಪ್ರಥಮದಲ್ಲಿ ಭೋಜನ ಮಾಡತಕ್ಕಂಥ ಮುಕ್ತಿಯೋಗ್ಯರಾದ ಜೀವರು ಒಂದು ಮುಹೂರ್ತ ಅವಕಾಶ ತೆಗೆದುಕೊಂಡು ಹೃದಯವೇ ಅರಣೀ ಶಾಬ್ದಿತ ಅಶ್ವತ್ಥಕಾಷ್ಠವೆಂತ ಅನುಸಂಧಾನಮಾಡಿ, ಮನಸ್ಸೆಂಬೋದಂಡ ವಿಶೇಷಕ್ಕೆ ಶ್ವಾಸಲಕ್ಷಣ ಹಗ್ಗಕಟ್ಟಿ ಮಥನಮಾಡಿದಲ್ಲಿ ಜ್ಞಾನಾಗ್ನಿಎಂಬೋದು ಹುಟ್ಟುತ್ತದೆ ಅಶ್ವಾಸದ ವಿವರ:—ದಕ್ಷಿಣನಾಸಾರಂಧ್ರದಿಂದ ಶ್ವಾಸಕ್ಕೆ ಅಧೋವಿಸರ್ಜನವೇ ರೇಚಕ. ವಾಮರಂಧ್ರದಿಂದ ಪೂರಣವೇ ಪೂರಕ. ಶ್ವಾಸಕ್ಕೆ ನಿರೋಧವೇ ಕುಂಭಕ:—ಎಂತ ಹೇಳುತ್ತದೆ, ಇದಕ್ಕೆ ಪ್ರಮಾಣ:—

"ರೇಚಕ ಪೂರಕಶ್ಚೈವ ಕುಂಭಕಶ್ಚ ತ್ರಿಧಾಮತಃ।
ಪ್ರಾಣಾಯಾಮ ಇತಿ॥"—ತಂತ್ರಸಾರೋಕ್ತೇಃ॥

ಪ್ರಾಣಾಯಾಮ ಮೂರು ಪ್ರಕಾರವೆಂದು ಹೇಳುತ್ತಾರೆ:—

"ವಿಷ್ಣೋಃ ಸ್ಮೃತಿವಿನಾಯುಸ್ತು ನಿಯಮಾನ್ನೈವತದ್ಭವೇತ್।
ಪ್ರಾಣಾಯಾಮಸ್ತ್ರಿಧಾಪ್ರೋಕ್ತಃಪೂರಕೋಃರೇಚಕಸ್ತಥಾ॥
ಕುಂಭಕೋಃ ರೇಚಕಸ್ತತ್ರ ನಾಸಾರಂಧ್ರಾಚ್ಚ ದಕ್ಷಿಣಾತ್।
ನಿರುಧ್ಯ ವಾಯುಂ ರಂಧ್ರೇಣ ಅನಾಮಿಕ್ಯಾವಿಸರ್ಜನಮ್॥
ನಿರುಧ್ಯ ದಕ್ಷಿಣಂ ರಂಧ್ರಂ ವಾಮರಂಧ್ರಾತ್ತ್ವಪೂರಣಮ್।
ತಥೈವ ವಯೋಃರಂಗುಲ್ಯಾ ಪೂರಣಂತುತದುಚ್ಯತೇ॥
ರೇಚಕಾತ್ಪೂರಕಾತ್ಪಶ್ಚಾತ್ ದ್ವೇಪುಟೇನಾಸಯೋಃಸ್ತಥಾ।
ಸಂನ್ನಿರುಧ್ಯ ಹೃದಿಸ್ಥಾಪ್ಯ ವಾಯುಂತಿಷ್ಠೇತ್ಸಕುಂಭಕಃ॥
ಅಗರ್ಭಶ್ಚ ಸಗರ್ಭಶ್ಚ ಪ್ರಾಣಾಯಾಮೋದ್ವಿಧಾಪುನಃ।
ಅಗರ್ಭೋಃಜ್ಞಾನ ಹೀನಸ್ತು ಸಗರ್ಭೋಃಜ್ಞಾನ ಸಂಯುತಃ॥
ಅಗರ್ಭಾತ್ಕೋಟಿಗುಣಃ ಪ್ರಾಣಾಯಾಮೋಃಸಗರ್ಭಕಃ।
ಸೋಃಯಾಂಶುರ್ನಿರುಪಾಂಶಶ್ಚ ಪ್ರಾಣಾಯಾಮ ಇತಿ ದ್ವಿಧಾ॥
ನಿರುಧ್ಯ ಕುಂಭಕಾದ್ವಾಯುಂ ಯಾವಚ್ಛಕ್ತಿಹರಿಂ ಹೃದಿ।
ಧ್ಯಾಯೇತ್ತನ್ಮನಾಸಾಗ್ರ ದೃಷ್ಟಿಕಃ॥

ಈ ವಿವರಗಳನ್ನು ಮನನಮಾಡಿಕೊಂಡು, ಅಗ್ನಿ ಪ್ರಜ್ವಲಿಸಿ, ಸ್ವಹೃದಿಸ್ಥ ಚಿಂತನಸ್ಮರಣ ಪೂರ್ವಕ ಬ್ರಹ್ಮಾದಿ ತತ್ವೇಶರ ದ್ವಾರಾ ಭೋಜನಮಾಡತಕ್ಕ ಕವಳಗಳೇ ಆಹುತಿತ್ವೇನ ಅನುಸಂಧಿಸಿ, ಭೋಜನಾಖ್ಯಯಜನಮಾಡಬೇಕೆಂದು ವಿವರ ಹೇಳಲ್ಪಡುತ್ತದೆ.

ಉಕ್ತಂಚ ಪ್ರಾಣಾಗ್ನಿಹೋತ್ರ ಖಂಡೇಃ—

"ಮುಖೇ ಚಾಹವನೀಯಂ ಹೃದಯೇ ಗಾರ್ಹ್ಯಪತ್ಯಂ।
ನಾಭೌ ದಕ್ಷಿಣಾಗ್ನಿ ದಕ್ಷಿಣೇನಾವಸಕ್ಥ್ಯ:–॥

ಉತ್ತರೇ ಸಭ್ಯಶ್ಚೇತಿ ಪ್ರಾಣೋ ಹೋತಾ ಅಪಾವನೋದ್ಗಾಥಃ ವ್ಯಾನೋ ಬ್ರಹ್ಮಾ ಉದಾನೋಧ್ವರ್ಯುಃ ಸಮಾನೋ ಯಜಮಾನಃ||

ಅಹಂಕಾರಃ ಪಶುಃ ಓಂಕಾರೋ ಯೂಪಃ ಬುದ್ಧಿಃಪತ್ನೀ।
ಪೃಥ್ವೀಚಾರಿಣಃ ವೇದೀಚಪೃಷ್ಠಾ ಸಂಕರ್ಷಣೋ ದಭಾಃ॥
ಜಿಹ್ವಾಚಸ್ರುಕ್ ಸ್ರುವೋ ಮನೋವಿಭಕ್ತಾ।
ಪ್ರಾಣಾಗ್ನಿ ಹೋತ್ರಂ ಕರಿಷ್ಯೇ||

ಪ್ರಾಣಾಗ್ನಿ ಹೋತ್ರಮಂತ್ರಸ್ಯ ನಾರದೋ ಭಗವಾನ್ ಋಷಿಃ। ಬ್ರಹ್ಮಾ ದೇವತಾ ಗಾಯತ್ರೀಚ್ಛಂದಃ॥ ಪ್ರಾಣಾಗ್ನಿಹೋತ್ರೇ ವಿನಿಯೋಗಃ।

"ಓಂಭೂರ್ಭುವಸ್ವಃ। ಓಂ ತತ್ಸವಿತ್ಯವರೇಣ್ಯಂ।
ಭರ್ಗೋದೇವಸ್ಯ ಧೀಮಹಿ। ಧೀಯೋಯೋನಃ ಪ್ರಚೋ ದಯಾತ್।"
ಇತಿ ಮಂತ್ರೇಣ ಜಲೈರನ್ನಂ ಪ್ರೋಕ್ಷ್ಯ। । ಸತ್ಯಂತ್ವರ್ತೇನ ಪರಿಷಂ ಚಾಮಿ
ಚಿತ್ರಾಯನಮಃ|| ಚಿತ್ರಗುಪ್ತಾಯನಮ||:
ಓಂ ಶ್ರೀ ಉತ್ತಿಷಂಲೋಹಿತ ಪಿಂಗಲಾಕ್ಷಃ ಅಗ್ನಿವರ್ಣಃ
ಅಜ್ಞುಪುರುಷಃ ಅಮೃತ ಋಷಿಃ॥ ಸತ್ಯೋದೇವತಾ ಗಾಯತ್ರೀ ಚ್ಛಂಧಃ।
ತ್ವಂ ಯಜ್ಞಸ್ತ್ವಂ ರುದ್ರಸ್ತ್ವಂ ವಷಟ್ಕಾರಸ್ತ್ವಂ
ಪ್ರಜಾಪತಿಸ್ತ್ವಂ ವಿಷ್ಣೋಃ ಪರಂ ಪದಂ॥
ಎಂದು ಉಚ್ಚಾರಮಾಡಿ,

"ಓಂ ಅಮೃತೋಪಿಸ್ತರಣಮಸಿ ಸ್ವಾಹಾ॥"

ಎಂದು ಆಪೋಶನ ತಗೆದುಕೊಳ್ಳಬೇಕು, ಅನಂತರ

"ಓಂ ಪ್ರಾಣಾಯೇತಿ ಮಂತ್ರಸ್ಯ ರುಗ್ಮವರ್ಣ ಕ್ಷುಧಾಗ್ನಿ ಋಷಿ:।
ಆದಿತ್ಯೋ ದೇವತಾ ಗಾಯತ್ರಿಚ್ಛಂಧ:॥
ಶ್ರದ್ಧಾಯಾಂ ಪ್ರಾಣೇನಿವಿಷ್ಟೋಮೃತಂ ಜುಹೋಮಿ।
ಶಿವೋಮಾವಿಶಪ್ರದಾಹಾಯ– "ಓಂ ಪ್ರಾಣಾಯಸ್ವಹಾ।
ಪ್ರಾಣವಾಚ್ಯ ಆದಿತ್ಯಾಂತರ್ಗತ ಶ್ರೀ ಭಾರತೀರಮಣ
ಮುಖ್ಯ ಪ್ರಾಣೇಶಾಂತರ್ಗತ ಶ್ರೀ ಅನಿರುದ್ಧಾಯೇದಂ ನಮಮ
॥೧॥

ಓಂ ಅಪಾನಾಯೇತಿಮಂತ್ರಸ್ಯ ಗೋಕ್ಷೀರವರ್ಣಶ್ರದ್ಧಾಗ್ನಿ
ಋಷಿ:॥
ಸೋಮೋದೇವತಾ ಉಷ್ಣಿಕ್ ಚ್ಛಂಧ: ಶ್ರದ್ಧಾಯಾಂ
ಅಪಾನೇನಿವಿಷ್ಟೋ ಮೃತಂ ಜುಹೋಮಿ ಶಿವೋ॥
"ಓಂ ಅಪನಾಯ ಸ್ವಾಹಾ ॥ ಅಪಾನವಾಚ್ಯ ಸೋಮಾಂತರ್ಗತ
ಶ್ರೀಭಾರತೀರಮಣ ಮುಖ್ಯಪ್ರಾಣೇಶಾಂತರ್ಗತ ಶ್ರೀಪ್ರದ್ಯುಮ್ನಾ
ಯೇದಂ ನಮಮ ॥೨॥

ಓಂ ವ್ಯಾನಾಯೇತಿಮಂತ್ರಸ್ಯ ಪದ್ಮವರ್ಣ ಹೃತಾಗ್ನಿಋಷಿಃ ।
ಅಗ್ನಿರ್ದೇವತಾ ಅನುಷ್ಟುಪ್ ಛಂದಃ॥ ಶ್ರದ್ಧಾಯಾಂ ವ್ಯಾನೇ
ನಿವಿಷ್ಟೋಮೃತಂ ಜುಹೋಮಿ ॥
ಓಂ ವ್ಯಾನಾಯಸ್ವಹಾ ॥ ವ್ಯಾನವಾಚ್ಯ ಅಗ್ನ್ಯಂತರ್ಗತ ಶ್ರೀ
ಭಾರತೀಶಾಂಗರ್ಗತ ಶ್ರೀ ಸಂಕರ್ಷಣಾಯೇದಂ ನಮಮ ॥೩॥

ಓಂ ಉದಾನಾಯೇತಿ ಮಂತ್ರಸ್ಯ ಇಂದ್ರಗೋಪರ್ಣ ಸ್ಪರ್ಶಾಗ್ನಿ
ಋಷಿಃ ॥ ವಾಯುರ್ದೇವತಾ ಬೃಹತೀಛಂದಃ ॥
ಓಂ ಉದಾನಾಯಸ್ವಾಹಾ । ಉದಾನವಾಚ್ಯ ಪ್ರವಹವಾಯ್ವ್ಯಂ
ತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವಾಸು
ದೇವಾಯೇದಂ ನನುಮ ॥ ೪ ॥

ಓಂ ಸಮಾನಾಯೇತಿ ಮಂತ್ರಸ್ಯ ವಿದ್ಯುದ್ವರ್ಣವಿರೂಪಾಗ್ನಿ
ಋಷಿಃ । ಪರ್ಜನ್ಯೋ ದೇವತಾ । ಪಂಕ್ತೀ ಛಂಧಃ ಶ್ರದ್ಧಾಯಾಂ
ಸಮಾನೇ ನಿವಿಷ್ಟೋಽಮೃತಂ ಜುಹೋಮಿ ॥
ಓಂ ಸಮಾನಾಯಸ್ವಹಾ ॥ ಸಮಾನವಾಚ್ಯ ಪರ್ಜನ್ಯಾಂತರ್ಗತ
ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀನಾರಾಯಣಾ
ಯೇದಂ ನಮಮ ॥ ೫ ॥

ಅಮಯಗ್ನಿ ವೈಶ್ವಾನರೋಽಯಂ ವಿಶಿಷ್ಠ ಋಷಿಃ ॥
ವಾಯುರ್ದೇವತ್ಯಃ ಗ್ರಾಯತ್ರೀಛಂದ ಸಚೇತನಾತ್ಮನೇ ।
ಓಂ ಬ್ರಹ್ಮಣೇಸ್ವಾಹಾ । ಜೀವಂತರ್ಯಾಮಿ ಪ್ರಾಣಾಂತರ್ಗತೇ
ಶ್ರೀ ಲಕ್ಷ್ಮಿನಾರಾಯಣಾಯೇದಂ ನಮಮ" ॥೬॥

ಅನಂತರ ದ್ವಾತ್ರಿಂಶತ್ಕವಳನ್ನು ವಿಶ್ವಾದ್ಯಷ್ಟಮೂರ್ತಿಗಳ ಕೇಶವಾದಿ ಚತುರ್ವಿಂಶತಿ ಮೂರ್ತಿಗಳ ನಾಮೋಚ್ಚಾರಣ ಪೂರ್ವಕ ತಗೆದುಕೊಳ್ಳತಕ್ಕದ್ದು.

"ನಾರಾಯಣಾನಿರುದ್ಧೌತು ಭೋಜ್ಯವಸ್ತುಷು ಸಂಸ್ಥಿತೌ ॥
ತರ್ಪಕೌಸ್ಸರ್ವಜೀವಾನಾಂ ತಸ್ಮಾದ್ಭೋಜ್ಯೌನಚರ್ವತಃ ।
ಸಂಕರ್ಷಣಶ್ಚಪ್ರದ್ಯುಮ್ನೌ ತತ್ರ ಭೋಕ್ತೃಷು ಸಂಸ್ಥಿತೌ
ಭೋಕ್ತೃ ಶಕ್ತಿ ಪ್ರದಾತಾರೌ ಭೋಕ್ತಾಕೌಚ ವಿಶೇಷತಃ ॥
ಅವಕಾಶಪ್ರದೋ ನಿತ್ಯಂ ವಾಸುದೇವೋನಭಸ್ಥಿತಃ ।
ಏಕಾಹುತಿ ಪ್ರದಾನೇನ ಕೋಟಿಯಜ್ಞಫಲಂ ಲಭೇತ್ ॥
ಪಂಚಭಿಃ ಪಂಚಕೋಟ್ಯಂತು ಅನಂತಸ್ತೃಪ್ತಿದೋಭವೇತ್
ದಾತುಶ್ಚೈವತುಯತ್ಪುಣ್ಯಂ ಭೋಕ್ತೃ ಶ್ಚೈವಮಯತ್ಫಲಮ್ ॥
ತತ್ಫಲಂ ಸಮವಾಪ್ನೋತಿ ವಿಷ್ಣು ಸಾಯುಜ್ಯಮಾಪ್ನುಯಾತ್ ।
ಆಪೋಶನಜಲಂ ವಿಪ್ರಃ ಪುನಃ ಪೂರಯತೇ ಕರೇ ॥
ಶ್ವಮೃತ್ರೇಣ ಸಮಂತತ್ತು ಪೀತ್ವಾ ಚಾಂದ್ರಾಯಣಂ ಚರೇತ್ ।
ವ್ರತಹೀನಂತು ಯೋಭುಂಕ್ತೇ ನರಸ್ತ್ವಾಹುತಿ ಪಂಚಕೇ ।

ಪಶ್ಚಾತ್ಪತೇನಯೋ ಭುಂಜತೇ ರಾವಂ ನರಕಂ ಪ್ರಜೇತ್ ॥
ಆಹುತಿಂ ತುಲಸೀಹೀನಾಂ ಯೋ ದದ್ಯಾದ್ಪ್ರಾಣಪಂಚಕೇ
ತದನ್ನಂ ಮಾಂಸತುಲ್ಯಸ್ಯಾತ್ತಜ್ಜಲಂ ಸುರಯಾಸವಂ ।
ತುಲಸೀಮಿಶ್ರಿತಂ ಚಾನ್ನಂ ಯೋದದ್ಯಾತ್ಪ್ರಾಣಪಂಚಕೇ ।
ಸಿರ್ಥೀಸಿಕ್ಥೇ ಭವೇತ್ತಸ್ಯ ಪುಣ್ಯಂ ಯಜ್ಞಶತಾಧಿಕಮ್ ॥
ಬಲಂ ದೃಷ್ಟ್ವಾತು ಯೋ ಭುಂಕ್ತೇ ಬಹಿರ್ಜಾನುಕರಸ್ತಥಾ ।
ಹಸತೇ ವದತೇ ಚೈವ ಅನ್ನಂ ಗೋಮಾಂಸಭಕ್ಷಣಮ್ ॥
ಪ್ರಾಣಾಗ್ನಿಹೋತ್ರಸ್ಯ ವಿಧಿಂ ದ್ವಿಜಾನ್ವೈ ನೈವಜಾನತೇ ।
ಭುಂಜಂತೇ ತೇತ್ವಪಾನೇನ ತೇಷಾಂ ಮುಖಮಾಪನವತ್ ॥
ಯೋ ಜ್ಞಾತ್ವಾ ವಿಧಿವದ್ಭುಂಜತೇ ಬ್ರಹ್ಮಭೂಯಾಯ ಕಲ್ಪತೇ ।
ಅರ್ಧಂ ಪಿಬತಿ ಗಂಡೂಷಂ ಅರ್ಧಂತ್ಯಜತಿ ಭೂಮಿಷು ॥
ತೃಪ್ಯಂತಿ ಪಿತರಸ್ಸರ್ವೇ ಯೇ ಚಾನ್ಯೇ ಭೂಮಿ ದೇವತಾಃ ।
ರಾರವೇ ಪ್ಯಯನಿಲಯೇ ಪದ್ಮಾರ್ಬುದ ನಿವಾಸಿನಾಂ॥
ಅರ್ಥಿನಾಮುದಕಂ ದತ್ತಮಕ್ಷಯ್ಯ ಮುಪತಿಷ್ಠತು।
ರಾರವೇ ನರಕೇ ಘೋರೇ ಪಚ್ಯಮಾನೇ ದುರಾಸದೇ॥
ತೇಷಾಮನ್ನಂ ಪ್ರದಾಸ್ಯಾಮಿ ಅಕ್ಷಯ್ಯಮುಪತಿಷ್ಠತು॥

ಹೀಗೆ ತಿಳಿದು ಭೋಜನಮಾಡತಕ್ಕ ಪುರುಷನೇ ನಿರೋಗಿ, ಪಾಪರಹಿತನು ನಿತ್ಯೋಪವಾಸೀ ಎಂದು ತಾತ್ಪರ್ಯ. ಪೋಪುದು– ಎಂದರೆ ಸಂಚಿತ ಎಂತರ್ಥ, ಇಪ್ಪುದು–ಎಂದರೆ ಪ್ರಾರಬ್ಧ ಎಂದರ್ಥ. ಬಪ್ಪುದು–ಎಂದರೆ ಆಗಾಮಿ ಎಂತರ್ಥ. ಈ ಮೂರೂ ರಮಾಪತಿಗೆ ಅಧಿಷ್ಠಾನವೆಂದೆನಲು, ಅಂದರೆ, ಆಶ್ರಯಕ್ಕೆಸ್ಥಾನ ಅಂದದ್ದೇ ಆದರೆ, ಕೃಪಾಪಯೋನಿಧಿಯು ಮಾತುಲಾಲಿಸುವನೆಂದು ಪೂರ್ವೇಣಾನ್ವಯ: ॥೧೨॥

(೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ

ಹೀಗೆ ತಿಳಿದು ಭೋಜನ ಮಾಡಿದವನು ನಿತ್ಯವೂ ಉಪವಾಸಮಾಡಿದ ಫಲವನ್ನು ಹೊಂದುವನು. ರೋಗರಹಿತನು, ಪಾಪವಿಲ್ಲದವನು, ಮಹಾ

ಶ್ರೇಷ್ಠವಾದ ಯಜ್ಞಗಳನ್ನು ಮಾಡಿದ ಪುಣ್ಯವಂತನು. ಹೋಗುವುದು, ಇರುವುದು ಬರುವುದು—ಈ ಎಲ್ಲವೂ ಲಕ್ಷ್ಮೀಪತಿಗೆ ಅಧಿಷ್ಠಾನವೆಂದು ತಿಳಿದವನಿಗೆ, ತಾಯಿಯು ಮಕ್ಕಳ ಮಾತನ್ನು ಲಾಲಿಸುವಂತೆ, ದೇವರು ಅವನ ಮಾತನ್ನು ಲಾಲಿಸುವನು ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹಃ—

ಪೂರ್ವೋಕ್ತ ಪ್ರಕಾರ ಭೋಜನಕ್ರಿಯೆ ಒಂದು ಮಹಾ ಯಜ್ಞವೆಂಬ ಅನುಸಂಧಾನದಿಂದ ಜ್ಞಾನಪೂರ್ವಕ ತಿಳಿದು, ಸುಭೋಜನ ಪದಾರ್ಥಗಳಲ್ಲಿಯೂ ಮತ್ತು ಭೋಕ್ತೃಗಳಲ್ಲಿಯೂ ಖಂಡಾಖಂಡರೂಪಗಳಿಂದ ವಿರಾಜಮಾನನಾಗಿರುವ ಶ್ರೀ ಪರಮಾತ್ಮನ ವಿವಿಧ ಭಗವದ್ರೂಪಗಳನ್ನು ಮನಸಾ ಚಿಂತಿಸುತ್ತಾ ಭೋಜನವನ್ನು ಯಾರುಮಾಡುತ್ತಾರೆಯೋ, ಅಂತಹವರು ಮಾನುಷೋತ್ತಮರು, ಪ್ರತಿದಿನವೂ ಉಪವಾಸವ್ರತಾಚರಣೆಯನ್ನು ಮಾಡಿದರೆ ಯಾವ ಫಲವಿಶೇಷವನ್ನು ಹೊಂದುವರೋ, ಅಂತಹ ಪುಣ್ಯಫಲಕ್ಕೆ ಭಾಗಿಗಳಾಗುವರು. ಅಂತಹ ನಿತ್ಯೋಪವಾಸಿಗಳು ನಿರಂತರ ರೋಗರಹಿತರಾಗಿ, ಆರೋಗ್ಯವಂತರಾಗಿರುವರು. ದೈಹಿಕ ಅಥವಾ ಮಾನಸಿಕ ವ್ಯಾಧಿಗಳಿಂದ ದೂರವಿರುತ್ತಾರೆ. ಅಂತಹ ನಿರಾಮಯನಾದ (ನಿರೋಗಿ) ನರನು ಪಾಪರಹಿತನು. ಸ್ವಾಖ್ಯರಸಗಳನ್ನು ತಾನೇ ಸ್ವೀಕರಿಸುವುದರ ದ್ವಾರಾ, ತಾನೇ ಉಡು ಜೀವರದ್ವಾರಾ ಉಣಿಸುವ ಸರ್ವಸಾರ ಭೋಕ್ತನೂ, ನಿತ್ಯತೃಪ್ತನೂ ಆದ ಶ್ರೀಪರಮಾತ್ಮನ ಪಾದಾರವಿಂಗಳಿಗೆ ಭೋಜನಕ್ರಿಯಯ ಕರ್ಮಫಲವನ್ನು ಅರ್ಪಿಸುವುದರಿಂದ. ಅವನು ನಿಷ್ಪಾಪಿ ಎನಿಸುತ್ತಾನೆ. ಪ್ರಾಣಾಗ್ನಿಹೋತ್ರ ಹಾಗೂ ಪಂಚಾಗ್ನಿಹೋತ್ರ ಖಂಡಗಳಲ್ಲಿ ಉಕ್ತವಾಗಿರುವ ಪ್ರಕಾರ, ಭೋಜನಕ್ರಿಯಾ ವಿಶೇಷವನ್ನು ವಿಧ್ಯುಕ್ತವಾಗಿ ನಡೆಯಿಸುವ ಅಂತಹ ಪುಣ್ಯಾತ್ಮರು ಅತ್ಯಂತ ಉತ್ತಮವಾದ ಯಜ್ಞವಿಶೇಷಗಳ ಆಚರಣೆಯಿಂದ ಬರುವ ಮಹಾ ಪುಣ್ಯಕ್ಕೆ ಅತ್ಯಂತ ಭಾಗಿಗಳಾಗುವರು ಇಂತು ಮಹಾಸುಯಜ್ಞಗಳನ್ನು ಆಚರಿಸಿದ ಪುಣ್ಯಫಲವನ್ನು ಹೊಂದುವ ಜ್ಞಾನಿಗಳು, ತಮ್ಮ ಜೀವನದಲ್ಲಿ ಬರುತ್ತಿರುವ ಸಮಸ್ತ ಪ್ರಸಂಗ ವಿಶೇಷ

ಗಳೆಲ್ಲವೂ ಭಗವಧೀನವೆಂದು ತಿಳಿದು, ಅವನ ಚರಣಕಮಲಗಳಿಗೆ ಅರ್ಪಿಸ ವರು. ಇಂತಹ ಘಟನಾ ವಿಶೇಷಗಳು ಮೂರು ಪ್ರಕಾರ:–[೧] ವರ್ತಮಾನ ಕಾಲದಲ್ಲಿ [ಈಗ] ಇರುವ ಅನುಭವ ವಿಶೇಷಗಳು. [೨] ಹಿಂದೆ ಆಗಿಹೋದ [ಗತಕಾಲದ] ಘಟನಾವಿಶೇಷಗಳು ಮತ್ತು [೩] ಮುಂದೆ ಬಂದೊದಗುವ ಪ್ರಸಂಗವಿಶೇಷಗಳು. ಹೀಗೆ ಇಪ್ಪುದು, ಪೋಪುದು ಮತ್ತು ಬಪ್ಪುದೆಲ್ಲವೂ ಸರ್ವನಿಯಾಮಕನಾದ ಶ್ರೀ ಪರಮಾತ್ಮನ ಅಧೀನವಾಗಿದ್ದು,ಕಾಲನಿಯಾಮಕ ನಾದ ಅವನ ಅಣತಿಯಿಂದಲೇ ನಡೆಯುತ್ತಿರುವುವು. ಇದನ್ನು ಇನ್ನೊಂದು ರೀತಿಯಲ್ಲಿಯೂ ವಿವರಿಸಬಹುದು. ಜೀವಕೋಟಿಪ್ರವಿಷ್ಟರಾದ ಸಮಸ್ತ ಜೀವರೂ ಅನಾದಿಕಾಲದಿಂದ ಲಿಂಗದೇಹದಿಂದ ಬದ್ಧರಾಗಿದ್ದಾರೆ. ಲಿಂಗ ದೇಹಗತ ತ್ರಿಗುಣ ಜನ್ಯವಾದ ಕರ್ಮಪ್ರವಾಹಕ್ಕೆ ಸಿಕ್ಕಿ ಜನನಮರಣಾ ಖ್ಯವಾದ ಈ ಸಂಸಾರದ ಸುಳಿಯಲ್ಲಿ ಪರಿತಪಿಸುತ್ತಿರುವರು. ಇಂತಹ ಕರ್ಮಬಂಧನದಿಂದ ವಿಮೋಚನೆಗೈಸುವುದೇ ಜಗತ್ಸೃಷ್ಟಿರೂಪವಾದ ಭಗವದ್ವ್ಯಾಪಾರ ವಿಶೇಷವು. ಹಿಂದಿನ ಜನ್ಮಗಳಲ್ಲಿ ಸಂಚಿತವಾಗಿ ಅನುಭವಿಸದೇ ಅವಶಿಷ್ಟರೂಪದಲ್ಲಿ ಉಳಿದಿರುವ ಕರ್ಮಪ್ರವಾಹವೇ"ಸಂಚಿತಕರ್ಮ" ವು. ಅಂತಹ ಸಂಚಿತ ಕರ್ಮಜನ್ಯವಾದ ಫಲಗಳನ್ನು ಈಗಿನ ಜನ್ಮದಲ್ಲಿ ಅನುಭವಿ ಸುತ್ತೇವೆ. ಇದೇ "ಪೋಪುದು" ಹೋಗುವುದು. ಎಂಬುದರ ತಾತ್ಪರ್ಯವು. ಮುಂದಿನ ಜನ್ಮಗಳಲ್ಲಿ ಅನುಭವಕ್ಕೆ ಬರುವ ಕರ್ಮತರಂಗಗಳೇ "ಆಗಾಮಿ" ಎಂಬ ಕರ್ಮವಿಶೇಷಗಳು. ಇಂತಹ ಆಗಾಮಿ ರೂಪವಾದ ಕರ್ಮಜನ್ಯ ಫಲಗಳೇ "ಬಪ್ಪುದು" (ಮುಂದೆ ಬಂದು ಒದಗುವುದು) ಎಂದರ್ಥ. ಅನಾದಿ ಸಿದ್ಧವಾದ "ಪ್ರಾರಬ್ಧ"ರೂಪವಾದ ಕರ್ಮವಿಶೇಷವೇ "ಇಪ್ಪುದು" (ಲಿಂಗ ದೇಹಭಂಗ ಪರ್ಯಂತ ಇರುವುದು) ಎಂದು ಭಾವ. ಇಂತು, ಇಪ್ಪ, ಬಪ್ಪ ಮತ್ತು ಪೋಪ ಕರ್ಮಪ್ರವಾಹಜನ್ಯವಾದ ಫಲರೂಪವಾದ ಘಟನಾ ವಿಶೇಷ ಗಳೆಲ್ಲಕ್ಕೂ ಇಂದಿರಾಧವನಾದ ಶ್ರೀಪರಮಾತ್ಮನೇ ಆಶ್ರಯದನಾಗಿರುವನು. (ಅಧಿಷ್ಠಾನನು) ಸಮಸ್ತ ಜೀವರ ಬಾಳಿನಲ್ಲಿ ಒದಗುತ್ತಿರುವ ಸಕಲ ಘಟನಾ ವಳಿಗಳಿಗೂ ಶ್ರೀ ಪರಮಾತ್ಮನೇ ಮುಖ್ಯ ಕಾರಣನು ಮತ್ತು [illegible] ನಮ್ಮ ಪಾಲಿನ ಭಾಗ್ಯವಿಶೇಷ ಎಂಬ ಉತ್ತಮ [illegible] ಮಾತುಗಳನ್ನು (ಪ್ರಾರ್ಥನೆಯನ್ನು) ಲೋಕದಲ್ಲಿ [illegible]

ಾವತುಗಳನ್ನು ಅತ್ಯಂತಪ್ರೀತಿಯಿಂದ ಆಲಿಸಿ, ಲಾಲಿಸಿ, ಸಂರಕ್ಷಿಸುವಂತೆ, ಜಗತ್ಪ್ರಭುವಾದ ಶ್ರೀ ಹರಿಯು ಕರುಣಾಸಮುದ್ರನಾಗಿರುವುದರಿಂದ, ಆಲಿಸಿ ಪ್ರೀತಿವಾತ್ಸಲ್ಯದಿಂದ ಪಾಲಿಸುವನು ಎಂದು ತಾತ್ಪರ್ಯ ॥ ೧೨ ॥

## ಪದ್ಯ (೧೩)

ಆರೆರಡು ಸಾವಿರದ ಮೇಲಿ ।
ನ್ನೂರ ಐವತ್ತೊಂದು ರೂಪದಿ ।
ಸಾರಭೋಕ್ತ್ರನಿರುದ್ಧದೇವನು ಅನ್ನಮಯನೆನಿಪ ॥
ಮೂರೆರಡುವರೆ ಸಾವಿರದ ಮೇಲ್ ।
ಮೂರಧಿಕ ನಾಲ್ವತ್ತು ರೂಪದಿ ।
ತೋರುತಿಹ ಪ್ರದ್ಯುಮ್ನ ಜಗದೊಳು ಪ್ರಾಣಮಯನಾಗಿ ॥ ॥೧೩॥

**ಅವತರಿಣಿಕೆ :–**

ಸರ್ವಸಾರಭೋಕ್ತ್ರನಾದ ಅನಿರುದ್ಧನಾಮಕ ಶ್ರೀಪರಮಾತ್ಮನು ೮೨೫೧ ಭಗವದ್ರೂಪಗಳಿಂದ ಅನ್ನಮಯನೆಂದೆನಿಸಿ, ಪೃಥ್ವೀತತ್ತ್ವ ಪ್ರಾಚುರ್ಯವಾದ ಅನ್ನಮಯಕೋಶದಲ್ಲಿ ವಿರಾಜಮಾನನಾಗಿದ್ದಾನೆ. ಪ್ರದ್ಯುಮ್ನನಾಮಕ ಶ್ರೀ ಪರಮಾತ್ಮನು ೫೫೪೩ ಭಗವದ್ರೂಪಗಳಿಂದ ಪ್ರಾಣಮಯನಾಮಾಖ್ಯನಾಗಿ ಉದಕತತ್ತ್ವಪ್ರಾಚುರ್ಯವಾದ ಪ್ರಾಣಮಯಕೋಶದಲ್ಲಿ ಸಂಸ್ಥಿತನಾಗಿದ್ದು, ಕೋಶಗತ ವ್ಯಾಪಾರ ವಿಶೇಷಗಳನ್ನು ನಿರ್ವಹಿಸುತ್ತಿರುವನು ಎಂದು ವಿವರಿಸುತ್ತಾರೆ– "ಆರೆರಡು"–ಎಂಬ ಸಂಧಿಗತ ೧೩ನೆಯ ಈ ಪದ್ಯದಿಂದ ॥ ೧೩ ॥

**ಪ್ರತಿಪದಾರ್ಥ :–**

**ಸಾರಭೋಕ್ತ್ರ** = ಸ್ವಾಖ್ಯರೂಪವಾದ ಸಾರಭೂತವಾದದ್ದನ್ನು ಭೋಜನ ಮಾಡತಕ್ಕ **ಅನಿರುದ್ಧ ದೇವನು**— ಅನಿರುದ್ಧನಾಮಕ ಶ್ರೀ ಪರಮಾತ್ಮನು

**ಆರೆರಡು**=ಆರು ಮತ್ತು ಎರಡು ಸೇರಿ ಎಂಟು **ಸಾವಿರದ**=ಎಂಟುಸಾವಿರದ **ಮೇಲೆ**=ಅದರ ಮೇಲೆ **ಇನ್ನೂರ ಐವತ್ತೊಂದು ರೂಪದಿ**=೨೫೧ ರೂಪ ಗಳಿಂದ, ಅಂದರೆ ೮೦೦೦+೨೫೧=೮೨೫೧ ಭಗವದ್ರೂಪಗಳಿಂದ **ಅನ್ನ ಮಯ**=ಅನ್ನದಿಂದ (ಪೃಥ್ವೀಸಾಂಕೇತ) ಪ್ರಾಚುರ್ಯವಾದ "ಅನ್ನಮಯ" ಎಂದು **ಎನಿಪ**=ಅನ್ನಮಯಕೋಶದಲ್ಲಿ ವಿದ್ಯಮಾನನಾಗಿದ್ದಾನೆ. ಇದರ ಸಂಖ್ಯಾವಿವರ ಹೀಗಿದೆ :- "**ಅನಿರುದ್ಧ**"-ಎಂಬ ಶಬ್ದದಲ್ಲಿ ಅ=೧, ನಿ=೫, ರು=೨ ಮತ್ತು ದ್ಧ=೮ (೪+೪), ಅಂದರೆ ಸಂಖ್ಯಾಗತಿಯಿಂದ ೧೫೨೮ ಆಗುವುದು. ವಾಮಾಂಕಗತಿಯಿಂದ ೮೨೫೧ (ಎಂಟು ಸಾವಿರದ ಇನ್ನೂರ ಐವತ್ತೊಂದು) ಸಂಖ್ಯಾಕವಾದ ಭಗವದ್ರೂಪಗಳಾಗುವುವು. **ಮೂರೆರಡು**= ಮೂರು+ಎರಡು, ಅಂದರೆ ಐದು **ಅರೆಸಾವಿರ**=ಅರ್ಧಸಾವಿರ. ಅಂದರೆ ಐನೂರು. ಅಲ್ಲಿಗೆ ಐದುಸಾವಿರ+ಐನೂರು=೫೫೦೦ ಆಗುವುದು. **ಮೇಲೆ**=ಇದರಮೇಲೆ **ಮೂರರಧಿಕ ನಾಲ್ವತ್ತು**=ನಾಲ್ವತ್ತು+ಮೂರು =ನಾಲ್ವತ್ಮೂರು, **ರೂಪದಿ**=ಅಂದರೆ ೫೫೦೦+೪೩=೫೫೪೩ (ಐದು ಸಾವಿರದ ಐನೂರ ನಾಲ್ವತ್ಮೂರು) ಭಗವದ್ರೂಪಗಳಿಂದ **ಪ್ರದ್ಯುಮ್ನ**= ಪ್ರದ್ಯುಮ್ನನಾಮಕ ಶ್ರೀ ಪರಮಾತ್ಮನು **ಜಗದೊಳು**=ಈ ಪ್ರಪಂಚದಲ್ಲಿ ಅಂದರೆ ಪಿಂಡಾಂಡರೂಪವಾದ ಪ್ರಾಣಿಗಳ ಸ್ಥೂಲದೇಹದಲ್ಲಿ **ಪ್ರಾಣಮಯ ನಾಗಿ**=ಅಪ್‌ತತ್ವಪ್ರಾಚುರ್ಯವಾದ ಪ್ರಾಣಮಯಕೋಶದಲ್ಲಿ ವಿದ್ಯಮಾನ ನಾಗಿ **ತೋರುತಿಹ**=ಪ್ರಕಟನಾಗಿದ್ದಾನೆ. ಇದರ ಸಂಖ್ಯಾವಿವರ ಹೀಗಿದೆ :- "ಪ್ರದ್ಯುಮ್ನ" ಎಂಬ ಶಬ್ದದಲ್ಲಿ ಪ್ರ=೩ (ಪ=೧+ರ=೨) ದ್ಯು=೪ (ದ=೩+ಯ=೧) ಮ್ನ=ಮ=೫ ಮತ್ತು ನ=೫ (ಮ ಮತ್ತು ನ ಎಂಬ ಎರಡು ವರ್ಣಗಳೂ ಐದನೆಯ ಅಕ್ಷರ ಸ್ಥಾನಗಳಲ್ಲಿವೆ. ಇದರಿಂದ ಪ್ರತ್ಯೇಕವಾಗಿ ಪರಿಗಣಿಸಲಾಗಿದೆ). ಅಲ್ಲಿಗೆ ಸಂಖ್ಯಾಗತಿಯಿಂದ ೩೪೫೫ ಆಯಿತು. ವಾಮಾಂಕಗತಿಯಿಂದ ೫೫೪೩ ಸಂಖ್ಯಾಕವಾದ ಭಗವದ್ರೂಪಗಳಾ ಗುವುವು. ॥೧೩॥

# ವ್ಯಾಖ್ಯಾನಗಳು

## (೧) ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಅನ್ನದಿಂದ ಪ್ರಚುರವಾದದ್ದು ದಾವದೋ ಅದಕ್ಕೆ ಅನ್ನಮಯ ಎಂತ ಸಾಂಕೇತವು. (ಅನ್ನಮಯ) ಇಧ್ಯಂಬುದೇ ದೇಹಗತ ಪೃಥ್ವೀ, ಅಪ್ಪು ಇದರಲ್ಲಿ ಕೋಶಗಳೆರಡು. (೧) ಪ್ರಥಮ ಕೋಶದಲ್ಲಿ ವಾಯು, ಜಿಹ್ವೆ, ರಸ, ಅಪ್ಪು. (೨) ಎರಡನೇ ಕೋಶದಲ್ಲಿ ಉಪಸ್ಥ, ಗಂಧ, ಘ್ರಾಣ ಮತ್ತು ಪೃಥ್ವೀ ಈ ಎಂಟರಿಂದ ಯುಕ್ತವಾದದ್ದು ಅನ್ನಮಯಕೋಶ. ಇದು ದೇಹಾ ಧಾರಕೋಶವು, ಈ ಕೋಶಾಭಿಮಾನಿ ಅನಿರುದ್ಧ. ಈ ಕೋಶಾಂತರ್ಗತ ನಾಗಿದ್ದು, ಭೂ ದೇವೇರು, ಶನೈಶ್ಚರ ವರುಣ ಮೊದಲಾದ ಅಭಿಮಾನಿಗಳಿಂದ ಪೂಜಿತನಾಗಿದ್ದಾನೆ. ಅಕ್ಷರ ಸಂಖ್ಯಾರೂಪಗಳು ೮೨೫೧ ಆಗತದೆ. ಹ್ಯಾಂಗೆಂದರೆ ಅ-೧, ನ್-೫, ರು-೨, ದ್ಧ-೮=೮೨೫೧. ಬಲದಿಂದ ಎಡಕ್ಕೆ ಲೆಕ್ಕ. ಸ್ಥೂಲದೇಹದಲ್ಲಿ ಪೃಥ್ವೀಸಾಂಕೇತವಾದ ಅನ್ನಮಯಕೋಶದಲ್ಲಿ ಇದ್ದು, ಜೀವಭುಕ್ತ ಪ್ರಾಕೃತಾನ್ನ ತ್ಯಜಿಸಿ, ತನ್ನ ಸ್ವಾಖ್ಯವಾದ ಸಾರಭೂತವಾದದ್ದನ್ನು ಭೋಜನ ಮಾಡತಕ್ಕ (ಸಾರಭೋಕ್ತ) ಅನಿರುದ್ಧನಾಮಕ ಪರಮಾತ್ಮನು, ಎಂಟುಸಾವಿರದ ಮೇಲೆ (ಆರೆರಡುಸಾವಿರದ ಮೇಲೆ) ಇನ್ನೂರಐವತ್ತೊಂದು ರೂಪಗಳಿಂದ ಇದ್ದಾನೆ [ಇನ್ನೂರ ಐವತ್ತೊಂದು ರೂಪದಿ]. ಪೂರ್ವೋಕ್ತ ವಾಯು ಉಪಸ್ಥಾದಿಗಳು ಇರತಕ್ಕ ಸ್ಥಾನವಿಶೇಷಕ್ಕೆ "ಕೋಶ"-ಎಂತ ನಾಮವು ಪ್ರಾಣಾಧಾರಕವಾದ ಉದಕಪ್ರಾಚುರ್ಯವಾದ "ಪ್ರಾಣಮಯಕೋಶ" ಇದರಲ್ಲಿ ವಿದ್ಯಮಾನಗಳು :- [೧]ಪ್ರಥಮಕೋಶದಲ್ಲಿ ಪಾಣಿ, ಸ್ಪರ್ಶ, ತ್ವಕ್, ವಾಯು (೨) ದ್ವಿತೀಯಕೋಶದಲ್ಲಿ ಪಾದ, ರೂಪ, ಚಕ್ಷು ಮತ್ತು ತೇಜ ಅಂತು ಎಂಟು. ಇಷ್ಟರಿಂದ ಯುಕ್ತವಾದದ್ದು ದಾವದೋ ಅದಕ್ಕೆ "ಪ್ರಾಣಮಯ ಕೋಶ"- ಎಂತ ನಾಮ. ಪ್ರಾಣಾಧಾರಕೋಶವು. ಈ ಕೋಶಾಭಿಮಾನಿ ಪ್ರದ್ಯುಮ್ನನಾಮಕ ಶ್ರೀಪರಮಾತ್ಮ. ಈ ಕೋಶಾಂತರ್ಗತನಾಗಿದ್ದು, ಮರೀಚಿ

ವಾಯು ಅಗ್ನಿ, ಗಣಪತಿ ಮೊದಲಾದ ತತ್ವಾಭಿಮಾನಿ ದೇವತೆಗಳಿಂದ ಪೂಜಿತನಾಗಿದ್ದಾನೆ. ಎಷ್ಟು ರೂಪಗಳಿಂದ ಎಂದರೆ:- ಐದುಸಾವಿರದ (ಮೂರೆರಡು ಸಾವಿರ) ಐದುನೂರು (ಅರೆಸಾವಿರ) ಅದರಮ್ಯಾಲೆ ನಾಲ್ವತ್ತು, ಅದರಮ್ಯಾಲೆ ಮೂರು ಅಧಿಕವಾಗಿ, ಅಂದರೆ ೫೫೪೩ ಭಗವದ್ರೂಪಗಳು. ಹ್ಯಾಂಗೆಂದರೆ:- ಪ್ರ-೩, ದ್ಯು-೪, ಮ-೫, ಸ-೫. ಬಲದಿಂದ ಎಡಕ್ಕೆ ೫೫೪೩. ಇಷ್ಟು ರೂಪಗಳಿಂದ (ರೂಪದಿ) ತನ್ನ ಪೂಜಾ ಮಾಡತಕ್ಕ ದೇವತೆಗಳಿಗೆ ತೋರುತ್ತ (ತೋರುತಿಹ) ಪ್ರಾಣಮಯಕೋಶದಲ್ಲಿ ಇದ್ದಾನೆ. ಪ್ರಾಣಗಳ ಸ್ಥೂಲ ದೇಹದಲ್ಲಿ (ಜಗದೊಳು) ಪ್ರದ್ಯುಮ್ನನಾಮಕ ಶ್ರೀ ಪರಮಾತ್ಮನು (ಪ್ರದ್ಯುಮ್ನನು) ಪ್ರಾಣಮಯ ಕೋಶದಲ್ಲಿ ಅಖಂಡರೂಪನಾಗಿ, ಅಕ್ಷರಸಾಂಕೇತದಿಂದ ಖಂಡರೂಪನಾಗಿ ಇರೋವನಾಗಿ ಇದ್ದಾನೆ. (೨೧)

**ತಾತ್ಪರ್ಯ**

ಶ್ರೀಪರಮಾತ್ಮ ಅನಿರುದ್ಧರೂಪದಿಂದ ಸ್ಥೂಲದೇಹದಲ್ಲಿ ಪೃಥ್ವೀ ಸಾಂಕೇತ ಅನ್ನಮಯಕೋಶದಲ್ಲಿ ೮೨೫೧ ಖಂಡಾಖಂಡರೂಪಗಳಿಂದ ಇದ್ದು, ಜೀವಭುಕ್ತ ಪ್ರಾಕೃತಾನ್ನವನ್ನ ತ್ಯಜಿಸಿ, ತನ್ನ ಸ್ವಾಖ್ಯವಾದ ಸಾರಭೂತವಾದದ್ದರನ್ನ ಭೋಜನಮಾಡಿ "ಅನ್ನಮಯ"ನೆಂದು ಕರಿಸತಾನೆ. ಹಾಂಗೆ ಶ್ರೀಪರಮಾತ್ಮನು ಪ್ರದ್ಯುಮ್ನರೂಪದಿಂದ ಪ್ರಾಣಾಧಾರವಾದ ಉದಕ ಪ್ರಾಚುರ್ಯವಾದ ಪ್ರಾಣಮಯಕೋಶದಲ್ಲಿ ೫೫೪೩ ರೂಪಗಳಿಂದ ಇದ್ದು, ಮೇಲೆ ಹೇಳಿದ ಪ್ರಕಾರ ಮರೀಚಿ ಮೊದಲಾದವರಿಂದ ಪೂಜೆಯ ಕೈಕೊಂಡು. ತನ್ನ ರೂಪ ತೋರಿಸುತಾ "ಪ್ರಾಣಮಯ" ಎಂದು ಕರಿಸತಾನೆ- ಎಂತ ತಾತ್ಪರ್ಯ.

**ವಿಶೇಷಾರ್ಥ:-**

**ಗುರುವೃತ್ತ ಪ್ರಮಾಣ:-**

**"ಏಕೋತ್ತರ ಪಂಚಾಶತ್ಸಹಿತಾ ದ್ವಿಶತಾದಿಕೈ:।**
**ವಸುಸಾಹಸ್ರ ಸಂಖ್ಯಾಕೈ: ರೂಪಾಣ್ಯನು ಸದಾ ಸ್ಮರ॥**

**ಅನಿರುದ್ಧಸ್ಯ ಸಾರಸ್ಯ ಭೋಕ್ತುರನ್ನಮಯಸ್ಯಚೇತಿ ||೧||**
**ತ್ರಿಚತ್ವಾರಿಂಶದಧಿಕೈ: ಸಾರ್ಧೈಃ ಪಂಚಸಹಸ್ರಕೈಃ|**
**ಮಿತಾನಿ ಸ್ಮರ ಶ್ರೀಕಂಠ ಪ್ರದ್ಯುಮ್ನಸ್ಯ ಮಹಾತ್ಮನ: ||೨||"-**
**ಇತಿ.**

## [೨] "ಭಾವಪ್ರಕಾಶಿಕೆ"-ವ್ಯಾಖ್ಯಾನ :

ಅನಿರುದ್ಧದೇವನು ಅನ್ನಮಯನೆನಿಸಿ ೮೨೫೧ ರೂಪಗಳಿಂದ ಸರ್ವಸಾರ **ಭೋಕ್ತ**ವಾಗಿರುವನು. ಮೇಲಿನ ಸಂಖ್ಯೆಯು "ಅನಿರುದ್ಧ" ಎಂಬ ಅಕ್ಷರ ಸಂಖ್ಯೆಯಿಂದುಂಟಾದುದು. ಹೇಗೆಂದರೆ :–ಅ–೧, ನಿ-೫, ರು--೨ ಮತ್ತು ದ್ಧ-೮ ಇವುಗಳನ್ನು ಬಲದಿಂದ ಎಡಕ್ಕೆ ಗಣನೆಮಾಡಿದರೆ, ೮೨೫೧ ಆಗುವುದು, "ದ್ಧ" ಎಂಬ ಅಕ್ಷರವು "ಟಾದಿಚತು : ತಾದಿಪಂಚ"–ಎಂಬ ಆಧಾರದಮೇಲೆ ಟ ಠ ಡ ಢ ತ ಥ ದ ಧ ಹೀಗೆ ಅಕ್ಷಗಳನ್ನು ಗಣಿಸಿದರೆ "ಧ" ಎಂದರೆ ೮ ಆಗುವುದು. ಆಸಂಖ್ಯೆಯನ್ನು ಇಲ್ಲಿ ಹೇಳಿರುವದು. ಪ್ರದ್ಯುಮ್ನನು ಜಗತ್ತಿನೊಳಗೆ ಪ್ರಾಣಮಯನಾಗಿ ೫೫೪೩ ರೂಪಗಳಿಂದ ತೋರುತ್ತಿರುವನು, ಇಲ್ಲಿಯೂ ಸಂಖ್ಯೆಯು "ಪ್ರದ್ಯುಮ್ನ ಎಂಬ ಅಕ್ಷರಗಳಿಂದ ಉಂಟಾದುದು. ಪ್ರ–ಇದರಲ್ಲಿ ಪ ಮತ್ತು ರ ಎಂಬ ಎರಡು ವರ್ಣಗಳಿವೆ. ಪ-೧, ರ-೨ ಅಲ್ಲಿಗೆ ೧+೨=೩ ಆಗುವುದು. ದ್ಯು=೪ (ಇದರಲ್ಲಿ ದ+ಯ, ಈ ಎರಡರಿಂದ ದ=೩, ಯು-೧ ಅಂದರೆ ೩+೧=೪ ಆಗುವುದು) ಈ ಪ್ರಕಾರ ಮ=೫ ಮತ್ತು ನ=೫, ಹೀಗೆ ಬಲದಿಂದ ಏಣಿಸಿದರೆ ೫೫೪೩ ಆಗುವುದು ||೧೩||

## [೩] "ಭಾವದರ್ಪಣಟೀಕಾ" ವ್ಯಾಖ್ಯಾನ :

ಅನ್ನಮಯಕೋಶದಲ್ಲಿ ಅನಿರುದ್ಧನು ೮೨೫೧ ರೂಪದಿಂದಿದ್ದಾನೆ ಎಂತರ್ಥ **ತದುಕ್ತಂ ಗುರುವ್ಯತ್ತೌ :-"ಏಕೋತ್ತರ ಪಂಚಾಶತ್ಸಹಿತ....**
**................ಭೋಕ್ತುರನ್ನಮಯಸ್ಯಚೇತಿ ||"** (ಈ ಪ್ರಮಾಣದ ಪೂರ್ಣ

ವಾಕ್ಯ ರೂಪವನ್ನು ಹಿಂದಿನ ವ್ಯಾಖ್ಯಾನದಲ್ಲಿ ಕೊಟ್ಟಿದೆ.] ಪ್ರಾಣಮಯ ಕೋಶದಲ್ಲಿ ಪ್ರದ್ಯುಮ್ನನು ೫೫೪೩ ರೂಪಗಳಿಂದ ಇದ್ದಾನೆಂದರ್ಥ.

**ಗುರುವೃತ್ತೌಚ:- "ತ್ರಿಚತ್ವಾರಿಂಶದಧಿಕ್ಯೆ :........................ ....ಪ್ರದ್ಯುಮ್ನಸ್ಯ ಮಹಾತ್ಮನಃ॥" ಇತಿ.** [ಹಿಂದಿನ ವ್ಯಾಖ್ಯಾನದಲ್ಲಿ ಇದೆ] ॥೧೩॥

## [೪] "ಗುರುಹೃದಯಪ್ರಕಾಶಿಕ"-ವ್ಯಾಖ್ಯಾನ:—

ರಸಗತ ರೂಪೋಪಾಸನೆ ಪ್ರಕರಣದೊಳಗೆ ಸೇರಿದ ಅನ್ನಮಯಾದಿಕೋಶಾಂತಸ್ಥ ರೂಪಗಳನ್ನು ಉಕ್ತ ಅಕ್ಷರಾಂಕ ಪ್ರಕಾರ ಸ್ಮರಿಸಬೇಕೆಂದು ನಿರೂಪಿಸುತ್ತಾರೆ-"ಆರೆರಡು"-ಪದ್ಯದಿಂದ. ಸಾರಭೋಕ್ತನಾದ ಅನಿರುದ್ಧನ ಅಕ್ಷರಾಂಕರೀತ್ಯಾ ಆಗುವ ದ್ಧ-೮, ರು-೨, ನಿ-೫, ಅ-೧-ಹೀಗೆ ೮೨೫೧ ರೂಪಗಳನ್ನು ಅನ್ನಮಯಕೋಶದಲ್ಲಿರುವ **ಅನ್ನಮಯ** ಎಂಬ ರೂಪಗಳಲ್ಲೂ, ಪ್ರದ್ಯುಮ್ನನ ಮ್ನ-೫೫, ದ್ಯು-೪, ಪ್ರ-೩-ಈ ಮೇರೆ ೫೫೪೩ ರೂಪಗಳನ್ನು ಪ್ರಾಣಮಯಕೋಶದಲ್ಲಿ **ಪ್ರಾಣಮಯ** ಎಂಬ ರೂಪದಲ್ಲೂ ಚಿಂತಿಸಬೇಕೆಂದು ನಿರೂಪಿಸುತ್ತಾರೆ ॥೧೩॥

## [೫] ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ [ಸಂಸ್ಕೃತ ಮೂಲ]:—

ಆರೆರಡೇತಿ ದ್ಯುತ್ತರಂ ಷಟ್‌ಸಹಸ್ರಂತು ದ್ವಿಶತಂ ರೂಪಜಾತಕಂ । ಏಕಪಂಚಾಶದಾತ್ಮಾ ಯ: ಅನಿರುದ್ಧೋಽನ್ನಮಯಾಭಿಧ:॥ ಶತ ಪಂಚಕ ಪೂರ್ವಂ ತು ಸಹಸ್ರಾಣಾಂ ಸುಪಂಚಕಂ । ತ್ರಿಚತ್ವಾರಿಂಶದಾತ್ಮಾಯಂ ಕೃತೀಟ್ ಪ್ರಾಣಾಮಯಾಭಿಧಃ ॥ ೧೩ ॥

**ಕನ್ನಡಾರ್ಥ:—**

ಅನ್ನಮಯ ಶಬ್ದವಾಚ್ಯನು ಅನಿರುದ್ಧರೂಪೀ ಶ್ರೀಪರಮಾತ್ಮನು. ಪ್ರಾಣಮಯಶಬ್ದವಾಚ್ಯನು ಪ್ರದ್ಯುಮ್ನನು. ಇವೆರಡರ ಭಗವದ್ರೂಪಗಳ ಸಂಖ್ಯಾ ವಿವರಗಳನ್ನು ಪ್ರಸಕ್ತ ಪದ್ಯದಲ್ಲಿ ತಿಳಿಸುತ್ತಾರೆ. ೮೨೫೧ ಅಕ್ಷರ ಸಾಂಕೇತವಾದ ರೂಪಗಳಿಂದ ಅನಿರುದ್ಧನು ಅನ್ನಮಯಕೋಶಗತನಾಗಿದ್ದು, ಅನ್ನಮಯನೆಂದು ಕರೆಯಿಸಿಕೊಳ್ಳುತ್ತಾನೆ. ೫೫೪೩ ಸಂಖ್ಯಾಕವಾದ ಭಗವದ್ರೂಪಗಳಿಂದ ಕೃತಿಪತಿ ಪ್ರದ್ಯುಮ್ನನು ಪ್ರಾಣಮಯಕೋಶಗತನಾಗಿ ಪ್ರಾಣಮಯನೆಂದೆನಿಸುತ್ತಾನೆ. ॥ ೧೩ ॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಇಲ್ಲಿಯವರೆಗೆ ಅಪರೋಕ್ಷೀಕೃತಶ್ರೀಶರಾದ ಶ್ರೀ ಜಗನ್ನಾಥದಾಸಪರ್ಯರು ಭೋಜನಕ್ರಿಯೆಯು ಭಗವತ್ಪ್ರೀತಿಕರವಾದ ಮಹಾಸುಯಜ್ಞವಿಶೇಷವೆಂದು ಉತ್ತಮಾನುಸಂಧಾನಪೂರ್ವಕ ತಿಳಿದು, ಸುಭೋಜನ ಪದಾರ್ಥಗಳಲ್ಲಿ ರಸಾಂತರ್ಗನಾಗಿ ಇರತಕ್ಕ ಶ್ರೀ ಪರಮಾತ್ಮನ ನಾನಾಪ್ರಕಾರವಾದ ಭಗವದ್ರೂಪಗಳ ವಿವರಗಳನ್ನು ತಿಳಿಸಿರುತ್ತಾರೆ. ಇನ್ನು ಮುಂದಿನ ಪದ್ಯಗಳಿಂದ ಅನ್ನಮಯಾದಿ ಪಂಚಕೋಶಗಳ ವಿವರಗಳು, ಆ ಕೋಶಾಂತರ್ಗತ ಭಗವದ್ರೂಪಗಳು, ಆ ಕೋಶಗಳಲ್ಲಿ ಶ್ರೀಪರಮಾತ್ಮನು ನಡೆಯಿಸುವ ಭಗವದ್ವ್ಯಾಪಾರಾದಿಶೇಷಗಳನ್ನು ಹೃದಂಯಗಮವಾಗಿ ವಿವರಿಸುತ್ತಾರೆ.

### [೧] ಅನ್ನಮಯಗೋಶ:—

ಅನ್ನದಿಂದ ಪ್ರಚುರವಾದದ್ದು ಯಾವುದೋ, ಅದಕ್ಕೆ ಅನ್ನಮಯ ಎಂದು ಸಾಂಕೇತವು. ಪಂಚಭೂತಗಳಲ್ಲಿ ಪೃಥ್ವೀತತ್ತ್ವದಿಂದ (ಭೂಸಂಬಂಧ ಪ್ರಾಚುರ್ಯರೂಪವಾದ ಆಹಾರವಿಶೇಷವು ಅನ್ನ. ಅನ್ನಮಯಕೋಶದ ವಿವರಗಳು ಇಂತಿವೆ ;-

[೧] ಇದರಲ್ಲಿ ಎರಡು ಆವರಣರೂಪವಾದ ಕೋಶಗಳಿವೆ.

[೨] ಅಪ್ ಸಾಂಕೇತವಾದ ಪ್ರಥಮಕೋಶದಲ್ಲಿ ವಾಯು,ಜಹ್ವೆ, ರಸ ಮತ್ತು ಅಪ್ ಎಂಬ ನಾಲ್ಕು ತತ್ತ್ವಗಳಿವೆ.

[೩] ಈ ಆವರಣದಲ್ಲಿ ಅಪ್‌ತತ್ತ್ವಾಭಿಮಾನಿ (ಪಂಚಭೂತ) ವರುಣನೂ, ರಸತತ್ತ್ವಾಭಿಮಾನಿ (ತನ್ಮಾತ್ರ) ಉದಾನವಾಯುವೂ, ವಾಯುತತ್ತ್ವಾಭಿಮಾನಿ (ಪಂಚಭೂತ) ಪ್ರವಹವಾಯುವೂ ಮತ್ತು ಜಿಹ್ವಾಭಿಮಾನಿ (ಜ್ಞಾನೇಂದ್ರಿಯ) ವರುಣನೂ ಇದ್ದಾರೆ.

(೪) ಪೂರ್ವೋಕ್ತ ತತ್ತ್ವಾಭಿಮಾನಿಗಳಿಂದ ಪೂಜಿತನಾದ **ಅನಿರುದ್ಧ** ನಾಮಕ ಶ್ರೀ ಪರಮಾತ್ಮನೇ ಅನ್ನಮಯಕೋಶಾಭಿಮಾನಿಯು.

[೫] ಅನಿರುದ್ಧನು ೮೨೫೧ ಅಕ್ಷರಸಾಂಕೇತದಿಂದ ಖಂಡರೂಪಾಖ್ಯ ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದು, ಕೋಶಗತ ಕ್ರಿಯಾ ವಿಶೇಷಗಳನ್ನು ಆ ಕೋಶಾಂತಸ್ಥ ತತ್ತ್ವದೇವತೆಗಳ ದ್ವಾರಾ, ಶ್ರೀ ಮುಖ್ಯಪ್ರಾಣದೇವರ ದ್ವಾರಾ ನಡೆಯಿಸುತ್ತಿರುವನು.

[೬] ಅನ್ನಮಯಕೋಶವು ದೇಹಾಧಾರಕೋಶವು.

[೭] ಈ ಕೋಶಾಭಿಮಾನಿ ಅನಿರುದ್ಧನಿಗೆ **ಅನ್ನಮಯ** ನೆಂದು ಹೆಸರು.

[೮] ಆವರಣರೂಪದಲ್ಲಿರುವ ದ್ವಿತೀಯಕೋಶದಲ್ಲಿ ಪೃಥ್ವೀ (ಪಂಚಭೂತ) ಘ್ರಾಣ [ಜ್ಞಾನೇಂದ್ರಿಯ], ಗಂಧ [ತನ್ಮಾತ್ರ] ಮತ್ತು ಉಪಸ್ಥ [ಕರ್ಮೇಂದ್ರಿಯ) ಈ ನಾಲ್ಕು ತತ್ತ್ವಗಳಿವೆ.

[೯] ಈ ದ್ವಿತೀಯ ಪರಿಚ್ಛೇದದಲ್ಲಿ ಪೃಥ್ವೀ ತತ್ವಾಭಿಮಾನಿಗಳಾದ ಭೂದೇವಿ ಮತ್ತು ಶನೈಶ್ಚರನೂ, ಗಂಧತನ್ಮಾತ್ರಾಭಿಮಾನಿ ಸಮಾನವಾಯುವೂ, ಘ್ರಾಣೇಂದ್ರಿಯಾಭಿಮಾನಿ ಅಶ್ವಿನಿದೇವತೆಗಳೂ ಮತ್ತು ಉಪಸ್ಥ ಇಂದ್ರಿಯಾಭಿಮಾನಿ ಮನುವೂ ಇದ್ದಾರೆ.

[೧೦] ಇಂತು ಎಂಟು ತತ್ತ್ವಗಳು ಮತ್ತು ತದಭಿಮಾನಿದೇವತೆಗಳಿಂದ ಅನಿರುದ್ಧನು ಸೇವ್ಯಮಾನನಾಗಿದ್ದಾನೆ.

### [೨] ಪ್ರಾಣಮಯಕೋಶ:—

[೧] ಪ್ರಾಣಾಧಾರವಾದ ಕೋಶವು.

[೨] ಉದಕಪ್ರಾಚುರ್ಯವಾದದ್ದು.

(೩) ಈ ಕೋಶದಲ್ಲಿಯೂ ಸಹ ಆವರಣರೂಪವಾದ ಎರಡು ಪರಿಚ್ಛೇದಗಳಿವೆ.

(೪) ಪ್ರಥಮ ಪರಿಚ್ಛೇದದಲ್ಲಿ ವಾಯುತತ್ವವೂ (ಪಂಚಭೂತ) ಸ್ಪರ್ಶ ತತ್ವವೂ (ತನ್ಮಾತ್ರ), ತ್ವಗಿಂದ್ರಿಯವೂ (ಜ್ಞಾನೇಂದ್ರಿಯ) ಮತ್ತು ಪಾಣಿ (ಕರ್ಮೇಂದ್ರಿಯ)– ಎಂಬ ನಾಲ್ಕು ತತ್ತ್ವಗಳು ಯುಕ್ತವಾಗಿವೆ.

(೫) ಈ ಆವರಣದಲ್ಲಿ ವಾಯುತತ್ವಾಭಿಮಾನಿ ಪ್ರವಹವಾಯುವೂ, ಸ್ಪರ್ಶ ತನ್ಮಾತ್ರಾಭಿಮಾನಿ ಅಪಾನವಾಯುವೂ, ತ್ವಗಿಂದ್ರಿಯಾಭಿಮಾನಿ ಆಹಂಕಾರಿಕ ಪ್ರಾಣನೂ ಮತ್ತು ಪಾಣೀಂದ್ರಿಯಾಭಿಮಾನಿ ದಕ್ಷಪ್ರಜಾಪತಿಯ ವಿದ್ಯಮಾನರಾಗಿದ್ದಾರೆ.

(೬) ಈ ಕೋಶಾಭಿಮಾನಿಯು ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನು.

(೭) ಕೋಶಾಂತರ್ಗತ ಪ್ರದ್ಯುಮ್ನನು ಪ್ರಾಣಮಯನೆಂದೆನಿಸಿ, ಪೂರ್ವೋಕ್ತ ಎಂಟು ಮಂದಿ ತತ್ವಾಭಿಮಾನಿಗಳಿಂದ ಸಂಸೇವ್ಯಮಾನನಾಗಿದ್ದು ಅವರ ದ್ವಾರಾ ಕೋಶಗತ ವಿಶಿಷ್ಟ ಕ್ರಿಯಾಗಳನ್ನು ಮಾಡಿ ಮಾಡಿಸುತ್ತಿರುವನು.

(೮) ಕೋಶಾಭಿಮಾನೀ ಪ್ರದ್ಯುಮ್ನನು ಅಕ್ಷರಸಾಂಕೇತವಾದ ೫೫೪೩ ಸಂಖ್ಯಾಕವಾದ ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ.

ಇಂತು, ಶ್ರೀ ಅನಿರುದ್ಧ ರೂಪೀ ಪರಮಾತ್ಮನು ಅಖಂಡರೂಪದಿಂದ "ಅನ್ನಮಯ" ನೆಂದೆನಿಸಿ, ಅಕ್ಷರಸಾಂಕೇತವಾದ ೮೨೫೧ ಖಂಡರೂಪಗಳಿಂದ ಅನ್ನಮಯಕೋಶದಲ್ಲಿ ವಿದ್ಯಮಾನನಾಗಿದ್ದು ಕೋಶಗತ ಕ್ರಿಯಾದಿಗಳನ್ನು ಮಾಡಿ ಮಾಡಿಸುತ್ತಿರುವನು. ಶ್ರೀಪ್ರದ್ಯುಮ್ನನು ಅಖಂಡರೂಪದಿಂದ "ಪ್ರಾಣಮಯ" ನೆಂಬ ಅಭಿಧಾನದಿಂದ, ಅಕ್ಷರಸಾಂಕೇತವಾದ ೫೫೪೩ ಖಂಡರೂಪಗಳಿಂದ ಪ್ರಾಣಮಯಕೋಶದಲ್ಲಿ ವಿದ್ಯಮಾನನಾಗಿದ್ದಾನೆ.

**[೧] ಅನ್ನಮಯ ಕೋಶದಲ್ಲಿ ೮೨೫೧ ಭಗವದ್ರೂಪಗಳ ವಿವರ :**

| ಕೋಶಾಭಿಮಾನಿ | ಕ್ರಮ ಸಂಖ್ಯೆ | ಅಕ್ಷರ | ವಿವರ | ಅಕ್ಷರಅಂಕ ಸ್ಥಾನ ಸಂಖ್ಯೆ | ವಾಮಾಂಕ ಗತಿಯಿಂದ ಸಂಖ್ಯೆ |
|---|---|---|---|---|---|
| | ೧ | ಅ | ಸ್ವರಾಕ್ಷರ (೧) | ೧ | |
| | ೨ | ನಿ | ತಕಾರವರ್ಗೀಯ ವ್ಯಂಜನಾಕ್ಷರ [೫] | ೫ | |
| **ಅನಿರುದ್ಧ** | ೩ | ರು | ಆವರ್ಗೀಯ ವ್ಯಂಜನಾಕ್ಷರ (೨) | ೨ | ೧೫೨೮ **೮೨೫೧** |
| | ೪ | ದ್ಧ | ಸಂಯುಕ್ತಾಕ್ಷರ ಧ+ಧ (೪+೪) ತಕಾರವರ್ಗೀಯ ವ್ಯಂಜನಾಕ್ಷರ | ೪+೪ =೮ | |

## ೨ ಪ್ರಾಣಮಯ ಕೋಶದಲ್ಲಿ ೫೫೪೩ ಭಗವದ್ರೂಪಗಳ ವಿವರ :

| ಕೋಶಾಭಿಮಾನಿ | ಕ್ರಮ ಸಂಖ್ಯೆ | ಅಕ್ಷರ | ವಿವರ | ಅಕ್ಷರ ಅಂಕ ಸ್ಥಾನಸಂಖ್ಯೆ | ವಾಮಾಂಕ ಗತಿಯಿಂದ ಸಂಖ್ಯೆ |
|---|---|---|---|---|---|
| | ೧ | ಪ್ರ | ಪ-ಪಕಾರವರ್ಗೀಯ<br>ವ್ಯಂಜನಾಕ್ಷರ ೧<br>ರ-ಅವರ್ಗೀಯ<br>ವ್ಯಂಜನಾಕ್ಷರ ೨ | ೧+೨<br>=೩ | |
| ಪ್ರದ್ಯುಮ್ನ | ೨ | ದ್ಯು | ದ+ಯ<br>ದ-ತಕಾರವರ್ಗೀಯ<br>ವ್ಯಂಜನಾಕ್ಷರ ೨<br>ಯ-ಅವರ್ಗೀಯ<br>ವ್ಯಂಜನಾಕ್ಷರ ೧ | ೩+೧೩೪೫೫<br>=೪ | ೫೫೪೩ |
| | ೩ | ಮ | ಮ-ಪಕಾರ<br>ವರ್ಗೀಯ ವ್ಯಂಜ<br>ನಾಕ್ಷರ ೫ | ೫ | |
| | ೪ | ನ | ನ-ತಕಾರ<br>ವರ್ಗೀಯ ವ್ಯಂಜ<br>ನಾಕ್ಷರ ೫ | ೫ | |

**ವಿಶೇಷಾಂಶ:**—

ಭಗವದ್ರೂಪಗಳ ಸಂಖ್ಯೆಯನ್ನು ಪರಿಶೀಲಿಸುವಾಗ, ಶ್ರೀಪರಮಾತ್ಮನ ವಾಚ್ಯ ರೂಪವಾದ ಶಬ್ದಗತ ಅಕ್ಷರಗಳನ್ನು ಗಣನೆಗೆ ಯಾಕೆ ತೆಗೆದುಕೊಳ್ಳಬೇಕು? ಪದಗಳು ಅಕ್ಷರ (ವರ್ಣ]ಗಳಿಂದ ರಚಿತವಾಗಿವೆ, ೫೧ ಸಂಖ್ಯಾಕವಾದ ವರ್ಣಮಾಲೆಯಲ್ಲಿ ಪ್ರತಿ ವರ್ಣಕ್ಕೂ ವಿಶಿಷ್ಟ ಸ್ಥಾನವುಂಟು. ಈ ಸ್ಥಾನ ವೈಶಿಷ್ಟ್ಯ ಸಂಖ್ಯಾಕ್ರಮವನ್ನವಲಂಬಿಸಿದೆ, ಇದರಿಂದ ಸರ್ವ ವರ್ಣ, ಸ್ವರ ಶಬ್ದ ಪ್ರತಿಪಾದ್ಯನಾದ ಶ್ರೀಪರಮಾತ್ಮನ ವರ್ಣಾಧಿಷ್ಠಾನಗತ ಭಗವದ್ರೂಪಗಳ ಅಕ್ಷರ ಸಾಂಕೇತವಾದ ಈ ಎಣಿಕೆಗೆ ಈ ಕ್ರಮ ಅತ್ಯಗತ್ಯ ॥೧೩॥

# ಪದ್ಯ (೧೪)

**ಮೂಲ:—**

**ಎರಡು ಕೋಶದ ಒಳಹೊರಗೆ ಸಂ।**
**ಕರುಷಣೈದು ಸುಲಕ್ಷವರವ।**
**ತ್ತೆರಡು ಸಾವಿರದೇಳಧಿಕ ಶತರೂಪಗಳ ಧರಿಸಿ॥**
**ಕರೆಸಿಕೊಂಬ ಮನೋಮಯನು ಎಂ।**
**ದರವಿದೂರನು ಈರೆರಡು ಸಾ।**
**ವಿರದ ಮುನ್ನೂರಾದ ಮೇಲ್ನಾಲ್ಕಧಿಕ ಎಪ್ಪತ್ತು॥ ॥೧೪॥**

**ಅವತರಣಿಕೆ:—**

ಮನೋಮಯ ಕೋಶದಲ್ಲಿ ಸಂಕರ್ಷಣನಾಮಕ ಶ್ರೀಪರಮಾತ್ಮನು ಅಕ್ಷರಸಾಂಕೇತವಾದ ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದು, ಆ ಕೋಶಮಾನಿಯಾಗಿದ್ದು, ಕೋಶಾಂತಸ್ಥ ತತ್ವಗಳು ಮತ್ತು ತತ್ವಾಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿತ್ವೇನ ನಡೆಯಿಸುವ ತತ್ಸಂಬಂಧವಾದ ಕ್ರಿಯಾ ವಿಶೇಷಗಳನ್ನು ವಿವರಿಸುತ್ತಾರೆ- "ಎರಡುಕೋಶದ"- ಎಂಬ ಪ್ರಕೃತಸಂಧಿಗತ ೧೪ನೆಯ ಈ ಪದ್ಯದಿಂದ ॥೧೪॥

**ಪ್ರತಿಪದಾರ್ಥ:—**

**ಎರಡುಕೋಶದ**=ಪೃಥ್ವೀಸಾಂಕೇತವಾದ ಅನ್ನಮಯಕೋಶ ಮತ್ತು ಅಪ್ ಸಾಂಕೇತವಾದ ಪ್ರಾಣಮಯಕೋಶವೆಂಬ ಈ ಕೋಶಗಳ **ಒಳಹೊರಗೆ**= ಒಳಭಾಗದಲ್ಲಿಯೂ [ಅಂತಸ್ಥ] ಮತ್ತು ಹೊರಭಾಗದಲ್ಲಿಯೂ [ಬಹಿಸ್ಥ] **ಸಂಕರುಷಣ**=ಸಂಕರುಷಣರೂಪೀ ಶ್ರೀ ಪರಮಾತ್ಮನು **ಐದುಸುಲಕ್ಷದ**=

ಐದುಲಕ್ಷ ಸಂಖ್ಯಾಕವಾದ **ಅರವತ್ತೆರಡುಸಾವಿರದ**＝ಐದುಲಕ್ಷ ಅರವತ್ತೆರಡ ಸಾವಿರದ [೫೬೨೦೦೦] **ಏಳಧಿಕಶತರೂಪಗಳ**＝ನೂರರ (ಶತ] ಮೇಲೆ [ಅಧಿಕ] ಏಳು. ಅಂದರೆ ೧೦೭ ಒಟ್ಟಿನಲ್ಲಿ ಐದುಲಕ್ಷ+ಅರವತ್ತೆರಡುಸಾವಿರ ನೂರುಏಳು＝೫೬೨೧೦೭ ಸಂಖ್ಯಾಕವಾದ ಭಗವದ್ರೂಪಗಳನ್ನು **ಧರಿಸಿ**＝ಧಾರಣಮಾಡಿದವನಾಗಿ **ಮನೋಮಯನು ಎಂದು**＝ಮನೋಮಯ ಎಂಬ ಅಭಿಧಾನದಿಂದ **ಕರೆಸಿಕೊಂಬ**＝ಕರೆಯಸಿಕೊಳ್ಳುವನು **ಅರವಿದೂರನು**＝ದೋಷದೂರನಾದ [ವಾಸುದೇವನಾಮಕ ಶ್ರೀಪರಮಾತ್ಮನು] **ಈರೆರಡು**＝ಎರಡರಷ್ಟು ಎರಡು ಅಂದರೆ ನಾಲ್ಕು **ಸಾವಿರದ**＝ನಾಲ್ಕು ಸಾವಿರದ **ಮುನ್ನೂರಾದಮೇಲೆ**＝ ನಾಲ್ಕುಸಾವಿರದ ಮುನ್ನೂರರಮೇಲೆ **ನಾಲ್ಕಧಿಕ ಎಪ್ಪತ್ತು**＝ಎಪ್ಪತ್ತ ನಾಲ್ಕು ಅಂದರೆ ೪೩೭೪ ಭಗವದ್ರೂಪಗಳಿಂದ ವಿಜ್ಞಾನಮಯ ಕೋಶದಲ್ಲಿ ಇದ್ದಾನೆ (ಇದು ಮುಂದಿನ ಪದ್ಯಕ್ಕೆ ಅನ್ವಯಿಸುವುದು).

**ಭಗವದ್ರೂಪಗಳ ಸಂಖ್ಯಾವಿವರ:—**

[೧) ಸಂಕರ್ಷಣ ಎಂಬ ಪದದಲ್ಲಿ ಸಂ＝೭೦ ಕ＝೧, ರು＝೨. ಷ＝೬ ಮತ್ತು ಣ＝೫ ಅಲ್ಲಿಗೆ ೭೦೧೨೬೫ ಆಯಿತು. ವಾಮಾಂಕಗತಿಯಿಂದ ೫೬೨೧೦೭) ಐದುಲಕ್ಷದ ಅರವತ್ತೆರಡು ಸಾವಿರದ ನೂರಏಳು ಭಗವದ್ರೂಪಗಳಾವುವು.]

[೨] "ವಾಸುದೇವ"- ಎಂಬ ಪದದಲ್ಲಿ. ವಾ＝೪. ಸು＝೭ ದೇ＝೩ ಮತ್ತು ವ＝೪, ಅಲ್ಲಿಗೆ ೪೭೩೪ ಆಗುವುದು. ವಾಮಾಂಕಗತಿಯಿಂದ ಎಣಿಕೆಮಾಡಿದರೆ, ೪೩೭೪ ನಾಲ್ಕು ಸಾವಿರದ ಮುನ್ನೂರ ಎಪ್ಪನಾಲ್ಕು ಭಗವದ್ರೂಪಗಳಾವುವು. ॥೧೪॥

# ವ್ಯಾಖ್ಯಾನಗಳು

## [೧] ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಪೃಥ್ವೀಸಾಂಕೇತವಾದ ಅನ್ನಮಯಕೋಶ ಮತ್ತು ಆಪ್‌ಸಾಂಕೇತವಾದ ಪ್ರಾಣಮಯಕೋಶ- ಇವೆರಡು ಕೋಶಗಳ ಒಳ ಹೊರಗೆ ಪೂರ್ವೋಕ್ತ ತತ್ವಗಳು ಅಂತರ್ಭೂತಗಳಾಗಿವೆ. ಈ ತತ್ತ್ವಗಳ ಆವರಣರೂಪವಾಗಿ ಹೊರಗೆ ಅನ್ನಮಯ, ಪ್ರಾಣಕೋಶಗಳು ಅವೆ ಎಂತ ಅರ್ಥ. ಮನೋಮಯ ಕೋಶವು ಮನಸ್ಸಿಗೆ ಆಧಾರಭೂತವಾದ ಕೋಶವು, ಇದರಿಂದ ಈ ಕೋಶಕ್ಕೆ "ಮನೋಮಯಕೋಶ" ಎಂತ ನಾಮ. ಇದು ತೇಜೋರೂಪ ವಾದದ್ದು. ಈ ಕೋಶವು ತೇಜಃಪ್ರಾಚುರ್ಯದಿಂದ "ತೇಜಃ ಕೋಶ" ಎಂತ ಕರಿಸೋಣಾಗಿದೆ. ಇದರಲ್ಲಿ ಎರಡುಕೋಶಗಳು : ಪ್ರಥಮಕೋಶದಲ್ಲಿ (೧) ಅಂತಃಕರಣ (೨) ಅಹಂಕಾರ (೩) ಚಿತ್ತ (೪) ಬುದ್ಧಿ (೫) ಮನಸ್ಸು ಮತ್ತು (೬) ಅಹಂಕಾರತತ್ವ ಇವೆ. ಎರಡುಕೋಶ ದಲ್ಲಿ (೧) ವಾಕ್ಕು (೨)ಶ್ರೋತ್ರ [೩]ಶಬ್ದ, [೪] ಆಕಾಶ ಅಂತು ಹತ್ತು ತತ್ವ ಯುಕ್ತವಾದದ್ದು. ಈ ಕೋಶಾಭಿಮಾನಿ ಸಂಕರ್ಷಣನಾಮಕ ಶ್ರೀ ಪರ ಮಾತ್ಮನು ಈ ಕೋಶಾಂತರ್ಗತನಾಗಿದ್ದು, ಇಂದ್ರದೇವರು, ರುದ್ರದೇವರು ಮೊದಲಾದ ತತ್ವಾಭಿಮಾನಿಗಳಿಂದ ಪೂಜಿತನಾಗಿದ್ದಾನೆ. ಸಂಕರ್ಷಣಾಖ್ಯ ಶ್ರೀ ಹರಿಯು ೫೬೨೧೦೭ ಖಂಡಾಖಂಡರೂಪಗಳಿಂದ ವಿದ್ಯಮಾನನಾಗಿರು ವನು. ಅಂದರೆ. ಐದು ಲಕ್ಷದ [ಐದು ಸುಲಕ್ಷದ] ಸಮೀಚೀನಗಳಾದ ಐದು ಲಕ್ಷದ ಅರವತ್ತೆರಡು ಸಾವಿರದ ಮ್ಯಾಲೆ [ಅರವತ್ತರಡುಸಾವಿರಸ] ನೂರ ಮ್ಯಾಲೆ ಏಳು [ಶತ ಏಳಧಿಕ] ಎಂದರೆ, ೫೬೨೫೦೭ ಸಂಖ್ಯಾಕವಾದ ರೂಪ ಗಳನ್ನು ಧರಿಸಿದವನಾಗಿ [ರೂಪಗಳ ಧರಿಸಿ] "ಮನೋಮಯ"ನೆಂದು ಕರೆ ಸೋವನಾಗುತಾವ [ಕರೆಸಿಕೊಂಬ] ಅಖಂಡ ರೂಪ ಮನೋಮಯರೂಪ.

ಖಂಡರೂಪಗಳು ಅಕ್ಷರಸಾಂಕೇತರೂಪಗಳು. [ಸಂಕರುಷಣ-ಸಂ-೭೦, ಕ-೨ ರು-೨, ಷ-೬ ಮತ್ತು ಣ-೫ = ೫೬೨೫೦೭. ಬಲದಿಂದ ಎಡಕ್ಕೆ ಲೆಕ್ಕ ಮಾಡಬೇಕು] ಇಲ್ಲಿಗೆ ಮನೋಮಯಿಕೋಶ ಆಯಿತು. ಇನ್ನು ವಿಜ್ಞಾನಮಯ ಕೋಶದ ವಿಚಾರ ಹೇಳತಾರೆ. ಈ ವಿಜ್ಞಾನಮಕೋಶವು ವಾಯು ಪ್ರಾಚುರ್ಯವಾದದ್ದು, ಇದರಲ್ಲಿ ಮಹತತ್ತ್ವವಿದೆ. ಈ ಕೋಶದಲ್ಲಿ ದೋಷದೂರನಾದ [ಅರವಿದೂರನು] ಗುಣಪೂರ್ಣನಾದ ವಾಸುದೇವರೂಪೀ ಪರಮಾತ್ಮನು ದೋಷರೂಪವಾದ ಲಿಂಗದೇಹವನ್ನು ದೂರಮಾಡಿ ಮೋಕ್ಷ ಪ್ರದನಾದವನು. ಇಂಥಾ ವಾಸುದೇವನು ನಾಲ್ಕು ಸಾವಿರದ [ಈರೆರಡು ಸಾವಿರ] ಮುನ್ನೂರರ ಮ್ಯಾಲೆ ಎಪ್ಪತ್ತು [ಮುನ್ನೂರಾದ ಮೇಲ್ನಾಲ್ಕಧಿಕ ಎಪ್ಪತ್ತು] ಅಂದರೆ ೪೩೭೪ ಸಂಖ್ಯಾರೂಪಗಳಿಂದ ಇದ್ದಾನೆ [ವಾಸುದೇವ-ವಾ-೪, ಸು-೭, ದೇ-೩ ಮತ್ತು ವ-೪, ಬಲದಿಂದ ಎಡಕ್ಕೆ ೪೩೭೪ ಆಗುವುದು.] ವಿಜ್ಞಾನಮಯರೂಪ ಅಖಂಡರೂಪ. ಅಕ್ಷರಸಂಖ್ಯಾರೂಪ ಖಂಡ ರೂಪ. ಈ ಉಭಯವಿಧದಿಂದ ವಿಜ್ಞಾನಮಯಕೋಶದಲ್ಲಿ ವಾಸುದೇವ ಇದ್ದು, ತದ್ಗತ ಬ್ರಹ್ಮ, ವಾಯು ತತ್ವಾಭಿಮಾನಿದೇವತೆಗಳಿಂದ ಪೂಜಿತನಾಗಿ ಇದ್ದಾನೆ.

ಇದಕ್ಕೆ ಪ್ರಮಾಣ :

"ಕೋಶದ್ವಯಸ್ಯ ಬಾಹ್ಯಾಂತರ್ಗತಸ್ಯ ಪರಮಾತ್ಮನಃ ।
ಸಂಕರ್ಷಾಖ್ಯರೂಪಾಣಿ ಚಿಂತನೀಯಾನಿಚೇಶ್ವರ ॥
ದ್ವ್ಯುತ್ತರೈಃ ಷಷ್ಟಿಸಾಹಸ್ರೈಃ ಸಪ್ತಾಧಿಕರಶತಾಧಿಕೈಃ ।
ಪಂಚಲಕ್ಷಮಿತಾನ್ಯೇವ ವಾಸುದೇವಸ್ಯ ಚಾರ್ಭಕ ॥೧॥

ಚತುಸ್ಸಪ್ತತಿಯುಕ್ತೈಶ್ಚ ತ್ರಿಶತೈಶ್ಚ ಸಹಸ್ರಕೈಃ ।
ಚತುರ್ಭಿಶ್ಚ ಸ್ವರೂಪಾಣಿ ನವಿಸ್ಮರ ಕದಾಚನ ॥೨॥
ರಇತಿ ಗುರುವೃತ್ತ ಪ್ರಮಾಣೇ ॥ ॥೧೪॥

(೨) "ಭಾವಪ್ರಕಾಶಿಕೆ" - ವ್ಯಾಖ್ಯಾನ :

ನಮ್ಮ ದೇಹಗಳಲ್ಲಿ ಅನ್ನಕೋಶವೆಂತಲೂ ಮತ್ತು ಪ್ರಾಣಕೋಶ ವೆಂತಲೂ ಎರಡು ಕೋಶಗಳಿರುವುವು. ಭೋಜ್ಯಪದಾರ್ಥಗಳೆಲ್ಲವೂ ಅನ್ನ ಕೋಶದಲ್ಲಿ ಸೇರುವುವು. ಪ್ರಾಣಕೋಶದಲ್ಲಿ ಗಾಳಿಯು ಸಂಚರಿಸುವುದು. ಈ ಎರಡು ಕೋಶಗಳ ಒಳಗೂ ಮತ್ತು ಹೊರಗೂ ಸಂಕರ್ಷಣರೂಪಿಯಾದ ಶ್ರೀ ಪರಮಾತ್ಮನು ಪೂರ್ವೋಕ್ತ ಅಕ್ಷರ ಸಂಖ್ಯಾಪ್ರಕಾರ, ಸ=೭, ಂ=೦, ಕ=೧, ರು=೨ ಷ=೬ ಣ=೫. ಈ ಸಂಖ್ಯೆಯನ್ನು ಬಲದಿಂದ ಎಣಿಸಿದರೆ ೫೬೨೧೦೭ ಆಗುವುದು. ಇಷ್ಟು ರೂಪಗಳನ್ನು ಧರಿಸಿ, ಮನೋಮಯ ನೆಂದು ಕರೆಯಿಸಿಕೊಂಡು, ವ್ಯಾಪ್ತನಾಗಿದ್ದಾನೆ. ॥೧೪॥

[೩) "ಭಾವದರ್ಪಣ ಟೀಕಾ" -ವ್ಯಾಖ್ಯಾನ:—

ಮನೋಕೋಶಸ್ಥಾನದಲ್ಲಿ ೫೬೨೧೦೭ ಸಂಕರುಷಣಾಖ್ಯ ಹರಿಯು ಇಷ್ಟು ರೂಪದಿಂದ ಇದ್ದಾನೆಂಬುವುದಕ್ಕೆ ಪ್ರಮಾಣ :—

ಉಕ್ತಂಚ ಗುರುವೃತ್ತೇ ;—

"ಕೋಶದ್ವಯಸ್ಯ ಬಾಹ್ಯಾಂತರ್ಗತಸ್ಯ ಪರಮಾತ್ಮನಃ ।
ಸಂಕರ್ಷಣಾಖ್ಯರೂಪಾಣಿ ಚಿಂತನೀಯಾನಿಚೇಶ್ವರ ॥
ದ್ವ್ಯುತ್ತರೈಃ ಷಷ್ಠಿಸಾಹಸ್ರೈಃ ಸಪ್ತಾಧಿಕಶತಾಧಿಕೈಃ ।
ಪಂಚಲಕ್ಷ ಮಿತಾನ್ಯೇವ ವಾಸುದೇವಸ್ಯ ಚಾರ್ಭಕ ॥

ವಿಜ್ಞಾನಮಯಕೋಶದಲ್ಲಿ ವಾಸುದೇವ ೪೩೭೪ ರೂಪದಿಂದ ಇದ್ದಾನೆಂದರ್ಥ

ತದುಕ್ತಂ ಗುರುವೃತ್ತೇ :–

"ಚತುಸ್ಸಪ್ತತಿಯುಕ್ತೈಶ್ಚ ಸಹಸ್ರಕೈಃ ।]
ಚತುರ್ಭಿಶ್ಚ ಸ್ವರೂಪಾಣಿ ನ ವಿಸ್ಮರ ಕದಾಚನೇತಿ" ॥ ॥೧೪॥

೪. "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನೆ :—

ಅನ್ನಮಯ, ಪ್ರಾಣಮವೆಂಬ ಎರಡು ಕೋಶಗಳ ಒಳಹೊರಗೂ ಸಹ ಸಂಕರ್ಷಣ ರೂಪನು, ಣ=೫, ಷ=೬, ರು=೨, ಕ=೧ ಮತ್ತು ಸಂ=೦೭, ಈ ರೀತಿ ೫೬೨೧೦೭ ರೂಪಗಳುಳ್ಳವನಾಗಿ ಮನೋಮಯ ನೆಂದು ಕರೆಯಲ್ಪಡುವನು. ದೋಷದೂರನಾದ ವಾಸುದೇವನು ವ=೪, ದೇ=೩ ಸು=೭ ಮತ್ತು ವಾ=೪—ಈ ರೀತಿ ೪೩೭೪ ರೂಪಗಳಿಂದ ಇದ್ದಾನೆ ॥೧೪॥

೫. ಶ್ರೀವಾದಿರಾಜಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :—

ಎರಡೇತಿ ॥ ಅಂತರ್ಬಹಿ ದ್ವಿಪಷ್ಟ್ಯೇತ ಲಕ್ಷ ಪಂಚಕ ಸಂಖ್ಯಯಾ ಸಪ್ತೋತ್ತರ ಶತಾತ್ಮೇಶೋ ಜಯಾಯಾಶ್ಚ ಮನೋಮಯಃ ॥ ಚತುಃ ಸಪ್ತತಿ ರೂಪಾತ್ಮಾ ತ್ರಿಶತಂ ತು ಚತುಷ್ಟಯಂ ॥ ಸಹಸ್ರಾಣಾಂ ವಾಸು ದೇವೋ ವಿಜ್ಞಾನಮಯ ಈರಿತಃ ॥ ಪುರುಷದೇವಾಂಗ ಸ್ವೇದಜನಿತೇತಿ ಪ್ರಕಾಶ ಸಂಹಿತಾಯಾಂ ॥೧೪ ॥೧೫॥

ಕನ್ನಡಾರ್ಥ:—

ಮನೋಮಯ ಶಬ್ದವಾಚ್ಯನಾದ ಜಯಾಪತಿ ಸಂಕರ್ಷಣನು ಮನೋಮಯನೆಂದೆನಿಸಿ, ಅನ್ನಮಯ ಮತ್ತು ಪ್ರಾಣಮಯ ಇವೆರಡು ಕೋಶಗಳ ಒಳಹೊರಗೆ ವ್ಯಾಪಿಸಿ, ೫೬೨೧೦೭ ರೂಪಗಳಿಂದಿದ್ದಾನೆ. ವಿಜ್ಞಾನ ಮಯನಾದ ವಾಸುದೇವನು ವಿಜ್ಞಾನಶಬ್ದವಾಚ್ಯನಾಗಿ, ೪೩೭೪ ರೂಪ ಗಳಿಂದ ಇರುತ್ತಾನೆ. ಈ ವಿಷಯಕ್ಕೆ ಪ್ರಕಾಶಸಂಹಿತೆಯ ವಚನಗಳು ಆಧಾರವಾಗಿವೆ. ॥೧೪॥ ॥೧೫॥

ಸರ್ವವ್ಯಾಖ್ಯಾನಸಾರಸಂಗ್ರಹ:—

ಜ್ಞಾನಿಶ್ರೇಷ್ಠರಾದ ಶ್ರೀಜಗನ್ನಾಥದಾಸವರ್ಯರು ಪ್ರಸಕ್ತ ಪದ್ಯದಲ್ಲಿ

ಮನೋಮಯಕೋಶ ಮತ್ತು ವಿಜ್ಞಾನಮಯಕೋಶ ವಿವರಗಳನ್ನು ತಿಳಿಸುತ್ತಾರೆ. ಮನೋಮಯಕೋಶದ ವಿವರಗಳು ಇಂತಿವೆ:—

(೧) ಮನಸ್ಸಿಗೆ ಆಧಾರಭೂತವಾದ ಕೋಶವು.

(೨) ತೇಜೋರೂಪವಾಗಿದ್ದು ತೇಜಃ ಪ್ರಾಚುರ್ಯದಿಂದ "ತೇಜಃ ಕೋಶ" ಎಂದು ಕರೆಯಿಸಲ್ಪಡುತ್ತದೆ.

[೩] ಈ ಕೋಶದಲ್ಲಿ ಎರಡು ಆವರಣ ರೂಪಗಳಾದ ಕೋಶಗಳಿವೆ.

[೪] ಪ್ರಥಮ ಆವರಣರೂಪವಾದ ಕೋಶದಲ್ಲಿ ಅಂತ:ಕರಣ, ಅಹಂಕಾರ, ಚಿತ್ತ, ಬುದ್ಧಿ, ಮನಸ್ಸು ಮತ್ತು ಅಹಂಕಾರ ತತ್ವಗಳು ವಿದ್ಯಮಾನವಾಗಿವೆ.

[೫] ಈ ಪ್ರಥಮಾಆವರಣದಲ್ಲಿ ಅಹಂಕಾರ ತತ್ವಾಭಿಮಾನಿಗಳಾದ ಗರುಡ, ಶೇಷ, ರುದ್ರ, ಇಂದ್ರ ಮತ್ತು ಕಾಮರು ನೀತಪತ್ನೀಯರಿಂದ ಯುಕ್ತರಾಗಿ ಕೋಶಗತ ವ್ಯಾಪಾರಾದಿಗಳನ್ನು ನಡೆಯಿಸುವರು.

[೬] ದ್ವಿತೀಯ ಆವರಣರೂಪವಾದ ಕೋಶದಲ್ಲಿ ವಾಕ್ಕು, ಶ್ರೋತ್ರ ಶಬ್ದ ಮತ್ತು ಆಕಾಶ ತತ್ವಗಳು ವಿದ್ಯಮಾನವಾಗಿವೆ.

[೭] ವಾಗಾಭಿಮಾನಿಯಾದ ಅಗ್ನಿದೇವರು [ಕರ್ಮೇಂದ್ರಿಯ], ಶ್ರೋತ್ರಾಭಿಮಾನಿಗಳಾದ ದಿಗ್ದೇವತೆಗಳು [ಜ್ಞಾನೇಂದ್ರಿಯಾಭಿಮಾನಿಗಳು], ಶಬ್ದ ತನ್ಮಾತ್ರಾಭಿಮಾನಿ ಪ್ರಾಣನಾಮಕವಾಯುವೂ ಮತ್ತು ಆಕಾಶತತ್ವದಭಿಮಾನಿ ಗಣಪತಿಯೂ [ಭೂತಪಂಚಕ] ವಿದ್ಯಮಾನರಾಗಿದ್ದು, ಆಯಾಯಾ ತತ್ವಕಾರ್ಯಗಳನ್ನು ಪ್ರಚುರಪಡಿಸುತ್ತಾರೆ.

[೮] ಮನೋಮಯಕೋಶದ ಅಭಿಮಾನಿ **ಸಂಕರ್ಷಣರೂಪೀ** ಶ್ರೀ ಪರಮಾತ್ಮನು.

[೯] ಶ್ರೀಸಂಕರ್ಷಣನು ಪೂರ್ವೋಕ್ತ ಹತ್ತು ತತ್ವಾಭಿಮಾನಿ ದೇವತೆಗಳಿಂದ ಸಂಸೇವ್ಯಮಾನನಾಗಿದ್ದು, ಆ ದೇವತೆಗಳ ದ್ವಾರಾ. ಕೋಶದ ಕಾರ್ಯ [ಗಾಳಿಯಸಂಚಾರ]ವನ್ನು ಬಿಂಬಕ್ರಿಯಾದ್ವಾರಾ ನಡೆಯಿಸುತ್ತಿರುವನು

[೧೦] ಸಂಕರ್ಷಣನು **ಮನೋಮಯನೆಂದೆನಿಸಿ** ಅಖಂಡರೂಪದಿಂದ ಈ ಕೋಶದಲ್ಲಿ ವ್ಯಾಪ್ತನಾಗಿದ್ದಾನೆ.

(೧೧) ೫೬೨೧೦೭ ಅಕ್ಷರಸಾಂಕೇತವಾದ ಖಂಡರೂಪಗಳಿಂದ ಶ್ರೀಸಂಕರ್ಷಣನು ಈ ಕೋಶಾಭಿಮಾನಿಯಾಗಿ ವಿದ್ಯಮಾನನಾಗಿದ್ದಾನೆ.

ಈ ೫೬೨೧೦೭ ರೂಪಗಳ ವಿವರಗಳನ್ನು ದಾಸರಾಯರು. **"ಐದುಸುಲಕ್ಷದರವತ್ತೆರಡು ಸಾವಿರ ದೇಳಧಿಕ ಶತರೂಪಗಳ ಧರಿಸಿ"** ಎಂದು ನಿರೂಪಿಸಿತ್ತಾರೆ.

| | | |
|---|---|---|
| ಅಂದರೆ, ಐದು ಲಕ್ಷ | = | ೫೦೦೦೦೦ |
| ಅರವತ್ತೆರಡುಸಾವಿರ | = | ೦೬೨೦೦೦ |
| ಶತರೂಪಗಳ | = | ೦೦೦೧೦೦ |
| ಏಳಧಿಕ | = | ೦೦೦೦೦೭ |
| **ಒಟ್ಟು ಅಕ್ಷರ ಸಾಂಕೇತ ರೂಪಗಳು** | = | ೫೬೨೧೦೭ ಆಗುವುವು. |

**ಅಕ್ಷರ ಸಾಂಕೇತ ಭಗವದ್ರೂಪಗಳ ಸಂಖ್ಯಾ ವಿವರ :**

| ಭಗವದ್ರೂಪ | ಕ್ರಮ ಸಂಖ್ಯೆ | ಅಕ್ಷರ | ವಿವರ | ಸ್ಥಾನ | ಸಂಖ್ಯೆ | ವಾಮಾಂಕ ಗತಿ |
|---|---|---|---|---|---|---|
| | ೧ | ಸ | ಅವರ್ಗೀಯ ವ್ಯಂಜನಾಕ್ಷರ | ೭ | | |
| | ೨ | ಂ | ಅನುಸ್ವಾರ | ೦ | | |
| ಸಂಕರುಷಣ | ೩ | ಕ | ಕ ವರ್ಗ ಪಂಚಕ ವರ್ಗೀಯ ವ್ಯಂಜನಾಕ್ಷರ | ೧ | | |
| | ೪ | ರು | ಅವರ್ಗೀಯ ವ್ಯಂಜನಾಕ್ಷರ | ೨ | ೭೦೧೨೬೫ | ೫೬೨೧೦೭ |
| | ೫ | ಷ | ಅವರ್ಗೀಯ ವ್ಯಂಜನಾಕ್ಷರ | ೬ | | |
| | ೬ | ಣ | ಟ ವರ್ಗ ಪಂಚಕ -ವರ್ಗೀಯ ವ್ಯಂಜನಾಕ್ಷರ ಅನುನಾಸಿಕ | ೫ | | |

ಇನ್ನು ವಿಜ್ಞಾನಮಯಕೋಶದಲ್ಲಿ ವಾಸುದೇವನಾಮಕ ಶ್ರೀ ಪರಮಾತ್ಮನು ಕೋಶಾಭಿಮಾನಿ ಎಂದೆನಿಸಿ ವಿರಾಜಮಾನನಾಗಿದ್ದಾನೆ. ಸರ್ವದೋಷ ವಿವರ್ಜಿತನಾದ ಅರವಿದೂರನು ಶ್ರೀವಾಸುದೇವನು ಮೋಕ್ಷಪ್ರದರೂಪಿಯು. ಇಂತಹ ಮೋಕ್ಷ ಪ್ರದನಾದ ವಾಸುದೇವನು ಅಕ್ಷರಸಾಂಕೇತವಾದ ೪೩೭೪ಳ ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದು ಕೋಶಗತ ವ್ಯಾಪಾರವಿಶೇಷಗಳನ್ನು ವಿಜ್ಞಾನಮಯ ಕೋಶಸ್ಥ ತತ್ತ್ವದೇವತೆಗಳ ದ್ವಾರಾ ನಡೆಯಿಸುವನು. ಈ ಅಕ್ಷರಸಾಂಕೇತವಾದ ಭಗವದ್ರೂಪಗಳ ಸಂಖ್ಯೆಯನ್ನು ದಾಸರಾಯರು "**ಈರೆರಡು ಸಾವಿರದ ಮುನ್ನೂರಾದ ಮೇಲ್ನಾಲ್ಕಧಿಕ**

ಎಪ್ಪತ್ತು"-ಎಂದು ನಿರೂಪಿಸುತ್ತಾರೆ. ಇದರ ವಿವರ ಇಂತಿದೆ :-

ಈರೆರಡುಸಾವಿರದ (ಈರೆರಡು=೨×೨=೪)=೪೪೦೦

ಮುನ್ನೂರಾದ =೦೩೦೦

ಮೇಲೆ ನಾಲ್ಕು ಅಧಿಕ ಎಪ್ಪತ್ತು (೪+೭೦) =೦೦೭೪

---

ಒಟ್ಟು ಅಕ್ಷರಸಾಂಕೇತರೂಪಗಳು =೪೩೭೪ ಆಯಿತು.

| ಭಗವದ್ರೂಪ | ಕ್ರಮ ಸಂಖ್ಯೆ | ಅಕ್ಷರ | ವಿವರ | | ಸ್ಥಾನ ಸಂಖ್ಯೆ | ವಾಮಾಂಕ ಗತಿ |
|---|---|---|---|---|---|---|
| | ೧ | ವಾ | ಅವರ್ಗೀಯ ವ್ಯಂಜನಾಕ್ಷರ | ೪ | | |
| | ೨ | ಸು | ಅವರ್ಗೀಯ ವ್ಯಂಜನಾಕ್ಷರ | ೭ | ೪೭೩೪ | |
| ವಾಸುದೇವ | ೩ | ದೇ | ತ ವರ್ಗ ಪಂಚಕ-ವರ್ಗೀಯ ವ್ಯಂಜನಾಕ್ಷರ | ೩ | | ೪೩೭೪ |
| | ೪ | ವ | ಅವರ್ಗೀಯ ವ್ಯಂಜನಾಕ್ಷರ | ೪ | | |

ಇಂತು, (೧) ಮನೋಮಯ ಕೋಶದಲ್ಲಿ ಸಂಕರ್ಷಣರೂಪೀ ಪರಮಾತ್ಮನ ೫೬೨೧೦೭ ಅಕ್ಷರಸಾಂಕೇತವಾದ ಭಗವದ್ರೂಪಗಳನ್ನು ಮತ್ತು ವಿಜ್ಞಾನಮಯಕೋಶದಲ್ಲಿ ವಾಸುದೇವರೂಪೀ ಪರಮಾತ್ಮನ ೪೩೭೪ ಅಕ್ಷರ ಸಾಂಕೇತವಾದ ಖಂಡರೂಪಗಳನ್ನು ಚಿಂತಿಸಿ, ಆಯಾಯಾ ಕೋಶಸಂಬಂಧವಾದ ಕಾರ್ಯಗಳನ್ನು ಶ್ರೀಪರಮಾತ್ಮನು ಆಯಾಯಾ ಕೋಶಾಭಿಮಾನಿ

ಯಾಗಿದ್ದು, ತತ್ವದೇವತೆಗಳ ದ್ವಾರಾ ನಡೆಯಿಸುತ್ತಿರುವನು ಎಂದು ಅನ್ವುಸಂಧಾನಪೂರ್ವಕ ತಿಳಿಯುವುದೇ ಪರಮತಾರಕವೆಂದು ಈ ಪದ್ಯದ ತಾತ್ಪರ್ಯ ॥ ೧೬ ॥

## ಪದ್ಯ (೧೭)

ಮೂಲ :—

ರೂಪದಿಂ ವಿಜ್ಞಾನಮಯನೆಂ ।
ಬೀ ಪೆಸರಿನಿಂ ವಾಸುದೇವನು ।
ವ್ಯಾಪಿಸಿಹ ಮಹದಾದಿತತ್ವವ ತತ್ಪತಿಗಳೊಳಗೆ ॥
ಈ ಪುರುಷನಾಮಕನ ಶುಭಸ್ವೇ ।
ದಾಪಳೆನಿಸಿ ರಮಾಂಬ ತಾ ಬ್ರ ।
ಹ್ಮಾಪರೋಕ್ಷಿಗಳಾದವರ ಲಿಂಗಾಂಗ ಕೆಡಿಸುವಳು ॥ ॥ ೧೭ ॥

ವಾಸುದೇವನಾಮಕ ಶ್ರೀ ಪರಮಾತ್ಮನು ೪೩೦೪ ಅಕ್ಷರಸಾಂಕೇತ ಖಂಡಾಖ್ಯ ಭಗವದ್ರೂಪಗಳಿಂದ ವಿಜ್ಞಾನಮಯನೆಂದೆನಿಸಿ, ವಿಜ್ಞಾನಮಯ ಕೋಶದಲ್ಲಿ, ಮಹತ್ತತ್ವಾಭಿಮಾನಿಗಳಾದ ಬ್ರಹ್ಮ ಮತ್ತು ವಾಯುದೇವರಿಂದ ಸಂಸೇವ್ಯಮಾನನಾಗಿದ್ದಾನೆ. ಪುರುಷನಾಮಕನಾದ ಶ್ರೀವಾಸುದೇವರೂಪೀ ಪರಮಾತ್ಮನ ಅಪ್ರಾಕೃತವಾದ ಬೆವರಿನರೂಪದಲ್ಲಿರುವ (ಸ್ವೇದರೂಪ) ವಿರಜಾನದಿಗೆ ಅಭಿಮಾನಿಗಳಾಗಿ ಶ್ರೀ ರಮಾದೇವಿಯರು, ವಿರಜಾನದಿಯ ಸ್ನಾನದ್ವಾರಾ ಬ್ರಹ್ಮಾಪರೋಕ್ಷಿಗಳಾದ ಮುಕ್ತಿಯೋಗ್ಯ ಜೀವರ ಲಿಂಗದೇಹ ಭಂಗ ಮಾಡುವಳು ಎಂಬ ತತ್ವಾರ್ಥವನ್ನು ಶ್ರೀದಾಸರಾಯರು ಸಂಧಿಗತ ಪ್ರಸಕ್ತ ೧೭ನೆಯ ಪದ್ಯದಿಂದ ತಿಳಿಸುತ್ತಾರೆ ॥ ೧೭ ॥

**ಪ್ರತಿಪದಾರ್ಥ** :–

**ರೂಪದಿಂ**=ಪೂರ್ವೋಕ್ತ ೪೩೭೪೪ ಭಗವದ್ರೂಪಗಳಿಂದ **ವಿಜ್ಞಾನ ಮಯನೆಂಬ**=ವಿಜ್ಞಾನಮಯಕೋಶದಲ್ಲಿ ತದಾಕಾರ ತನ್ನಾಮ ಅಖಂಡ ರೂಪನಾಗಿ ವಿಜ್ಞಾನಮಯ ಎಂತೆಂಬ **ಈ ಪೆಸರಿಂ**=ಈ ಹಸರಿನಿಂದ (ಕೋಶನಾಮಕನಾಗಿ) **ವಾಸುದೇವನು**=ವಾಸುದೇವನಾಮಕ ಶ್ರೀಪರ ಮಾತ್ಮನು **ಮಹತತ್ವಾದಿ**=ಮಹತ್ತತ್ವವೇ ಮುಂತಾದ **ತತ್ಪತಿಗಳೊಳಗೆ**= ತತ್ವಾಭಿಮಾನಿ ದೇವತೆಗಳಾದ ಚತುರ್ಮುಖ ಬ್ರಹ್ಮದೇವರು ಮತ್ತು ಶ್ರೀ ವಾಯುದೇವರುಗಳಲ್ಲಿಯೂ **ವ್ಯಾಪಿಸಿಹ**=ವ್ಯಾಪಿಸಿಕೊಂಡಿರುವರು. ಇನ್ನು ಮುಂದೆ ಐದನೆಯದಾದ ಆನಂದಮಯಕೋಶದ ವಿಚಾರ ಹೇಳುತ್ತಾರೆ. **ಆ ಪುರುಷನಾಮಕನ**=ಆಪುರುಷವಾಚ್ಯನಾದ ವಾಸುದೇವರೂಪೀ ಶ್ರೀ ಪರಮಾತ್ಮನ **ಶುಭ**=ಮಂಗಳಕರವಾದ **ಸ್ವೇದ**=ಬೆವರು ಎನಿಸತಕ್ಕ **ಅಪಳು**=ಉದಕರೂಪಳು ಎಂಬುದಾಗಿ **ಎನಿಸಿ**=ಕರೆಯಿಸಿಕೊಳ್ಳುತ್ತಾ, ಅಂದರೆ, ವಾಸುದೇವನ ಬೆವರಿನಿಂದ ಉತ್ಪನ್ನವಾದ ವಿರಜಾನದಿ ಎಂದೆನಿಸಿ **ರಮಾಂಬ**=ರಮಾನಾಮಕಳಾದ ಜಗನ್ಮಾತೆಯು **ತಾ**=ತಾನು (ಶ್ರೀಲಕ್ಷ್ಮೀ ದೇವಿಯರು) **ಬ್ರಹ್ಮಾಪರೋಕ್ಷಿಗಳಾದವರ**=ಸ್ವರೂಪ ಹೃದಯಗತ ಬಿಂಬನಾದ ಪೂರ್ಣಗುಣನಾದ ಶ್ರೀ ಪರಮಾತ್ಮನನ್ನು ಪ್ರತ್ಯಕ್ಷ ಕಂಡವರ, ಅಂದರೆ ಬಿಂಬಾಪರೋಕ್ಷಿಗಳಾದ ಜೀವನ್ಮುಕ್ತರ **ಲಿಂಗಂಗ**=ಅಂತಹ ಸಾಧನಪೂರ್ತಿಯಾದವರ ಲಿಂಗದೇಹವನ್ನು (ಅನಾದಿಯಿಂದ ಸಂಸಾರಕ್ಕೆ ಕಾರಣವಾಗಿ ಬಂಧಕರೂಪದಿಂದ ಇರುವ) **ಕೆಡಿಸುವಳು**=ಪ್ರಳಯಕಾಲದಲ್ಲಿ ಭಂಗಪಡಿಸುವಳು. ||೧೫||

## ವ್ಯಾಖ್ಯಾನಗಳು

[೧] **ಸಂಕರ್ಷಣ ಒಡೆಯರ ವ್ಯಾಖ್ಯಾನ** :

ಪೂರ್ವೋಕ್ತ ೪೩೭೪೪ ರೂಪಗಳಿಂದ, ವಾಯುಸಾಂಕೇತವಾದ ವಿಜ್ಞಾನ ಮಯ ಕೋಶದಲ್ಲಿ ತದಾಕಾರ ಅಖಂಡರೂಪನಾಗಿ ವಿಜ್ಞಾನಮಯ ಅಂತ

ಈ ಕೋಶನಾಮದಿಂದ ವಾಸುದೇವರೂಪೀ ಶ್ರೀ ಪರಮಾತ್ಮನು ವ್ಯಾಪ್ತ ನಾಗಿದ್ದಾನೆ. ವಿಜ್ಞಾನಮಯ ಕೋಶದ ವಿಚಾರ ಮುಗಿಯಿತು. ಇನ್ನು ಆನಂದಮಯ ಕೋಶದ ವಿಚಾರ ಹೇಳಥಾರೆ. ಆನಂದಕ್ಕೆ ಆಧಾರಭೂತ ವಾದದ್ದು ಆನಂದಮಯಕೋಶವು. ಇದರಲ್ಲಿ ನಾರಾಯಣದೇವರು ಇದ್ದಾನೆ. ಈ ಆನಂದಮಯಕೋಶದಲ್ಲಿ ತತ್ತ್ವದಾವದು ಎಂದರೆ. ಮಹತ್ತತ್ವ ಆರಂಭ ಮಾಡಿ, ಆದಿಶಬ್ದದಿಂದ ಮಹದಾದಿತತ್ತ್ವ ಪೃಥ್ವೀ ತತ್ತ್ವಪರಿಯಂತ ಯಾವತ್ತೂ ತತ್ತ್ವದ ಆಕ್ರಮಿಸಿದ ಅವ್ಯಕ್ತತತ್ತ್ವವು ಇರೋದಾಗಿ ಇದೆ. ತತ್ವಾಭಿಮಾನಿದಾರೆಂದರೆ:– "ವಾಸುದೇವ"ನಿಗೆ "ಪುರುಷ"- ಎಂತ ನಾಮ ಉಂಟು. ಈ ವಾಸುದೇವನ (ಪುರುಷನಾಮಕನ) ಮಂಗಳಕರಗಳಾದ ನಾರಾಯಣ ದೇವರ ಪತ್ನಿಯಾದ ಲಕ್ಷ್ಮೀ ದೇವರು, ಅಂಡದ ಹೊರಗೆ ಸೂಕ್ಷ್ಮಸೃಷ್ಟಿಕಾಲದಲ್ಲಿ ಪುರುಷನಾಮಕ ಬ್ರಹ್ಮನ ಸೃಷ್ಟಿಗೋಸ್ಕರ ಬ್ರಹ್ಮ ದೇವರ ಮಹತ್ತತ್ವದ ವೀರ್ಯತ್ವೇನ ವಾಸುದೇವನು ಧರಿಸಿ, ತನ್ನ ಪತ್ನಿ ಯಾದ ಮಾಯಾದೇವೇರಲ್ಲಿ ಅಂಥಾ ವೀರ್ಯವನ್ನು ಸೇಚನಮಾಡೋ ಕಾಲ ದಲ್ಲಿ ಆ ದೇವರ ಅಂಗದಿಂದ ಬೆವರು ಎನಿಸತಕ್ಕ ಉದಕರೂಪ ಎಂತ ಎನಿಸಿ (ಸ್ವೇದಾಪಳೆನಿಸಿ), ತಾನೇ ಸಾಕ್ಷಾತ್ಕಾರದಿಂದ ಬೆವರೋದಕದಿಂದ ಅಭಿವ್ಯಕ್ತಿ ವಾಗಿ, ಜಗತ್ತಿಗೆ ತಾಯಿಯಾದ ಲಕ್ಷ್ಮಿದೇವೇರು (ರಮಾಂಬ) ತಾನು ಸ್ವರೂಪ ಹೃದಯಗತ ಬಿಂಬನಾದ ಗುಣಪೂರ್ಣನಾದ ಶ್ರೀಪರಮಾತ್ಮನ ಪ್ರತ್ಯಕ್ಷದಿಂದ ಕಂಡವರಾದ ಜೀವನ್ಮುಕ್ತರಾದವರ(ಬ್ರಹ್ಮಾಪರೋಕ್ಷಿಗಳಾದ), ಅನಾದಿಯಿಂದ ಸಂಸಾರಕ್ಕೆ ಕಾರಣವಾಗಿ ಬಂಧಕರೂಪದಿಂದ ಇರತಕ್ಕ ಲಿಂಗದೇಹವನ್ನು (ಲಿಂಗಾಂಗ) ವ್ಯಕ್ತ್ಯಳಾಗಿ ಸ್ವೇದೋದಕದಿಂದ ನಂತರ ಆ ಉದಕದಿಂದ ವಿರಜಾನದಿ ಎಂತ ಕರೆಸಿದವಳಾಗಿ ತನ್ನ ಪತಿಯಾದ ನಾರಾಯಣದೇವರ ಆಜ್ಞಾದಿಂದೆ ಸ್ನಾನಮಾಡಿದವರ ಲಿಂಗದೇಹವನ್ನು ಕೆಡಿಸಿಸೋವಳಾಗಥಾಳೆ. ಆ ಲಿಂಗದೇಹಗಳು. ಜೀವರಿಂದ ದೂರವಾಗಿ ವಿರಜಾನದಿಯಲ್ಲಿ ತೇಲತಾ ಇರತದೆ. ಪ್ರಳಯಕಾಲದಲ್ಲಿ ಪುನಃ ಆ ವಿರಜಾನದಿ ರಮಾದೇವೇರಲ್ಲಿ ಸೇರೋಕಾಲಕ್ಕೆ ಆಕಿ ಉದರ ಪ್ರವಿಷ್ಟವಾಗೋದಾಗತದೆ. ಲಿಂಗಭಂಗವೇ ಹೊರತು ಲಿಂಗದೇಹಕ್ಕೆ ನಾಶವಿಲ್ಲ. ಇಂಥಾವಳಾದ ಪೂರ್ವೋಕ್ತ ಅನ್ನ ಮಾಯಾದಿ ವಿಜ್ಞಾನಮಯಾಂತ ಕೋಶಗಳಗತ ಪತಿಗಳಾದ ಕ್ಷರರಾದ

ಬ್ರಹ್ಮಾದಿ ದೇವತೆಗಳೊಳಗೆ (ತತ್ವಪತಿಗಳಿಗೆ) ಸೇರದ ಅಕ್ಷರಳಾದ ನಾರಾಯಣ ದೇವರ ಪತ್ನಿ ತತ್ವಾಭಿಮಾನಿ ರಮಾದೇವೇರಿಂದ ಆನಂದಮಯಕೋಶಗತ ಪರಮಾತ್ಮ ಪೂಜಿತನಾಗಿ ಇದ್ದಾನೆ.

ಲಕ್ಷ್ಮ್ಯಾತ್ಮಕ ವಿರಜಾನದಿ ಶ್ರೀಪರಮಾತ್ಮನ ಬೆವರಿನಿಂದ ಜನಿತಳು ಎಂಬುದಕ್ಕೆ ಪ್ರಮಾಣ :-

**"ಪ್ರಧಾನ ಪರಮವ್ಯೋಮ್ನೋರಂತರ ವಿರಜಾನದೀ ದೇವಾಂಗ ಸ್ವೇದಜನಿತೇಶಿ" || ಪ್ರಕಾಶಸಂಹಿತಾಯಾಂ.** ಇನ್ನೂ ಅವಶಿಷ್ಟ ವಿಚಾರ ಮುಂದಿನ ಪದ್ಯದಲ್ಲಿ ಹೇಳಿದ್ದಾರೆ. ಆದಕಾರದ ತಾತ್ಪರ್ಯ ಇಲ್ಲಿ ಬರೆಯಲಿಲ್ಲ. ||೧೫||

## (೨) "ಭಾವಪ್ರಕಾಶಕೆ"-ವ್ಯಾಖ್ಯಾನ :-

"ವಾಸುದೇವ"- ಎಂಬ ಅಕ್ಷರಸಂಖ್ಯೆ ಮಾಡಿದರೆ, ವಾ = ೪, ಸು = ೭, ದೇ = ೩ ಮತ್ತು ವ = ೪, ಇವುಗಳನ್ನು ಬಲಗಡೆಯಿಂದ ಎಣಿಸಿದರೆ ೪೩೭೪ ಆಗುವುವು. ಇಷ್ಟು ರೂಪಗಳಿಂದ ಶ್ರೀವಾಸುದೇವನಾಮಕನಾದ ಪರಮಾತ್ಮನು "ವಿಜ್ಞಾನಮಯ"ನೆಂಬ ನಾಮದಿಂದ ಮಹತ್ತತ್ವ, ಅಹಂಕಾರ ತ್ತತ್ವ ಮೊದಲಾದ ತತ್ತ್ವಗಳಲ್ಲಿಯೂ, ತತ್ತ್ವಾಭಿಮಾನಿ ದೇವತೆಗಳಲ್ಲಿಯೂ ವ್ಯಾಪಿಸಿಕೊಂಡಿರುವನು. ಇಂತಹ ಪುರುಷನಾಮಕನಾದ ವಾಸುದೇವರೂಪೀ ಶ್ರೀಪರಮಾತ್ಮನ ಪತ್ನಿಯಾದ ಜಗಜ್ಜನನಿಯಾದ ರಮಾದೇವಿಯು ಪರಮಾತ್ಮನ ಬೆವರಿನಿಂದ ವಿರಜಾನದಿ ಎಂಬ ಹೆಸರಿನಿಂದ ಜನಿಸಿರುವಳು. ಈಕೆಯು ಮುಕ್ತಿಯೋಗ್ಯರಾದ ಸಕಲಜೀವರುಗಳು, ಬ್ರಹ್ಮಾಪರೋಕ್ಷವನ್ನು ಪಡೆದು, ಸಾಧನೆ ಪೂರ್ತಿಯಾದಮೇಲೆ ಬ್ರಹ್ಮಲೋಕವನ್ನು ಹೊಂದಿ, ಕೆಲವು ಕಾಲ ಅಲ್ಲಿದ್ದು, ಮುಕ್ತಿಕಾಲ ಬಂದಾಗ, ಬ್ರಹ್ಮದೇವರಿಂದ ಕೂಡಿ, ಮೇಲೆ ಹೇಳಿದ ವಿರಜಾನಾಮಕಳಾದ ತನ್ನಲ್ಲಿ ಸ್ನಾನಮಾಡಲು, ಆಗ ಅವರುಗಳ ಲಿಂಗಶರೀರ ವನ್ನು ಭಂಗಪಡಿಸುವಳು ||೧೫||

### (೩) "ಭಾವದರ್ಪಣ ಟೀಕಾ"– ವ್ಯಾಖ್ಯಾನ :-

ವೈಕುಂಠಪರಿಖಾಭೂತಳಾದ ಲಕ್ಷ್ಮ್ಯಾತ್ಮಕ ವಿರಜಾನದೀ ಶ್ರೀಶನ ಬೆವರಿನಿಂದ ಜನಿತಳು ಎಂಬುದಕ್ಕೆ ಪ್ರಮಾಣ :–

**"ಪ್ರಧಾನಂ ಪರಮಂ ವ್ಯೋಮ್ನಾನಂತರಾ ವಿರಜಾನದೀ ।**
**ದೇವಾಂಗ ಸ್ವೇದಜನಿತೇತಿ ॥"**
**–ಪ್ರಕಾಶಸಂಹಿತೋಕ್ತೇಃ ॥**

ಅಪರೋಕ್ಷಿಗಳ ಲಿಂಗಭಂಗ ಮಾಡುತ್ತಾಳೆಂಬುದಕ್ಕೆ ಪ್ರಮಾಣ :-
**"ತಜ್ಜಲೇಷು ತತಃ ಸ್ನಾನಂ ಲಿಂಗಭಂಗಃ ಪ್ರಜಾಯತೇ ॥"**
**-ಇತಿ ಚ** ॥೧೫॥

### (೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :-

ಮೇಲೆ ಹೇಳಿದ ೪೩೦೪ ರೂಪಗಳಿಂದ ಶ್ರೀವಾಸುದೇವನು ವಿಜ್ಞಾನ ಮಯನೆಂದು ಕರೆಸಿಕೊಳ್ಳುವನು. ವಿಜ್ಞಾನಮಯನಾದ ವಾಸುದೇವನು ಮಹದಾದಿ ತತ್ತ್ವಗಳಲ್ಲೂ, ತದಭಿಮಾದೇವತೆಗಳಲ್ಲೂ ವ್ಯಾಪಿಸಿರುತ್ತಾನೆ. ವಾಸುದೇವನಾಮಕ ಪುರುಷರೂಪದ ಶುಭಸ್ವೇದಾಪಗಳೆನಿಸಿ, ಎಂದರೆ ಜ್ಞಾನಾನಂದರೂಪವಾದ ಬೆವರಿನ ವಿರಜಾನದಿಗೆ ಅಭಿಮಾನಿಯಾದ ರಮಾ ದೇವಿಯು, ಲೋಕಜನನಿಯು, ಬ್ರಹ್ಮಸಾಕ್ಷಾತ್ಕಾರವೆಂಬ ಅಪರೋಕ್ಷಹೊಂದಿ ದವರ ಲಿಂಗಶರೀರವನ್ನು ಆ ವಿರಜಾನದಿ ಸ್ನಾನದಿಂದ ಪರಿಹರಿಸುವಳು ॥೧೫॥

### ಸರ್ವವ್ಯಾಖ್ಯಾನಸಾರಸಂಗ್ರಹ :–

ಪ್ರಸಕ್ತ ಪದ್ಯದಿಂದ ಜ್ಞಾನಿಶ್ರೇಷ್ಠರಾದ ದಾಸರಾಯರು ವಿಜ್ಞಾನ ಮಯಕೋಶ ಮತ್ತು ಆನಂದಮಯಕೋಶಗಳ ವಿವರಣೆಯನ್ನು ತಿಳಿಸುತ್ತಾರೆ.

ವಿಜ್ಞಾನಮಯಕೋಶದ ವಿವರಗಳು :-

(೧) ವಾಯುತತ್ತ್ವಪ್ರಚುರವಾದ ಕೋಶ.

(೨) ಮಹತ್ತತ್ತ್ವಾಭಿಮಾನಿಗಳಾದ ಬ್ರಹ್ಮದೇವರು ಮತ್ತು ವಾಯು ದೇವರು ಅಭಿಮಾನಿಗಳಾಗಿ ವಿದ್ಯಮಾನರಾಗಿದ್ದಾರೆ.

(೩) ಕೋಶಾಭಿಮಾನಿಯು ವಾಸುದೇವನಾಮಕ ಶ್ರೀಪರಮಾತ್ಮನು.

(೪) ಶ್ರೀವಾಸುದೇವನು "ವಿಜ್ಞಾನಮಯ"- ಎಂಬ ಹೆಸರಿನಿಂದ ತದಾಕಾರ ಅಖಂಡರೂಪದಿಂದ ಕೋಶನಾಮಕನಾಗಿ ವ್ಯಾಪ್ತ ನಾಗಿದ್ದಾನೆ.

(೫) ಅಕ್ಷರಸಾಂಕೇತವಾದ ೪೩೭೪ ಖಂಡರೂಪಗಳಿಂದ ವಾಸು ದೇವನು ಕೋಶಗತ ವ್ಯಾಪ್ಯಾರಗಳನ್ನು ಮಹದಾದಿ ತತ್ತ್ವ ಗಳು ಮತ್ತು ತದಭಿಮಾನಿ ದೇವತೆಗಳ ದ್ವಾರಾ ವ್ಯಾಪ್ತ ನಾಗಿದ್ದು ನಡೆಯಿಸುತ್ತಾನೆ.

ವಾಸುದೇವನಾಮಕನಾದ ಶ್ರೀಪರಮಾತ್ಮನು "ಪುರುಷ" ಎಂಬ ನಾಮ ದಿಂದ ವಾಚ್ಯನಾಗಿದ್ದಾನೆ. ಇಂತಹ ಪುರುಷನಾಮಕನಾದ ವಾಸುದೇವನು ತನ್ನ ಪತ್ನಿಯಾದ ಮಾಯಾನಾಮಕ ಶ್ರೀ ಲಕ್ಷ್ಮೀದೇವಿಯರಲ್ಲಿ ಅಂಡದ ಹೊರಗೆ ಸೂಕ್ಷ್ಮಸೃಷ್ಟಿಕಾಲದಲ್ಲಿ ವೀರ್ಯವನ್ನು ಸೇಚನೆಮಾಡಿದನು. ಆಗ ಪುರುಷನಾಮಕ ಬ್ರಹ್ಮದೇವರು ಸೃಷ್ಟರಾದರು. ಪುರುಷನಾಮಕ ವಿರಂಚಿಯು ಮಾಯಾಪತಿ ಪುರುಷನಾಮಕ ವಾಸುದೇವರೂಪೀ ಶ್ರೀಪರಮಾತ್ಮನ ಜ್ಯೇಷ್ಠ ಪುತ್ರನು. ಆ ಕಾಲಕ್ಕೆ ವಾಸುದೇವನ ಅಂಗದಿಂದ ಬೆವರು ಉತ್ಪತ್ತಿಯಾ ಯಿತು. ಆ ಬೆವರೇ ಉದಕರೂಪವಾಗಿ "ವಿರಜಾನದಿ" ಎಂದು ಪ್ರಸಿದ್ಧ ವಾಗಿದೆ, ಇಂತಹ ಜ್ಞಾನಾಂದರೂಪವಾದ ಲಕ್ಷ್ಮ್ಯಾತ್ಮಕ ವಿರಜಾ ನದಿಯು ಶ್ರೀಶನ ಬೆವರಿನಿಂದ ಜನಿತಳು. ರಮಾಭಿಮನ್ಯವಾದ ವಿರಜಾ ನದಿಯೇ ಪುರುಷನಾಮಕ ವಾಸುದೇವನ "ಸ್ವೇದಾಪ"ಳೆನಿಸಿರುವಳು.

ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಯು (ರಮಾಂಬ) ವಿರಜಾನದಿಯಲ್ಲಿ ಸ್ನಾನಮಾಡಿದಂತಹ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದ ಮುಕ್ತಿಯೋಗ್ಯ ಜೀವರ ಲಿಂಗದೇಹವನ್ನು ಭಂಗಮಾಡುತ್ತಾಳೆ. ಸ್ವರೂಪಹೃದಯಗತ ಗುಣ ಪೂರ್ಣನಾದ ಬಿಂಬವನ್ನು ಪ್ರತ್ಯಕ್ಷದಿಂದ ಕಂಡವರಾದ ಮುಕ್ತಿ ಯೋಗ್ಯ ಚೇತನರು ಜೀವನ್ಮುಕ್ತರು. ಇವರಿಗೇ ಬ್ರಹ್ಮಾಪರೋಕ್ಷಿಗಳೆಂದು ಹೆಸರು. ಇಂತಹ ಜೀವನ್ಮುಕ್ತರಾದ ಬ್ರಹ್ಮಾಪರೋಕ್ಷಿಗಳಿಗೆ ಸ್ವರೂಪದೇಹಕ್ಕೆ ಆವರಣರೂಪವಾಗಿ ಅನಾದಿ ಲಿಂಗದೇಹವಿದೆ. ಈ ಲಿಂಗದೇಹವು ಅನಾದಿಯಿಂದ ಅವರ ಸಂಸಾರಕ್ಕೆ ಕಾರಣವಾಗಿ ಬಂಧಕರೂಪದಿಂದ ಇದೆ. ಮುಕ್ತಿಯೋಗ್ಯರಾದ ಸಮಸ್ತ ಚೇತನರು ಬ್ರಹ್ಮಾಪರೋಕ್ಷವನ್ನು ಪಡೆದು, ಸಾಧನಪೂರ್ತಿಯಾದ ನಂತರ ಬ್ರಹ್ಮಲೋಕವನ್ನು ಸೇರಿ. ಅಲ್ಲಿ ಕೆಲವು ಕಾಲ ಇರುವರು. ಮಹಾ ಪ್ರಳಯಕಾಲದಲ್ಲಿ ಮುಕ್ತಿ ಕಾಲಬಂದಾಗ, ಬ್ರಹ್ಮದೇವರಿಂದ ಸಹಿತರಾಗಿ ರಮಾಭಿಮನ್ಯವಾದ ಆ ಲಕ್ಷ್ಮ್ಯಾತ್ಮಕ ವಿರಜಾನದಿಯಲ್ಲಿ ಸ್ನಾನಮಾಡುವರು. ಆಗ ಅವರಿಗೆ ಬಂಧಕರೂಪವಾಗಿದ್ದ ಲಿಂಗದೇಹವು ನಾಶವಾಗುವುದು. ಇಂತು ಮುಕ್ತಿಯೋಗ್ಯರಿಗೆ ವಿರಜಾನದಿಯಲ್ಲಿ (ಪುರುಷನಾಮಕ ಶ್ರೀ ವಾಸುದೇವನ ಅತ್ಯಂತ ಮಂಗಳಕರವಾದ ಸ್ವೇದಾಪಳೆನಿಸಿದ ವಿರಜಾನಾಮಕ ಲಕ್ಷ್ಮೀದೇವಿಯರ ಪರಮಾನುಗ್ರಹ ವಿಶೇಷದಿಂದ) ಸ್ನಾನಮಾಡುವುದರಿಂದ ಲಿಂಗದೇಹ ಭಂಗವಾಗಿ. ಬಂಧವಿಮೋಚನೆಯಾಗುವುದು ॥೧೫॥

## ಪದ್ಯ (೧೬)

ಮೂಲ :

ಐದುಸಾವಿರ ನೂರ ಇಪ್ಪ ।
ತ್ತೈದು ನಾರಾಯಣನ ರೂಪವ ।
ತಾ ಧರಿಸಿಕೊಂಡನುದಿನದಿ ಆನಂದಮಯನೆನಿಪ ॥
ಐದು ಲಕ್ಷದ ಮೇಲೆ ಎಂಭ ।
ತ್ತೈದು ಸಾವಿರ ನಾಲ್ಕು ಶತಗಳ ।
ಐದು ಕೋಶಾತ್ಮಕ ವಿರಿಂಚಾಂಡದೊಳು ತುಂಬಿಹನು ॥ ॥೧೬॥

**ಅವತರಿಣಿಕೆ :–**

ಪ್ರಸಕ್ತ ಪದ್ಯದಿಂದ ಐದನೆಯದಾದ ಆನಂದಮಯಕೋಶದ ವಿಚಾರ ವನ್ನು ವಿವರಿಸುತ್ತಾರೆ. ಈ ಕೋಶಾಭಿಮಾನಿಯಾದ ಶ್ರೀಮನ್ನಾರಾಯಣನು "ಆನಂದಮಯ"ನೆಂದೆನಿಸಿ, ಆ ಕೋಶನಾಮಕನಾಗಿ, ೫೧೨೫ ಅಕ್ಷರ ಸಾಂಕೇತ ಖಂಡ ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ. ಪೂರ್ವೋಕ್ತ ಪಂಚಕೋಶಗಳಗತನಾಗಿ ಶ್ರೀಪರಮಾತ್ಮನು ಅನಿರುದ್ಧಾದಿ ಪಂಚರೂಪಗಳಿಂದ ಒಟ್ಟು ೫೮೫೪೦೦ ಅಕ್ಷರಸಾಂಕೇತ ರೂಪಗಳಿಂದ ವಿದ್ಯಮಾನನಾಗಿದ್ದು ಆಯಾಯಾ ಕೋಶಸಂಬಂಧವಾದ ಕಾರ್ಯವಿಶೇಷಗಳನ್ನು ಆಯಾಯಾ ಕೋಶಗತ ತತ್ವಾಭಿಮಾನಿ ದೇವತೆಗಳದ್ವಾರಾ ನಡೆಯಿಸುತ್ತಿರುವನು ಎಂದು ಪ್ರಸಕ್ತ ಸಂಧಿಗತ ೧೬ನೆಯ "ಐದುಸಾವಿರ"— ಎಂಬ ಈ ಪದ್ಯದಿಂದ ತಿಳಿಸುತ್ತಾರೆ. ॥೧೬॥

**ಪ್ರತಿಪದಾರ್ಥ :-**

**ನಾರಾಯಣನು**= ನಾರಾಯಣರೂಪೀ ಶ್ರೀಪರಮಾತ್ಮನ **ಐದು ಸಾವಿರ ನೂರ ಇಪ್ಪತ್ತೈದು**—೫೧೨೫ ಸಂಖ್ಯಾಕವಾದ ಅಂದರೆ ನಾ=೫, ರಾ=೨, ಯ=೧ ಮತ್ತು ಣ=೫, ಅಂದರೆ ಬಲದಿಂದ ಎಡಕ್ಕೆ ೫೧೨೫. **ರೂಪವ**=ಅಕ್ಷರ ಸಾಂಕೇತವಾದ ಭಗವದ್ರೂಪಗಳನ್ನು **ತಾ ಧರಿಸಿಕೊಂಡು** =ಶ್ರೀಪರಮಾತ್ಮನೇ ಧಾರಣಮಾಡಿದವನಾಗಿ **ಅನುದಿನದಿ**=ಪ್ರತಿದಿವಸದಲ್ಲಿಯೂ **ಆನಂದಮಯನೆನಿಪ**=ಆನಂದಮಯಕೋಶದಲ್ಲಿ ಆನಂದಮಯನೆಂಬ ಹೆಸರಿನಿಂದ, ಆ ಕೋಶನಾಮಕನಾಗಿದ್ದಾನೆ. **ಐದುಕೋಶಾತ್ಮಕ**= ಪೂರ್ವೋಕ್ತ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಐದು ಕೋಶಸ್ವರೂಪನಾಗಿ **ಐದು ಲಕ್ಷದ ಮೇಲೆ ಎಂಭತ್ತೈದು ಸಾವಿರ ನಾಲ್ಕು ಶತಗಳ**= ೫,೮೫೪೦೦ (ಐದು ಲಕ್ಷ+ ಎಂಭತ್ತೈದು ಸಾವಿರ+ನಾಲ್ಕುನೂರು) ಒಟ್ಟು ಇಷ್ಟು ಸಂಖ್ಯಾಕವಾದ ಭಗವದ್ರೂಪಗಳಿಂದ **ವಿರಿಂಚಾಂಡದೊಳು**= ಬ್ರಹ್ಮಾಂಡದಲ್ಲಿ (ವಿರಿಂಚಿ-

ಬ್ರಹ್ಮ, ಅಂಡ- ಅವನ ದೇಹ, ಅಂದರೆ, ಬ್ರಹ್ಮಾಂಡ). **ತುಂಬಿಹನು**= ಅನಿರುದ್ಧಾದಿ ಪಂಚರೂಪಗಳಿಂದ ಖಂಡಾಖಂಡರೂಪಗಳಿಂದ ವ್ಯಾಪಿಸಿ ಕೊಂಡಿರುವನು ॥೧೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಅವಶಿಷ್ಟ ಆನಂದಮಯಕೋಶದ ವಿಚಾರ ಹೇಳುಥಾರೆ. ಅಕ್ಷರ ಸಾಂಕೇತವಾದ ನಾರಾಯಣನ ರೂಪಗಳು ಐದುಸಾವಿರದ ನೂರಇಪ್ಪತ್ತೈದು (೫೧೨೫) ರೂಪವ ತಾಧರಿಸಿಕೊಂಡು (ನಾ=೫, ರಾ=೨,ಯ=೧ ಮತ್ತು ಣ=೫) (೫೧೨೫ ಬಲದಿಂದ ಎಡಕ್ಕೆ) ಇಷ್ಟು ರೂಪವ ನಾರಾಯಣನಾದ ತಾನು ಧರಿಸಿಕೊಂಡು ಲಕ್ಷ್ಮೀದೇವೇರಿಂದ ಸಮೇತನಾಗಿ, ಪ್ರತಿದಿನದಲ್ಲೂ ಆನಂದಮಯಕೋಶದಲ್ಲಿ ತದಾಕಾರನಾಗಿ ಅಖಂಡರೂಪದಿಂದ "ಆನಂದ ಮಯ"ನೆಂತಲೂ, ಖಂಡರೂಪದಿಂದ ಅಕ್ಷರವಾಚ್ಯನಾಗಿಯೂ ಎನಿಸಿಇರೋವ ನಾಗಿದ್ದಾನೆ. ಅಂದು ಐದುಕೋಶಗತ ಭಗವದ್ರೂಪಗಳ ಮೊತ್ತ ಸಂಖ್ಯಾ ಎಷ್ಟೆಂದರೆ, ಐದುಲಕ್ಷದಮ್ಯಾಲೆ [೫೦೦೦೦], ಎಂಭತ್ತೈದುಸಾವಿರ[೮೫೦೦೧] ನಾಲ್ಕು ಶತಗತ (೪೦೦), ಅಂದರೆ ಒಟ್ಟನಲ್ಲಿ ೫೮೫೪೦೦ ರೂಪಗಳಾ ಯಿತು. ಇಷ್ಟು ರೂಪಗಳ ಧರಿಸಿದವನಾಗಿ, ಬ್ರಹ್ಮಾಂಡದೊಳಗೇನು, ಅದರಲ್ಲಿ ವಿದ್ಯಮಾನವಾದ ಅನ್ನಮಯಾದಿ ಪಂಚಕೋಶಾತ್ಮಕದಿಂದ ಪ್ರಚುರ ವಾದ ಸ್ಥೂಲದೇಹಗಳಲ್ಲಿ, ಅನಿರುದ್ಧಾದಿ ಐದು ರೂಪಗಳಿಂದ ಖಂಡಾಖಂಡ ನಾಗಿ ತುಂಬಿಕೊಂಡು ವ್ಯಾಪಿಸಿರೋವನಾಗಿದಾನೆ.

## ಪಂಚಕೋಶಗತ ಭಗವದ್ರೂಪಗಳು ಮತ್ತು ಕಾರ್ಯವಿಶೇಷಗಳು.

| ಕ್ರಮ ಸಂಖ್ಯೆ | ಕೋಶಗಳು | ಭಗವದ್ರೂಪ | ಅಕ್ಷರ ವಾಚ್ಯ ಖಂಡರೂಪಗಳು | ಕೋಶಗತ ಕಾರ್ಯ |
|---|---|---|---|---|
| ೧ | ಅನ್ನಮಯ ಕೋಶ | ಅನಿರುದ್ಧ | ೮೨೫೧ | ಪ್ರಾಣಿಗಳಿಗೆ ಕ್ಷತ್ತು ಹಸಿವು ಉಂಟು ಮಾಡುವುದು |
| ೨ | ಪ್ರಾಣಮಯ ಕೋಶ | ಪ್ರದ್ಯುಮ್ನ | ೫೫೪೩ | ಭೋಜನ ಪದಾರ್ಥಗಳ ಚಿಂತನೆ ಮಾಡಿಸತಕ್ಕವ |
| ೩ | ಮನೋಮಯ ಕೋಶ | ಸಂಕರ್ಷಣ | ೫೬೨೧೦೭ | ಭೋಜನ ಕ್ರಿಯಾ ವ್ಯಾಪಾರ. |
| ೪ | ವಿಜ್ಞಾನಮಯ ಕೋಶ | ವಾಸುದೇವ | ೪೩೭೪ | ಪಚನಕ್ರಿಯಾ |
| ೫ | ಆನಂದಮಯ ಕೋಶ | ನಾರಾಯಣ | ೫೧೨೫ | ಭೋಜನ ಮಾಡಿಸಿ ಆನಂದ ಪಡಿಸುವ |

ಒಟ್ಟು ಭಗವದ್ರೂಪಗಳ ಸಂಖ್ಯಾ ೫೮೫೪೦೦

**ವಿಶೇಷಾರ್ಥ :–**

೫೧೨೫ ರೂಪದಿಂದ ನಾರಾಯಣ ಆನಂದಮಯನೆನಿಸುವನು.

ಇದಕ್ಕೆ ಪ್ರಮಾಣ :–

**ಉಕ್ತಂಚ ಗುರುಪೃತ್ತೇ :–**

**"ಪಂಚವಿಂಶತ್ಯಧಿಕಶತತಂ ಯುತಂ ಪಂಚಸಹಸ್ರಕೈಃ |**
**ನಾರಾಯಣಸ್ಯ ರೂಪೈಶ್ಚ ಆನಂದಮಯ ಈರ್ಯತ ||"**

೫೮೫೪೦೦ ಭಗವದ್ರೂಪಗಳು ಎಂಬುದಕ್ಕೆ ಪ್ರಮಾಣ :

**"ಚತುಶ್ಶತಾಧಿಕ್ಯೈಃ ಪಂಚಾಶೀತಿ ಸಹಸ್ರ ಸಂಯುಕ್ತ್ಯೈಃ
ಪಂಚಲಕ್ಷ ಸುರೂಪೈಸ್ತು ಬ್ರಹ್ಮಾಂಡೇ ಪಂಚಕೋಶಗೈಃ ॥
—ಇತಿ ಗುರುವೃತ್ತೇ** ॥ ೧೬ ॥

## (೨) "ಭಾವಪ್ರಕಾಶಿಕೆ" - ವ್ಯಾಖ್ಯಾನ :

"ನಾರಾಯಣ"–ಎಂಬುದನ್ನು ಅಕ್ಷರಸಂಖ್ಯಾಮಾಡಿದರೆ, ನಾ = ೫, ರಾ = ೨, ಯ = ೧ ಮತ್ತು ಣ = ೫ ಇದನ್ನು ಬಲದಿಂದ ಎಡಕ್ಕೆ ಎಣಿಸಿದರೆ, ೫೧೨೫ ಆಗುವುದು. ಶ್ರೀಪರಮಾತ್ಮನು ಇಷ್ಟು ನಾರಾಯಣರೂಪಗಳನ್ನು ಧರಿಸಿ, ಆನಂದಮಯನೆನಿಸಿಕೊಳ್ಳುವನು. ಅಂತು, ಶ್ರೀಪರಮಾತ್ಮನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಹೆಸರುಗಳಿಂದ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣನೆಂಬ ಐದು ರೂಪಗಳುಳ್ಳ ಶ್ರೀಪರಮಾತ್ಮನು ಒಟ್ಟು ೫೮೫೪೦೦ ರೂಪಗಳಿಂದ ಈ ಬ್ರಹ್ಮಾಂಡದಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ವ್ಯಾಪಿಸಿಕೊಂಡಿರುವನು ॥೧೬॥

## [೩] "ಭಾವದರ್ಪಣ ಟೀಕಾ"—ವಾಖ್ಯಾನ :-

ಐದುಸಾವಿರದ ನೂರ ಇಪ್ಪತ್ತೈದು ರೂಪದಿಂದ ನಾರಾಯಣ ಆನಂದ ಮಯನೆಂದೆನಿಸುವನು. ಎಂತ ಹೇಳುತ್ತಾರೆ- "ಐದು ಸಾವಿರ"- ಎಂಬ ಪದ್ಯದಿಂದ.

**ಉಕ್ತಂಚ ಗುರುವೃತ್ತೇ :-**

**"ಪಂಚ ವಿಂಶತ್ಯಧಿಕ ಶತಂ ಯುತಂ ಪಂಚಮಸಹಸ್ರಶೈಃ ।
ನಾರಾಯಣಸ್ಯ ರೂಪೈಸ್ತು ಆನಂದಮಯ "ಈರ್ಯತಃ॥"**

ಈ ಪಂಚಕೋಶದಲ್ಲಿ ಐದುಲಕ್ಷ ಎಂಭತ್ತೈದು ಸಾವಿರದ ನಾನೂರು ಭಗದ್ರೂಪಗಳು ಅವೆ ಎಂದು ಹೇಳುತ್ತದೆ.

ಉಕ್ತಂಚ ಗುರುವೃತ್ತೇ :-

"ಚತುಶ್ಶತಾಧಿಕ್ಯೈಃ ಪಂಚಾಶೀತಿ ಸಾಹಸ್ರಸಂಯುತೈಃ ॥
ಪಂಚಲಕ್ಷಸ್ವರೂಪೈಸ್ತು ಬ್ರಹ್ಮಾಂಡೇ ಪಂಚಕೋಶಗೌರಿತಿ॥"
॥ ೧೬ ॥

## [೪] "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :-

ನಾರಾಯಣನು— ಣ=೫, ಯ=೧, ರಾ=೨ ಮತ್ತು ನಾ=೫, ಈ ರೀತಿ ೫೧೨೫ ರೂಪಗಳಿಂದ ಆನಂದಮಯನೆಂದು ಕರೆಸಿಕೊಂಡು ಆನಂದಮಯ ಕೋಶದಲ್ಲಿರುವನು. ಹೀಗೆ ಅನ್ನಮಯಾದಿ ಐದು ಕೋಶಗಳ ಅಂತರ್ಗತ ಭಗವದ್ರೂಪಗಳ ಒಟ್ಟು ಸಂಖ್ಯೆಯು ೫೮೫೪೦೦ ರೂಪಗಳಾಗುವುದೆಂದು ಚಿಂತಿಸಬೇಕೆಂದು ನಿರೂಪಿಸುತ್ತಾರೆ ॥೧೬॥

## ಸರ್ವವ್ಯಾಖ್ಯಾನಸಾರಸಂಗ್ರಹ :-

ಪ್ರಸಕ್ತ ಪದ್ಯದಿಂದ ಶ್ರೀದಾಸರಾಯರು ಐದನೆಯ ಕೋಶವಾದ ಆನಂದಮಯಕೋಶದ ವಿಚಾರ, ಆ ಕೋಶಾಂತರ್ಗತ ಶ್ರೀಪರಮಾತ್ಮನ ಖಂಡಾಖಂಡರೂಪಗಳ ವಿವರಣೆ ಮತ್ತು ಅನ್ನಮಯಾದಿ ಪಂಚಕೋಶಗತ ಭಗವದ್ರೂಪಗಳ ಒಟ್ಟು ಸಂಖ್ಯಾವಿಷಯಗಳನ್ನು ನಿರೂಪಿಸುತ್ತಾರೆ.

**ಆನಂದಮಯಕೋಶದ ವಿವರಣೆ :-**

(೧) ಆಕಾಶತತ್ತ್ವಪ್ರಚುರವಾದ ಕೋಶವು.

(೨) ಅವ್ಯಕ್ತತತ್ತ್ವಾಭಿಮಾನಿ ಶ್ರೀರಮಾದೇವಿಯು ಕೋಶಾಭಿಮಾನಿಯು.

(೩) ನಾರಾಯಣರೂಪೀ ಶ್ರೀಪರಮಾತ್ಮನು ಈ ಕೋಶದ ಮುಖ್ಯಾಭಿಮಾನಿಯಾಗಿ ವಿರಾಜಮಾನನಾಗಿದ್ದಾನೆ.

(೪) ಶ್ರೀಮನ್ನಾರಾಯಣನು ಆನಂದಮಯನೆಂದು ಆದೇ ಕೋಶ ನಾಮದಿಂದ ವಾಚ್ಯನಾಗಿ ಅಖಂಡರೂಪಾತ್ಮಕನಾಗಿದ್ದಾನೆ.

(೫) ಶ್ರೀಮನ್ನಾರಾಯಣನ ಅಕ್ಷರಸಾಂಕೇತವಾದ ಖಂಡರೂಪಗಳು ೫೧೨೫.

**ಅಕ್ಷರ ಸಾಂಕೇತ ಭಗವದ್ರೂಪಗಳ ವಿವರಣೆ :**

| ಕೋಶ | ಕೋಶಾಭಿಮಾನಿ | ಸಂಖ್ಯೆ | ಅಕ್ಷರ | ವಿವರ | ಸ್ಥಾನ | ಸಂಖ್ಯೆ | ವಾಮಾಂಕ ಗತಿಯಿಂದ |
|---|---|---|---|---|---|---|---|
| | | ೧ | ನಾ | ತವರ್ಗ ಪಂಚಕದ ವ್ಯಂಜನಾಕ್ಷರ | ೫ | | |
| ಆನಂದಮಯ ಕೋಶ | ನಾರಾಯಣ | ೨ | ರಾ | ಅವರ್ಗೀಯ ವ್ಯಂಜನಾಕ್ಷರ | ೨ | ೫೨೧೫ | ೫೧೨೫ |
| | | ೩ | ಯ | ಅವರ್ಗೀಯ ವ್ಯಂಜನಾಕ್ಷರ | ೧ | | |
| | | ೪ | ಣ | ಟವರ್ಗ ಪಂಚಕದ ವ್ಯಂಜನಾಕ್ಷರ | ೫ | | |

ಅಂತು, ಆನಂದಮಯಕೋಶಾಭಿಮಾನಿ ಶ್ರೀಮನ್ನಾರಾಯಣನ ಅಕ್ಷರ ವಾಚ್ಯಖಂಡ ಭಗವದ್ರೂಪಗಳ ಸಂಖ್ಯೆ=ಐದುಸಾವಿರದ [೫೦೦೦]+ನೂರ [೧೦೦]+ಇಪ್ಪತ್ತೈದು [೨೫]=೫೧೨೫ ಆಯಿತು.

ಈ ಪದ್ಯದ ಉತ್ತರಾರ್ಧದಿಂದ ಶ್ರೀ ದಾಸರಾಯರು ಅನ್ನಮಯಾದಿ ಪಂಚಕೋಶಗತ ಅನಿರುದ್ಧಾದಿ ಭಗವದ್ರೂಪಗಳ ಒಟ್ಟು ಸಂಖ್ಯಾ ವಿವರಣೆ ಯನ್ನು (ಪಂಚಕೋಶಗತ ಸಮಷ್ಟಿರೂಪ) ಕೊಡುತ್ತಾರೆ.

**ಪಂಚಕೋಶಗತ ಭಗವದ್ರೂಪಗಳ ವಿವರಣೆ :**

| ಕ್ರಮ ಸಂಖ್ಯೆ | ಕೋಶ | ತತ್ತ್ವ ಪ್ರಾಚುರ್ಯ | ಅಭಿಮಾನಿ ದೇವತೆಗಳು | ಭಗವದ್ರೂಪ | ಅಕ್ಷರವಾಚ್ಯ ಭಗವದ್ರೂಪಗಳು | ಕೋಶಗತ ಕಾರ್ಯ |
|---|---|---|---|---|---|---|
| ೧ | ಅನ್ನಮಯ ಕೋಶ | ಪೃಥ್ವೀ ತತ್ತ್ವ | ಭೂ ದೇವಿ ಶನ್ವೈಶ್ವರ ಸಮಾನ ವಾಯು | ಅನಿರುದ್ಧ | ೮೨೫೧ | ಹಸಿವೆಯನ್ನುಂಟುಮಾಡುವ ಕಾರ್ಯ |
| ೨ | ಪ್ರಾಣಮಯ ಕೋಶ | ಅಪ್ ತತ್ತ್ವ | ವರುಣ ಉದಾನ ವಾಯು | ಪ್ರದ್ಯುಮ್ನ | ೫೫೪೩ | ಭೋಜನ ಪದಾರ್ಥಗಳ ಚಿಂತನಾ ಕಾರ್ಯ |
| ೩ | ಮನೋಮಯ ಕೋಶ | ತೇಜಸ್ಸು | ಅಹಂಕಾರ ತತ್ತ್ವಾಭಿಮಾನಿಗಳು. | ಸಂಕರ್ಷಣ | ೫೬೨೧೦೭ | ಭೋಜನ ಕ್ರಿಯಾ ವ್ಯಾಪಾರ |
| ೪ | ವಿಜ್ಞಾನಮಯ ಕೋಶ | ವಾಯು | ಬ್ರಹ್ಮ ವಾಯು | ವಾಸುದೇವ | ೪೩೭೪ | ಪಚನ ಕ್ರಿಯಾ |
| ೫ | ಆನಂದಮಯ ಕೋಶ | ಆಕಾಶ | ಶ್ರೀ ರಮಾ | ನಾರಾಯಣ | ೫೧೨೫ | ಭೋಜನ ಕ್ರಿಯಾ ದ್ವಾರಾ ಜೀವರಿಗೆ ಆನಂದ ಪ್ರಾಪ್ತಿ |

**ಅನಿರುದ್ಧಾದಿ ಪಂಚ ಭಗವದ್ರೂಪಗಳ ಒಟ್ಟು ಸಂಖ್ಯೆ = ೫೮೫೪೦೦**

ಅಂತು ಅನ್ನಮಯಾದಿ ಪಂಚಕೋಶಗತ ಅನಿರುದ್ಧಾದಿ ಭಗವದ್ರೂಪಗಳ ಅಕ್ಷರಸಾಂಕೇತವಾದ ಒಟ್ಟು ಸಂಖ್ಯೆ :

| | | |
|---|---|---|
| ಐದು ಲಕ್ಷದ ಮೇಲೆ | = | ೫೦೦೦೦೦ |
| ಎಂಭತ್ತೈದು ಸಾವಿರ | = | ೮೫೦೦೦ |
| ನಾಲ್ಕು ಶತಗಳ | = | ೪೦೦ |

**ಅಂದರೆ, ಕೂಡಿದಾಗ =೫೮೫೪೦೦ ರೂಪಗಳಾಗುವುವು.**

ಏತಾದೃಶಮಹಿಮೋಪೇತನಾದ ಶ್ರೀಪರಮಾತ್ಮನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯಗಳೆಂಬ ಪಂಚಕೋಶಗಳಲ್ಲಿ ಆಯಾಯಾ ಕೋಶನಾಮಕನಾಗಿದ್ದು ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ ವಿರಾಜಮಾನನಾಗಿದ್ದು, ಒಟ್ಟು ೫೮೫೪೦೦ ಅಕ್ಷರ ಸಾಂಕೇತವಾದ ಖಂಡರೂಪಗಳಿಂದ ವಿದ್ಯಮಾನನಾಗಿ, ಆಯಾಯಾ ಕೋಶಗತ ತತ್ತ್ವಕಾರ್ಯಗಳನ್ನು, ತದಭಿಮಾನಿ ದೇವತೆಗಳ ದ್ವಾರಾ ಮಾಡಿ ಮಾಡಿಸಿ, ಬ್ರಂಹ್ಮಾಂಡದಲೆಲ್ಲಾ ಸರ್ವತ್ರವ್ಯಾಪ್ತನಾಗಿ ತುಂಬಿರುವನು. ಪಿಂಡಾಂಡ ರೂಪವಾದ ಈ ಸ್ಥೂಲದೇಹವು ಬ್ರಂಹ್ಮಾಂಡದ ಸೂಕ್ಷ್ಮರೂಪದಿಂದಿದ್ದು, ಇಂತಹ ಸ್ಥೂಲದೇಹಗತ ಪಂಚಕೋಶಗಳಲ್ಲಿ ವ್ಯಾಪ್ತರೂಪದಿಂದ ಅನಿರುದ್ಧಾದಿರೂಪಗಳಿಂದ ಪರಿಶೋಭಿಸುತ್ತಾ, ಕೋಶಗತ ವ್ಯಾಪಾರಗಳನ್ನು ಮಾಡಿ ಮಾಡಿಸಿ ಜಗದ್ರಕ್ಷನೂ ನಿಯಾಮಕನೂ ಆಗಿದ್ದಾನೆ ॥೧೬॥

# ಪದ್ಯ (೧೭)

**ಮೂಲ:—**

ನೂರವೊಂದು ಸುರೂಪದಿಂ ಶಾಂ ।
ತೀ ರಮಣ ತಾನನ್ನನೆನಿಸ್ಕ ।
ನೂರ ನೇಲ್ಮೂರಧಿಕದಶ ಪ್ರಾಣಾಖ್ಯಪ್ರದ್ಯುಮ್ನ।
ತೋರುತಿಹನೈವತ್ತಐದು ವಿ ।
ಕಾರ ಮನದೊಳು ಸಂಕರುಷಣ ।
ನೂರು ಚತುರಾಶೀತಿ ವಿಜ್ಞಾನಾತ್ಮ ವಿಶ್ವಾಖ್ಯ ॥ ೧೭ ॥

**ಅವತರಣಿಕೆ:—**

ಈ ಪದ್ಯದಿಂದ ಪ್ರಾರಂಭಿಸಿ, ಆಯಾಯಾ ಕೋಶಾಕಾರದಿಂದ, ಕೋಶ ನಾಮಕನಾಗಿರುವ ಶ್ರೀ ಪರಮಾತ್ಮನ ಭಗವದ್ರೂಪಗಳ ವಿವರಣೆಯನ್ನು ತಿಳಿಸುತ್ತಾರೆ. ಅನ್ನಮಯಕೋಶಾಭಿಮಾನಿ ಶಾಂತೀರಮಣನಾದ ಅನಿರುದ್ಧ ರೂಪೀ ಶ್ರೀಪರಮಾತ್ಮನು "ಅನ್ನ" ನಾಮಕನಾಗಿ ೧೦೧ ಅಕ್ಷರ ಸಾಂಕೇತ ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ. ಅಂತೆಯೇ ಪ್ರದ್ಯುಮ್ನ ಮತ್ತು ಸಂಕರ್ಷಣರೂಪಿ ಶ್ರೀ ಪರಮಾತ್ಮನ ಕೋಶನಾಮಕ ಅಕ್ಷರವಾಚ್ಯ ಭಗವದ್ರೂಪಗಳ ವಿಚಾರವನ್ನು ಹೇಳುತ್ತಾರೆ. "ನೂರವೊಂದು"– ಎಂಬ ಪ್ರಸಕ್ತ ಸಂಧಿಗತ ೧೭ನೆಯ ಈ ಪದ್ಯದಿಂದ ॥೧೭॥

**ಪ್ರತಿಪದಾರ್ಥ:—**

**ಶಾಂತೀರಮಣ** = ಶಾಂತೀನಾಮಕಳಾದ ಲಕ್ಷ್ಮೀದೇವಿಯರ ಪತಿಯಾದ ಅನಿರುದ್ಧನಾಮಕ ಶ್ರೀಪರಮಾತ್ಮನ **ನೂರಾವೊಂದು** = ನೂರಾ ಒಂದು (೧೦೧) ಅಕ್ಷರಸಾಂಕೇತವಾದ **ಸುರೂಪದಿಂ** = ಸಮೀಚೀನವಾದ

ಸ್ವಾಖ್ಯರೂಪಗಳಿಂದ **ತಾ ಅನ್ನನೆನಿಪ**=ಅನ್ನಸಾಂಕೇತವಾದ ಅನ್ನಮಯ ಕೋಶದಲ್ಲಿ ತದಕಾರ ತನ್ನಾಮಕನಾಗಿ "ಅನ್ನ" ಎಂಬ ಹೆಸರಿನಿಂದ ವಿರಾಜ ಮಾನವಾಗಿದ್ದಾನೆ. ಹೇಗೆಂದರೆ ಅ=೧, ನ್ನ=ನ+ನ=೫+೫=೧೦ ಬಲದಿಂದ ಎಡಕ್ಕೆ ೧೦೧ ಸಂಖ್ಯೆ ಆಗುವುದು. **ಪ್ರದ್ಯುಮ್ನ**=ಕೃತಿಪತಿ ಯಾದ ಪ್ರದ್ಯುಮ್ನರೂಪೀ ಶ್ರೀಪರಮಾತ್ಮನು **ಐನೂರ ನೇಲೆ**=೫೦೦ ಆದ **ಮೇಲೆ ಮೂರಧಿಕದಶ**=೩+೧೦=೧೩, ಅಂದರೆ ೫೦೦+೧೩= ೫೧೩ ರೂಪಗಳಿಂದ **ಪ್ರಾಣಾಖ್ಯ**=ಪ್ರಾಣಮಯಕೋಶದಲ್ಲಿ "ಪ್ರಾಣ" ಶಬ್ದ ವಾಚ್ಯನಾಗಿ, ಅಂದರೆ ಪ್ರಾಣ=ಪ್ರ+ಅ+ಣ, ಪ್ರ=ಪ+ರ=೧+೨= ೩, ಅ=೧ ಮತ್ತು ಣ=೫, ಅಂದರೆ ೩೧೫. ಬಲದಿಂದ ಎಡಕ್ಕೆ ೫೧೩ ಪ್ರಾಣಾಖ್ಯ ಖಂಡರೂಪಗಳಾಯಿತು. **ಐವತ್ತೈದು**=೫೫ ಸಂಖ್ಯಾಕವಾದ ರೂಪಗಳಿಂದ **ವಿಕಾರ**=ಚಂಚಲವನ್ನು ಹೊಂದತಕ್ಕ [ನಾನಾಪ್ರಕಾರವಾಗಿ ವಿಕಾರಗೊಳಿಸತಕ್ಕ] **ಮನದೊಳು**=ಮನಸ್ಸಂಕೇತವಾದ ಮನೋಮಯ ಕೋಶದಲ್ಲಿ "ಮನ" ಶಬ್ದವಾಚ್ಯನಾಗಿ **ಸಂಕರುಷಣ**=ಜಯಾರಮಣನಾದ ಸಂಕರ್ಷಣರೂಪೀ ಶ್ರೀಪರಮಾತ್ಮನು. (ಮ=೫ ಮತ್ತು ನ=೫. ಅಂದರೆ ವಾಮಾಂಕಗತಿಯಿಂದ ೫೫ ಭಗವದ್ರೂಪಗಳಿಂದ) **ತೋರುತಿಹನು**= ವಿದ್ಯಮಾನನಾಗಿದ್ದಾನೆ, **ವಿಶ್ವಾಖ್ಯ**=ವಿಶ್ವನಾಮಕ ಅಥವಾ ವಿಶ್ವಾಧಾರಕ ನಾದ ಮಾಯಾರಮಣ ವಾಸುದೇವನಾಮಕ ಶ್ರೀಪರಮಾತ್ಮನು **ವಿಜ್ಞಾನಾತ್ಮ**=ವಿಜ್ಞಾನಮಯ ಕೋಶದಲ್ಲಿ "ವಿಜ್ಞಾನ" ಶಬ್ದವಾಚ್ಯನಾಗಿ **ಐದುನೂರು**=೫೦೦ **ಚತುರ**=೪. **ಆಶೀತಿ**=೮೦, ಅಂದರೆ ೫೦೦+ ೮೦+೪=೫೮೪ ರೂಪಗಳಿಂದ, (ಹೇಗೆಂದರೆ ವಿ=೪, ಜ್ಞಾ=ಜ+ಞಾ= ೩+೫=೮ ಮತ್ತು ನ=೫, ಅಲ್ಲಿಗೆ ವಾಮಾಂಕ ರೀತ್ಯಾ ೫೮೪ ಆಗುವುದು) ವಿರಾಜಮಾನನಾಗಿರುವನು ॥೧೭॥

# ವ್ಯಾಖ್ಯಾನಗಳು

## [೧] ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

೧೦೧ ಸ್ವರೂಪದಿಂದ (ನೂರವೊಂದು ಸುರೂಪದಿಂ) ಎಂದರೆ ಅಕ್ಷರ ಸಾಂಕೇತದಿಂದ ನೂರಾ ಒಂದು ತನ್ನ ಸ್ವಾಖ್ಯರೂಪದಿಂದ, ಶಾಂತೀನಾಮಕ ಲಕ್ಷ್ಮೀದೇವಿಯರಿಗೆ ಪತಿಯಾದ ಅನಿರುದ್ಧನಾಮಕ ಶ್ರೀಪರಮಾತ್ಮ ತಾನು ಅನ್ನಸಾಂಕೇತವಾದ ಕೋಶದಲ್ಲಿ ತದಾಕಾರದಿಂದ ಇದ್ದು, ತನ್ನಾಮವಾದ ಅನ್ನ ಎಂತ ಎನಿಸತಾನೆ. (ತಾ ಅನ್ನನೆನಿಪ) ಅ=೧, ನ್ನ+೧೦. ಬಲ ದಿಂದ ಎಡಕ್ಕೆ ೧೦೧ ರೂಪಗಳು. ಅಕ್ಷರದ್ವಯಕ್ಯೊ ದಶಸಂಖ್ಯಾ ಎತಂ ಅರ್ಥ, ಈ ಈಗ ಹೇಳತಕ್ಕ ಕೋಶಾಕಾರ ಅಖಂಡರೂಪವು. ನವನಾರೀ ಕುಜರ ದೃಷ್ಟಾಂತದಿಂದ ಖಂಡಾಖಂಡಗಳು ಉಭಯವೂ ತಿಳಿಯಬೇಕು. ಐದೂನೂರುಮ್ಯಾಲೆ (೫೦೦) ದಶ=ಹತ್ತು (೧೦), ಮೂರರಧಿಕ= ಮೂರು, ಪ್ರಾಣ ಎಂತ ಸಾಂಕೇತವಾದ ಕೋಶದಲ್ಲಿ ತದಾಕಾರನಾಗಿ ತನ್ನಾಮ ನಾಗಿ ಪ್ರಸಿದ್ಧನಾಗಿ ಪ್ರಾಣ ಎಂತ (ಪ್ರಾಣಾಖ್ಯ) ಪ್ರ=೩, ಅ=೧ ಮತ್ತು ಣ=೫, ಬಲದಿಂದ ಎಡಕ್ಕೆ ಲೆಕ್ಕ=೫೧೩ ರೂಪಗಳು. ಕೃತಿನಾಮಕ ಲಕ್ಷ್ಮೀ ದೇವೇರಪತಿಯಾದ ಪ್ರದ್ಯುಮ್ನನಾಮಕ ಶ್ರೀಪರಮಾತ್ಮ (ಪ್ರದ್ಯುಮ್ನ), ಪೂರ್ವೋಕ್ತ ಪ್ರಕಾರ ಖಂಡರೂಪಗಳಿಂದ ಇದ್ದು. ತದಭಿಮಾನಿಗಳಿಗೆ ತನ್ನ ರೂಪಗಳ ತೋರಿಸುತ್ತಾ ಇದ್ದಾನೆ (ತೋರುತಿಹ). ಐವತ್ತೈದು ಸಂಖ್ಯಾಕ ವಾದ ರೂಪಗಳಿಂದ (೫೫) ಪ್ರಾಣಗಳ ನಾನಾ ಪ್ರಕಾರವಾಗಿ ವಿಕಾರಗೊಳಿಸ ತಕ್ಕ (ವಿಕಾರ) ಮನಸ್ಸಾಂಕೇತವಾದ ಮನಕೋಶದಲ್ಲಿ ತದಕಾರನಾಗಿ ಮನಃಶಬ್ದವಾಚ್ಯನಾಗಿ ಅಕ್ಷರರೂಪೀ ಪರಮಾತ್ಮ ಜಯನಾಮಕ ಲಕ್ಷ್ಮೀದೇವೇ ರಿಂದ ಸಹಿತನಾಗಿ ಇದ್ದಾನೆ. ಮ=೫ ಮತ್ತು ನ=೫ =೫೫. ಐದನೂರು [೫೦೦] ಆಶೀತಿ=೮೦, ಚತುರ=೪, ಅಂತು ೫೮೪ ಖಂಡರೂಪಗಳಿಂದ ವಿಜ್ಞಾನಕೋಶದಲ್ಲಿ, ವಿಜ್ಞಾನಶಬ್ದವಾಚ್ಯನಾಗಿ ವಿಜ್ಞಾನಕೋಶದೋಪಾದಿ

ಯಲ್ಲಿ ತದಾಕಾರದಿಂದಲೂ ಇದ್ದಾನೆ. ದಾರು ಎಂದರೆ, ವಿಶ್ವನಾಮಕ ಪರಮಾತ್ಮ. [ವಿಶ್ವಾಜ್ಯ], ಇವಗೆ "ವಾಸುದೇವ" ಎಂತ ನಾಮವೂ ಉಂಟು ಸರ್ವನಾಮವೂ ಶ್ರೀ ಪರಮಾತ್ಮನ ನಾಮವು. ಆದಕಡಿಯಿಂದ ಮಾಯಾ ನಾಮಕ ಲಕ್ಷ್ಮೀದೇವೇರಿಗೆ ಪತಿಯಾ ವಾಸುದೇವ ವಿಜ್ಞಾನಕೋಶದಲ್ಲಿ ಇದ್ದಾನೆ. ವಿ=೪, ಜ್ಞಾ=೮, ಮತ್ತು ನ=೫. ಅಕ್ಷರಸಾಂಕೇತದಿಂದ ಆಗೋರೂಪಗಳು ೫೮೪ ಎಂತ ತಾತ್ಪರ್ಯ ॥ ೧೭ ॥

[೨] "ಭಾವಪ್ರಕಾಶಿಕೆ"—ವ್ಯಾಖ್ಯಾನ :

ಶಾಂತೀಪತಿಯಾದ ಅನಿರುದ್ಧನು ಅನೇಕ ಅಗಳುಗಳಿಂದ ಕೂಡಿದ ಶರೀರಭೂತವಾದ ಅನ್ನದ ಚೀಲದ ರೂಪವಾಗಿ "ಅನ್ನ"ನೆನಿಸುವನು. ಅಂದರೆ, ಒಂದೊಂದು ಅಗುಳನ್ನ ಬೇರೆಯಾಗಿ ತೆಗೆದುಕೊಂಡರೆ ಅವು "ಖಂಡ" ವೆನಿಸುವುವು. ಹೀಗೆ ಅನೇಕ ಖಂಡಪದಾರ್ಥಗಳು ಕೂಡಿರುವ ರಾಶಿಗೆ ಅಖಂಡವಾಗಿ ಅನ್ನವೆಂದು ಹೆಸರಾಗುವುದು. ಮೇಲಿನ ಪದ್ಯದಲ್ಲಿ ಖಂಡ ರೂಪವನ್ನು ಹೇಳಿ, ಈಗ ಅನ್ನಪ್ರಾಣಎಂಬ ಅಖಂಡರೂಪವನ್ನು ಹೇಳು ತ್ತಾರೆ, "ಅನ್ನ"ವೆಂಬುದನ್ನು ಅಕ್ಷರಸಂಖ್ಯೆಮಾಡಿದರೆ ಅ=೦ ಮತ್ತು ನ್ನ=೧೦, ಬಲದಿಂದ ಎಣಿಸಿದರೆ, ೧೧೦ ರೂಪಗಳಾಗುವುವು. ಈ ರೂಪ ಗಳಿಂದ ಅನಿರುದ್ಧನು "ಅನ್ನ"ನೆನಿಸುವನ್ನು, ಇದರಂತೆಯೇ ಪ್ರದ್ಯುಮ್ನನು "ಪ್ರಾಣ" ಎಂಬುದನ್ನು ಅಕ್ಷರಸಂಖ್ಯೆ ಮಾಡಿದರೆ, ಪ್ರ=೩, ಅ=೦, ಣ=೫ ಹೀಗೆ ೫೦೩ ಆಗುವುದು. ಇಷ್ಟು ರೂಪಗಳಿಂದ ಪ್ರಾಣಕೋಶಾಧಾ ರಕನಾಗಿ "ಪ್ರಾಣ"ನೆನಿಸಿರುವನು. ಸಂಕರ್ಷಣನು ಮನುಷ್ಯನಿಗೆ ಕ್ಷಣಕ್ಷಣ ದಲ್ಲಿಯೂ ವಿಕಾರವನ್ನು ಹುಟ್ಟಿಸುತ್ತಿರುವ ಮನೋಮಯಕೋಶಕ್ಕೆ ಆಧಾರ ನಾಗಿ "ಮನ" ಎಂಬ ಶಬ್ದದಿಂದ, ಅಕ್ಷರಸಂಖ್ಯೆ ಮ=೫, ನ=೫, ಹೀಗೆ ೫೫ ಆಗುವುದು. ಈ ೫೫ ರೂಪಗಳಿಂದ ಮನಸ್ಸೆನ್ನಿಸಿಕೊಳ್ಳುವನು. ವಿಶ್ವಾ ಧಾರನಾದ ವಾಸುದೇವನು ವಿಜ್ಞಾನಕೋಶಾಧಾರಕನಾಗಿ, ವಿ=೪, ಜ್ಞಾ=೮, ನ=೫. ಹೀಗೆ ೫೮೪ ರೂಪಗಳಿಂದ "ವಿಜ್ಞಾನ" ಎಂದೆನಿಸಿ ಕೊಳ್ಳುವನು. ॥೧೭॥

(೩) "ಭಾವದರ್ಪಣ ಟೀಕಾ"- ವ್ಯಾಖ್ಯಾನ :-

ಈ ಅನ್ನಾಖ್ಯ=೧೦೧, ಪ್ರಾಣಾಖ್ಯ=೫೧೩. ಮನಾಖ್ಯ=೫೫. ವಿಜ್ಞಾನಾಖ್ಯ=೫೮೪. ಇಂತು ಪಂಚಕೋಶನಾಮಕ ಭಗವದ್ರೂಪಗಳನ್ನು ಹೇಳುತ್ತಾರೆ. "ನೂರವಂದು"- ಎಂಬ ಈ ಪದ್ಯದಿಂದ ಶಾಂತೀರಮಣ= ಅನಿರುದ್ಧನಾಮಕ ಶ್ರೀಪರಮಾತ್ಮನು ॥೧೭॥

(೪) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಶಾಂತೀದೇವಿಪತಿ ಅನಿರುದ್ಧನು ೧೦೧ ರೂಪಗಳಿಂದ ಅನ್ನ ಶಬ್ದ ವಾಚ್ಯನು. ನ್ನ=೧೦, ಅ=೧ ಈ ರೀತಿ ೧೦೧ ರೂಪಗಳು ಅನ್ನದಲ್ಲಿ ಪ್ರಾಣನಾಮಕನಾಗಿ ಪ್ರದ್ಯುಮ್ನನು ೫೧೩ ರೂಪಗಳಿಂದಿರುವನು. ಣ=೫, ಅ=೧, ಪ್ರಾ=೩- ಹೀಗೆ ೫೧೩ ರೂಪ ಪ್ರಾಣನಲ್ಲಿ. ಸಂಕರುಷಣನು ನ=೫, ಮ=೫ ಈ ರೀತಿ ೫೫ ರೂಪಗಳಿಂದ ಮನ ಎಂದು ಕರೆಸಿಕೊಳ್ಳು ವನು. ವಿಕಾರಾತ್ಮಕ ಮನಸ್ಸಿನಲ್ಲಿರುವನು. ನ=೫, ಜ್ಞಾ=೮ ಮತ್ತು ವಿ=೮, ವಿಸ್ವಾಖ್ಯಯೆಂದರೆ, ಈ ವಿಜ್ಞಾನಾತ್ಮನೇ ವಿಶ್ವ ಎಂಬ ಹೆಸರುಳ್ಳ ಸರ್ವಶಬ್ದವಾಚ್ಯನಾಗಿರುತ್ತಾನೆಂದು ನಿರೂಪಿಸುತ್ತಾರೆ ॥ ೧೭ ॥

೫. ಶ್ರೀವಾದಿರಾಜಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :—

ಏವಂ ಪಂಚಕೋಶವ್ಯಾಪ್ತಿಮುಪಪಾದ್ಯ ಅಧುನಾ ತತ್ಕೋಶಮೂಲಾ ನ್ನಾದಿಸ್ಥಿತ ರೂಪಾಣ್ಯಾಹ ॥ ಏಕೋತ್ತರ ಶತಾತ್ಮಾನ್ನೇನಿರುದ್ಧಃ ಶತ ಪಂಚಕಂ ॥ ತ್ರಯೋದಶಾಧಿಕಂ ಭೂತ್ವಾ ಪ್ರಾಣೇ ಪಂಚಾಶದುತ್ತರಂ ॥ ರೂಪಾಣಾಂ ಪಂಚಕಂ ಚಿತ್ತೇ ಚತುರಾಶೀತಿ ಸಂಯುತಂ ॥ ಪಂಚಾತ್ಮಾ ಶತಕೋ ಭೂತ್ವಾ ಜಯೇತ್ ವಿಜ್ಞಾನಗೋ ಹರಿಃ ॥ ೧೭ ॥

**ಕನ್ನಡಾರ್ಥ:—**

ಹಿಂದಿನ ಪದ್ಯಗಳಲ್ಲಿ ಪಂಚಕೋಶಗತ ಭಗವದ್ರೂಪಗಳ ಸಂಖ್ಯೆಗಳ ವಿವರಗಳನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಈ ಕೋಶಗಳಿಗೆ ಮೂಲವಾಗಿರುವ ಅನ್ನ ಮೊದಲಾದ ಅಧಿಷ್ಠಾನಗಳಲ್ಲಿರುವ ಭಗವದ್ರೂಪಗಳ ಸಂಖ್ಯಾ ವಿಚಾರ ವನ್ನು ತಿಳಿಸುತ್ತಾರೆ.

೧೦೧ ರೂಪಗಳಿಂದ ಶಾಂತೀಪತಿ ಅನಿರುದ್ಧನು ಅನ್ನಮಯಕೋಶದಲ್ಲಿ "ಅನ್ನ"ನಾಮಕನಾಗಿದ್ದಾನೆ. ಕೃತಿಪತಿ ಪ್ರದ್ಯುಮ್ನನು ಪ್ರಾಣಮಯಕೋಶ ದಲ್ಲಿ "ಪ್ರಾಣ"ಶಬ್ದವಾಚ್ಯನಾಗಿ ೫೧೩ ರೂಪಗಳಿಂದ ಇದ್ದಾನೆ. ಮನೋ ಮಯಕೋಶದಲ್ಲಿ ಜಯಾಪತಿ ಸಂಕರ್ಷಣನ "ಮನ"ನಾಮಕ ಭಗವದ್ರೂಪ ಗಳ ಸಂಖ್ಯೆ ೫೫. ಮಾಯಾಪತಿವಾಸುದೇವನು ೫೮೪ ರೂಪಗಳಿಂದ ವಿಜ್ಞಾನಮಯಕೋಶದಲ್ಲಿ ವಿಜ್ಞಾನ" ಶಬ್ದವಾಚ್ಯನಾಗಿದ್ದಾನೆ. ೩೦೫೨ ರೂಪಗಳಿಂದ ಲಕ್ಷ್ಮೀಪತಿ ಶ್ರೀಮನ್ನಾರಾಯಣನು ಆನಂದಮಯಕೋಶದಲ್ಲಿ "ಆನಂದ"ನಾಮಕನಾಗಿ ಇದ್ದಾನೆ. ॥ ೧೭ ॥

**ಸರ್ವವ್ಯಾಖ್ಯಾನಸಾರಸಂಗ್ರಹ:—**

ಅನ್ನಮಯಾದಿ ಕೋಶಗಳಲ್ಲಿ ಅನಿರುದ್ಧಾದಿ ಪಂಚರೂಪಗಳಿಂದ ಆಯಾಯಾ ಕೋಶಾಭಿಮಾನಿಯಾಗಿ, ತದಾಕಾರ, ತನ್ನಾಮಕನಾಗಿ ವಿರಾಜ ಮಾನನಾಗಿದ್ದು ಆಯಾಯಾ ಕೋಶಗತ ವ್ಯಾಪಾರಗಳ ವಿಚಾರವನ್ನು ಇಲ್ಲಿಯ ವರೆಗೆ ತಿಳಿಸಿ, ಈ ಪ್ರಸಕ್ತ ಪದ್ಯದಿಂದ ಆಯಾಯಾ ಕೋಶನಾಮ ಸಾಂಕೇತ ವಾದ ಅನ್ನ, ಪ್ರಾಣ ಇತ್ಯಾದಿ ಅಖಂಡರೂಪಗಳ ವಿವರಣೆಯನ್ನು ತಿಳಿಸು ತ್ತಾರೆ ಜ್ಞಾನವರೇಣ್ಯರಾದ ದಾಸವರ್ಯರು. ಪ್ರಥಮಕೋಶವಾದ ಅನ್ನಮಯಕೋಶಾಭಿಮಾನಿಯು ಶಾಂತೀರಮಣನಾದ ಅನಿರುದ್ಧರೂಪೀ ಶ್ರೀ ಪರಮಾತ್ಮನು ಈ ಕೋಶದಲ್ಲಿ "ಅನ್ನ" ಶಬ್ದವಾಚ್ಯನಾಗಿ ಪ್ರಾಣಿಗಳಿಗೆ

ಕ್ಷುತ್ತನ್ನು (ಹಸಿವೆ) ಉಂಟುಮಾಡುವನು. ಅ=೧ ಸ್ನ= ನ್+ನ= ೫+೫=೧೦ ವಾಮಾಂಕಗತಿಯಿಂದ ೧೦೧ ಆಗುವುದು. ಹೀಗೆ ಅನಿರುದ್ಧನು ೧೦೧ ರೂಪಗಳಿಂದ ಅನ್ನ ಶಬ್ದವಾಚ್ಯನಾಗಿ ಅನ್ನಮಯಕೋಶದಲ್ಲಿರುವನು. ದ್ವಿತೀಯ ಕೋಶವು ಪ್ರಾಣಮಯಕೋಶವು, ಕೃತಿಪತಿಯಾದ ಪ್ರದ್ಯುಮ್ನ ರೂಪೀ ಶ್ರೀ ಪರಮಾತ್ಮನೇ ಈ ಕೋಶಾಭಿಮಾನಿಯು. ಪ್ರದ್ಯುಮ್ನನು “ಪ್ರಾಣ” ಶಬ್ದವಾಚ್ಯನಾಗಿ, ಭೋಜನಪದಾರ್ಥಗಳ ಚಿಂತನಾರೂಪವಾದ ಕೋಶಗತ ಕಾರ್ಯವನ್ನು ನಡೆಯಿಸುವನು. ಪ್ರಾ=ಪ+ರ=೧+೨=೩ ಅ=೧ ಮತ್ತು ಣ=೫ ವಾಮಾಂಕರೀತ್ಯಾ ೫೧೩ ಆಗುವುದು. ಈ ಸಂಖ್ಯೆಯನ್ನೇ ಪದ್ಯದಲ್ಲಿ “ಐನೂರಮೇಲ್ಮೂರಧಿಕ ದಶ”-ಎಂದು ವಿವರಿಸುತ್ತಾರೆ. ಅಂದರೆ ಐನೂರು=೫೦೦ ಇದರ ಮೇಲೆ ಮೂರು ಅಧಿಕ ದಶ=೩+೧೦= ೧೩, ಅಂತ, ೫೦೦+೧೩=೫೧೩ ರೂಪಗಳಾಗುವುವು, ಇನ್ನು ತೃತೀಯ ಕೋಶವಾದ ಮನೋಮಯ ಕೋಶಕ್ಕೆ ಜಯಾಪತಿ ಸಂಕರ್ಷಣನೇ ಕೋಶಾಭಿಮಾನಿಯು. ಈ ಕೋಶದಲ್ಲಿ ಸಂಕರ್ಷಣನು “ಮನ” ಶಬ್ದವಾಚ್ಯನಾಗಿ ಭೋಜನಕ್ರಿಯಾರೂಪವಾದ ವ್ಯಾಪಾರವನ್ನು ಮಾಡುವನು. ಅಕ್ಷರಸಾಂಕೇತದಿಂದ ಮ=೫ ಮತ್ತು ನ=೫, ಹೀಗೆ ವಾಮಾಂಕಗತಿಯಿಂದ ೫೫ ರೂಪಗಳಿಂದ ಮನಃಶಬ್ದವಾಚ್ಯನಾಗಿ ಅಖಂಡರೂಪದಿಂದ್ದಾನೆ. ಈ ಕೋಶದ ಪ್ರಧಾನ ತತ್ತ್ವ “ಮನಸ್ಸು”. ಅದು ಯಾವಾಗಲೂ ಚಾಂಚಲ್ಯವುಳ್ಳದ್ದು, ವಿಕಾರವನ್ನು ಹೊಂದುತ್ತಿರುವುದು. ಏಕಾಗ್ರತೆ ಸುಲಭಸಾಧ್ಯವಲ್ಲ, ಇದರಿಂದಲೇ ದಾಸರಾಯರು “ಪ್ರಾಣಾಖ್ಯಪ್ರದ್ಯುಮ್ನ ತೋರುತಿಹ ಐವತ್ತೈದು ವಿಕಾರಮನದೊಳು” ಎಂದಿದ್ದಾರೆ. ಇನ್ನು ಮುಂದೆ ನಾಲ್ಕನೆಯ ಕೋಶವಾದ ವಿಜ್ಞಾನಮಕೋಶದ ವಿಚಾರ. ಮಾಯಾಪತಿ ವಾಸುದೇವನಾಮಕ ಶ್ರೀ ಪರಮಾತ್ಮನು ಈ ಕೋಶಕ್ಕೆ ಅಭಿಮಾನಿಯು. ಇದರಿಂದಲೇ ವಾಸುದೇವನನ್ನು “ವಿಜ್ಞಾನಾತ್ಮ” ಎಂದಿದ್ದಾರೆ. ಚತುರ್ಮುಖ ಬ್ರಹ್ಮದೇವರು ಮತ್ತು ಶ್ರೀ ವಾಯುದೇವರು ವಿಜ್ಞಾನತತ್ತ್ವಕ್ಕೆ ಅವಾಂತರಾಭಿಮಾನಿಗಳಾಗಿದ್ದಾರೆ. ಅವರದು ಮಹತ್ತತ್ವಾತ್ಮಕವಾದ ಶರೀರವು. ಇದರಿಂದಲೇ ಬ್ರಹ್ಮಾಂಡಸೃಷ್ಟಿ ಇದನ್ನು “ವಿಶ್ವ” ಎಂದು ಕರೆಯುವರು. ಇಂತಹ ವಿಶ್ವಕ್ಕೆ ನಿಯಾಮಕನಾಗಿ ವಿಶ್ವಾಧಾರನಾಗಿರುವವನೇ “ವಿಶ್ವಾಖ್ಯ”ನಾದ ವಿಜ್ಞಾನಾತ್ಮನಾದ ಶ್ರೀ ವಾಸುದೇವ

ರೂಪೀ ಪರಮಾತ್ಮನು. ಇಂತಹ ವಿಶ್ವಾಖ್ಯ ಶ್ರೀ ವಾಸುದೇವನು ವಿಜ್ಞಾನಮಯ ಕೋಶದಲ್ಲಿ "ವಿಜ್ಞಾನ" ಶಬ್ದವಾಚ್ಯನಾಗಿ ಆಕೋಶಗತ ಪಚನಕ್ರಿಯಾದಿಗಳನ್ನು ನಡೆಯಿಸುವನು. ಅಕ್ಷರ ಶಬ್ದ ವಾಚ್ಯತ್ವದಿಂದ, ವಿ=೪, ಜ್ಞಾ = ಜ+ಞ=೩+೫=೮ ಮತ್ತು ನ=೫. ವಾಮಾಂಕರೀತ್ಯಾ ೫೮೪ ಭಗವದ್ರೂಪಗಳಾಗುವುವು. ಈ ಸಂಖ್ಯೆಯನ್ನೇ ದಾಸರಾಯರು—" ಐನೂರು ಚತುರಾಶೀತಿ"—ಎಂದಿದ್ದಾರೆ ಅಂದರೆ, ಐನೂರು=೫೦೦, ಚತುರ=೪, ಆಶೀತಿ=೮೦ ಅಲ್ಲಿಗೆ, ೫೦೦+೮೪=೫೮೪ ರೂಪಗಳಾಯಿತು. ಇಂತು ವಿಜ್ಞಾನಾತ್ಮನಾದ ಶ್ರೀ ವಾಸುದೇವನು ೫೮೪ ಅಖಂಡರೂಪಗಳಿಂದ ವಿಜ್ಞಾನಶಬ್ದವಾಚ್ಯನಾಗಿ ವಿಜ್ಞಾನಮಯ ಕೋಶದ ಕಾರ್ಯಗಳನ್ನು ನಡೆಯಿಸುತ್ತಿರುವನು. ॥ ೧೭ ॥

## ಕೋಶನಾಮಕ ಭಗವದ್ರೂಪಗಳ ವಿವರ :

| ಕ್ರಮ ಸಂಖ್ಯೆ | ಕೋಶ | ಭಗವದ್ರೂಪ | ಕೋಶ ಶಬ್ದ ವಾಚ್ಯರೂಪ | ಸಂಖ್ಯೆ | ಅಕ್ಷರ | ವಿವರ | ಸ್ಥಾನಸಂಖ್ಯೆ | | ವಾಮಾಂಕ ರೀತ್ಯಾ |
|---|---|---|---|---|---|---|---|---|---|
| ೧ | ಅನ್ನಮಯ ಕೋಶ | ಅನಿರುದ್ಧ | ಅನ್ನ | 1 | ಅ | ಸ್ವರಾಕ್ಷರ ನ+ನ=ಎರಡೂ ತವರ್ಗ ಪಂಚಕದ ವರ್ಗೀಯ | ೧ | | |
| | | | | 2 | ನ್ನ | ವ್ಯಂಜನಾಕ್ಷರಗಳು=೫+೫= ೧೦ | ೧೦ | ೧೧೦ | ೧೦೧ |
| ೨ | ಪ್ರಾಣಮಯ ಕೋಶ | ಪ್ರದ್ಯುಮ್ನ | ಪ್ರಾಣ | 1 | ಪ್ರ | ಪ=ಪವರ್ಗ ಪಂಚಕದ ವರ್ಗೀಯ ವ್ಯಂಜನಾಕ್ಷರರ=ರ=ಅ ವರ್ಗೀಯ ವ್ಯಂಜನಾಕ್ಷರ =೧+ | ೩ | | |
| | | | | 2 | ಅ | ೨=೩ ಸ್ವರಾಕ್ಷರ ಟ ತವರ್ಗಪಂಚಕದ | ೧ | | |
| | | | | ೩ | ಣ | ವ್ಯಂಜನಾಕ್ಷರ | ೫ | ೩೧೫ | ೫೧೩ |

| | | | | | | | | | |
|---|---|---|---|---|---|---|---|---|---|
| ೩ | ಮನೋ ಮಯ ಕೋಶ | ಸಂಕರ್ಷಣ | ಮನ | ೩ | ಮ | ಪವರ್ಗಪಂಚಕದ ವರ್ಗೀಯ ವ್ಯಂಜನಾಕ್ಷರ | ೫ | | |
| | | | | 2 | ನ | ತವರ್ಗ ಪಂಚಕದ ವರ್ಗೀಯ ವ್ಯಂಜನಾಕ್ಷರ<br>ಅವರ್ಗೀಯ ವ್ಯಂಜನಾಕ್ಷರ | ೫ | | |
| ೪ | ವಿಜ್ಞಾನಮ ಯ ಕೋಶ | ವಾಸುದೇವ | ವಿಜ್ಞಾನ | 1 | ವಿ | | | | |
| | | | | 2 | ಜ್ಞಾ | ಅವರ್ಗೀಯ ವ್ಯಂಜನ = ೪<br>ಜ = ಚವರ್ಗ ಪಂಚಕದ ವ್ಯಂಜನಾಕ್ಷರ ಞ = ಅನುನಾಸಿಕ = ೫<br>ಜ್ಞಾ = ೩ + ೫ = ೮ | ೮ | ೫೫ | **೫೫** |
| | | | | ೩ | ನ | ತವರ್ಗಕದ ವ್ಯಂಜನಾಕ್ಷರ | ೫ | ೪೮೫ | **೫೮೪** |

# ಪದ್ಯ (೧೮)

**ಮೂಲ :—**

ಮೂರು ಸಾವಿರದರ್ಧಶತ ಮೇ ।
ಲೀರಧಿಕ ರೂಪಗಳ ಧರಿಸಿ ಶ ।
ರೀರದೊಳಗಾನಂದಮಯ ನಾರಾಯಣಾಹ್ವನು ॥
ಈರೆರಡು ಸಾವಿರದ ಮೇಲ್ಮು ।
ನ್ನೂರ ಐದು ಸುರೂಪದಿಂದಲಿ ।
ಭಾರತೀಶನೊಳಿಪ್ಪ ನವನೀತಸ್ಥ ಘೃತದಂತೆ ॥ ॥ ೧೮

**ಅವತರಿಣಿಕೆ :—**

ಪೂರ್ವೋಕ್ತ ಪದ್ಯಗಳಲ್ಲಿ ನಾಲ್ಕು ಕೋಶಗತ, ಕೋಶಶಬ್ದವಾಚ್ಯ ಸಾಂಕೇತವಾದ ಭಗವದ್ರೂಪಗಳ ಸಂಖ್ಯಾವಿವರಗಳನ್ನು ತಿಳಿಸಿ, ಪ್ರಸಕ್ತ ಪದ್ಯದಲ್ಲಿ ಅಪಶಿಷ್ಟ ಪಂಚಕೋಶವಾದ ಆನಂದಮಯಕೋಶದಲ್ಲಿ ಕೋಶಾಭಿಮಾನೀ ಶ್ರೀಮನ್ನಾರಾಯಣನು ಆನಂದ ಶಬ್ದವಾಚ್ಯನಾಗಿ ೪೩೦೫ ಅಕ್ಷರ ಸಾಂಕೇತ ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ ಎಂದು ತಿಳಿಸುತ್ತಾರೆ ಉತ್ತರಾರ್ಧದಲ್ಲಿ ಪಂಚಕೋಶಗತ ಕೋಶನಾಮಕ ಒಟ್ಟು ಭಗವದ್ರೂಪಗಳು ೪೩೦೧ ಸಮೀಚೀನವಾದ ರೂಪಗಳಿಂದ ಭಾರತೀಶರಾದ ಶ್ರೀ ವಾಯು ಗೋಳಕವಲ್ಲಿ ಅಂತರ್ಗತನಾಗಿ ಬೆಣ್ಣೆಯಲ್ಲಿ ತುಪ್ಪವು ಅಡಕವಾಗಿರುವಂತೆ ಇದ್ದು, ಕೋಶಗತ ವ್ಯಾಪಾರ ವಿಶೇಶಗಳನ್ನು ನಡೆಯಿಸುತ್ತಾನೆ ಎಂದು ಹೇಳುತ್ತಾರೆ. "ಮೂರು ಸಾವಿದರ" ಎಂಬ ಪ್ರಸಕ್ತ ಸಂಧಿಗತ ೧೮ನೆಯ ಈ ಪದ್ಯದಿಂದ ॥೧೮॥

**ಪ್ರತಿಪದಾರ್ಥ** :-

**ನಾರಾಯಣಾಹ್ವಯನು**= ನಾರಾಯಣನಾಮಕನಾದ ಶ್ರೀಪರಮಾತ್ಮನು **ಮೂರುಸಾವಿರದ**=೩೦೦೦ ಸಂಖ್ಯಾಕವಾದ **ಅರ್ಧಶತ**=ನೂರರ ಅರ್ಧ ಅಂದರೆ ೫೦ **ಮೇಲೆ ಈರಧಿಕ**=ಇದಾದ ಮೇಲೆ ಎರಡು ಹೆಚ್ಚಾಗಿರುವ ಅಂದರೆ, ೩೦೦೦+೫೦+೨=೩೦೫೨ (ಮೂರುಸಾವಿರದ ಐವತ್ತೆರಡು) **ರೂಪಗಳ ಧರಿಸಿ**=ಭಗವದ್ರೂಪಗಳನ್ನು ಧಾರಣೆಮಾಡಿ **ಶರೀರದೊಳಗೆ**=ಈ ಸ್ಥೂಲದೇಹದಲ್ಲಿ **ಆನಂದಮಯ**="ಆನಂದ" ಎಂಬ ಹೆಸರಿನಿಂದ ಆ ಕೋಶ ಶಬ್ದವಾಚ್ಯನಾಗಿದ್ದಾನೆ. ಹೇಗೆಂದರೆ, ಆ=೨, ನಂ=೫೦ ಮತ್ತು ದ=೩, ವಾಮಾಂಕಗತಿಯಿಂದ ೩೦೫೨ ಅಕ್ಷರ ಸಾಂಕೇತವಾದ ಕೋಶಾಧಾರಕ ಭಗವದ್ರೂಪಗಳು **ಈರೆರಡು**=೨×೨=ನಾಲ್ಕು **ಸಾವಿರದ**=ಅಂದರೆ ನಾಲ್ಕು ಸಾವಿರದ **ಮೇಲೆ**=ಅದರ ಮೇಲೆ **ಮುನ್ನೂರ ಐದು**=೩೦೫, ಅಂದರೆ, ೪೦೦೦+೩೦೫=೪೩೦೫ (ನಾಲ್ಕು ಸಾವಿರದ ಮುನ್ನೂರ ಐದು) **ಸುರೂಪದಿಂದಲಿ**=ಸಮೀಚೀನವಾದ ರೂಪಗಳಿಂದ, **ನವನೀತಸ್ಥ**=ಬೆಣ್ಣೆಯೊಳಗೆ ಅಂತರ್ಭೂತವಾಗಿರುವ **ಘೃತದಂತೆ**=ತುಪ್ಪದೋಪಾದಿಯಲ್ಲಿ **ಭಾರತೀಶದೊಳು**=ಭಾರತೀರಮಣರಾದ ಶ್ರೀ ಮುಖ್ಯಪ್ರಾಣದೇವರಲ್ಲಿ **ಇಪ್ಪ**=**ಪೂರ್ವೋಕ್ತ** ಅನ್ನಮಯಾದಿ ಪಂಚಕೋಶಗಳಲ್ಲಿ ಅನಿರುದ್ಧಾದಿಪಂಚರೂಪಗಳಿಂದ. ಆಯಾಯಾ ಕೋಶನಾಮಕನಾಗಿ, **ತತ್ಕೋಶಶಬ್ದವಾಚ್ಯನಾಗಿ** ಒಟ್ಟು ೪೩೦೫ ರೂಪಗಳಿಂದ ವಿರಾಜಮಾನನಾಗಿದ್ದಾನೆ ॥ ೧೮ ॥

# ವ್ಯಾಖ್ಯಾನಗಳು

## [೧] ಸಂಕರ್ಷಣ ಒಡೆಯರ ವ್ಯಾಖ್ಯಾನ :

ಮೂರು ಸಾವಿರದ (೩೦೦೦) ಐವತ್ತರ ಮೇಲೆ (ಅರ್ಧಶತಮೇಲ್) ಎರಡು ಹೆಚ್ಚಾದ (ಈರಧಿಕ), ಅಂತು ಮೂರುಸಾವಿರದ ಐವತ್ತೆರಡು

(೩೦೫೨) ಸಂಖ್ಯಾಕವಾದ ರೂಪಗಳನ್ನು ಧರಿಸಿ, ನಾರಾಯಣದೇವರು ಆ ಕೋಶನಾಮದಿಂದ "ಆನಂದ"- ಎಂತ ಕರೆಸಿದವನಾಗಿ, ತದಾಕಾರದಿಂದ ಖಂಡಾಖಂಡರೂಪದಿಂದ ಇದ್ದಾನೆ. ಆ=೨, ನಂ=೫೦, ದ=೩,. ಬಲ ದಿಂದ ಎಡಕ್ಕೆ ೩೦೫೨ ರೂಪಗಳಿಂದ ತನ್ನ ಪತ್ನಿಯಾದ ಲಕ್ಷ್ಮೀದೇವೇರಿಂದ ಸಮೇತನಾಗಿ ಇದ್ದಾನೆ. ಅಂತು, ಐದುಕೋಶಗತ ಅಕ್ಷರ ಸಾಂಕೇತದಿಂದ ಆಗೋ ಭಗವದ್ರೂಪಗಳ ಒಟ್ಟು ಎಷ್ಟು ಎಂದರೆ, ನಾಲ್ಕು ಸಾವಿರದ ಮೇಲೆ [ಈರೆರಡು ಸಾವಿರದ ಮೇಲ್) ಮುನ್ನೂರಐದು, ಅಂತು ಒಟ್ಟು ಸಂಖ್ಯಾನಾಲ್ಕುಸಾವಿರದ ಮುನ್ನೂರಐದು [೪೩೦೫],ಸಮೀಚೀನವಾದ ಇಷ್ಟು ಭಾರತೀಪತಿ ವಾಯುದೇವರ (ಭಾರತೀಶನ) ಅಂತರ್ಗತನಾಗಿದ್ದಾನೆ ಎಂತ ತಾತ್ಪರ್ಯ. ಕೋಶದಲ್ಲಿ ತದಾಕಾರ ಎಂಥಾದೆಂದರೆ (ದೃಷ್ಟಾಂತ) ಬೆಣ್ಣೆ ಎಂಬ ಕೋಶಸಾಂಕೇತ ಅಧಿಷ್ಠಾನದಲ್ಲಿ ತುಪ್ಪಹ್ಯಾಂಗೆ ತದಾಕಾರದಿಂದ ಇರತದೋ, ಆ ಪ್ರಕಾರ ವ್ಯಾಪಿಸಿ ಇದ್ದಾನೆ (ನವನೀತಸ್ಥ ಘೃತದಂತೆ) ಎಂತ ತಾತ್ಪರ್ಯ,

೩೦೫೨ ರೂಪದಿಂದ "ಆನಂದ" ನಾಮಕನಾಗಿ ಅನ್ನಾದಿ ಪಂಚ ಕೋಶ ಗಳಲ್ಲಿ ೪೩೦೫ ಸಮೀಚೀನರೂಪಗಳಿಂದ ಭಾರತೀದೇವೇರ ಪತಿಯಾದ ವಾಯುದೇವರ ಅಂತರ್ಗತನಾಗಿ. ಆಯಾಯಾ ಕೋಶದಲ್ಲಿ ತದಾಕಾರನಾಗಿ, ತುಪ್ಪ ಹ್ಯಾಂಗೆ ತದಾಕಾರದಿಂದ ಬೆಣ್ಣೆಯಲ್ಲಿ ವ್ಯಾಪಿಸಿಕೊಂಡಿರತದೋ, ತದ್ವತ್ ವ್ಯಾಪ್ತನಾಗಿದ್ದಾನೆ ಎಂತ ತಾತ್ಪರ್ಯ ‖ ೧೮ ‖

## (೨) "ಭಾವಪ್ರಕಾಶಕೆ"-ವ್ಯಾಖ್ಯಾನ :-

"ಆನಂದ"--ಎಂಬ ಅಕ್ಷರಸಂಖ್ಯೆಯು ಆ=೨, ನಂ=೫೦, ದ=೩. ಬಲದಿಂದ ಎಣಿಸಿದರೆ ೩೦೫೨ ಆಗುವುದು. ಶ್ರೀನಾರಾಯಣ ಹೀಗೆ ೩೦೫೨ ರೂಪಗಳನ್ನು ಧರಿಸಿ ಶರೀರದೊಳಗೆ ಅದೇ ರೀತಿಯಾಗಿ ಅನಿರುದ್ಧಾದಿ ಪಂಚರೂಪಿಯಾದ ಶ್ರೀಪರಮಾತ್ಮನು ಅನ್ನ=೧೦೧, ಪ್ರಾಣ=೫೧೩೩, ಮನ=೫೫, ವಿಜ್ಞಾನ=೫೮೪೪ ಮತ್ತು ಆನಂದ=೩೦೫೨. ಇಷ್ಟು ರೂಪ

ಗಳನ್ನು ಒಟುಗೂಡಿಸಿದರೆ ೪೩೦೫ ರೂಪಗಳಾವುವು. ಇಷ್ಟು ರೂಪಗಳಿಂದ ಬೆಣ್ಣೆಯೊಳಗಿನ ತುಪ್ಪದಂತೆ ಭಾರತೀರಮಣ ಮುಖ್ಯಪ್ರಾಣನಲ್ಲಿ ಮುಖ್ಯ ಪ್ರಾಣರೂಪಿಯಾಗಿ ಕಾಣುವನು. ಬೆಣ್ಣೆಯೊಳಗೆ ತಪ್ಪವಿದ್ದರೂ ತುಪ್ಪವಾಗಿ ಕಾಣಿಸದೆ, ಕಾಯಿಸಿದರೆ ಮಾತ್ರ ಗೊತ್ತಾಗುವುದು. ಹೀಗೆಯೇ ಪ್ರಾಣ ದೇವರಲ್ಲಿ ಶ್ರೀಪರಮಾತ್ಮನಿದ್ದರೂ ಮುಖ್ಯಪ್ರಾಣರೂಪಿಯಾಗಿಯೇ ತೋರುತ್ತಿರುವನು ॥ ೧೮ ॥

[೩) "ಭಾವದರ್ಪಣ ಟೀಕಾ" –ವ್ಯಾಖ್ಯಾನ:—

ಈಗ ಮೂರುಸಾವಿರದ ಐವತ್ತೆರಡು ರೂಪಗಳಿಂದ ಆನಂದವೆನಿಸಿ ಕೊಂಡಿದ್ದಾನೆಂತ ಹೇಳುತ್ತಾರೆ–" ಮೂರುಸಾವಿರ"-ಎಂಬ ಪದ್ಯದಿಂದ. ಅನ್ನಾದಿಪಂಚಕೋಶದಲ್ಲಿ ನಾಲ್ಕುಸಾವಿರದ ಮುನ್ನೂರಾಐದು ವಾಯುಸ್ಥ ಭಗವದ್ರೂಪಗಳು ಅವೆ ಎಂದು ತಾತ್ಪರ್ಯ ॥ ೧೮ ॥

(೪) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

೩೦೫೨ ರೂಪದಿಂದ ನಾರಾಯಣನು ಆನಂದನಾಮಕನಾಗಿ ಶರೀರ ದೊಳಗಿರುವನು. ದ=೩, ನಂ=೦೫, ಆ=೨, ಈ ರೀತಿ ೩೦೫೨ ರೂಪ ಗಳು. ೪೩೦೫ ರೂಪಗಳಿಂದ ಭಾರತೀಶ ಎಂದರೆ, ಭಾರತೀಪತಿಯಾದ ಮುಖ್ಯಪ್ರಾಣದೇವರಲ್ಲಿ ಬೆಣ್ಣೆಯಲ್ಲಿ ತುಪ್ಪ ವ್ಯಾಪಿಸಿರುವಂತೆ ಇರುವನು. ಭಾ=೪, ರತೀಂ=೨೦, ಶ=೫. ಈ ರೀತಿ ೪೩೦೫ ರೂಪಗಳು ॥ ೧೮ ।

ಸರ್ವವ್ಯಾಖ್ಯಾನಸಾರಸಂಗ್ರಹ :-

ಐದನೆಯ ಕೋಶವಾದ ಅನಂದಮಯಕೋಶದಲ್ಲಿ ಶ್ರೀಮನ್ನಾರಾ ಯಣನು ಶ್ರೀ ಲಕ್ಷ್ಮೀದೇವಿಯರ ಸಹಿತನಾಗಿ ವಿರಾಜಮಾನನಾಗಿದ್ದಾನೆ. ಪ್ರಸಕ್ತಕೋಶದಲ್ಲಿ ಅದೇ ಕೋಶಾತ್ಮಕನಾಗಿ ಆನಂದ ಎಂದು ತಕ್ಕೋಶಶಬ್ದ ವಾಚ್ಯನಾಗಿ, ತದಾಕಾರನಾಗಿ ಮೂರುಸಾವಿರದ ಐವತ್ತೆರಡು ಆನಂದ ಎಂಬ

ಅಕ್ಷರಸಾಂಕೇತವಾದ ಖಂಡಾಖಂಡರೂಪಗಳಿಂದ ಆನಂದಮಯಕೋಶಾಂತರ್ಗತನಾಗಿ ಕೋಶಾಭಿಮಾನಿ ಶ್ರೀ ರಮಾದೇವಿಯರ ದ್ವಾರಾ (ಅವ್ಯಕ್ತತತ್ವಾತ್ಮಕಕೋಶವಾದ ಈ ಕೋಶಕ್ಕೆ ಶ್ರೀ ರಮಾ ಅಭಿಮಾನಿ) ಕೋಶಗತ ಕಾರ್ಯಗಳನ್ನು ಬಿಂಬಕ್ರಿಯಾ ದ್ವಾರಾ ಮಾಡಿ ಮಾಡಿಸುತ್ತಿರುವನು. ಈ ಭಗವದ್ರೂಪಗಳ ಸಂಖ್ಯೆಯನ್ನು ಶ್ರೀ ದಾಸರಾಯರು **ಮೂರುಸಾವಿದರ್ಧಶತ ಮೇಲೀರಧಿಕ** ಎಂದು ನಿರೂಪಿಸಿದ್ದಾರೆ.

| | | | |
|---|---|---|---|
| ಅಂದರೆ ಮೂರು ಸಾವಿರದ | = | ೩೦೦೦ | |
| ಅರ್ಧಶತ | = | ೦೦೫೦ | (೧೦೦ ರ ಅರ್ಧ) |
| ಮೇಲೆ ಈರಧಿಕ | = | ೦೦೦೨ | (ಇದರ ಮೇಲೆ ಎರಡು ಹೆಚ್ಚಾದ) |
| ಒಟ್ಟು ಸಂಖ್ಯೆ | = | ೩೦೫೨ | |

"ಆನಂದ" ಅಕ್ಷರ ಸಾಂಕೇತ ಭಗವದ್ರೂಪಗಳ ವಿವರಣೆ :

| ಕೋಶ | ಕೋಶಾಭಿಮಾನಿ | ಕೋಶನಾಮ | ಸಂಖ್ಯೆ | ಅಕ್ಷರ | ಸ್ಥಾನವಿವರ | | ಸ್ಥಾನ ಸಂಖ್ಯೆ | ನಾಮಾಂಕ ಗತಿಯಿಂದ |
|---|---|---|---|---|---|---|---|---|
| ಆನಂದಮಯ ಕೋಶ | ನಾರಾಯಣ | ಆನಂದ | 1 | ಆ | ಸ್ವರಾಕ್ಷರ ಶ್ರೇಣಿಯಲ್ಲಿ ಎರಡನೆಯ ಅಕ್ಷರ | ೨ | | |
| | | | 2 | ನ | ತ ವರ್ಗ ಪಂಚಕ ಐದನೆಯ ಅಕ್ಷರ | ೫ | ೨೫೦೩ | ೩೦೫೨ |
| | | | 3 | ಂ | ಅನುಸ್ವಾರ | ೦ | | |
| | | | 4 | ದ | ತ ವರ್ಗ ಪಂಚಕ 3ನೆಯ ಅಕ್ಷರ | ೩ | | |

ಪೂರ್ವೋಕ್ತ ಅನ್ನಮಯಾದಿ ಪಂಚಕೋಶಗಳಲ್ಲಿ ಅನಿರುದ್ಧಾದಿ ರೂಪಗಳಿಂದ ಆಯಾಯಾ ಕೋಶನಾಮಾಕನಾಗಿ, ಶ್ರೀ ಪರಮಾತ್ಮನು ನಾಲ್ಕು ಸಾವಿರದ ಐದು ಸಂಖ್ಯಾಕವಾದ ಅಕ್ಷರಸಾಂಕೇತ ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದು, ಆಯಾಯಾ ಕೋಶಗತ ಕಾಯವಿಶೇಷಗಳನ್ನು ತದಾಕಾರ ಮತ್ತು ತತ್ತತ್ಕೋಶ ಶಬ್ದವಾಚ್ಯನಾಗಿದ್ದು, ಆಯಾಯಾ ಕೋಶಾಭಿಮಾನಿ ದೇವತೆಗಳ ದ್ವಾರಾ ಬಿಂಬಕ್ರಿಯಾ ವಿಶೇಶದಿಂದ ಮಾಡಿಸುವನು ಎಂದು ಹೇಳುತ್ತಾರೆ.

ಈ ಅಕ್ಷರ ಸಾಂಕೇತ ಭಗವದ್ರೂಪಗಳ ಒಟ್ಟು ಸಂಖ್ಯೆಯನ್ನು ಜ್ಞಾನಿ ಶ್ರೇಷ್ಠರಾದ ದಾಸವರ್ಯರು ಈರೆರಡು ಸಾವಿರದ ಮೇಲ್ಮೂನೂರ ಐದು **ಸುರೂಪ ದಿಂದಲಿ**–ಎಂದು ವಿವರಿಸುತ್ತಾರೆ.

ಅಂದರೆ ಈರೆರಡು = ೨ × ೨ = ೪

| | |
|---|---|
| ಈರೆರಡು ಸಾವಿರದ | = ೪೦೦೦ (ನಾಲ್ಕು ಸಾವಿರದ) |
| ಮೇಲ್ಮೂನ್ನೂರು | = ೦೩೦೦ (ಇದರ ಮೇಲೆಮುನ್ನೂರು) |
| ಐದು | = ೦೦೦೫ (ಐದು) |

ಒಟ್ಟು ಭಗವದ್ರೂಪಗಳು = ೪೩೦೫

ಅಂದರೆ, ನಾಲ್ಕುಸಾವಿರದ ಮೂನ್ನೂರ ಐದು ಸಮೀಚೀನವಾದ ಭಗವದ್ರೂಪಗಳು.

೪೩೦೫ ಭಗವದ್ರೂಪಗಳ ವಿವರ :

| ಸಂಖ್ಯೆ | ಕೋಶ | ಕೋಶಾಭಿಮಾನಿ | ಕೋಶ ನಾಮ | ಭಗವದ್ರೂಪಗಳು |
|---|---|---|---|---|
| ೧ | ಅನ್ನಮಯ | ಅನಿರುದ್ಧ | ಅನ್ನ | ೦೧೦೧ |
| ೨ | ಪ್ರಾಣಮಯ | ಪ್ರದ್ಯುಮ್ನ | ಪ್ರಾಣ | ೦೫೧೩ |
| ೩ | ಮನೋಮಯ | ಸಂಕರ್ಷಣ | ಮನ | ೦೦೫೫ |
| ೪ | ವಿಜ್ಞಾನಮಯ | ವಾಸುದೇವ | ವಿಜ್ಞಾನ | ೦೫೮೪ |
| ೫ | ಆನಂದಮಯ | ನಾರಾಯಣ | ಆನಂದ | ೩೦೫೨ |
| | | | ಒಟ್ಟು = | ೪೩೦೫ |

ಈ ರೀತಿಯಲ್ಲಿ ಶ್ರೀ ಪರಮಾತ್ಮನು ಅನಿರುದ್ಧಾದಿ ರೂಪಗಳಿಂದ ಪಂಚಕೋಶಾಂತರ್ಗತನಾಗಿ, ಭಾರತೀರಮಣ ಮುಖ್ಯಪ್ರಾಣಾಂತರ್ಗತನಾಗಿ, ಅವರಿಗೆ ಮುಖ್ಯಪ್ರೇರಕನಾಗಿದ್ದು, ಅವರ ದ್ವಾರಾ (ವಾಯುಗೋಳಕ ದ್ವಾರವೇ ವ್ಯಾಪಾರ ಚಿಂತನೆ) ಆಯಾಯಾ ಕೋಶಾಭಿಮಾನಿ ತತ್ತ್ವದೇವತೆಗಳ ಮೂಲಕ ಕೋಶಗತ ಕ್ರಿಯಾವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು ಶ್ರೀಹರಿಯ ಈ ಮಹಿಮಾತಿಶಯವನ್ನು ದಾಸರಾಯರು ಒಂದು ಸುಂದರವಾದ ಉಪಮಾನದಿಂದ ವಿವರಿಸುತ್ತಾರೆ. ತುಪ್ಪವು ಬೆಣ್ಣೆಯಲ್ಲಿ ಅಂತರ್ಭೂತವಾಗಿದೆ. ಆದರೆ ಬೆಣ್ಣೆಯಲ್ಲಿರುವ ತುಪ್ಪವು ನಮಗೆ ಗೋಚರಿಸುವುದಿಲ್ಲ.

ಬೆಣ್ಣೆಯನ್ನು ಕಾಯಿಸಿದರೆ ಮಾತ್ರ, ತುಪ್ಪವು ಅಭಿವ್ಯಕ್ತವಾಗುವುದು. ಅಂತೆಯೇ ಸರ್ವ ನಿಯಾಮಕನಾದ ಶ್ರೀ ಪರಮಾತ್ಮನು ಶ್ರೀ ಮುಖ್ಯಪ್ರಾಣ ದೇವರಲ್ಲಿ ಮುಖ್ಯಬಿಂಬ ರೂಪನಾಗಿದ್ದು, ವಾಯುಗೋಳಕ ದ್ವಾರಾ ಸಮಸ್ತ ವಾದ ಜಗದ್ವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವನು, ಶ್ರೀ ಭಾರತೀ ರಮಣರಾದ ಮುಖ್ಯಪ್ರಾಣದೇವರು ಶ್ರೀ ಪರಮಾತ್ಮನ ಮುಖ್ಯಪ್ರತಿಬಿಂಬ ರಾಗಿದ್ದು, ಶ್ರೀಹರಿಯ ಪ್ರಥಮಾಂಗರೆಂದು ಖ್ಯಾತರಾಗಿದ್ದಾರೆ. ಈ ಕಾರಣ ದಿಂದಲೇ ಶ್ರೀ ದಾಸರಾಯರು ಪಂಚಕೋಶಗತ ವ್ಯಾಪಾರವಿಶೇಷಗಳನ್ನು ನಡೆಯಿಸುತ್ತಿರುವ ಅನಿರುದ್ಧಾದಿ ಪಂಚರೂಪೀ ಶ್ರೀ ಪರಮಾತ್ಮನನ್ನು **"ಭಾರತೀಶನೊಳಿಪ್ಪ ನವನೀತಸಥಿ ಖ್ಯಾತದಂತೆ"**—ಎಂದು ಶ್ರೀ ಭಾರತೀ ರಮಣ ಮುಖ್ಯಪ್ರಾಣಾಂತರ್ಗತ ೪೩೦೫ ಭಗವದ್ರೂಪಗಳ ಧ್ಯಾನೋಪಾಸವ ಕ್ರಮದಿಂದ ಮುಕ್ತಕಂಠದಿಂದ ಕೊಂಡಾದಿದ್ದಾರೆ. ॥ ೧೮ ॥

# ಪದ್ಯ (೧೯)

**ಮೂಲ :**

ಮೂರಧಿಕನೈವತ್ತು ಪ್ರಾಣ ಶ ।
ರೀರದೊಳಗನಿರುದ್ಧನಿಪ್ಪೆ ।
ನೂರು ಹನ್ನೊಂದುಅಧಿಕಪಾನದೊಳಿಪ್ಪ ಪ್ರದ್ಯುಮ್ನ ॥
ಮೂರನೇ ವ್ಯಾನದೊಳಗೈದರೆ ।
ನೂರುರೂಪದಿ ಸಂಕರುಷಣ್ಯ ।
ನೂರು ಮುವತ್ತೈದುದಾನದೊಳಿಪ್ಪ ಮಾಯೇಶ ॥ ೧೯ ॥

**ಅವತರಣಿಕೆ :—**

ಶ್ರೀ ಪರಮಾತ್ಮನು ಪಂಚಕೋಶಗಳಲ್ಲಿ ಅನಿರುದ್ಧಾದಿ ಪಂಚರೂಪ ಗಳಿಂದ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತನಾಗಿ ಕೋಶಗತ

ಕಾರ್ಯವಿಶೇಷಗಳನ್ನು ನಡೆಯುಸುತಾನೆ ಎಂದು ಇದುವರೆಗೆ ವಿವರಿಸಿ, ಪ್ರಸಕ್ತ ಪದ್ಯದಿಂದ ಮುಖ್ಯಪ್ರಾಣರೂಪಗಳಾದ ಪ್ರಾಣಾಪಾನಾದಿ ಪಂಚ ರೂಪಾಂತರ್ಗತನಾಗಿ, ತದಾಕಾರ ತನ್ನಾಮ ವಾಚ್ಯ ಖಂಡಾಖಂಡರೂಪಗಳ ವಿವರಗಳನ್ನು ತಿಳಿಸುತ್ತಾರೆ- "ಮೂರಧಿಕ"- ಎಂಬ ಪ್ರಸಕ್ತ ಸಂಧಿಗತ ಈ ೧೯ನೆಯ ಪದ್ಯದಿಂದ ॥ ೧೯ ॥

**ಪ್ರತಿಪದಾರ್ಥ :-**

**ಅನಿರುದ್ಧನು**=ಅನಿರುದ್ಧನಾಮಕ ಶ್ರೀಪರಮಾತ್ಮನು **ಪ್ರಾಣ**=ಪ್ರಾಣ ನಾಮಕ ಶ್ರೀವಾಯುದೇವರ **ಶರೀರದೊಳಗೆ**=ದೇಹಾಂತರ್ಗನಾಗಿ **ಮೂರಧಿಕ ಐವತ್ತು**=ಐವತ್ತರ ಮೇಲೆ ಮೂರು,ಅಂದರೆ ಐವತ್ತುಮೂರು (೫೩) ರೂಪಗಳಿಂದ **ಇಪ್ಪ**=ಪ್ರಾಣಾಕಾರನಾಗಿ ಅಖಂಡರೂಪದಿಂದ ಪ್ರಾಣಪದ ವಾಚ್ಯನಾಗಿದ್ದಾನೆ (ಅಕ್ಷರ ಸಾಂಕೇತ ರೂಪಗಳಿಂದ) **ಪ್ರದ್ಯುಮ್ನ**= ಪ್ರದ್ಯುಮ್ನ ರೂಪೀ ಶ್ರೀ ಪರಮಾತ್ಮನು **ಅಪಾನನೊಳು**=ಅಪಾನನಾಮಕ ವಾಯುದೇವರಲ್ಲಿ **ಐನೂರು ಹನ್ನೊಂದಧಿಕ**=ಐನೂರರದ್ಮೇಲೆ ಹನ್ನೊಂದು ಹೆಚ್ಚಾದ, ಅಂದರೆ ಐದನೂರ ಹನ್ನೊಂದು (೫೧೧) ಸಂಖ್ಯಾಕವಾದ (ಅ= ೧, ಪಾ=೧, ನ=೫, ವಾಮಾಂಕರೀತ್ಯಾ ೫೧೧) **ಇಪ್ಪ**=ಅಕ್ಷರ ಸಾಂಕೇತ ವಾದ ಭಗವದ್ರೂಪಗಳಿಂದ ತದಾಕಾರನಾಗಿ ಅಪಾನಶಬ್ದವಾಚ್ಯನಾಗಿ ಪ್ರಾಣ ಮಯಕೋಶದಲ್ಲಿ ಇದ್ದಾನೆ. **ಸಂಕರುಷಣ**=ಸಂಕರ್ಷಣನಾಮಕ ಶ್ರೀ ಪರಮಾತ್ಮನು **ಮೂರನೇ**=ಮೂರನೆಯ ರೂಪವಾದ **ವ್ಯಾನದೊಳು**= ವ್ಯಾನನಾಮಕ ವಾಯುದೇವರಲ್ಲಿ **ಐದರೆನೂರು**=ಅರೆನೂರು ಎಂದರೆ ಐವತ್ತು. ಅದರ ಮೇಲೆ ಐದು, ಅಂದರೆ ೫೦+೫=೫೫ ಸಂಖ್ಯಾಕವಾದ **ರೂಪದಿ ಇಪ್ಪ**=ಅಕ್ಷರಸಾಂಕೇತವಾದ ರೂಪಗಳಿಂದ ತದಾಕಾರ ವಾಚ್ಯನಾಗಿ ಇದ್ದಾನೆ. (ವ್ಯಾ=ವ+ಯ=೪+೧=೫ ಮತ್ತು ನ=೫, ವಾಮಾಂಕಗತಿ ಯಿಂದ ೫೫) **ಮಾಯೇಶ**=ಮಾಯಾಪತಿಯಾದ ವಾಸುದೇವರೂಪೀ ಶ್ರೀ ಪರಮಾತ್ಮನು **ಉದಾನದೊಳು**=ಉದಾನನಾಮಕ ವಾಯುದೇವರಲ್ಲಿ **ಐನೂರಮೂವತ್ತೈದು**=ಐದನೂರ ಮೂವತ್ತೈದು ರೂಪಗಳಿಂದ (೫೩೫

ಇಪ್ಪ=ವಿಜ್ಞಾನಮಯಕೋಶದಲ್ಲಿ ಅಕ್ಷರಸಾಂಕೇತವಾದ ಭಗವದ್ರೂಪಗಳಿಂದ ಉದಾನಶಬ್ದವಾಚ್ಯನಾಗಿದ್ದಾನೆ. (ಉ=೫, ದಾ=೩ ಮತ್ತು ನ=೫. ವಾಮಾಂಕರೀತ್ಯಾ ೫೩೫ ರೂಪಗಳು) ॥ ೧೯ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಈ ಕೋಶಾಕಾರ ಕೋಶನಾಮದಿಂದ ಇರತಕ್ಕ ಪರಮಾತ್ಮನೇ ಅಧಿಷ್ಠಾನ ಭೂತವಾದ ಮುಖ್ಯಪ್ರಾಣರೂಪಗಳಾದ ಪ್ರಾಣಾಪಾನಾದಿ ಪಂಚ ರೂಪಾಂತರ್ಗತ ತದಾಕಾರ ತನ್ನಾಮವಾಚ್ಯ ಅಖಂಡರೂಪ ಹಾಂಗೆ ಖಂಡ ರೂಪಗಳ ಹೇಳಥಾರೆ.

ಐವತ್ತು ಸಂಖ್ಯಾದಮ್ಯಾಲೆ (೫೦) ಅಧಿಕಮೂರು ಅಂತ ಐವತ್ತು ಮೂರು ಮುಖ್ಯಪ್ರಾಣರೂಪಗಳಾದ (ಪ್ರಾಣ) ಪ್ರಾಣಾಪಾನಾದಿ ಪಂಚ ರೂಪದೊಳಗೆ ಪ್ರಾಣರೂಪಿಯಾದ ಶ್ರೀ ವಾಯುದೇವರ, ಅನ್ನಮಯ ಕೋಶಗತ ತದಾಕಾರ ಮಹತತ್ವಾತ್ಮಕ ಸ್ಥೂಲಶರೀರದೊಳಗೆ [ಶರೀರ ದೊಳಗೆ) ಅನಿರುದ್ಧನಾಮಕ ಪರಮಾತ್ಮ ಪಾಣಾಕಾರನಾಗಿ ಅಖಂಡರೂಪ ದಿಂದ ಪ್ರಾಪದವಾಚ್ಯನಾಗಿದ್ದಾನೆ, ಮತ್ತು ಪ್ರಾಣಸಂಕೇತವಾದ ಖಂಡರೂಪ ಗಳಿಂದಲೂ ಇದ್ದಾನೆ. (ಪ್ರಾ—ಪ+ರ=೧+೨=೩, ಣ=೫. ಬಲದಿಂದ ಎಡಕ್ಕೆ ೫೩) ಅಕ್ಷರಸಾಂಕೇತದಿಂದ ಆಗೋ ಪ್ರಾಣಪದವಾಚ್ಯನಾದ ಅನಿರುದ್ಧನು ಖಂಡರೂಪಗಳಿಂದ ಇರೋವನಾಗಿದಾನೆ (ಇಪ್ಪ) ಐದುನೂರು ಹನ್ನೊಂದು ಅಧಿಕವಾಗಿ ಅಂದರೆ ೫೧೧ ರೂಪಗಳಿಂದ ಅಪಾನನಾಮಕ ವಾಯುದೇವರಲ್ಲಿ ತದಾಕಾರನಾಗಿ ಇರತಕ್ಕ ಅಪಾನಶಬ್ದವಾಚ್ಯನಾದ ಅಖಂಡ ರೂಪದಿಂದಲೂ, ಅಕ್ಷರಸಾಂಕೇತವಾದ ಖಂಡರೂಪದಿಂದಲೂ ಪ್ರದ್ಯುಮ್ನ ರೂಪೀ ಶ್ರೀ ಪರಮಾತ್ಮನು ಇದ್ದಾನೆ (ಅಪಾನನೊಳಿಪ್ಪ ಪ್ರದ್ಯುಮ್ನ)

ಅ=೧, ಪಾ=೧ ಮತ್ತು ನ=೫. ಬಲದಿಂದ ಎಡಕ್ಕೆ ೫೧೧ ರೂಪಗಳಾಗುವುವು. ವಾಯುದೇವರ ಮೂರನೇ ರೂಪವಾದ ವ್ಯಾನನಾಮಕ ವಾಯುದೇವರ ಒಳಗೆ (ಮೂರನೇವ್ಯಾನದೊಳಗೆ) ಐದು ಸಂಖ್ಯಾದ ಮ್ಯಾಲೆ ಅರೆನೂರು (೫೦). ಅಂದರೆ ೫+೫೦=೫೫ ರೂಪಗಳಿಂದ ಇರೋವನಾಗಿದ್ದಾನೆ. ದಾರೆಂದರೆ, ಸಂಕರ್ಷಣರೂಪೀ ಪರಮಾತ್ಮನು ಮೂರನೇ ಕೋಶವಾದ ಮನೋಮಯ ಕೋಶದಲ್ಲಿ ಅಕ್ಷರಸಾಂಕೇತ ರೂಪಗಳಿಂದ ವ್ಯಾನಶಬ್ದವಾಚ್ಯನಾಗಿ (ವ್ಯಾ=ವ+ಯ=೪+೧=೫ ಮತ್ತು ನ=೫, ಬಲದಿಂದ ಎಡಕ್ಕೆ ೫೫ ರೂಪಗಳು) ಇದ್ದಾನೆ. ವಿಜ್ಞಾನಮಯ ಕೋಶದಲ್ಲಿ ತದಾಕಾರನಾಗಿ ಇರತಕ್ಕ ಉದಾನನಾಮಕ ವಾಯುದೇವರ ಒಳಗೆ ೫೩೫ ಖಂಡ ರೂಪಗಳಿಂದ ಮಾಯಾಪತಿ ವಾಸುದೇವನಾಮಕ ಶ್ರೀ ಪರಮಾತ್ಮನು (ಮಾಯೇಶ) ಉದಾನಶಬ್ದವಾಚ್ಯನಾಗಿ ಇದ್ದಾನೆ (ಉದಾನದೊಳಿಪ್ಪ), (ಉ=೫, ದಾ=೩ ಮತ್ತು ನ=೫. ಬಲದಿಂದ ಎಡಕ್ಕೆ ೫೩೫ ರೂಪಗಳು) ॥ ೧೯ ॥

[೨] **"ಭಾವಪ್ರಕಾಶಿಕೆ"—ವ್ಯಾಖ್ಯಾನ :**

"ಪ್ರಾಣ"–ಎಂಬ ಅಕ್ಷರಸಂಖ್ಯೆಯು ೫೩. ಪ್ರಾ=೩, ಣ=೫ ಅನಿರುದ್ಧನು ಪ್ರಾಣಿಯೊಳಗಿನ ಶರೀರದೊಳಗಿನ ಪಂಚಪ್ರಾಣರಪ್ರೈಕ ಪ್ರಾಣನ ಶರೀರದೊಳಗೆ ಪ್ರಾಣನಾಮಧೇಯನಾಗಿ ೫೩ ರೂಪಗಳಿಂದ ವಾಸಿಪನು, ಪ್ರದ್ಯುಮ್ನನು ಅಪಾನನೊಳಗೆ ಸಂಖ್ಯಾಕ್ರಮದಿಂದ ಅ=೧, ಪಾ=೧, ನ=೫ ಹೀಗೆ ೫೧೧ ರೂಪಗಳಿಂದ ಇರುವನು. ಮೂರನೆಯ ಪ್ರಾಣನಾದ ವ್ಯಾನನ ಶರೀರದಲ್ಲಿ ವ್ಯಾನನೆಂಬ ಹೆಸರಿನಿಂದ ಸಂಕರ್ಷಣನು ವಾಸಿಪನು. ವಾಸುದೇವನು ಉದಾನನಾಮಕ ಪ್ರಾಣನಲ್ಲಿ ಅಕ್ಷರಸಂಖ್ಯಾಕ್ರಮದಿಂದ ಉ=೫, ದಾ=೩, ನ=೫ ಹೀಗೆ ೫೩೫ ರೂಪಗಳಿಂದ ಇರುತ್ತಿರುವನು ॥ ೧೯ ॥

## (೩) "ಭಾವದರ್ಪಣ ಟೀಕಾ"- ವ್ಯಾಖ್ಯಾನ :-

ಈಗ ಪ್ರಾಣಾದಿ ಸಮಾನಾಂತ ಪಂಚಪ್ರಾಣಗಳಲ್ಲಿದ್ದಂಥ ಭಗವದ್ರೂಪಗಳನ್ನು ಹೇಳುತ್ತಾರೆ- ಮೂರಧಿಕ"- ಎಂಬ ಪದ್ಯದಿಂದ. ಪ್ರಾಣ=೫೩, ಅಪಾನ=೫೦೦, ವ್ಯಾನ=೫೫ ಮತ್ತು ಉದಾನ=೫೩೫. ಹೀಗೆ ಮೂಧಿಕ ಎಂಬೋ ಪದ್ಯದಲ್ಲಿ ಉಕ್ತವಾಗಿದೆ ॥ ೧೯ ॥

## [೪] "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :-

ಪ್ರಾಣವಾಯುವಿನಲ್ಲಿ ಪ್ರಾಣನೆಂದು ಣ=೫, ಪ್ರಾ=೩ ಈ ರೀತಿ ೫೩ ರೂಪಗಳಿಂದ ಅನಿರುದ್ಧನಿರುವನು. ಅಪಾನನ ಶರೀರದಲ್ಲಿ ನ=೫, ಪಾ=೦, ಅ=೦. ಈ ರೀತಿ ೫೦೦ ಅಪಾನನಾಮಕನಾಗಿ ಪ್ರದ್ಯುಮ್ನನಿರುವನು. ವ್ಯಾನನಲ್ಲಿ ನ=೫, ವ್ಯಾ=೫, ಹೀಗೆ ೫೫ ರೂಪಗಳಿಂದ ವ್ಯಾನನಾಮದಿಂದ ಸಂಕರ್ಷಣನಿರುವನು. ಉದಾನನಲ್ಲಿ ನ=೫, ದಾ=೩, ಉ=೫ ಈ ರೀತಿ ೫೩೫ ರೂಪಗಳಿಂದ ಉದಾನನಾಮಕನಾಗಿ ಮಾಯಾರಮಣನಾದ ವಾಸುದೇವನಿರುವನು. ॥ ೧೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ :-

ಸರ್ವಶಕ್ತನೂ, ನಿಯಾಮಕನೂ ಆದ ಶ್ರೀ ಪರಮಾತ್ಮನು ಅನಿರುದ್ಧಾದಿ ಪಂಚರೂಪಗಳಿಂದ ಅನ್ನಮಾದಿ ಪಂಚಕೋಶಗಳಲ್ಲಿ ಶಾಂತ್ಯಾದಿ ಪಂಚರೂಪಾತ್ಮಕಳಾದ ಇಂದಿರೆಯ ಸಂಹಿತನಾಗಿ ಪ್ರಾಣಶಬ್ದವಾಚ್ಯಾದಿ ಪಂಚಪ್ರಾಣರೂಪಾತ್ಮನಾಗಿ ಭಾರತೀರಮಣರಾದ ಶ್ರೀಮುಖ್ಯಪ್ರಾಣದೇವರಲ್ಲಿ ಅಂತರ್ಯಾಮಿರೂಪದಿಂದ ವಿರಾಜಮಾನನಾಗಿದ್ದು, ಕೋಶಗತ ವ್ಯಾಪಾರಗಳನ್ನು ಪ್ರಾಣಾದಿ ಅಕ್ಷರಸಾಂಕೇತವಾದ ಭಗವದ್ರೂಪಗಳಿಂದ ಮಾಡಿ ಮಾಡಿಸುತ್ತಿರುವ ವಿವರಗಳನ್ನು ಪ್ರಸಕ್ತ ಪದ್ಯದಿಂದ ತಿಳಿಸುತ್ತಾರೆ.

[೧] ಶಾಂತೀರಮಣನಾದ ಅನಿರುದ್ಧನಾಮಕ ಶ್ರೀಪರಮಾತ್ಮನು ಅನ್ನಮಯಕೋಶದಲ್ಲಿ ಕೋಶಗತ ತತ್ವೇಶರಲ್ಲಿ ಸ್ಥಿತನಾಗಿದ್ದು, ಶ್ರೀವಾಯು ದೇವರಲ್ಲಿ ಪ್ರಾಣನಾಮಕನಾಗಿದ್ದು, ತಚ್ಛಬ್ದವಾಚ್ಯನಾಗಿ, ತದಾಕಾರದಿಂದ ಇರುವನು. ಪ್ರಾಣಶಬ್ದವಾಚ್ಯನಾಗಿರುವ ಅಕ್ಷರಸಾಂಕೇತ ಭಗವದ್ರೂಪಗಳ ಸಂಖ್ಯೆ ಐವತ್ಮೂರು [೫೩] ಈ ಸಂಖ್ಯೆಯನ್ನು ಶ್ರೀ ದಾಸರಾಯರು ಸಂಖ್ಯೆ ಐವತ್ಮೂರು ... ಅಂದರೆ ಐವತ್ತರಮೇಲೆ ಮೂರಧಿಕವೈವತ್ತು ಎಂದು ತಿಳಿಸುತ್ತಾರೆ. ಅಂದರೆ ಐವತ್ತರಮೇಲೆ ಮೂರು=೫೩ ರೂಪಗಳೆಂದರ್ಥ. ಪ್ರಾಣ ಎಂಬ ಶಬ್ದದಲ್ಲಿ ಪ್ರಾ=ಪ+ ರ [ಸಂಯುಕ್ತಾಕ್ಷರ]=೧+೨=೩ ಎಂದಾಗುವುದು. ಣ=೫. ವಾಮಾಂಕ ರೀತ್ಯಾ ೫೩ ಅಕ್ಷರಸಾಂಕೇತ ಖಂಡರೂಪಗಳಾಗುವುವು.

(೨) ಕೃತಿಪತಿಯಾದ ಪ್ರದ್ಯುಮ್ನನು ಪ್ರಾಣಮಯಕೋಶದಲ್ಲಿ ವಾಯ್ವಂತರ್ಗತ ಅಪಾನನಾಮಕನಾಗಿ ೫೧೧ ಅಕ್ಷರ ಸಾಂಕೇತ ಭಗವದ್ರೂಪ ಗಳಿಂದ ತದಾಕಾರನಾಗಿರುವನು. ಇದನ್ನು ಐನೂರು ಹನ್ನೊಂದಧಿಕ ಎಂಬ ಸಂಖ್ಯೆಯಿಂದ ನಿರೂಪಿಸುತ್ತಾರೆ. ಅಪಾನ ಎಂಬ ಶಬ್ದದಲ್ಲಿ ಅ=೧ ಪಾ=೧ ಮತ್ತು ನ=೫. ವಾಮಾಂಕಗತಿಯಿಂದ ೫೧೧ ಅಕ್ಷರಸಾಂಕೇತ ಭಗವದ್ರೂಪಗಳಾಗುವುವು.

(೩) ಜಯಾಧವನಾದ ಸಂಕರ್ಷಣನಾಮಕ ಶ್ರೀ ಪರಮಾತ್ಮನು ಮನೋಮಯಕೋಶದಲ್ಲಿ ಮುಖ್ಯಪ್ರಾಣಾಂತರ್ಗತ ವ್ಯಾನನಾಮಕನಾಗಿ ಐವತ್ತೈದು ಅಕ್ಷರಸಂಖ್ಯಾರೂಪಗಳಿಂದ ವಿದ್ಯಮಾನನಾಗಿದ್ದಾನೆ. ಈ ಸಂಖ್ಯೆ ಯನ್ನು ಐದರೆನೂರು ರೂಪದಿ ಎಂದು ತಿಳಿಸುತ್ತಾರೆ. ಅಂದರೆ, ಅರೆ ಎಂದರೆ ಅರ್ಧ ಎಂದರ್ಥ. ಅರೆನೂರು-ಎಂದರೆ ನೂರರ ಅರ್ಧ, ಎಂದರೆ ಐವತ್ತು ಎಂದಾಗುವುದು. ಐದು ಅರೆನೂರುರೂಪದಿ ಎಂದರೆ ೫+೫೦= ೫೫ ರೂಪಗಳೆಂದರ್ಥ. ವ್ಯಾನ ಎಂಬ ಶಬ್ದದಲ್ಲಿ ವ್ಯಾ=ವ+ಯ (ಸಂಯುಕ್ತಾಕ್ಷರ)=೪+೧=೫ ಎಂದಾಗುವುದು ನ=೫ ಬಲದಿಂದ ಎಡಕ್ಕೆ ೫೫ ಅಕ್ಷರಸಾಂಕೇತಾತ್ಮಕ ಖಂಡರೂಪಗಳಾಗುವುವು.

(೪) ನಾಲ್ಕನೆಯ ಕೋಶವಾದ ವಿಜ್ಞಾನಮಯಕೋಶದಲ್ಲಿ ಮಾಯೇಶನಾದ ವಾಸುದೇವನಾಮಕ ಶ್ರೀಪರಮಾತ್ಮನು ಆ ಕೋಶಗತ ಮುಖ್ಯಪ್ರಾಣದೇವರಲ್ಲಿ **ಉದಾನನಾಮಕನಾಗಿ** ೫೩೫ ಭಗವದ್ರೂಪಗಳಿಂದ ತಚ್ಛಬ್ದವಾಚ್ಯನಾಗಿ ತದಾಕಾರನಾಗಿ ಇದ್ದಾನೆ. **ಉದಾನ** ಎಂಬ ಶಬ್ದದಲ್ಲಿ ಉ=೫, ದಾ=೩ ಮತ್ತು ನ=೫ ವಾಮಾಂಕ ಗಣನೆಯಿಂದ ೫೩೫ ಅಕ್ಷರ ಸಾಂಕೇತರೂಪಗಳಾಗುವುವು. ಈ ಸಂಖ್ಯೆಯನ್ನು ಐನ್ನೂರ **ಮೂವತ್ತೈದು** ಎಂದು ನೇರವಾಗಿಯೇ ನಿರೂಪಿಸಿರುವರು. ಇಂತು ಈ ಚತುರ್ವಿಧ ಅಕ್ಷರ ಸಾಂಕೇತವಾದ ಭಗವದ್ರೂಪಗಳ ವಿವರಣೆಯನ್ನು ಈ ಕೆಳಗಿನ ಪಟ್ಟಿಯಿಂದ ವಿಹಂಗಮ ದೃಷ್ಟಿಂದ ತಿಳಿಯಬಹುದು.

| ಕ್ರಮ ಸಂಖ್ಯೆ | ಕೋಶ | ಭಗವದ್ರೂಪ | ಪಂಚಪ್ರಾಣಾದಿ ನಾಮಗಳು | ಅಕ್ಷರ | ವಿವರ | ಸ್ಥಾನಸಂಖ್ಯೆ | ನಾಮಾಂಕ ರೇಖಾ |
|---|---|---|---|---|---|---|---|
| ೧ | ಅನ್ನಮಯ ಕೋಶ | ಶಾಂತೀ ರಮಣ ಅನಿರುದ್ಧ | ಪ್ರಾಣ | ಪ್ರಾ | ಪ+ರ ಪ=ಪವರ್ಗ ಪಂಚಕ= ೧ ರ=ಅವರ್ಗೀಯ ವ್ಯಂಜ=೨ ಪ+ರ=೧+೨ | ೩ ೩೫ | |
| | | | | ಣ | ಟ ವರ್ಗ ಪಂಚಕ | ೫ | ೫೩ |
| ೨ | ಪ್ರಾಣಮಯ ಕೋಶ | ಕೃತಿಪತಿ ಪ್ರದ್ಯುಮ್ನ | ಅಪಾನ | ಅ | ಸ್ವರಾಕ್ಷರ | ೧ | |
| | | | | ಪಾ | ಪ ವರ್ಗ ಪಂಚಕ | ೧ | |
| | | | | ನ | ತ ವರ್ಗ ಪಂಚಕ | ೫ ೧೧೫ | ೫೧೧ |

| | | | | | | | | |
|---|---|---|---|---|---|---|---|---|
| ೩ | ಮನೋ<br>ಮಯ ಕೋಶ | ಜಯಾಪತಿ<br>ಸಂಕರ್ಷಣ | ವ್ಯಾನ | ವ್ಯಾ | ವ + ಯ ವ = ಅವರ್ಗೀಯ<br>ವ್ಯಂಜನ = ೪ ಯ = ಅವರ್ಗೀಯ<br>ವ್ಯಂಜನ = ೧ ವ + ಯ = ೪ + ೧ | ೫ | | |
| | | | | ನ | ತ ವರ್ಗ ಪಂಚಕ | ೫ | ೫೫ | ೫೫ |
| ೪ | ವಿಜ್ಞಾನಮ<br>ಯ ಕೋಶ | ಮಾಯೇಶ<br>ವಾಸುದೇವ | ಉದಾನ | ಉ | ಸ್ವರಾಕ್ಷರ | ೫ | | |
| | | | | ದಾ | ತ ವರ್ಗಪಂಚಕ | ೨ | | |
| | | | | ನ | ತ ವರ್ಗಪಂಚಕ | ೫ | ೫೩೫ | ೫೩೫ |

# ಪದ್ಯ (೨೦)

**ಮೂಲ:—**

**ಮೂಲನಾರಾಯಣನು ಐವ ।**
**ತ್ತೇಳಧಿಕ ಐನೂರು ರೂಪವ ।**
**ತಾಳಿ ಸರ್ವತ್ರದಿ ಸಮಾನನೊಳಿಪ್ಪ ಸರ್ವೇಶ ।**
**ಲೀಲೆಗೈವನು ಸಾವಿರದ ಮೇ ।**
**ಲೇಳು ನೂರ್ಹನ್ನೊಂದು ರೂಪವ ।**
**ತಾಳಿ ಪಂಚಪ್ರಾಣರೊಳು ಲೋಕಗಳ ಸಲಹುವನು ॥ ೨೦**

**ಅವತರಣಿಕೆ:—**

ಮೂಲರೂಪೀ ಶ್ರೀಮನ್ನಾರಾಯಣನು ಆನಂದಮಯ **ಕೋಶದಲ್ಲಿ** ವಾಯ್ವಂತರ್ಗತನಾಗಿ **ಸಮಾನನಾಮಕನಾಗಿ** ಅಕ್ಷರಸಾಂಕೇತವಾದ **೫೫೭** ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದಾನೆ. ಸರ್ವನಿಯಾಮಕನಾದ ಶ್ರೀ ಪರಮಾತ್ಮನು ಪಂಚಕೋಶಗತ ತದಾಕಾರ ಪಂಚಪ್ರಾಣರೂಪಾಂತರ್ಗತನಾಗಿ ೧೭೧೧ ಸಂಖ್ಯಾಕವಾದ ಸಮಗ್ರ ರೂಪಗಳಿಂದ ಆಯಾಯಾ ಕೋಶ ಸಂಬಂಧ ಕಾರ್ಯಗಳನ್ನು ಮಾಡಿ ಮಾಡಿಸುತ್ತಾ ಲೋಕ ಸಂರಕ್ಷಣ ಕಾರ್ಯವನ್ನು ಎಸಗುತ್ತಿದ್ದಾನೆ ಎಂಬ ಅಭಿಪ್ರಾಯವನ್ನು ಶ್ರೀ ದಾಸರಾಯರು ಪ್ರಸಕ್ತ ಸಂಧಿಗತ **"ಮೂಲನಾರಾಯಣನು"** ಎಂಬ ಈ ೨೦ನೆಯ ಪದ್ಯದಿಂದ ನಿರೂಪಿಸುತ್ತಾರೆ ॥ ೨೦ ॥

**ಪ್ರತಿಪದಾರ್ಥ:—**

**ಮೂಲನಾರಾಯಣನು**=ಮೂಲರೂಪಿಯಾದ ಶ್ರೀಮನ್ನಾರಾಯಣನು **ಐವತ್ತೇಳಧಿಕ**=ಐವತ್ತೇಳು ಹೆಚ್ಚಾದ **ಐನೂರುರೂಪವ**=ಐನೂರು

ಅಂದರೆ ಐನೂರ ಐವತ್ತೇಳು (೫೫೭) ಭಗವದ್ರೂಪಗಳನ್ನು **ತಾಳಿ**=ಧಾರಣ ಮಾಡಿ (ಸ್ವೀಕರಿಸಿ) **ಸರ್ವತ್ರದಿ**=ಸಮಸ್ತಪ್ರಾಣಿಗಳ ಸ್ಥೂಲದೇಹಗಳಲ್ಲಿ **ಸಮಾನನೊಳು**=ಸಮಾನನಾಮಕ ಪ್ರಾಣದೇವರ ಅಂತರ್ಯಾಮಿಯಾಗಿ **ಇಪ್ಪ**=ವಿದ್ಯಮಾನನಾಗಿರುವನು **ಸಮಾನ** ಎಂಬ ಶಬ್ದದಲ್ಲಿ ಸ=೭ ಮಾ=೫, ನ=೫. ವಾಮಾಂಕ ರೀತ್ಯಾ ೫೫೭ ಅಕ್ಷರಸಾಂಕೇತವಾದ ಖಂಡ ರೂಪಗಳಾಗುವುವು. **ಸರ್ವೇಶ**=ಸಮಸ್ತ ಚರಾಚರ ಜಗತ್ತಿಗೆ ಪ್ರಭುವಾದ ಶ್ರೀ ಪರಮಾತ್ಮನು **ಪಂಚಪ್ರಾಣರೊಳು**=ಪ್ರಾಣಾಪಾನಾದಿ ಪಂಚಪ್ರಾಣ ರಲ್ಲಿ ಪಂಚಪ್ರಾಣರೂಪಾಂತರ್ಗತನಾಗಿ ತನ್ನಾಮಕನಾಗಿ **ಸಾವಿರದ ಮೇಲೆ**=ಒಂದು ಸಾವಿರದಮೇಲೆ **ಏಳು ನೂರ್ಹನ್ನೊಂದು**=ಏಳನೂರ ಹನ್ನೊಂದು ಅಂದರೆ ೧೦೦೦+೭೧೧=೧೭೧೧ ಸಂಖ್ಯಾಕವಾದ **ರೂಪವ**= ಸಮಗ್ರವಾದ (ಒಟ್ಟು) ಭಗವದ್ರೂಪಗಳನ್ನು **ತಾಳಿ**=ಸ್ವೀಕರಿಸಿ **ಲೀಲೆ ಗೈವನು**=ಅನಿರುದ್ಧಾದಿ ಪಂಚರೂಪಾತ್ಮಕನಾಗಿ ಆಯಾಯಾ ಕೋಶಗತ ಕಾರ್ಯ ವಿಶೇಷಗಳನ್ನು ತಾನೇ ಮಾಡಿ ಮಾಡಿಸುತ್ತಾ ವಿಹರಿಸುತ್ತಿರುವನು (ಕ್ರೀಡಿಸುತ್ತಿರುವನು) **ಲೋಕಗಳ**=ಇಂತು ಪಂಚಪ್ರಾಣಾಧಿಷ್ಟಿತ ೧೭೧೧ ಭಗವದ್ರೂಪಗಳಿಂದ ಸಕಲ ಲೋಕದಲ್ಲಿರುವ ಪ್ರಾಣಿಗಳನ್ನು **ಸಲಹುವನು**= ಸಂರಕ್ಷಿಸುತ್ತಾನೆ ॥ ೨೦ ॥

## ವ್ಯಾಖ್ಯಾನಗಳು

[೧] **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—**

ಮೂಲರೂಪೀ ನಾರಾಯಣನು ಐನೂರ ಐವತ್ತೇಳು ಅಕ್ಷರ ಸಾಂಕೇತ ದಿಂದ ಆಗತಕ್ಕ ಖಂಡರೂಪಗಳಿಂದ, ಎಂದರೆ ಸ=೭, ಮಾ=೫, ನ=೫, ಬಲದಿಂದ ಎಡಕ್ಕೆ ೫೫೭ ರೂಪಗಳು. ಇಷ್ಟು ರೂಪಗಳಿಂದ ಯುಕ್ತನಾಗಿ, ಆನಂದಮಯಕೋಶದಲ್ಲಿ ತದಾಕಾರನಾಗಿ ಖಂಡಾಖಂಡರೂಪಗಳಿಂದ ಇದ್ದಾನೆ. ಸರ್ವತ್ರ ವಿದ್ಯಮಾನರಾದ ಪ್ರಾಣಿಗಳ ಸ್ಥೂಲದೇಹದಲ್ಲಿ

(ಅಂದರೆ ತದ್ಗತ ಪಂಚಕೋಶಗತ ತದಾಕಾರ ಪಂಚಪ್ರಾಣರೂಪಾಂತರ್ಗತನಾಗಿ ಖಂಡಾಖಂಡರೂಪಗಳಿಂದ ಶ್ರೀ ಪರಮಾತ್ಮ ಇದ್ದಾನೆ.) ಆಯಾ ಕೋಶಕಾರ್ಯಗಳು ದಾವದೋ ಅದರಂತೆ ಮಾಡುತಾ ಸುಖದಿಂದ ಇದ್ದವನಾಗಿ ಪ್ರಾಣಾದಿ ಪಂಚಪ್ರಾಣರಲ್ಲಿ ಇದ್ದು, ಜೀವರುಗಳನ್ನು (ಲೋಕಗಳ) ಸಂರಕ್ಷಣಮಾಡುವನು (ಸಲಹುವನು) ಅಂತು. ಪಂಚಕೋಶಾಂತರ್ಗತ ಪಂಚಪ್ರಾಣಾಧಿಷ್ಠಿತ ಭಗವದ್ರೂಪಗಳು ೧೭೧೧ ರೂಪಗಳಿಂದ ಇದ್ದವನಾಗಿ (ಸಾವಿರದ ಮ್ಯಾಲೆ ಏಳುನೂರ್ಹನ್ನೊಂದು ರೂಪವ ತಾಳಿ) ಲೋಕ ಸಂರಕ್ಷಣ ಮಾಡುತಾ ಇರುತ್ತಾನೆ ಎಂದು ತಾತ್ಪರ್ಯ.

ಅನ್ನಮಯಾದಿ ಪಂಚಕೋಶಗಳ ಹಾಗೂ ಪ್ರಾಣಾದಿ ಪಂಚಕೋಶಗಳ ವಿವರಗಳ ಪಟ್ಟಿಯನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

ಅನ್ನಮಯಾದಿ ಪಂಚಕೋಶವೂ ಮತ್ತು ಪ್ರಾಣಾದಿ ಪಂಚಕೋಶದ ವಿವರವೂ ಕೆಳಗಿನ ಪ್ರಕಾರ ತಿಳಿಯಬೇಕು :—

| ಕ್ರಮ ಸಂಖ್ಯೆ | ಭಗವದ್ರೂಪಗಳು | ಸಂಖ್ಯಾ ವಿವರ |
|---|---|---|
| ೧ | ಅನಿರುದ್ಧನಾಮಕ ಪರಮಾತ್ಮ ಅನ್ನದಲ್ಲಿದ್ದು ಅನ್ನ ಎಂತ ಕರಿಸತಾನೆ | ೧೦೧ |
| ೨ | ಪ್ರದ್ಯುಮ್ನನು ಪ್ರಾಣದಲ್ಲಿದ್ದು ಪ್ರಾಣ ಎಂತ ಕರಿಸತಾನೆ | ೫೧೩ |
| ೩ | ಸಂಕರ್ಷಣನು ಮನದಲ್ಲಿದ್ದು ಮನ ಎಂತ ಕರಿಸತಾನೆ | ೫೫ |
| ೪ | ವಾಸುದೇವನು ವಿಜ್ಞಾನದಲ್ಲಿದ್ದು ವಿಜ್ಞಾನ ಎಂತ ಕರಿಸತಾನೆ | ೫೮೪ |
| ೫ | ನಾರಾಯಣನು ಆನಂದದಲ್ಲಿದ್ದು ಆನಂದ ಎಂತ ಕರಿಸತಾನೆ | ೩೦೫೨ |
| | ಪಂಚರೂಪಾತ್ಮಕ ಶ್ರೀ ಪರಮಾತ್ಮನು ಅನ್ನ, ಪ್ರಾಣ, ಮನ, ವಿಜ್ಞಾನ ಮತ್ತು ಆನಂದ ಈ ಕೋಶಗಳ ಶಬ್ದ ವಾಚ್ಯನಾಗಿ "ಭೋಜ್ಯ" ಎಂತ ಕರಿಸತಾನೆ | ೪೩೦೫ ಒಟ್ಟು ರೂಪಗಳು |

| | | |
|---|---|---|
| ೧ | ಅನಿರುದ್ಧನು ಪ್ರಾಣವಾಯುವಿನಲ್ಲಿದ್ದು ಪ್ರಾಣ ಎಂತ ಕರಿಸತಾನೆ | ೫೩ |
| ೨ | ಪ್ರದ್ಯುಮ್ನನು ಅಪಾನವಾಯುವಿನಲ್ಲಿದ್ದು ಅಪಾನ ಎಂತ ಕರಿಸತಾನೆ | ೫೧೧ |
| ೩ | ಸಂಕರ್ಷಣನು ವ್ಯಾನವಾಯುವಿನಲ್ಲಿದ್ದು ವ್ಯಾನ ಎಂತ ಕರಿಸತಾನೆ | ೫೫ |
| ೪ | ವಾಸುದೇವನು ಉದಾನವಾಯುವಿನಲ್ಲಿದ್ದು ಉದಾನ ಎಂತ ಕರಿಸತಾನೆ | ೫೩೫ |
| ೫ | ನಾರಾಯಣನು ಸಮಾನವಾಯುವಿನಲ್ಲಿದ್ದು ಸಮಾನ ಎಂತ ಕರಿಸತಾನೆ | ೫೫೭ |
| | ಅಂತು, ಪಂಚರೂಪಾತ್ಮಕ ಶ್ರೀ ಪರಮಾತ್ಮನು ಪಂಚ ಪ್ರಾಣರಲ್ಲಿ ಅಂತರ್ಯಾಮಿಯಾಗಿದ್ದು ಲೋಕಗಳನ್ನು ಸಂರಕ್ಷಿಸುತ್ತಾನೆ. ಇಲ್ಲಿಗೆ ಪಂಚಕೋಶಗಳ ವಿಚಾರ ಪೂರ್ತಿ ಆಯಿತು | ೧೭೧೧ ಸಮುಗ್ರ ಭಗವದ್ರೂಪಗಳು |

## (೨) "ಭಾವಪ್ರಕಾಶಿಕೆ" - ವ್ಯಾಖ್ಯಾನ :

ಶ್ರೀಮನ್ನಾರಾಯಣನು ಸಮಾನನಾಮಕ ಪ್ರಾಣದೇವರೊಳಗೆ ಸಮಾನನೆಂಬ ಅಕ್ಷರ ಸಂಖ್ಯಾಕ್ರಮದಿಂದ, ಸ=೭, ಮಾ=೫, ನ=೫, ಬಲದಿಂದ ಎಣಿಸಿದರೆ, ೫೫೭ ಆಗುವುದು. ಇಷ್ಟು ಸರ್ವೇಶ್ವರನಾದ ಶ್ರೀ ಪರಮಾತ್ಮನು ಅನಿರುದ್ಧಾದಿ ಪಂಚರೂಪಗಳಿಂದ ಪ್ರಾಣಾಪಾನಾದಿ ಪಂಚರೂಪಗಳಲ್ಲಿ ಸಂಖ್ಯಾಕ್ರಮದಿಂದ, ಪ್ರಾಣನಲ್ಲಿ ,೫೩ ಅಪಾನನಲ್ಲಿ ೫೧೧, ವ್ಯಾನನಲ್ಲಿ ೫೫, ಉದಾನನಲ್ಲಿ ೫೩೫ ಮತ್ತು ಸಮಾನನಲ್ಲಿ ೫೫೭, ಇವೆಲ್ಲವನ್ನೂ ಒಟ್ಟುಗೂಡಿ

ಸಿದರೆ ೧೭೧೧ ರೂಪಗಳಾಗುವುವು. ಇಷ್ಟು ರೂಪಗಳನ್ನು ಧರಿಸಿ, ಲೀಲೆ ಯಿಂದಲೇ ಲೋಕದಜ ನರನ್ನು ಪಾಲಿಸುವನು.

**"ಪ್ರಾಣಾಪಾನಾ ಇಡಾಯಾಂಚ ಪಿಂಗಳಾಯಾಂಚ ಸರ್ವಶಃ ॥"**
**–ಎಂಬ ಭಾಗವತದ ದ್ವಿತೀಯಸ್ಕಂಧದ ತಾತ್ಪರ್ಯ ವಾಕ್ಯಾನುಸಾರ ವಾಗಿ** ಮನುಷ್ಯರುಗಳ ಇಡಾ ಮತ್ತು ಪಿಂಗಳಾ ಎಂಬ ಪಾರ್ಶ್ವನಾಡಿಗಳಲ್ಲಿ ಪ್ರಾಣ ಮತ್ತು ಅಪಾನನಾಮಕ ವಾಯುದೇವರೂ, ಮಧ್ಯಗತವಾದ ಸುಷುಮ್ನಾ ನಾಡಿಯಲ್ಲಿ ಉದಾನ ವಾಯುದೇವರೂ. ಶರೀರದ ಸಂಧಿನಾಡಿ ಗಳಲ್ಲಿ ಸಮಾನ ಪ್ರಾಣದೇವರೂ ಸರ್ವ ಶರೀರಗತ ನಾಡಿಗಳಲ್ಲಿ ವ್ಯಾನನಾಮಕ ಪ್ರಾಣದೇವರೂ ಇರುವರೆಂದು ತಿಳಿಯಬೇಕು ॥ ೨೦ ॥

**[೩] "ಭಾವದರ್ಪಣ ಟೀಕಾ"—ವ್ಯಾಖ್ಯಾನ :-**

ಈಗ ಸಮಾನನಾಮಕ ವಾಯುವಿನಲ್ಲಿ ನಾರಾಯಣನು **೫೫೭** ರೂಪ ಗಳಿಂದ ಇದ್ದಾನೆಂದು ತಿಳಿಸಿ ಹೇಳುತ್ತಾರೆ– **"ಮೂಲನಾರಾಯಣನು"** ಎಂಬ ಈ ಪದ್ಯದಿಂದ

ಈ ಪಂಚಪ್ರಾಣರುಗಳಲ್ಲಿ ಶ್ರೀಶನು ೧೭೧೧ ರೂಪದಿಂದ ಇದ್ದು, ಪಾಲಿಸುವನೆಂದು ಭಾವ

**ಉಕ್ತಂಚ ವೈಶ್ವಾನರವಿದ್ಯಯಾ :-**

**"ಸಹಸ್ರ ಸಂಖ್ಯಾತ್ಪರತಃ ತಥಾ ಸಪ್ತಶತಸ್ಯಚ ।**
**ತತಶ್ಚ ರುದ್ರಸಂಖ್ಯಾನಿ ರೂಪಾಣಿ ಮಿಲಿತಾನಿ ಚ ।**
**ಜ್ಞಾತ್ವಾ ತಾನಿ ನರೋ ಭಕ್ತ್ಯಾ ಯೇ ಭುಜ್ಯತಿ ಸದಾ ಹೃದಿ ।**
**ವೈಶ್ವಾನರ ಪ್ರಸಾದೇನ ಸರ್ವೈ ಮುಚ್ಯೇತ ಕಿಲ್ಬಿಷೈರಿತಿ ॥"॥೨೦॥**

**(೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :-**

ಸರ್ವೇಶನಾದ ಮೂಲನಾರಾಯಣನು **ಸಮಾನನಾಮಾತ್ಮಕನಾಗಿ ಸಮಾನನಲ್ಲಿ** ಸ=೫, ಮಾ=೫, ಸ=, ಈ ರೀತಿ **೫೫೭** ರೂಪಗಳಿಂದ

ಸರ್ವತ್ರ ಇರುವನು. ಹೀಗೆ ಪಂಚಪ್ರಾಣರಲ್ಲಿ ಒಟ್ಟು ಸಾವಿರದ ಏಳನೂರು ಹನ್ನೊಂದು ರೂಪಗಳ ಧರಿಸಿ, ಶ್ರೀಹರಿಯು ಲೋಕಗಳನ್ನು ಸಲಹುವನು ॥ ೨೦ ॥

**ಸರ್ವವ್ಯಾಖ್ಯಾನಸಾರಸಂಗ್ರಹ:—**

ಅವಶಿಷ್ಟಕೋಶವಾದ ಆನಂದಮಯಕೋಶದ ವಿವರಗಳನ್ನು ತಿಳಿಸುತ್ತಾರೆ ಪ್ರಸಕ್ತ ಈ ಪದ್ಯದಿಂದ. ಮೂಲರೂಪೀ ಶ್ರೀಮನ್ನಾರಾಯಣನು ಆನಂದಮಯ ಕೋಶಾಭಿಮಾನಿಯಾಗಿದ್ದಾನೆ. ಈ ಕೋಶದಲ್ಲಿ ಸರ್ವೋತ್ತಮನಾದ ಶ್ರೀಮನ್ನಾರಾಯಣನು ವಾಯ್ವಂತರ್ಗತನಾಗಿ ಪಂಚಪ್ರಾಣರಲ್ಲಿ **ಸಮಾನ** ವಾಯುವಿನಲ್ಲಿದ್ದು, ಅದೇ ಶಬ್ದವಾಚ್ಯನಾಗಿ ಸಮಾನನಾಮಕನಾಗಿ ವಿರಾಜಮಾನನಾಗಿದ್ದು, ಕೋಶಕಾರ್ಯವನ್ನು ನಡೆಯಿಸುವನು. **ಸಮಾನ** ಎಂಬ ಶಬ್ದದಲ್ಲಿ ಅಕ್ಷರಸಾಂಕೇತ ಭಗವದ್ರೂಪಗಳ ವಿವರಣೆ :

[೧] ಸ= ಅವರ್ಗೀಯ ವ್ಯಂಜನಾಕ್ಷರದಲ್ಲಿ ಸ್ಥಾನ=೭

[೨] ಮಾ=ಪವರ್ಗ ಪಂಚಕದಲ್ಲಿ ಸ್ಥಾನ=೫.

[೩] ನ=ತವರ್ಗ ಪಂಚಕದಲ್ಲಿ ಸ್ಥಾನ=೫.

ಅಂದರೆ ಅಕ್ಷರಸ್ಥಾನಗತಿಯಿಂದ ೭೫೫ ಆಗುವುದು. ವಾಮಾಂಕಗತಿಯಿಂದ ೫೫೭ ಎಂದಾಗುವುದು.

ಇಂತು ಆನಂದಮಯಕೋಶದಲ್ಲಿ ಕೋಶಾಭಿಮಾನಿ ಶ್ರೀಮನ್ನಾರಾಯಣನು **ಸಮಾನ** ಶಬ್ದವಾಚ್ಯನಾಗಿದ್ದು, ೫೫೭ ಅಕ್ಷರಸಾಂಕೇತವಾದ ಖಂಡರೂಪಗಳಿಂದ ವಿದ್ಯಮಾನನಾಗಿದ್ದಾನೆ. ಇದನ್ನೇ **ಐವತ್ತೇಳಧಿಕಐನೂರು** ಎಂದು ಶ್ರೀದಾಸರಾಯರು ವಿವರಿಸಿದ್ದಾರೆ. ಅಂದರೆ ಐನೂರರ ಮೇಲೆ ಐವತ್ತೇಳು=೫೦೦+೫೭=೫೫೭ (ಐನೂರ ಐವತ್ತೇಳು) ಸಂಖ್ಯಾಕವಾದ ಆನಂದಮಯಕೋಶಗತ ಪಂಚಪ್ರಾಣರೂಪಾಂತರ್ಗತ ಖಂಡರೂಪಗಳು.

ಮುಂದೆ, ಪದ್ಯದ ಉತ್ತರಾರ್ಧದಲ್ಲಿ ಅನ್ನಮಯಾದಿ ಪಂಚಕೋಶಗತ ತದಾಕಾರ ಪ್ರಾಣಾದಿ ಪಂಚಪ್ರಾಣರೂಪಾಂತರ್ಗತ ಭಗವದ್ರೂಪಗಳ ಒಟ್ಟು ಸಂಖ್ಯೆಯನ್ನು ನಿರೂಪಿಸುತಾರೆ :–

[೧] ಅನ್ನಮಯಕೋಶದಲ್ಲಿ ಅನಿರುದ್ಧನು **ಪ್ರಾಣ**
ವಾಯುವಿನಲ್ಲಿ = ೫೩

[೨] ಪ್ರಾಣಮಯಕೋಶದಲ್ಲಿ ಪ್ರದ್ಯುಮ್ನನು **ಅಪಾನ**
ವಾಯುವಿನಲ್ಲಿ = ೫೧೧

[೩] ಮನೋಮಯಕೋಶದಲ್ಲಿ ಸಂಕರ್ಷಣನು **ವ್ಯಾನ**
ವಾಯುವಿನಲ್ಲಿ = ೫೫

[೪] ವಿಜ್ಞಾನಮಯಕೋಶದಲ್ಲಿ ವಾಸುದೇವನು
**ಉದಾನ** ವಾಯುವಿನಲ್ಲಿ = ೫೩೫

[೫] ಆನಂದಮಯ ಕೋಶದಲ್ಲಿ ನಾರಾಯಣನು
**ಸಮಾನ** ವಾಯುವಿನಲ್ಲಿ = ೫೫೭

---

**ಪಂಚಕೋಶಗತ ಭಗವದ್ರೂಪಗಗಳ ಸಂಖ್ಯೆ** = ೧೭೧೧

---

ಇಂತು ಒಂದು ಸಾವಿರದ ಏಳನೂರ ಹನ್ನೊಂದು ಸಮಷ್ಟಿ ರೂಪದಿಂದ, ಅನ್ನಮಯಾದಿ ಪಂಚಕೋಶಗಳಲ್ಲಿ ಕ್ರಮವಾಗಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಪಂಚಪ್ರಾಣರಲ್ಲಿ ಅದೇ ಹೆಸರಿನಿಂದ ಕರೆಯಿಸಿಕೊಳ್ಳುತ್ತಾ, ವಿಹಾರಮಾಡುತ್ತ, ಬ್ರಹ್ಮಾಂಡದಲ್ಲಿರುವ ಸಮಸ್ತ ಜೀವವರ್ಗವನ್ನು ಸಂರಕ್ಷಣಮಾಡುತ್ತಾನೆ. ಪಂಚಕೋಶಾಂತರ್ಗತ ಪಂಚಪ್ರಾಣಾಧಿಷ್ಠಿತ ಭಗವದ್ರೂಪಗಳ ಒಟ್ಟು ಸಂಖ್ಯೆಯನ್ನು **ಸಾವಿರದ ಮೇಲೇಳು ನೂರ್ಹನ್ನೊಂದು ರೂಪವ** ಎಂದು ನಿರೂಪಿಸಿದ್ದಾರೆ. ಅಂದರೆ ಸಾವಿರದಮೇಲೆ ಏಳನೂರ ಹನ್ನೊಂದು ರೂಪಗಳು = ೧೦೦೦ + ೭೦೦ + ೧೧ = ೧೭೧೧ ಎಂದಾಗುವುದು ॥ ೨೦ ॥

# ಪದ್ಯ (೨೧)

**ಮೂಲ :—**

ತ್ರಿನವತಿ ಸ್ವರೂಪಾತ್ಮಕನಿರು ।
ದ್ಧನು ಸದಾ ಯಜಮಾನನಾಗಿ ।
ದ್ದನಲ ಯಮ ಸೋಮಾದಿ ಪಿತೃದೇವತೆಗಳಿಗೆ ಅನ್ನ ॥
ನೆನಿಪನಾ ಪ್ರದ್ಯುಮ್ನ ಸಂಕರು ।
ಷಣ ವಿಭಾಗವ ಮಾಡಿಕೊಂ ।
ಡುಣಿಪ ನಿತ್ಯಾನಂದ ಭೋಜನದಾಯಿ ತುರ್ಯಾಹ್ವ ॥ ೨೧ ॥

**ಅವತರಿಣಿಕೆ :–**

ತ್ರಿನವತಿ, ಅಂದರೆ ೯೩ ರೂಪಗಳಿಂದ ಶ್ರೀಪರಮಾತ್ಮನು ವಿದ್ಯಮಾನ ನಾಗಿದ್ದು, ಪಿತೃದೇವತೆಗಳಿಗೆ ಕ್ರಮವಾಗಿ ಅಗ್ನಿ, ಯಮ ಮತ್ತು ಸೋಮ ಈ ಮೂರುದೇವತೆಗಳ ದ್ವಾರಾ ಅನ್ನನಾಮಕನಾಗಿ ತೃಪ್ತಿಪಡಿಸುವ ವಿವರ ಗಳನ್ನು ಪ್ರಸಕ್ತ ಸಂಧಿಗತ ೨೧ನೆಯ ಈ ಪದ್ಯದಿಂದ ತಿಳಿಸುತ್ತಾರೆ. ॥ ೨೧ ॥

**ಪ್ರತಿಪದಾರ್ಥ :**

**ತ್ರಿನವತಿ**＝ತೊಂಬತ್ತಮೂರು **ಸ್ವರೂಪಾತ್ಮಕ**＝ತನ್ನದೇ ಆದ [ಸ್ವ] ಪೂರ್ವೋಕ್ತ ೯೩ ರೂಪಗಳಿಂದ ವಿದ್ಯಮಾನನಾಗಿರುವ **ಅನಿರುದ್ಧನು**＝ಅನಿರುದ್ಧನಾಮಕ ಶ್ರೀ ಪರಮಾತ್ಮನು **ಸದಾ**＝ಯಾವಾಗಲೂ **ಯಜಮಾನನಾಗಿದ್ದು**＝ಪಿತೃಕಾರ್ಯಮಾಡುವ ಅಧಿಕಾರಿಯಲ್ಲಿ ನಿಯಾಮಕ ನಾಗಿದ್ದು **ಅನಲ**＝ಅಗ್ನಿ ದೇವರ ದ್ವಾರಾ ಪಿತೃರೇತೋಭಾಗದಲ್ಲಿ **ಯಮ** ＝ಯಮದೇವರ ದ್ವಾರಾ ಪಿತಾಮಹ ರೇತೋಭಾಗದಲ್ಲಿ **ಸೋಮ**＝ಚಂದ್ರ

ದೇವರ ದ್ವಾರಾ ಪ್ರಪಿತಾಮಹನ ರೇತೋಭಾಗದಲ್ಲಿ **ಆದಿ**=ಆದಿಶಬ್ದದಿಂದ ಪೂರ್ವೋಕ್ತ ವಸು ರುದ್ರಾದಿತ್ಯ ಸಾಂಕೇತರಾದವರು ಗ್ರಾಹ್ಯ. **ಪಿತೃ ದೇವತೆಗಳಿಗೆ**=ಪಿತೃ, ಪಿತಾಮಹ ಮತ್ತು ಪ್ರಪಿತಾಮಹ ಎಂಬ ತ್ರಿವಿಧ ಪಿತೃವರ್ಗಕ್ಕೆ **ಅನ್ನನೆನಿಪನು**="ಅನ್ನ" ಎಂಬ ಹೆಸರಿನಿಂದ ಕರೆಯಿಸಿಕೊಂಡು ಪಿತೃದೇವತೆಗಳಿಗೆ ತೃಪ್ತಿಯನ್ನೀಯುವನು.ಆ **ಪ್ರದ್ಯುಮ್ನ**= ಆ ಅನಿರುದ್ಧನೇ ಪ್ರದ್ಯುಮ್ನರೂಪದಿಂದಲೂ **ಸಂಕರುಷಣ**=ಸಂಕರ್ಷಣ ರೂಪದಿಂದಲೂ **ವಿಭಾಗವ ಮಾಡಿಕೊಂಡು**=ದೇವಭಾಗ ಬ್ಯಾರೆ ಮತ್ತು ಪಿತೃಭಾಗ ಬೇರೆ ಎಂದು ಎರಡು ಪ್ರಕಾರ ವಿಭಾಗಮಾಡುತ್ತಾನೆ ಎಂತ ತಾತ್ಪರ್ಯ. [ದೇವಭಾಗ ೬ ಮತ್ತು ಪಿತೃ ಭಾಗ ೩ ಈ ಪ್ರಕಾರ ಭಾಗ ಮಾಡಿದ ನಂತರ] **ತುರ್ಯಾಹ್ವ**=ಆ ಅನಿರುದ್ಧನೇ "ತುರ್ಯ" ಎಂಬ ಹೆಸರಿನಿಂದ ನಾಮವಾಚ್ಯನಾಗಿದ್ದು, ವಾಸುದೇವರೂಪದಿಂದ **ಉಣಿಪ**= ಪಿತೃಭಾಗ ಅಗ್ನಿದ್ವಾರಾ, ಪಿತಾಮಹನ ಭಾಗ ಯಮನ ದ್ವಾರಾ ಚಂದ್ರನ ದ್ವಾರಾ ಪ್ರಪಿತಾಮಹನ ಭಾಗ ಅವರವರಿಗೆ ಕೊಟ್ಟು ಭೋಜನಮಾಡಿಸಿ ತೃಪ್ತಿ ಪಡಿಸುವನು. **ನಿತ್ಯಾನಂದ ಭೋಜನ ದಾಯಿ**=ಅಂತಹ ಪರಮಾತ್ಮನು ಶಾಶ್ವತವಾದ (ನಿತ್ಯ) ಆನಂದರೂಪವಾದ (ಆನಂದ) ಭೋಜನವನ್ನು (ಭೋಜನ) ಕೊಡತಕ್ಕ [ದಾಯಿ] ಶ್ರೀ ವಾಸುದೇವರೂಪದಿಂದ ಇದ್ದಾನೆ. ॥ ೨೦ ॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಪೂರ್ವೋಕ್ತ ಅನಿರುದ್ಧಾದಿ ಭಗವದ್ರೂಪಗಳು ಭೋಜನಾದಿ ವ್ಯಾಪಾರಗಳು ಮಾಡುವ ಅಧಿಕಾರಿಯ ದೇಹಗತವಾಗಿದ್ದೂನೂ ತನ್ನ ಪಿತೃಗಳನ್ನು ಕೂಡಾ ಸಂರಕ್ಷಣಮಾಡತಾರೆ ಎಂತ ಹೇಳತಾರೆ. ಅಧಿಕಾರಿಯ ಪಾಂಚಭೌತಿಕ ಸ್ಥೂಲದೇಹ ಮಾತಾಪಿತೃಗಳದು ಆಯಿತು. ಈ ದೇಹಗತ ಜೀವನೇನೂ ಮಾತಾಪಿತೃಜೀವನಲ್ಲ. ಬ್ಯಾರೆ ಜೀವ. ಆದ್ದರಿಂದ ದೇಹದಿಂದ ಮಾಡಿದ ಕರ್ಮಗಳೊಳಗೆ ಪಿತೃಗಳಿಗೂ ಭಾಗವದೆ. ದೇಹವಿನಕ್ಷಯಾ ಎಂತ ತಿಳಿಯಬೇಕು. ಯಾಕೆಂದರೆ, ನಮ್ಮ ಮಾತಾಪಿತೃಗಳು ನಮಗೆ ದೇಹದತ್ತರು

ಮಾತ್ರ. ಈ ಸ್ಥೂಲದೇಹದ ಬರಲಿಕ್ಕೆ ನಿಮಿತ್ತಕಾರಣ. ಸ್ಥೂಲದೇಹಗತ ಜೀವ ಅವರದ್ದಲ್ಲ. ಜೀವಬ್ಯಾರೆ. ಜೀವನಿಗೆ ಸಂಬಂಧವಾದ ಸ್ಥೂಲದೇಹ ಅವರ ಮೂಲಕ ಬಂದದ್ದು, ಕರ್ಮಮಾಡತಕ್ಕವ ಅನ್ಯನಾದ ಜೀವ. ಆದ್ದರಿಂದ ಕರ್ಮಮಾಡಿದ್ದಕ್ಕೆ ಇವಗೂ ಭಾಗ ಇರೋದಾಗಿ ಅದೆ. ಅಂತು ಉಭಯರಿಗೂ ಭಾಗ ಉಂಟು. ಅನುಸಂಧಾನದಿಂದ ಭೋಜನಮಾಡಿದ ಪುಣ್ಯ ತನ್ನ ಪಿತೃಗಳಿಗೆ, ಪಿತೃದೇವತೆಗಳಿಗೆ, ಜೀವಗೆ ವಿಭಾಗಕ್ರಮ ಹೇಳಬೇಕಾಗಿ ಪಿತೃಪ್ರಕ್ರಿಯಾ ಪ್ರಸಕ್ತವೆಂದು ತಿಳಿಯಲಿಬೇಕು.

ತ್ರಿನವತಿ=ತೊಂಬತ್ತಮೂರು, ಸ್ವರೂಪಾತ್ಮಕ - ಸ್ವ=ಸ್ವಕೀಯಗಳಾದ, ರೂಪಾತ್ಮಕ=ಈ ೯೩ ರೂಪಗಳುಳ್ಳ [ಪಿತೃದೇವತೆಗಳಿಗೆ, ಪಿತೃಗಳಿಗೆ, ದೇಹದಾರಿಯಾದ ಜೀವಗೆ ಸ್ವಾಮಿಯಾದ ತದಾತ್ಮಕನಾಗಿ ತನ್ನಾಮದಿಂದ ಕರೆಸಿ ಅಂತರ್ಗತವಾದ] ಅನಿರುದ್ಧರೂಪೀ ಶ್ರೀಪರಮಾತ್ಮನು [ಅನಿರುದ್ಧನು]

೯೩ ರೂಪಗಳು ದಾವದೆಂದರೆ, ಅಧಿಕಾರಿಯ ಶರೀರದ ವಿಚಾರ ಹೇಳತಾರೆ. ಅಧಿಕಾರಿಯ ಶರೀರ ಉತ್ಪತ್ತಿ ಹ್ಯಾಂಗೆಂದರೆ :

| | | | |
|---|---|---|---|
| [೧] | ಪಿತನ ರೇತಸ್ಸು | [೧] | ಮಾತೃ ಶುಕ್ಲ |
| [೨] | ಪಿತಾಮಹನ ರೇತಸ್ಸು | [೨] | ಮಾತಾಮಹಿ ಶುಕ್ಲ, |
| [೩] | ಪ್ರಪಿತಾಮಹನ ರೇತಸ್ಸು ಅಂತು ಮೂರು | [೨] | ಮಾತಾ ಪ್ರಪಿತಾಮಹಿ ಶುಕ್ಲ ಅಂತು ಮೂರು |

ಈ ಪ್ರಕಾರ ೬ ವಿಧದಿಂದ ಈ ದೇಹ ನಿರ್ಮಾಣ. ಈ ರೇತಸ್ಸಂಬಂಧ ಪರಂಪರಾದಿಂದ ಬಂದು ದೇಹದಲ್ಲಿ ಸಂಬಂಧಪಟ್ಟಿರುತ್ತದೆ. ಈ ರೇತಸ್ಸಂಭಂಧದಿಂದ ಸೂತಕಾದಿಗಳು, ರೇತಸ್ಸಂಬಂಧ ತಪ್ಪಿದಾಗ ಸೂತಕವಿಲ್ಲ. ಗೋತ್ರ ದಾಯಾದಿಗಳಂತೆ ಕರಿಸತಾರೆ. ಪಿತನ ರೇತಸ್ಸು ದೇಹಕ್ಕೆ ಸಂಬಂಧಿಸಿ ಇರೋ

ಣದ್ದರಿಂದ, ಪಿತೃದೇವತೆಗಳಾದ ವಸುದೇವತೆಗಳು ಎಂಟು ಮಂದಿ ದೇಹಗತನ ಪಿತೃರೇತೋಂಶವನ್ನು ಆಶ್ರಯಿಸಿ ಇದ್ದಾರೆ. ಪಿತಾಮಹನ ರೇತೋಂಶ ವನ್ನು ಏಕಾದಶ ರುದ್ರರು ಆಶ್ರಯಿಸಿ ಇದ್ದಾರೆ. ಪ್ರಪಿತಾಮಹನ ರೇತೋಂಶ ವನ್ನು ದ್ವಾದಶಾದಿತ್ಯರು ಆಶ್ರಯಿಸಿ ಇದ್ದಾರೆ.ಇಷ್ಟು ದೇವತೆಗಳು ದೇಹವಲ್ಲಿ ಆಯಾ ರೇತಸ್ಸುಗಳ ಆಶ್ರಯಿಸಿ ಇದ್ದಾರೆ. ಈ ಮೂವತ್ತೊಂದು ಮಂದಿ ಯಲ್ಲಿ (ವಸುಗಳು ೮+ರುದ್ರರು ೧೧+ಆದಿತ್ಯರು ೧೨) ಅನಿರುದ್ಧ ರೂಪ ಗಳು (೯೩) ಇರೋದಾಗಿ ಅದೆ. ಹ್ಯಾಂಗೆಂದರೆ ಒಬ್ಬೊಬ್ಬರ ಶರೀರ

[೧] ವೈಕಾರಿಕ ಸಾಂಕೇತವಾದ ಮನಸ್ಸು

(೨) ತೈಜಸ ಸಾಂಕೇತವಾದ ದಶೇಂದ್ರಿಯಗಳು

(೩) ತಾಮಸ ಸಾಂಕೇತವಾದ ಪಂಚಭೂತಗಳು.

ಈ ಪ್ರಕಾರ ಮೂರು ಅಹಂಕಾರಗಳಿಂದ ಯುಕ್ತವಾದದ್ದು, ಈ ಪ್ರಕಾರ ೩೧ ಮಂದಿದೇವತೆಗಳಲ್ಲಿ ಸೇರಿಸಿ ಗುಣಿಸಿದರೆ ೩೧ × ೩ = ೯೩ ಆಗತದೆ. ಒಂದೊಂದ ರಲ್ಲಿ ಒಂದೊಂದು ಅನಿರುದ್ಧರೂಪದ ಮೇರಿಗೆ ೯೩ ಅನಿರುದ್ಧನ ರೂಪಗಳು. ತ್ರಿನವತಿಸ್ವರೂಪಾತ್ಮಕ ಅನಿರುದ್ಧನು ಎಂಬುದಕ್ಕೆ ಇದು ತಾತ್ಪರ್ಯ. ಅನ್ಯ ಪಿತೃದೇವತೆಗಳಾದ ಅಗ್ನಿದೇವರು ಪಿತೃರೇತೋಭಾಗದಲ್ಲಿ (ಅನಲ), ಯಮ ದೇವರು ಪಿತಾಮಹನ ರೇತೋಭಾಗದಲ್ಲಿ (ಯಮ), ಚಂದ್ರದೇವರು ಪ್ರಪಿ ತಾಮಹನ ರೇತೋಭಾಗದಲ್ಲಿ [ಸೋಮ] ಇರೋವರಾಗಿದ್ದಾರೆ. ಆದಿಶಬ್ದ ದಿಂದ ಪೂರ್ವೋಕ್ತ ವಸುರುದ್ರಾದಿತ್ಯ ಸಾಂಕೇತರಾದವರು ಗ್ರಾಹ್ಯ. ಈ ಯಾವತ್ತೂ ದೇವತೆಗಳಿಗೆ ಪಿತೃ, ಪಿತಾಮಹ ಮತ್ತು ಪ್ರಪಿತಾಮಹ ಈ ತ್ರಿವಿಧ ಪಿತೃಗಳಿಗೆ (ಪಿತೃದೇವತೆಗಳಿಗೆ) ಅನಿರುದ್ಧನು ನಿರಂತರದಲ್ಲೂ (ಸದಾ ನಿಯಾಮಕಸ್ವಾಮಿಯಾಗಿದ್ದು (ಯಜಮಾನನಾಗಿದ್ದು) ಪೂರ್ವೋಕ್ತ ದೇವತಾ ಸಹಿತನಾಗಿ ಸ್ಥೂಲದೇಹದಲ್ಲಿ ಇದ್ದು, ಅಧಿಕಾರಿಯಿಂದ ಪುಣ್ಯ ಕರ್ಮಗಳ ಮಾಡಿಸಿ, ೩ ವಸುರುದ್ರಾದಿ, ೩ ಅನಿಲಸೋಮಾದಿ ಮತ್ತು ೩ ಪಿತೃಪಿತಾಮ ಈ ಒಂಭತ್ತು ಮಂದಿಗೆ ಸೇರತಕ್ಕ ಪುಣ್ಯಸಮೂಹಾಖ್ಯ ಅನ್ನದೊಳು ತದ್ವಾ

ಚ್ಯನಾಗಿ ಒಂದೊಂದಂಶದಿಂದ ಅನಿರುದ್ಧ ಇದ್ದು "ಅನ್ನ" ಎಂತ ಕರಿಸುತಾನೆ. (ಅನ್ನನೆನಿಪ). ಆ ಅನಿರುದ್ಧನೇ ಪ್ರದ್ಯುಮ್ನರೂಪದಿಂದ (ಆ ಪ್ರದ್ಯುಮ್ನ) ದೇವಭಾಗ ಬ್ಯಾರೆ ಮತ್ತು ಪಿತೃ ಭಾಗ ಬೇರೆಯಾಗಿ ಎರಡು ಪ್ರಕಾರ ವಿಭಾಗ ಮಾಡುತಾನೆಂದು ತಾತ್ಪರ್ಯ. ಆ ಅನಿರುದ್ಧನೇ ಸಂಕರ್ಷಣ ರೂಪ ದಿಂದ (ಸಂಕರುಷಣ) ದೇವಭಾಗ ೬ ಮತ್ತು ಪಿತೃ ಭಾಗ ೩ ಈ ಪ್ರಕಾರ ಒಂಭತ್ತು ಭಾಗ ಮಾಡಿದನಂತರ (ವಿಭಾಗವ ಮಾಡಿ) ಆ ಅನಿರುದ್ಧನೇ "ತುರ್ಯ" ಎಂತ ನಾಮವಾಚ್ಯ ವಾಸುದೇವರೂಪದಿಂದ [ತುರ್ಯನಾಮಕ] ಈ ಒಂಭತ್ತು ಭಾಗವೂ ತೆಗೆದುಕೊಂಡವನಾಗಿ, ಪಿತೃಭಾಗ ಅಗ್ನಿದ್ವಾರಾ, ಪಿತಾ ಮಹನ ಭಾಗ ಯಮನ ದ್ವಾರಾ, ಮತ್ತು ಪ್ರಪಿತಾಮಹನ ಭಾಗ ಸೋಮನ ದ್ವಾರಾ ಆಯಾ ಪಿತೃಗಳು ಎಲ್ಲಿ ಇದ್ದಾರೋ ಅಲ್ಲಿ ಅವರಿಗೆ ಇವರ ದ್ವಾರಾ ಉಣಿಸೋವನಾಗತಾನೆ. (ಉಣಿಪ) ಆರು ಭಾಗ ಆಯಾ ದೇವತೆಗಳಿಗೆ ಕೊಡತಾನೆ. ಅನಲ ಯಮ, ಸೋಮಾದಿ ದೇವತೆಗಳು, ಅಧಿಕಾರಿ ಪ್ರತಿದಿನ ದಲ್ಲಿ ಮಾಡಿದ ಕರ್ಮದೊಳಗೆ ಪಿತ್ರಾದಿ ಮೂರುಮಂದಿಗೆ ಸೇರತಕ್ಕ ಪುಣ್ಯಗಳ ವಾಸುದೇವನ ಆಜ್ಞಾದಿಂದ ಅವರವರು ಅವರವರಿಗೆ ಸೇರಿಸೋ ಕಾರ್ಯದಲ್ಲಿ ಇರತಾರೆ. ಈ ಪ್ರಕಾರ ಅನುಸಂಧಾನ ಯುಕ್ತರಿಗೆ ನಿತ್ಯವಾದ (ನಿತ್ಯ) ಆನಂದಸ್ವರೂಪವನ್ನು (ಆನಂದ) ಭೋಜನಕ್ಕೋಸ್ಕರ [ಭೋಜನ] ವಾಸು ದೇವರೂಪೀ ಶ್ರೀ ಪರಮಾತ್ಮನು ಕೊಡೋವನಾಗತಾನೆ [ದಾಯಿ] ಪೂರ್ವೋಕ್ತ ಪುಣ್ಯದೊಳಗೆ ೧೦ನೆಯ ಭಾಗ ಅಧಿಕಾರಿ ಭಾಗ. ಪುಣ್ಯ ಅಧಿಕಾ ರಿಗೆ ಕೊಡತಾನೆ ಎಂತ ತಾತ್ಪರ್ಯ. ಪೂರ್ವದಲ್ಲಿ ತಾಯಿ ವರ್ಗದಲ್ಲಿ ಹೇಳಿದ ಮಾತಾಪ್ರಪಿತಾಮಹಿ ಎಂಬುವಳು ಮಾತಾಮಹಿಗೆ ತಾಯಿ ಎಂತ ಅರ್ಥ ॥ ೨೦ ॥

(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :

ಪಿತೃದೇವತೆಗಳಿಗೆ ಅನ್ನರಸವಿಭಾಗ ಕ್ರಮವನ್ನು ಹೇಳುತ್ತಾರೆ :- ಅನಿ ರುದ್ಧನಾಮಕ ಶ್ರೀ ಪರಮಾತ್ಮನು ೯೩ ಸ್ವರೂಪಾತ್ಮಕನು. ಅದು ಹೇಗೆಂದರೆ ...ದೇವತೆಗಳು ೧೦ ಮಂದಿಗಳು. ಶ್ರಾದ್ಧಾದಿಗಳಲ್ಲಿ ಸ್ವಾಹಾಕಾರದಿಂ

ಆರಾಧಿತರಾಗುವರು. ಪುರೂರವ, ಆದ್ರಾ ಮೊದಲಾದ ೫ ಮಂದಿಯವರಲ್ಲಿ ಅನಿರುದ್ಧರೂಪವೂ ಮತ್ತು ನಾರಾಯಣ ರೂಪವೂ ಇರುವುವು. ಪಿತೃಗಣಗಳಲ್ಲಿ ಅಮೂರ್ತಗಣಗಳು ೩, ಮೂರ್ತಗಣಗಳು ೪. ಹೀಗೆ ೭ ಗಣಗಳುಂಟು ಒಂದೊಂದು ಗಣದಲ್ಲಿಯೂ ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ರೂಪಗಳು ಇರುವುವು. ಹೀಗೆ ೭×೩=೨೧ ಆದವು. ಇದಕ್ಕೆ ವಿಶ್ವೇದೇವತೆಗಳು ೧೦ ಜನರನ್ನು ಸೇರಿಸಿದರೆ ೩೧ ಜನರಾದರು. ಈ ಒಬ್ಬೊಬ್ಬರಿಗೂ ಯಜಮಾನರೆಂದರೆ ಅಧಿಪತಿಗಳಾದವರು ಅಗ್ನಿ, ಯಮ, ಚಂದ್ರ ಇವರು ಮೂವರು. ಅಂತು ಒಟ್ಟು ೩೧×೩=೯೩ ಸ್ವರೂಪಗಳಿಂದ ಅನಿರುದ್ಧಾದಿ ಪಂಚರೂಪವುಳ್ಳ ಶ್ರೀ ಪರಮಾತ್ಮನು ಅನಿರುದ್ಧ ರೂಪದಿಂದ ಶ್ರಾದ್ಧ ಕರ್ತೃವಿನಲ್ಲಿ ಇರುವನು. ವಿಶ್ವೇದೇವತೆಗಳಲ್ಲಿ ಅನಿರುದ್ಧ, ನಾರಾಯಣರೂಪಗಳಿಂದ ಇರುವನು. ಪ್ರದ್ಯುಮ್ನ ಪಿತೃದೇವತೆಗಳಿಗೆ ಅಭಿಮಾನಿಯಾದ ಅಗ್ನಿ, ಯಮ, ಚಂದ್ರಾದಿಗಳಲ್ಲಿ ಇದ್ದು, ಪಿತೃ ದೇವತೆಗಳಿಗೆ ಪ್ರೇರಕನಾಗಿರುವನು. ಸಂಕರ್ಷನು **ಅಮೂರ್ತಾನಾಂಚ ಮೂರ್ತಾನಾಂ ಪಿತೄಣಾಂ ದೀಪ್ತತೇಜಸಾಂ**"–ಎಂಬ ಪ್ರಮಾಣದಿಂದ ದೇವತೆಗಳು ಮಾಡುವ ಶ್ರಾದ್ಧಾದಿ ಅಮೂರ್ತ ಪಿತೃಗಣಗಳಿಗೂ, ಮೂರ್ತರಾದ ೪ ಗಣಗಳಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ೪ ವರ್ಣದವರು ಮಾಡುವ ಶ್ರಾದ್ಧಗಳನ್ನೂ ವಿಭಾಗಿಸಿ, ಈ ಈ ಪಿತೃಗಣಗಳಲ್ಲಿಯೂ, ವಿಶ್ವೇದೇವತೆಗಳಲ್ಲಿಯೂ ಇದ್ದು, ತಾನು ಸ್ವೀಕರಿಸುವನು. ವಾಸುದೇವನು ವಿಶ್ವೇದೇವತೆಗಳಿಗೂ, ಪಿತೃಗಣಗಳಿಗೂ, ನಿತ್ಯಾನಂದಕರವಾದ ಭೋಜನಗಳನ್ನು ಮಾಡಿಸಿ ತೃಪ್ತಿಪಡಿಸುವನು ॥ ೨೧ ॥

## (೩) "ಭಾವದರ್ಪಣ ಟೀಕಾ"– ವ್ಯಾಖ್ಯಾನ :-

ಅಗ್ನಿ ಯಮ ಸೋಮಾದಿ ಪಿತ್ರಂತರ್ಗತನಾಗಿ ತೊಂಬತ್ತುಮೂರು ರೂಪದಿಂದ ಪಿತೃಗಳಿಗೆ ಅನ್ನಪ್ರದಾನ ದೂಡುವನೆಂದು ಹೇಳುತ್ತಾರೆ- "ತ್ರಿನವತಿ"–ಎಂಬ ಈ ಪದ್ಯದಿಂದ

ಮಹಾಲಯದಲ್ಲಿ ಬರತಕ್ಕಂಥ ತಿಸ್ರಾಷ್ಟಕ ಮೂರುದಿವಸ ಬಿಟ್ಟರೆ

ತೊಂಬತ್ತುಮೂರು ದಿವಸ ಆಗುತ್ತವೆ. ಇದೇ ತ್ರಿನವತಿ ಶ್ರಾದ್ಧವೆಂತ ಅನಿಸಿಕೊಳ್ಳುತ್ತದೆಂದು ದಾಸಾರ್ಯರ ಹೃದಯವು ॥ ೨೧ ॥

## [೪] "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :-

ಅನ್ನರಸವಿಭಾಗ ಪ್ರಕರಣವಾದುದರಿಂದ ಪಿತೃದೇವತೆಗಳಿಗೆ ಅನ್ನ ವಿಭಾಗಮಾಡುವ ಚತುರ್ಮೂರ್ತಿಗಳನ್ನು ಕೆಲವು ಪದ್ಯಗಳಿಂದ ನಿರೂಪಿಸುತ್ತಾರೆ **ತ್ರಿನವತಿ** ಎಂದರೆ, ತೊಂಬತ್ತು ಮೂರು ರೂಪವುಳ್ಳ ಅನಿರುದ್ಧನು ಯಜಮಾನನಾಗಿ ಕರ್ತೃವಿನಲ್ಲಿರುವನು. ಅಗ್ನಿ, ಯಮ, ಸೋಮಾದಿ ಪಿತೃದೇವತೆಗಳಿಗೆ ಸ್ವಾಹಾ ಸ್ವಧಾನ್ನರೂಪದಲ್ಲಿ ಪ್ರದ್ಯುಮ್ನ ಅನ್ನನಾಮಕನಾಗಿರುವನು. ಸಂಕರ್ಷಣನು ಆಯಾಯಾ ಪಿತೃದೇವತೆಗಳಿಗೆ ಅನ್ನವಿಭಾಗಿಸಿಕೊಡುವನು. ನಿತ್ಯಾನಂದ ಭೋಜನ ಕೊಡುವ ತುರ್ಯನೆಂಬ ನಾಲ್ಕನೆಯ ವಾಸುದೇವನು ಉಂಡುಣಿಸುವನು ಎಂದರೆ, ಗರ್ಭಿಣೀಸ್ತ್ರೀ ಉಂಡರೆ ಶಿಶುವಿಗೆ ಉಪಚಯವಾಗುವಂತೆ ತನ್ನ ಸ್ವರಸ ತಾನು ತೆಗೆದುಕೊಂಡು, ಅವರವರ ಯೋಗ್ಯರಸ ಪಿತೃ ದೇವತೆಗಳಿಗೆ ಕೊಡುವನೆಂದರ್ಥ ॥ ೨೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ :-

ಇನ್ನು ಪಿತೃದೇವತೆಗಳಿಗೆ ಅನ್ನರಸವಿಭಾಗ ಮಾಡಿಕೊಡುವ ಪ್ರಕರಣವನ್ನು ತಿಳಿಸುತ್ತಾರೆ ಪ್ರಸಕ್ತ ಈ ೨೧ನೆಯ ಪದ್ಯದಿಂದ.

ನಿತ್ಯತೃಪ್ತನಾದ ಶ್ರೀ ಹರಿಯು ತೊಂಬತ್ತುಮೂರು ರೂಪಗಳಿಂದ ಅನಿರುದ್ಧಾದಿ ನಾಮಕನಾಗಿದ್ದು ತ್ರಿನವತಿ ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. "ತ್ರಿನವತಿ" ಎಂದರೆ ೯೩ ಎಂದರ್ಥ. ಈ ಸಂಖ್ಯಾ ರೂಪಗಳ ವಿವರಣೆಯನ್ನು ವ್ಯಾಖ್ಯಾನಕಾರರು ಎರಡು ರೀತಿಗಳಲ್ಲಿ ಕೊಟ್ಟಿರುತ್ತಾರೆ.

[೧] ಪಿತೃಯಜ್ಞರೂಪವಾದ ಶ್ರಾದ್ಧಾದಿ ಕರ್ಮಗಳಲ್ಲಿ ಪಿತೃದೇವತೆಗಳ ವರ್ಗ ಮೂರು ಪ್ರಕಾರವಾಗಿ ಇದೆ, [೧] ಪಿತೃ (ಕರ್ತೃವಿನ ತಂದೆ)

(೨) ಪಿತಾಮಹ (ಅಜ್ಜ) ಮತ್ತು (೩) ಪ್ರಪಿತಾಮಹ (ಮುತ್ತಾತ) ಹೀಗೆಯೇ ಮಾತೃ ಶ್ರಾದ್ಧ ಕರ್ಮದಲ್ಲಿ [೧] ಮಾತಾ [ಕರ್ತೃವಿನ ತಾಯಿ] [೨] ಮತಾಮಹಿ (ತಾಯಿಯ ಅತ್ತೆ) ಮತ್ತು [೩] ಮಾತಾಪ್ರಪಿತಾಮಹಿ [ತಾಯಿಯ ಅತ್ತೆಯ ಅತ್ತೆ]

ಇದರಲ್ಲಿ ಪಿತೃವಿಗೆ ಸಂಬಂಧಿಸಿದ ೮ ಮಂದಿ ವಸುಗಳು.

ಪಿತಾಮಹನಿಗೆ ಸಂಬಂಧಿಸಿದ ೧೧ ಮಂದಿ ರುದ್ರರು.

ಪ್ರಪಿತಾಮಹನಿಗೆ ಸಂಬಂಧಿಸಿದ ೧೨ ಮಂದಿ ಆದಿತ್ಯರು.

ಈ ಮೂರುವರ್ಗಕ್ಕೆ ನಿಯಾಮಕ ಭಗವದ್ರೂಪಗಳು ಕ್ರಮವಾಗಿ ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ.

| | | |
|---|---|---|
| ಈಗ ವಸುಗಳ ಸಂಖ್ಯೆ | = | ೮ [ಅಷ್ಟ ವಸುಗಳು] |
| ರುದ್ರಗಣದ ಸಂಖ್ಯೆ | = | ೧೧ [ಏಕಾದಶರುದ್ರರು] |
| ಮತ್ತು ಆದಿತ್ಯರ ಸಂಖ್ಯೆ | = | ೧೨ [ದ್ವಾದಶಾದಿತ್ಯರು] |
| ಒಟ್ಟು ಸಂಖ್ಯೆ | = | ೩೧ |

ಈ ಸಂಖ್ಯೆಯನ್ನು ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪತ್ರಯಗಳಿಂದ ಗುಣಿಸಿದರೆ, ೩೧ × ೩ = ೯೩ ರೂಪಗಳಾಗುವುವು. ಇದೇ ತ್ರಿನವತಿ ಸ್ವರೂಪಾತ್ಮಕ ಎಂಬುದರ ಅರ್ಥ.

[೨] ಶ್ರಾದ್ಧಾದಿ ಕರ್ಮಗಳಲ್ಲಿ ಎರಡು ವರ್ಗಗಳನ್ನು ಗಣನೆಗೆ ತೆಗೆದು ಕೊಳ್ಳುತ್ತೇವೆ. [೧] ವಿಶ್ವೇದೇವತೆಗಳು. ಇವರು ಸ್ವಾಹಾಕಾರದಿಂದ ಆರಾಧಿತರಾಗುವರು. ಆಜ್ಯವೇ ಆಹುತಿ. ಇವರ ಸಂಖ್ಯೆ ೧೦.

(೨) ಪಿತೃ ದೇವತೆಗಳು. ಈ ವರ್ಗದಲ್ಲಿ ೭ ಗಣಗಳು. ಇವುಗಳ ಪೈಕಿ ಅಮೂರ್ತಗಣಗಳು ಮೂರು ಮತ್ತು ಮೂರ್ತಗಣಗಳು ನಾಲ್ಕು. ಒಂದೊಂದು ಗಣದಲ್ಲಿಯೂ ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪಗಳು ಇರುವುವು. ಇಂತು ಏಳು ಸಂಖ್ಯಾಕವಾದ ಪಿತೃದೇವತೆಗಳ ಗಣವನ್ನು ಪೂರ್ವೋಕ್ತ ಭಗವದ್ರೂಪತ್ರಯಗಳಿಂದ ಹೆಚ್ಚಿಸಿದರೆ ಆಗ ೭ × ೩ = ೨೧ ರೂಪಗಳಾಗುವುವು. ಇದಕ್ಕೆ ೧೦ ಮಂದಿ ವಿಶ್ವೇದೇವತೆಗಳನ್ನು ಸೇರಿಸಿದರೆ ೩೧ ಆಗುವುದು. ಇವರಿಗೆ ಅಧಿಪತಿಗಳಾಗಿರುವರು ಅಗ್ನಿ, ಯಮ ಮತ್ತು ಚಂದ್ರ ಈ ಮೂವರು. ಈ ಮೂರು ದೇವತೆಗಳ ದ್ವಾರವೇ ಪಿತೃಗಳಿಗೆ ಅನ್ನರಸವಿಭಾಗಕ್ರಮ. ಇದರಿಂದ ೩೧ × ೩ = ೯೩ (ತ್ರಿನವತಿ) ರೂಪಗಳಾದುವು.

ಶ್ರಾದ್ಧಾದಿ ಕರ್ಮಗಳನ್ನು ಮಾಡುತ್ತಿರುವ ಕರ್ತೃವಿನಲ್ಲಿ ಅನಿರುದ್ಧ ನಾಮಕ ಶ್ರೀ ಪರಮಾತ್ಮನು ಇದ್ದು "ಯಜಮಾನ" ನೆಂದೆನಿಸಿಕೊಳ್ಳುವನು. ೯೩ ರೂಪಾತ್ಮಕನಾದ ಅನಿರುದ್ಧನೇ ಕರ್ತೃವಿನಲ್ಲಿ ನಿಯಾಮಕನಾಗಿರುವುದರಿಂದ ಅವನು "ಯಜಮಾನನು." ಯಜಮಾನನಾದ ಈ ಅನಿರುದ್ಧನೇ ಪ್ರದ್ಯುಮ್ನ ರೂಪದಿಂದ ಪಿತೃದೇವತೆಗಳಿಗೆ "ಅನ್ನ"ನಾಮಕನಾಗಿದ್ದಾನೆ. ಸಂಕರ್ಷಣ ರೂಪದಿಂದ ಅನ್ನರಸವಿಭಾಗಮಾಡುವನು. ಈ ವಿಭಾಗಕ್ರಮ ಹೇಗೆಂದರೆ–

ದೇವಭಾಗ ೬ ಮತ್ತು ಪಿತೃಭಾಗ ೩, ಈ ಪ್ರಕಾರ ಒಂಭತ್ತು ಭಾಗ ಮಾಡುವನು. ನಂತರ ಆ ಅನಿರುದ್ಧನೇ ತುರ್ಯನಾಮಕನಾಗಿ ವಾಸುದೇವ ರೂಪದಿಂದ ಸ್ವಾಖ್ಯರಸವನ್ನು ತಾನು ಸ್ವೀಕರಿಸಿ, ಪಿತೃದೇವತೆಗಳಿಗೆ ಭೋಜನ ಮಾಡಿಸುವನು. ಇದು ಮೂರು ಪ್ರಕಾರ –

(೧) ಅಗ್ನಿ ದ್ವಾರಾ ಪಿತೃಭಾಗ. (೨) ಯಮನ ದ್ವಾರಾ ಪಿತಾಮಹನ ಭಾಗ ಮತ್ತು (೩) ಸೋಮನ ದ್ವಾರಾ ಪ್ರಪಿತಾಮಹನ ಭಾಗ ಈ ರೀತಿ ಆಯಾಯಾ ಪಿತೃಗಳು ಎಲ್ಲಿದ್ದಾರೋ, ಅವರಿಗೆ ಉಣಿಸುವವನಾಗುವನು. ಗರ್ಭಿಣೀ ಸ್ತ್ರೀಯು ತಾನು ಭೋಜನಮಾಡಿದರೆ ಗರ್ಭಗತ ಶಿಶುವಿಗೆ ಹೀಗೆ ಅದರ ಭಾಗವು ಸೇರುವುದೋ ಅಂತೆ "ಉಂಡುಣಿಪ".

(೧) ಶ್ರಾದ್ಧ ಕರ್ತೃವಿನಲ್ಲಿ ಅನಿರುದ್ಧ ರೂಪ.

(೨) ಪಿತೃ–ಅಷ್ಟವಸುಗಳು–ಪ್ರದ್ಯುಮ್ನ–ಅಗ್ನಿದ್ವಾರಾ ರಸವಿಭಾಗ.

(೩) ಪಿತಾಮಹ– ಏಕಾದಶ ರುದ್ರರು-ಸಂಕರ್ಷಣ–ಯಮುನ ದ್ವಾರಾ.

(೩) ಪ್ರಪಿತಾಮಹ-ದ್ವಾದಶಾದಿತ್ಯರು-ವಾಸುದೇವ–ಚಂದ್ರನ ದ್ವಾರಾ.

| ಮೂರು ವರ್ಗ | ೩೧ ಮಂದಿ | ರೂಪತ್ರಯ | ದೇವತಾತ್ರಯ |
|---|---|---|---|

## ಪದ್ಯ (೧೯)

ಷಣ್ಣವತಿನಾಮಕನು ವಸು ಮೂ ।
ಗಣ್ಣ ಭಾಸ್ಕರರೊಳಗೆ ನಿಂತು ಪ್ರ ।
ಪನ್ನರನುದಿನ ನಿಷ್ಕಪಟ ಸದ್ಭಕ್ತಿಯಲಿ ಮಾಳ್ಪ ॥
ಪುಣ್ಯ ಕರ್ಮವ ಸ್ವೀಕಸಿ ಕಾ ।
ರುಣ್ಯಸಾಗರನಾ ಪಿತೃಗಳಿಗ ।
ಗಣ್ಯ ಸುಖವಿತ್ತವರ ಪೊರೆವನು ಎಲ್ಲ ಕಾಲದಲಿ ॥ ೨೨ ॥

**ಅವತರಣಿಕೆ :–**

ಷಣ್ಣವತಿ (ತೊಂಭತ್ತಾರು) ಶ್ರಾದ್ಧನಾಮಗಳಿಂದ ಕರೆಸುವ ಕರುಣಾ ಸಾಗರನಾದ ಶ್ರೀಹರಿಯು ಪುಣ್ಯಸಾಂಕೇತವಾದ ಅನ್ನ ವಿಭಾಗಮಾಡಿ, ವಸು ರುದ್ರ ಮತ್ತು ಆದಿತ್ಯರಲ್ಲಿ ನಿಂತು ಪಿತೃ ದೇವತೆಗಳಿಗೆ ಅಗಣ್ಯ ಸುಖವನು

**ಕೊಟ್ಟು**. ಸರ್ವಕಾಲಗಳಲ್ಲಿಯೂ ಅವರನ್ನು ಸಂರಕ್ಷಿಸುತ್ತಾನೆ- ಎಂದು ಹೇಳುತ್ತಾರೆ ಪ್ರಸಕ್ತ ಸಂಧಿಗತ ೨೨ನೆಯ ಈ ಪದ್ಯದಿಂದ ॥ ೨೨ ॥

## ಪ್ರತಿಪದಾರ್ಥ

**ಷಣ್ಣವತಿ ನಾಮಕನು**=ತೊಂಬತ್ತಾರು ನಾಮವುಳ್ಳ ಅನಿರುದ್ಧ ನಾಮಕ ಶ್ರೀಪರಮಾತ್ಮನು **ವಸು**=ಅಷ್ಟವಸುಗಳೊಳಗೆ ಅಹಂಕಾರತ್ರಯದಲ್ಲಿ ಪ್ರದ್ಯುಮ್ನನು ೨೪ ರೂಪಗಳಿಂದಲೂ **ಮೂಗಣ್ಣ**=ಮೂರು ಕಣ್ಣುಗಳುಳ್ಳ ರುದ್ರನೇ ಮೊದಲಾದ ಏಕಾದಶ ರುದ್ರರೊಳಗೆ ಅಹಂಕಾರತ್ರಯದಲ್ಲಿ ೩೩ ಸಂಕರ್ಷಣ ರೂಪದಿಂದಲೂ **ಭಾಸ್ಕರರ**=ದ್ವಾದಶಾದಿತ್ಯರೊಳಗೆ ಅಹಂಕಾರತ್ರಯದಲ್ಲಿ ವಾಸುದೇವನು ೩೬ ರೂಪಗಳಿಂದಲೂ **ಒಳಗೆ**=ಪೂರ್ವೋಕ್ತದೇವತೆಗಳಲ್ಲಿ **ನಿಂತು**=ಅಂತರ್ಯಾಮಿತ್ವೇನ ಇದ್ದು **ಪ್ರಸನ್ನರು**=ಅನುಸಂಧಾನ ತಿಳಿದ ಜ್ಞಾನಿಗಳು **ಅನುದಿನ**=ದಿನಸಾಂಕೇತವಾದ ಪ್ರತಿ ವರುಷದಲ್ಲಿಯೂ (ಪಿತೃಗಳಿಗೆ ಒಂದು ವರುಷ ಒಂದು ದಿನ ಸಾಂಕೇತವು) **ನಿಷ್ಕಪಟ**=ಕಪಟವಿಲ್ಲದ ಅಂದರೆ ನಿರ್ಮಲವಾದ **ಸದ್ಭಕ್ತಿಯಲಿ**=ಮಹಾತ್ಮ್ಯಜ್ಞಾನಪೂರ್ವಕಸುದೃಢ ಸ್ನೇಹರೂಪವಾದ ಭಕ್ತಿಯಿಂದ **ಮಾಳ್ಪ**=ಮಾಡತಕ್ಕ **ಪುಣ್ಯಕರ್ಮವ**=ಪುಣ್ಯರೂಪವಾದ ಪಿತೃಯಜ್ಞರೂಪವಾದ ಕರ್ಮಗಳನ್ನು **ಸ್ವೀಕರಿಸಿ**=ಅನಿರುದ್ಧರೂಪೀ ಶ್ರೀಪರಮಾತ್ಮನು ತಾನು ತೆಗೆದುಕೊಂಡು **ಕಾರುಣ್ಯಸಾಗರನು**=ಕರುಣಾಸಮುದ್ರನು ಆ **ಪಿತೃಗಳಿಗೆ**=ಪಿತೃ, ಪಿತಾಮಹ, ಪ್ರಪಿತಾಮಹ ಮೊದಲಾದ ಪಿತೃದೇವತೆಗಳಿಗೆ **ಅಗಣ್ಯಸುಖವಿತ್ತು**=ಅಪಾರವಾದ ಸಂತೋಷಗಳನ್ನು ಕೊಟ್ಟು **ಅವರ**=ಆ ಪಿತೃಗಳನ್ನು ಮತ್ತು ಅಧಿಕಾರಿಯನ್ನು ಎಲ್ಲ **ಕಾಲದಲಿ**=ಯಾವಾಗಲೂ **ಪೊರೆವನು**=ಜ್ಞಾನ, ಭಕ್ತಿ, ಐಶ್ವರ್ಯ, ಪುತ್ರ ಪೌತ್ರಾದಿಗಳನ್ನು ಕೊಟ್ಟು ಸಂರಕ್ಷಿಸುವನು ॥ ೨೨ ॥

# ವ್ಯಾಖ್ಯಾನಗಳು

## (೧) ಸಂಕರ್ಷಣ ಒಡೆಯರ ವ್ಯಾಖ್ಯಾನ :

ಪಿತೃಗಳಿಗೆ ಸ್ವಾಮಿಯಾದ ಗದಾಧರನ ಪ್ರೀತ್ಯರ್ಥವಾಗಿ ಷಣ್ಣವತಿ ಶ್ರಾದ್ಧಾಖ್ಯ ಪುಣ್ಯಸಾಂಕೇತವಾದ ಅನ್ನ ವಿಭಾಗಮಾಡಿ ಸೇರಿಸೋ ಕ್ರಮ ಹೇಳತಾರೆ. ಷಣ್ಣವತಿನಾಮಕನು (೯೬) ನಾಮವುಳ್ಳ ಅನಿರುದ್ಧನಾಮಕ ಪರಮಾತ್ಮನು. ಷಣ್ಣವತಿ ಶ್ರಾದ್ಧಗಳ ವಿವರ ಇಂತಿದೆ :–

ಮನ್ವಾದಿಗಳು–೧೪, ಮಹಾಲಯ (ಪಿತೃಪಕ್ಷ)–೧೬, ಯುಗ ಹುಟ್ಟಿದ ದಿನಗಳು–೪ ಮೇಷಾದಿ ಪರ್ವಕಾಲಗಳು–೧೨, ಅಮಾವಾಸ್ಯಗಳು-೧೨, ವ್ಯತೀಪಾತಗಳು–೧೩, ವೈಧೃತಿಗಳು-೧೩, ಮತ್ತು ತಿಸ್ರಾಷ್ಟಕಗಳು-೧೨ ಇವುಗಳನ್ನು ಒಟ್ಟು ಕೂಡಿದರೆ, ೯೬ ಆಗುವುವು.

**ಪ್ರಮಾಣ:- "ಅಮಾಮನು ಯುಗ ಕ್ರಾಂತಿ ವ್ಯತೀಪಾತ ಮಹಾಲಯಾಃ। ತಿಸ್ರಾಷ್ಟಕಾ ಇಮಾ : ಪ್ರೋಕ್ತಾ : ಪುಣ್ಯವತ್ಯ ಃ ಪ್ರಕೀರ್ತಿತಾಃ ॥**

ಇಂತು ಷಣ್ಣವತಿ ಅಂದರೆ ತೊಂಭತ್ತಾರು ನಾಮಗಳಿಂದ ಕರೆಸುತ, ಅಷ್ಟವಸುಗಳೊಳಗೆ ಅಹಂಕಾರತ್ರಯದಲ್ಲಿ ಪ್ರದ್ಯುಮ್ನನು ೨೪ ರೂಪಗಳಿಂದಲೂ, ಮೂರುನೇತ್ರಗಳು ಉಳ್ಳ ರುದ್ರನೇ ಮೊದಲಾದ ಏಕಾದಶ ರುದ್ರರ ಅಹಂಕಾರತ್ರಯದಲ್ಲಿ ಸಂಕರ್ಷಣನು ೩೩ ರೂಪಗಳಿಂದಲೂ, ದ್ವಾದಶಾದಿತ್ಯರ ಅಹಂಕಾರತ್ರಯದಲ್ಲಿ ವಾಸುದೇವನು ೩೬ ರೂಪಗಳಿಂದಲೂ ಅಸಲ, ಯಮ ಮತ್ತು ಸೋಮಾದಿಗಳಲ್ಲಿ ಮೂರು ರೂಪದಿಂದಲೂ. ಈ ಪ್ರಕಾರ ಅಂತು ೯೬ ರೂಪದಿಂದಲೂ ಅಧಿಕಾರಿ ಶರೀರದಲ್ಲಿ ಇರತಕ್ಕ, ಪೂರ್ವೋಕ್ತ ದೇವತೆಗಳಲ್ಲಿ ನಿಂತು, ಅನುಸಂಧಾನ ತಿಳಿದ ಜ್ಞಾನಿಗಳು (ಪ್ರಪ

ನ್ನರು) ಮಾಡುವ ಹೇಗೆಂದರೆ, ಪಿತೃಗಳಿಗೆ ಒಂದು ವರ್ಷ ಒಂದುದಿನ ಸಾಂಕೇತವು. ಆದ್ದರಿಂದ ದಿನ ಸಾಂಕೇತವಾದ ಪ್ರತಿವರ್ಷದಲ್ಲಿಯೂ (ಅನುದಿನ) ಕಾಪಟ್ಯದಿಂದ ರಹಿತವಾದ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹರೂಪವಾದ ಭಕ್ತಿಯನ್ನು ಶ್ರೀ ಪರಮಾತ್ಮನಲ್ಲಿಯೂ, ಪಿತೃಗಳಲ್ಲಿಯೂ ಮಾಡತಕ್ಕ ಪುಣ್ಯರೂಪವಾದ ಪಿತೃಕರ್ಮವನ್ನು ಸ್ವೀಕಾರಮಾಡಿ (ಅನಿರುದ್ಧನು), ಸಂಪೂರ್ಣ ಅಂತಃಕರಣವುಳ್ಳ (ಕಾರುಣ್ಯಸಾಗರ) ಅಗಣಿತ ಸುಖರೂಪಿಯಾದ ಈ ಅನಿರುದ್ಧರೂಪಿಯಾದ ಪರಮಾತ್ಮ, ಈ ಅಧಿಕಾರಿಯು ಯಾವ ರೇತಸ್ಸಿನಿಂದ ಉತ್ಪನ್ನನಾಗಿದ್ದಾನೋ ಆ ಪಿತೃಗಳಿಗೆ ಅಗ್ನಿ, ಯಮ ಮತ್ತು ಸೋಮ ಇವರುಗಳ ದ್ವಾರಾ ಇತ್ತು ಆ ಪಿತೃಗಳನ್ನೇನು, ಕಾರ್ಯ ಮಾಡಿದ ಅಧಿಕಾರಿಯನ್ನೇನು ಜ್ಞಾನ, ಭಕ್ತಿ, ಐಶ್ವರ್ಯ ಪುತ್ರ್ಸಪೌತ್ರಾದಿಗಳನ್ನು ಕೊಟ್ಟು ಸಂರಕ್ಷಿಸುವನು. ಸದಾಕಾಲದಲಿ ಎಂತ ತಾತ್ಪರ್ಯ. ಇದು ಕಾಲಶ್ರಾದ್ಧ ವ್ಯತಿರಿಕ್ತ ಅನ್ಯಶ್ರಾದ್ಧ ವಿಚಾರ ಎಂತ ತಾತ್ಪರ್ಯ ॥ ೨೨ ॥

## (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಒಂದು ವರ್ಷದಲ್ಲಿ ೯೬ ಶ್ರಾದ್ಧಗಳು ಬರುವುವು. ಅವು ಯಾವುವೆಂದರೆ :- ೧೪ ಮನ್ವಾದಿಗಳು, ೪ ಯುಗಾಧಿಗಳು, ಭಾದ್ರಪದ ಬಹುಳ ಪ್ರತಿಪದ ಮೊದಲು ಬಹುಳ ಅಮಾವಸ್ಯೆಯವರೆವಿಗೂ ಮಹಾಲಯ ಶ್ರಾದ್ಧ-೧೫, ಮೇಷಾದಿ ಸಂಕ್ರಮಣಗಳು-೧೨, ಅಮಾವಸ್ಯಗಳು-೧೨, ವ್ಯತೀಪಾತಗಳು-೧೩, ವೈಧೃತಿಗಳು-೧೩, ತಿಸ್ರಾಸ್ಪೃಕಗಳು-೧೨, ಮೃತತಿಥಿ-೧. ಹೀಗೆ ೯೬ ಶ್ರಾದ್ಧ ಹೀಗೆ ಭೋಕ್ತನಾದುದರಿಂದ ಷಣ್ಣವತಿ ಸ್ವರೂಪಿಯೆಂದು ಹೆಸರು ಪಡೆದಿರುವನು.

ಪಿತೃ, ಪಿತಾಮಹ ಮತ್ತು ಪ್ರಪಿತಾಮಹರಲ್ಲಿ ವಸು, ರುದ್ರ ಮತ್ತು ಆದಿತ್ಯರೂಪಗಳಿಂದ ಇರುವನು. ಪ್ರದ್ಯುಮ್ನನು ವಸುರೂಪನಾಗಿಯೂ, ಸಂಕರ್ಷಣನು ರುದ್ರರೂಪನಾಗಿಯೂ ಮತ್ತು ವಾಸುದೇವನು ಆದಿತ್ಯರೂಪನಾಗಿಯೂ ಇರುವನು. ವಸುಗಳು-೮, ರುದ್ರರು-೧೧ ಮತ್ತು ಆದಿತ್ಯರು-೧೨. ಅಂತು ೩೧. ಹೀಗೆ ೩೧ ರೂಪಗಳಿಂದ ವಸುರುದ್ರಾದಿತ್ಯರುಗಳ ದೇಹ

ದೊಳಗೆ ಅಹಂಕಾರಜನ್ಯ ಅಂದರೆ, ವೈಕಾರಿಕಾಹಂಕಾರ ಜನ್ಯ ಮನಸ್ಸು, ತೈಜಸಾಹಂಕಾರಜನ್ಯ ಇಂದ್ರಿಯಗಳು ಮತ್ತು ತಾಮಸಾಹಂಕಾರ ಜನ್ಯ ಪಂಚ ಭೂತಗಳು. ಹೀಗೆ ವೈಕಾರಿಕಾದಿ ಅಹಂಕಾರತ್ರಯಗಳಲ್ಲಿ ವ್ಯಾಪಿಸಿಕೊಂಡಿರುವುದರಿಂದ ೩೧×೩=೯೩. ಪಿತೃ, ಪಿತಾಮಹ ಮತ್ತು ಪ್ರಪಿತಾಮಹ ಈ ೩. ಅಂತು, ೯೬ ರೂಪಗಳಿಂದ ಪಿತೃಗಳಲ್ಲಿದ್ದು, ತನ್ನನ್ನು ಶರಣುಹೊಂದಿರುವ ಅಂದರೆ, ವಂಶೀಯರು ಪಿತೃಗಳ ಉದ್ದೇಶವಾಗಿ ನಿಷ್ಕಪಟದಿಂದಲೂ, ಭಕ್ತಿಯಿಂದಲೂ ಶ್ರಾದ್ಧಾದಿಗಳನ್ನು ಮಾಡಿದರೆ, ಅವುಗಳನ್ನು ಸ್ವೀಕರಿಸಿ, ಕರುಣಾ ಸಮುದ್ರನಾದ ಹರಿಯು ಆ ಪಿತೃಗಳಿಗೆ ಅನಂತಸುಖವನ್ನು ಕೊಟ್ಟು ಸರ್ವಕಾಲದಲ್ಲಿಯೂ, ಆ ಪಿತೃಗಳನ್ನು ಮತ್ತು ಶ್ರಾದ್ಧಮಾಡುವವರನ್ನೂ ಸಹ ಸಂರಕ್ಷಣೆ ಮಾಡುವನು ॥ ೨೨ ॥

(೩) "ಭಾವದರ್ಪಣ ಟೀಕಾ" -ವ್ಯಾಖ್ಯಾನ:—

ಪುನಃ ದಾರಥ್ಯಕ್ಯೋಸ್ಕರ ಷಣ್ಣವತಿ ವಾಚ್ಯನಾಗಿದ್ದಾನೆಂದು ಹೇಳುತ್ತಾರೆ. "ಷಣ್ಣವತಿ" ಎಂಬ ಪದ್ಯದಿಂದ.

ಇದಕ್ಕೆ ವಿವರ :—ಅಮಾವಸ್ಯ (೧೨), ಮನ್ವಾದಿ (೧೪), ಯುಗಾದಿ (೪), ಸಂಕ್ರಮಣ (೧೨), ವೈಧೃತಿ [೧೨), ವ್ಯತೀಪಾತ (೧೨) ಮಹಾಲಯ (೧೫), ತಿಸ್ರಾಷ್ಟಕ [೧೫) ತಿಸ್ರಾಷ್ಟಕಕ್ಕೆ ವಿವರ : ಭಾದ್ರಪದವದ್ಯ ೮-೯-೧ ಇದರಂತೆ ಮಾರ್ಗಶಿರ ವದ್ಯದಲ್ಲಿ ೩ ದಿವಸ ಪುಷ್ಯವದ್ಯದಲ್ಲಿ ೩. ಮಾಘ ವದ್ಯದಲ್ಲಿ ೩, ಫಾಲ್ಗುಣವದ್ಯದಲ್ಲಿ ೩. ಅಹತ್ಯ ೧೫ ದಿವಸವೆಂದು ತಿಳಿಯತಕ್ಕದ್ದು, ಎಲ್ಲಾ ಕೂಡಿ ೯೬ ದಿವಸಗಳು, ಷಣ್ಣವತಿನಾಮಕನು ಭಕ್ತಿಪೂರ್ವಕ ಮಾಡಲ್ಪಟ್ಟ ಪುಣ್ಯಸ್ವೀಕರಿಸಿ,ಪಿತೃಗಳಿಗೆ ಅನ್ನಾಖ್ಯಸುಖ ಕೊಡುತ್ತಾನೆಂಬ ತಾತ್ಪರ್ಯ. ಈ ಷಣ್ಣವತಿ ವಿಯದಲ್ಲಿ ಪ್ರಮಾಣ :

"ಅಮಾಮನುಯುಗ ಕ್ರಾಂತ ಧೃತಿಃ ಪಾತ ಮಹಾಲಯಾಃ ।
ತಿಸ್ರಾಷ್ಟಕ ಇಮಾ ಪ್ರೋಕ್ತಾಃ ಷಣ್ಣವತ್ಯಃ ಪ್ರಕೀರ್ತಿತಾಃ ॥"
—ಇತಿ ಜ್ಯೋತಿಷ್ಯಮಾನೋಕ್ತೇಃ ॥ ೨೨ ॥

(೪) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಷಣ್ಣವತಿ ಶಬ್ದವಾಚ್ಯ ಶ್ರೀಹರಿಯು ವಸು ರುದ್ರ ಆದಿತ್ಯರೆಂಬ ದೇವತೆಗಳಲ್ಲಿದ್ದು, ತನ್ನ ನಂಬಿದವರು ನಿತ್ಯದಲ್ಲೂ ನಿಷ್ಕಪಟ ಸದ್ಭಕ್ತಿಯಿಂದ ಮಾಡುತ್ತಿರುವ ಪುಣ್ಯಕರ್ಮಫಲವನ್ನು ಸ್ವೀಕರಿಸಿ, ಅವರ ಪಿತೃಗಳಿಗೆ ಅಗಣ್ಯ ಎಂದರೆ ಅನಂತಸುಖವನ್ನು ಕೊಟ್ಟು, ಅವರನ್ನು ಸರ್ವದಾ ರಕ್ಷಿಸುವನು. ಆದ್ದರಿಂದ ಕರುಣಾಸಾಗರನು ॥ ೨೨ ॥

ಸರ್ವವ್ಯಾಖ್ಯಾನಸಾರಸಂಗ್ರಹ:—

ಒಂದು ವರ್ಷದಲ್ಲಿ ತೊಂಭತ್ತಾರು ಸಂಖ್ಯಾಕವಾದ ಶ್ರಾದ್ಧಗಳು ಬರುವವು. ಇವುಗಳಿಗೆ ಷಣ್ಣವತಿ [೯೬] ಶ್ರಾದ್ಧಗಳೆಂದು ಹೆಸರು. ಇಂತಹ ತೊಂಬತ್ತಾರು ಸಂಖ್ಯಾಕವಾದ ನಾಮವುಳ್ಳ ಅನಿರುದ್ಧರೂಪೀ ಶ್ರೀಪರಮಾತ್ಮನು "ಷಣ್ಣವತಿ" ನಾಮಕನೆಂದು ಪ್ರಸಿದ್ಧನಾಗಿರುವನು. ಈ ಷಣ್ಣವತಿ ಶ್ರಾದ್ಧಗಳ ವಿವರ ಇಂತಿದೆ :—

ಈ ಸಂಖ್ಯೆಯನ್ನು ಎರಡು ಪ್ರಕಾರ ವಿವರಿಸಬಹುದು. [೧] ಕಾಲಮಾನ ರೀತ್ಯಾ ಮತ್ತು [೨] ಪಿತೃದೇವತೆಗಳ ವಿವಕ್ಷೆಯಾದಿಂದ.

[೧] ಕಾಲಮಾನ ರೀತ್ಯಾ ವಿವರ :—

| | | |
|---|---|---|
| [೧] | ಮನ್ವಾದಿಗಳು | =೧೪ |
| [೨] | ಯುಗಾದಿಗಳು | = ೪ [ಯುಗಹುಟ್ಟಿದ ದಿನಗಳು] |
| [೩] | ಮೇಷಾದಿ ಪರ್ವಕಾಲಗಳು | =೧೨ |
| [೪] | ಅಮಾವಾಸ್ಯೆಗಳು | =೧೨ |
| [೫] | ಮಹಾಲಯ | =೧೫ [ಪಿತೃಪಕ್ಷ] |
| ]೬] | ವ್ಯತೀಪಾತಗಳು | =೧೨ |
| [೭] | ವೈಧೃತಿಗಳು | =೧೨ |
| [೮] | ತಿಸ್ರಾಷ್ಟಕಗಳು | =೧೫ |
| | ಒಟ್ಟು ಸಂಖ್ಯೆ | =೯೬ [ತೊಂಭತ್ತಾರು] |

ತ್ರಿಸ್ಪೃಶಗಳ ವಿವರ :

[೧] ಭಾದ್ರಪದ ಮಾಸದ ವದ್ಯದಲ್ಲಿ = ೩ ದಿನಗಳು (೮-೯-೧)
[೨] ಮಾರ್ಗಶಿರ ವದ್ಯದಲ್ಲಿ = ೩ ದಿವಸಗಳು
[೩] ಪುಷ್ಯ ವದ್ಯದಲ್ಲಿ = ೩ ದಿವಸಗಳು
[೪] ಮಾಘ ವದ್ಯದಲ್ಲಿ = ೩ ದಿವಸಗಳು
[೫] ಫಾಲ್ಗುಣ ವದ್ಯದಲ್ಲಿ = ೩ ದಿವಸಗಳು

ಒಟ್ಟು = ೧೫ ದಿವಸಗಳು.

ಕೆಲವು ವ್ಯಾಖ್ಯಾನಗಳಲ್ಲಿ ವ್ಯತೀಪಾತಗಳು ೧೩ ಮತ್ತು ವೈಧೃತಿಗಳು ೧೩ ಎಂದು ನಿರೂಪಿತವಾಗಿದೆ. ಆದರೆ ಜೋತಿಷ್ಯದ ಪ್ರಕಾರ ತಿಸ್ಪ್ರಷ್ಟಗಳು ೧೫ ಎಂದಿರುವುದರಿಂದ. ಮೇಲಿನ ರೀತಿಯಲ್ಲಿ ಸಂಖ್ಯೆಗಳನ್ನು ಸಂಪಾದಿಸಿ ಕೊಂಡರೆ, ೯೬ ಎಂಬ ಸಂಖ್ಯಾಗಣನೆಗೆ ಹೊಂದಿಕೊಳ್ಳುವುದು. ಮನುಗಳು-೧೪, ಚತುರ್ಯುಗಗಳು-೪, ಮೇಷಾದಿ ಸಂಕ್ರಮಣಗಳು-೧೨, ಅಮಾವಸ್ಯೆಗಳು-೧೨ ಮತ್ತು ಪಿತೃಪಕ್ಷ-೧೫ ಎಂಬ ಸಂಖ್ಯಗಳು ನಿಯತವಾಗಿರುವುದರಿಂದ ಮೇಲ್ಕಂಡ ಕಾಲಮಾನ ಸೂಕ್ತವೆಂದೆನಿಸುವುದು.

## [೨] ಪಿತೃದೇವತೆಗಳ ವಿವಕ್ಷಯಾದಿಂದ :-

ಪಿತೃದೇವತೆಗಳಲ್ಲಿ ಮೂರು ವರ್ಗಗಳು :-

[೧] ಪಿತೃ (೨) ಪಿತಾಮಹ ಮತ್ತು [೩] ಪ್ರಪಿತಾಮಹ,

[೧] ಪಿತೃ ವರ್ಗಕ್ಕೆ ಅಷ್ಟವಸುಗಳು. ಸಂಖ್ಯೆ ಎಂಟು.

(೨) ಪಿತಾಮಹ ವರ್ಗಕ್ಕೆ ಏಕಾದಶರುದ್ರರು. ಸಂಖ್ಯೆ ಹನ್ನೊಂದು,

(೩) ಪ್ರಪಿತಾಮಹ ವರ್ಗಕ್ಕೆ ದ್ವಾದಶಾದಿತ್ಯರು. ಸಂಖ್ಯೆ ಹನ್ನೆರಡು

ಪುನಃ ವಸು ರುದ್ರ ಮತ್ತು ಆದಿತ್ಯರು. ಇವರಲ್ಲಿ ಪ್ರತಿಯೊಬ್ಬರ ಶರೀರದಲ್ಲಿಯೂ ವಿದ್ಯಮಾನವಾಗಿರುವ ಅಹಂಕಾರತ್ರಯಗಳು.

ಅಹಂಕಾರ ತತ್ತ್ವವು ತ್ರಿದಳಾತ್ಮಕವಾದದ್ದು.

[೧] ವೈಕಾರಿಕ ಇದರಿಂದ ಜನ್ಯ ಮನಸ್ಸು.

[೨] ತೈಜಸ. ಇದರಿಂದ ಜನ್ಯ ದಶೇಂದ್ರಿಯಗಳು.

[೩] ತಾಮಸ. ಇದರಿಂದ ಜನ್ಯ ಪಂಚಭೂತಗಳು.

ಎಂಟು ವಸುಗಳು × ಅಹಂಕಾರತ್ರಯ = ೮ × ೩ = ೨೪ ರೂಪಗಳು.

ಹನ್ನೊಂದು ರುದ್ರರು × ಅಹಂಕಾರತ್ರಯ = ೧೧ × ೩ = ೩೩ ರೂಪ ಗಳು

ಹನ್ನೆರಡು ಆದಿತ್ಯರು × ಅಹಂಕಾತ್ರಯ = ೧೨ × ೩ = ೩೬ ರೂಪಗಳು

ಅಗ್ನಿ, ಯಮ ಮತ್ತು ಚಂದ್ರ ಇವರ ಅಂತರ್ಗತ ರೂಪಗಳು = ೩

ಒಟ್ಟು = ೯೬ ರೂಪಗಳು

ಇಂತು ಪಿತೃವಿಗೆ ನಿಯಾಮಕರಾದ ಅಷ್ಟವಸುಗಳಲ್ಲಿ ಪ್ರದ್ಯುಮ್ನನು ೨೪ ರೂಪಗಳಿಂದಲೂ, ಪಿತಾಮಹ ವರ್ಗಕ್ಕೆ ನಿಯಾಮಕರಾದ ಏಕಾದಶ ರುದ್ರರಲ್ಲಿ ಸಂಕರ್ಷಣನೂ ೩೩ ರೂಪಗಳಿಂದಲೂ ಮತ್ತು ಪ್ರಪಿತಾಮಹ ವರ್ಗಕ್ಕೆ ನಿಯಾಮಕರಾದ ದ್ವಾದಶಾದಿತ್ಯರಲ್ಲಿ ವಾಸುದೇವನು ೩೬ ರೂಪಗಳಿಂದಲೂ ವಿದ್ಯಮಾನನಾಗಿದ್ದಾನೆ. ಅಲ್ಲದೇ ಪಿತೃಗಳಿಗೆ ಅಗ್ನಿದ್ವಾರಾ, ಪಿತಾಮಹನಿಗೆ ಯಮನ ದ್ವಾರಾ ಮತ್ತು ಪ್ರಪಿತಾಮಹನಿಗೆ ಚಂದ್ರನ ದ್ವಾರಾ.

ಪ್ರದ್ಯುಮ್ನನು ಅನ್ನ ಶಬ್ದವಾಚ್ಯನಾಗಿದ್ದು, ಸಂಕರ್ಷಣರೂಪದಿಂದ ಅನ್ನ ರಸವಿಭಾಗಮಾಡಿ, ವಾಸುದೇವ ರೂಪದಿಂದ ಆನಂದದಾಯಕನಾಗಿದ್ದು, ರೂಪತ್ರಯಗಳಿಂದ ಪ್ರಖ್ಯಾತನಾಗಿದ್ದಾನೆ. ಹೀಗೆ ಷಣ್ಣವತಿ ನಾಮದಿಂದ ಪರಿಶೋಭಿತನಾದ ಅನಿರುದ್ಧನು ತನ್ನ ಚರಣಾರವಿಂದಗಳಲ್ಲಿ ನಿಷ್ಕಲ್ಮಶವಾದ ಮನಸ್ಸಿನಿಂದ [ನಿಷ್ಕಪಟ] ಹಾಗೂ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹ ರೂಪವಾದ ಭಕ್ತಿಯಿಂದ ಸೇವೆ ಮಾಡುವ ಪ್ರಪನ್ನರಾದ ಶ್ರಾದ್ಧಕರ್ತೃಗಳು ಮಾಡುವ ಪುಣ್ಯರೂಪವಾದ ಕರ್ಮಗಳನ್ನು ಸ್ವೀಕರಿಸುವನು. ಕರುಣಾಮಯನಾದ ಶ್ರೀ ಹರಿಯು ಪಿತೃದೇವತೆಗಳಿಗೆ ಅನಂತವಾದ ಸುಖವನ್ನಿತ್ತು, ಅವರನ್ನು ಸಂತೋಷಗೊಳಿಸಿ, ಸರ್ವಕಾಲದಲ್ಲಿಯೂ [ಅವರು ಎಲ್ಲಿಯೇ ಇರಲಿ] ಸಂರಕ್ಷಿಸುವನು ॥ ೨೨ ॥

## ಪದ್ಯ (೨೨)

**ಸುತಪನೇಕೋತ್ತರ ಸುಪಂಚಾ ।**
**ಶತವರಣ ಕರಣದಿ ಚತುರ್ವಿಂ ।**
**ಶತಿ ಸುತತತ್ತ್ವಾದಿ ಧಾತುಗಳೊಳಗಿದ್ದವಿರತನಿರುದ್ಧ ॥**
**ಜತನ ಮಾಳ್ಪನು ಜಗದಿ ಜೀವ ।**
**ಪ್ರತತಿಗಳ ಷಣ್ಣವತಿನಾಮಕ ।**
**ಚತುರಮೂರ್ತಿಗಳರ್ಚಿಸುವರದರಿಂದ ಬಲ್ಲವರು ॥ ೨೩ ॥**

**ಅವತರಣಿಕೆ:—**

ಜ್ಞಾನಸ್ವರೂಪಿಯಾದ ಅನಿರುದ್ಧನಾಮಕ ಶ್ರೀ ಪರಮಾತ್ಮನು ಅಕಾರಾದಿ ಕ್ಷಕಾರ ಪರ್ಯಂತ ೫೧ ಅಕ್ಷರಗಳಲ್ಲಿ ವರ್ಣಾತ್ಮಕನಾಗಿದ್ದು, ಇಂದ್ರಿಯಗಳಲ್ಲಿ ನಿಯಾಮಕನಾಗಿದ್ದು, ೨೪ ತತ್ತ್ವಗಳಲ್ಲಿ ಅಧಿಷ್ಠಿತನಾಗಿದ್ದು ತ್ವಗಾದಿ ಸಪ್ತ ಧಾತುಗಳಲ್ಲಿದ್ದು, ಜಗತ್ತಿನಲ್ಲಿ ಸಮಸ್ತ ಜೀವಸಮೂಹವನ್ನು

ಸಂರಕ್ಷಿಸುತ್ತಿರುವ ೯೬ ರೂಪಾತ್ಮಕನಾದ ಷಣ್ಣವತಿನಾಮಕನು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ–ಎಂಬ ನಾಲ್ಕು ರೂಪಗಳಿಂದ ವಿರಾಜಮಾನನಾಗಿರುವ ಶ್ರೀ ಪರಮಾತ್ಮನನ್ನು ಸುಜ್ಞಾನಿಗಳು ಪೂಜಿಸುವರು-ಎಂದು ತಿಳಿಸುತ್ತಾರೆ- "ಸುತಪ" ಎಂಬ ಪ್ರಸಕ್ತಸಂಧಿಗತ ೨೩ನೆಯ ಈ ಪದ್ಯದಿಂದ ॥ ೨೩ ॥

**ಪ್ರತಿಪದಾರ್ಥ** :–

**ಸುತಪ**=ಜ್ಞಾನಸ್ವರೂಪನಾದ [ಸುತ=ಬ್ರಹ್ಮಾದಿ ಜೀವರನ್ನು **ಪ**=ಪಾಲನೆಮಾಡತಕ್ಕ ಭಗವಂತ ಎಂತಲೂ ತಾತ್ಪರ್ಯ) (ಸೂರ್ಯನಲ್ಲಿ ತನ್ನ ತೇಜಸ್ಸನ್ನು ಇಟ್ಟು ಜಗತ್ತನ್ನು ಬೆಳಗಿಸುವುದರಿಂದ–"ಸುತಪ"-ಎಂತಲೂ ಹೆಸರು] **ಏಕೋತ್ತರ**=ಒಂದು ಹೆಚ್ಚಾದ **ಪಂಚಾಶತ**=ಐವತ್ತು ಅಂದರೆ ೧+೫೦=೫೧ (ಐವತ್ತೊಂದು) ಸಂಖ್ಯಾಕವಾದ **ವರಣ**=ಅಕ್ಷರ ಗಳಲ್ಲಿ,ಅಂದರೆ ೫೧ ವರ್ಣಗಳಲ್ಲಿ **ಕರಣದಿ**=ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು ಮತ್ತು ಮನಸ್ಸು ಈ ಏಕಾದಶೇಂದ್ರಿಯಗಳಲ್ಲಿ [ಹನ್ನೊಂದು ಇಂದ್ರಿಯಗಳು] **ಚತುರ್ವಿಂಶತಿ ಸುತತ್ತ್ವದಿ**=ಇಪ್ಪತ್ನಾಲಕ್ಕು ತತ್ತ್ವಗಳಲ್ಲಿ ಸಮೀಚೀನವಾದ ಕೇಶವಾದಿ ೨೪ ರೂಪಗಳಿಂದ **ಧಾತುಗಳೊ ಳಗೆ**=ತ್ವಗಾದಿ ಏಳು ಧಾತುಗಳಲ್ಲಿ **ಇದ್ದು**=ಅಧಿಷ್ಠಿತನಾಗಿದ್ದುಕೊಂಡು **ಅವಿರತ**=ಎಡಬಿಡದೆ (ಅವಿಚ್ಛಿನ್ನವಾಗಿ) **ಅನಿರುದ್ಧ**=ಅನಿರುದ್ಧ ನಾಮಕ ಶ್ರೀಪರಮಾತ್ಮನು **ಜಗದಿ**=ಜಗತ್ತಿನಲ್ಲಿ **ಜೀವಪ್ರತತಿಗಳ**=ಜೀವಸಮೂಹ ವನ್ನು **ಜತನವಾಳ್ಪನು**=ಸಂರಕ್ಷಿಸುವನು **ಅದರಿಂದ**=ಈ ಕಾರಣದಿಂದ **ಬಲ್ಲವರು**=ಜ್ಞಾನಿಗಳು **ಷಣ್ಣವತಿನಾಮಕ**=೯೬ ಪೂರ್ವೋಕ್ತ ಷಣ್ಣವತಿ ನಾಮಕನಾದ ಶ್ರಾದ್ಧಸ್ವಾಮಿಯಾದ **ಚತುರಮೂರ್ತಿಗಳ**=ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ನಾಲ್ಕು ರೂಪಾತ್ಮಕ ನಾದ ಭಗವಂತನನ್ನು **ಅರ್ಚಿಸುವರು**=ಪಿತೃ ಕಾರ್ಯಗಳಲ್ಲಿ ಪೂಜಿ ಸುವರು ॥ ೨೩ ॥

# ವ್ಯಾಖ್ಯಾನಗಳು

## [೧] ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಅನುಸಂಧಾನ ಅರಿತವರು ಪಿತೃಕಾರ್ಯಗಳಲ್ಲಿ ಅನಿರುದ್ಧಾದಿ ರೂಪಗಳ ಈ ಪ್ರಕಾರ ಅರ್ಚಿಸತಾರೆ ಎಂತ ಹೇಳತಾರೆ.

"**ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ**–ಎಂತ ವಿಷ್ಣು ಸಹಸ್ರನಾಮದಲ್ಲಿ ಉಕ್ತ ಇರುವದ್ದರಿಂದ ಶ್ರೀಪರಮಾತ್ಮನಿಂದ ಸೃಷ್ಯರಾದ ಪ್ರಾಣಿಗಳು ಯಾವತ್ತೂನೂ ಪರಮಾತ್ಮನಿಗೆ ಪುತ್ರರೆಂದು ಕರೆಸತಾರೆ. ಹ್ಯಾಂಗೆಂದರೆ, **ಸುತಪ**–ಎಂತ ಪದ. **ಸುತ**–ಬ್ರಹ್ಮಾದಿ ಜೀವರನ್ನು ಪ-ಪಾಲನಮಾಡತಕ್ಕ ದೇವರು. ಅಕಾರಾದಿ ಕ್ಷಕಾರಾಂತ ಐವತ್ತೊಂದು ಅಕ್ಷರ ವ್ಯಾಪ್ಯನಾಗಿ, ಅಂದರೆ ಚಕ್ರಾಬ್ಜಾದಿತ ಮಂಡಲ ಸಾಂಕೇತವಾದ ತ್ರಿಗುಣಗತ ಭಗವದ್ರೂಪಗಳಾದ ವಿಷ್ಣು, ಬ್ರಹ್ಮ, ಶಿವ ಈ ಮೂರು ಭಗವದ್ರೂಪಗಳು ಅಂತು. ಒಟ್ಟಿನಲ್ಲಿ ೫೧+೧೧+೨೪+೭+೩=೯೬ ಷಣ್ಣವತಿ ರೂಪಗಳು ಇವು ದೇಹದೊಳಗಿದ್ದು (ಒಳಗಿದ್ದು) ಆದ್ಯಂತಶೂನ್ಯವಾದ, ಅಂದರೆ ಆದಿಮಧ್ಯಾಂತರಹಿತನಾದ ಅಪರಿಚ್ಛಿನ್ನನಾದ (ಅವಿರತ), ನಿರ್ಲಿಪ್ತನಾದ ಅನಿರುದ್ಧನು ತತ್ತ್ವೇಶರ ದ್ವಾರಾ ಸಂರಕ್ಷಣಮಾಡತಾನೆ (ಜತನಮಾಳ್ಪನು) ಈ ಜಗತ್ತಿನಲ್ಲಿ (ಜಗದಿ) ಈ ಪ್ರಕಾರ ಅನುಸಂಧಾನಯುಕ್ತರಾದ ಭಗವದ್ಭಕ್ತರನ್ನ ಎಂತ ಅರ್ಥ (ಜೀವಪ್ರತತಿಗಳ) ಆದ್ದರಿಂದ (ಅದರಿಂದ) ಇಂಥಾ ಜ್ಞಾನಿಗಳಾದ ಭಗವದ್ಭಕ್ತರಾದವರು (ಬಲ್ಲವರು) ೯೬ ಪೂರ್ವೋಕ್ತ ಷಣ್ಣವತಿ ಶ್ರಾದ್ಧ ಕಾಮಿಯಾದ ಅನಿರುದ್ಧನ (ಷಣ್ಣವತಿನಾಮಕ,) ಅನಿರುದ್ಧ ಅನಿರುದ್ಧ, ಅನಿರುದ್ಧಪ್ರದ್ಯುಮ್ನ, ಅನಿರುದ್ಧ ಸಂಕರ್ಷಣ ಮತ್ತು ಅನಿರುದ್ಧ ವಾಸುದೇವ ಈ ಪ್ರಕಾರ ನಾಲ್ಕು ಮೂರ್ತಿಗಳನ್ನು [ಚತುರಮೂರ್ತಿಗಳು] ಪಿತೃಕಾರ್ಯಗಳಲ್ಲಿ ಪೂಜಾ ಮಾಡುವರು ಅಂತ ಅರ್ಥ (ಅರ್ಚಿಸುವರು) ಪಿತೃಯಜ್ಞ ಎಂತ

ಹೇಳತಕ್ಕ ಕರ್ಮಗಳು. ಅಧಿಕಾರಿಯಾದವನು ಪೂರ್ವೋಕ್ತ ಕಾಲಗಳಲ್ಲಿ ಮಾಡಿ, ಶ್ರಾದ್ಧಕಾಂಡಪ್ರಕಾರವೂ ಸಹ ಅವಶ್ಯಮಾಡಬೇಕಂತ ತಾತ್ಪರ್ಯ. ಪ್ರತಿಸಾಂವತ್ಸರಿಕಶ್ರಾದ್ಧ ವಿಷಯ ಪಿತೃಗಣಸಂಧಿಯಲ್ಲಿ ವಿವರವಾಗಿ ಹೇಳಲ್ಪಟ್ಟಿದೆ ॥ ೨೩ ॥

## (೨) "ಭಾವಪ್ರಕಾಶಿಕೆ" - ವ್ಯಾಖ್ಯಾನ :

ಪೂರ್ವೋಕ್ತ ೯೬ ರೂಪಗಳನ್ನು ಪ್ರಕಾರಾಂತರ ಹೇಳಿ, ಅನಿರುದ್ಧನ ವ್ಯಾಪ್ತಿಯನ್ನು ಹೇಳುತ್ತಾರೆ. **"ಸಮ್ಯಕ್ತಪತೀತಿ ಸುತಪಃ"** –ಎಂಬ ನಿರ್ವಚನದಿಂದ ಸೂರ್ಯನೊಳಗಿದ್ದು ಜಗತ್ತಿನ ಅಂಧಕಾರವನ್ನು ನಿವೃತ್ತಿ ಮಾಡುವವನಾದುದರಿಂದ **ಸುತಪ**ನೆಂದು ಪರಮಾತ್ಮನಿಗೆ ಹೆಸರು. ಅಕಾರ ಮೊದಲು ಕ್ಷಕಾರದವರೆಗೆ ೫೧ ವರ್ಣಗಳು. ವರ್ಣಪ್ರತಿಪಾದ್ಯನಾದ ಪರಮಾತ್ಮನ ರೂಪಗಳು ೫೧, ಅವು ಹೇಗೆಂದರೆ, ಅಜ, ಆನಂದ, ಇಂದ್ರ, ಈಶಾನ, ಉಗ್ರ, ಊರ್ಜ, ಋತಂಭರ, ೠಘ, ಲೃಶ, ಲೄಜ, ಏಕಾತ್ಮ, ಐರ, ಓಜೋಭೃತ, ಔರಸ, ಅಂತ, ಅರ್ಧಗರ್ಭ, ಕಪಿಲ, ಖಪತಿ, ಗರುಡ, ಘರ್ಮ, ಙಸಾರ, ಚಾರ್ವಾಂಗ, ಛಂದೋಗಮ್ಯ, ಜನಾರ್ದನ, ಝಟಕಾರಿ, ಞಮ, ಟಂಕಿ, ಠಲಕ ಡರಕ, ಢರಿಣ, ಣಾತ್ಮ, ತಾರ ಥಪ, ದಂಡೀ, ಧನ್ವಿ, ನಮ್ಯ, ಪರ, ಫಲೀ, ಬಲೀ, ಭಗ, ಮನು, ಯಜ್ಞ, ರಾಮ, ಲಕ್ಷ್ಮೀಪತಿ, ವರಾಹ, ಶಾಂತ, ಸಂವಿತ್ ಷಡ್ಗುಣ, ಸಾರಾತ್ಮ, ಹಂಸ, ಳಾಳುಕ ಮತ್ತು ನರಸಿಂಹ–ಇಂತು ೫೧ ರೂಪಗಳು ಅಮೊದಲು ಕ್ಷವರೆಗೂ ಅಕ್ಷರ ಪ್ರತಿಪಾದ್ಯನೆಂದು ತಿಳಿಯಬೇಕು. ಹೃದಯಕಮಲದಲ್ಲಿರುವ ೧೨ ದಳಗಳಲ್ಲಿ ೧೨ ರೂಪಗಳು, ಅವು ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರವೃತ್ತಿ, ಪರಾ, ವಿದ್ಯಾ, ಮತಿ, ನಿಯತಿ, ಮಾಯಾ, ಕಾಲ, ಮತ್ತು ಪುರುಷ- ಹೀಗೆ ೧೨ ರೂಪಗಳು. ಈ ವಿಷಯಗಳನ್ನು **ತಂತ್ರಸಾರ ಸಂಗ್ರಹದಲ್ಲಿ** ವಿಸ್ತಾರವಾಗಿ ಜಡಬಹುದು. ಪೃಥಿವ್ಯಾದಿ ಪಂಚಭೂತಗಳು, (೫), ತನ್ಮಾತ್ರಾಗುಣಗಳು [೫] ಜ್ಞಾನೇಂದ್ರಿಯಗಳು [೫], ಚಿತ್ತ, ಬುದ್ಧಿ, ಮನಸ್ಸು ಮತ್ತು ಅಹಂಕಾರ ಹೀಗೆ ೨೪ ತತ್ತ್ವಗಳು. ಈ ತತ್ತ್ವಗಳಲ್ಲಿ ಕೇಶವಾದಿ ೨೪ ರೂಪಗಳು

ಇರುವುವು, ತ್ವಕ್, ಚರ್ಮ, ಮಾಂಸ, ರುಧಿರ, ಮೇದಸ್ಸು, ಮಜ್ಜಾ ಮತ್ತು ಅಸ್ಥಿ ಎಂಬ ೭ ಧಾತುಗಳಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ, ಹಂಸ ಮತ್ತು ವಸಿಷ್ಠ ಎಂಬ ೭ ರೂಪಗಳು, ಭಗವದ್ರೂಪ ೧, ಜೀವ ೧ ಅಂತು ಒಟ್ಟು ೯೬ ರೂಪಗಳು. ಹೀಗೆ ಅನಿರುದ್ಧನು ೯೬ ರೂಪಗಳಿಂದ ಸಕಲ ಜೀವರಾಶಿಗಳ ದೇಹದೊಳಗಿದ್ದು, ಜೀವರನ್ನು ರಕ್ಷಿಸುವನು. ಜ್ಞಾನಿಗಳು ಈ ಅನಿರುದ್ಧನ ಸ್ವರೂಪವನ್ನೇ ಅನಿರುದ್ಧ ಪ್ರದ್ಯುಮ್ನ ಇತ್ಯಾದಿ ೪ ವಿಭಾಗಮಾಡಿ ಅರ್ಚಿಸುವರು ॥ ೨೩ ॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :

ಪೂರ್ವದಲ್ಲಿ ಅಮಾದಿ ತಿಸ್ರಾಷ್ಟಕವರೆಗೂ ೯೬ ಅಧಿಷ್ಠಾನದಲ್ಲಿ ನಿಂತು ಷಣ್ಣವತಿ ಎಂದು ಕರೆಯಲ್ಪಡುವುದಲ್ಲದೆ, ಪಂಚಾಶದ್ವರ್ಣಾದಿಗಳ ಅಧಿಷ್ಠಾನ ದಲ್ಲಿ ಶ್ರೀ ಹರಿಯು ತಾನೇ ನಿಂತು "ಷಣ್ಣವತಿ" ಎಂದು ಕರೆಯಲ್ಪಡುತ್ತಾನೆಂದು ಇನ್ನೊಂದು ಪ್ರಕಾರ ಹೇಳುತ್ತಾರೆ "ಸುತಪ" ಎಂಬ ಪದ್ಯದಿಂದ

**ಹಿರಣ್ಯನಾಭಃ ಸುತಪಃಇತಿ ಸಹಸ್ರನಾಮ ಪಾಠಾತ್ । ಸುಸಮ್ಯಕ್ ಧುಷ್ಟಾನ್ ತಪತೀತಿವಾ ॥"**

ವರ್ಣಗಳು = ೫೧, ಕರಣಗಳು = ೧೧, ತತ್ತ್ವಗಳು = ೨೪, ಧಾತು ಗಳು = ೭, ತತ್ತ್ವೋತ್ಪತ್ತಿಗೆ ಮೂಲಭೂತಗುಣಗಳು = ೩ ಅಂತು ೯೬ ಎಂತರ್ಥ. ಅನಿರುದ್ಧಾದಿ ಚತುರ್ಮೂರ್ತ್ಯಾತ್ಮಕ ಶ್ರೀ ಹರಿಯನ್ನ ಬಲ್ಲವರು ಹೀಗೆ ದೇಹದಲ್ಲಿ ತಿಳಿದು ಪೂಜಿಸುತ್ತಾರೆಂಬ ತಾತ್ಪರ್ಯ ॥ ೨೩ ॥

## [೪] "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :-

ಸುತಪ ಎಂದರೆ, ತಪ-ಆಲೋಚನೆ-ಎಂಬ ಧಾತುರೀತ್ಯಾ, ಜ್ಞಾನರೂಪ ನಾದ ಅನಿರುದ್ಧನು ಅಕಾರಾದಿ ಕ್ಷಕಾರಾಂತ ಅಕ್ಷರದಲ್ಲೂ, ಮನಸ್ಸು, ಪಂಚ ಜ್ಞಾನ, ಪಂಚಕರ್ಮೇಂದ್ರಿಯಗಳೂ ಸೇರಿದ ಹನ್ನೊಂದು ಕರಣಗಳೆಂಬ

ಇಂದ್ರಿಯಗಳಲ್ಲಿ, ಮಹತ್ತತ್ವ-೧, ಅಹಂಕಾರ-೧, ಅವ್ಯಕ್ತ-೧, ಬುದ್ಧಿ ೧ ಸಹ ನಾಲ್ಕು, ದಶೇಂದ್ರಿಯಾಭಿಮಾನಿಗಳು-೧೦, ಪಂಚಭೂತಗಳು, ಪಂಚತನ್ಮಾತ್ರ ಗಳು ೧೦ ಸೇರಿದ ಇಪ್ಪತ್ನಾಲ್ಕು ತತ್ತ್ವಗಳಲ್ಲೂ, ತ್ವಕ್, ಚರ್ಮ, ಮಾಂಸ, ಮಜ್ಜವೆಂಬ ಮಹಾರಕ್ತ, ಅಸ್ಥಿ, ರಕ್ತ ಮತ್ತು ಮೇದಸ್ಸೆಂಬ ಕೊಬ್ಬು ಸೇರಿ ಏಳುವಿಧ ಧಾತುಗಳಲ್ಲೂ, ಸಹ ಇವುಗಳನ್ನು ರಕ್ಷಿಸುವುದಕ್ಕಾಗಿ ಸದಾ ಕಾದು ಇರುವನು. ಆದ್ದರಿಂದ ಪಾಂಚರಾತ್ರಾಭಿಜ್ಞರೆಂಬ ಬಲ್ಲವರು. ಷಣ್ಣವತಿ ನಾಮಕ ಚತುರ್ಮೂರ್ತಿಗಳನ್ನು ಶ್ರಾದ್ಧದಲ್ಲಿ ಪೂಜಿಸುವರು ॥ ೨೩ ॥

**ಸರ್ವವ್ಯಾಖ್ಯಾನಸಾರಸಂಗ್ರಹ :**

ಸೃಷ್ಟ್ಯಾದ್ಯಷ್ಟಕರ್ತನಾದ ಶ್ರೀ ಪರಮಾತ್ಮನು ಜಗಜ್ಜನಕನು. ಅವನಿಂದ ಸೃಷ್ಟರಾದ ಸಮಸ್ತ ಜೀವರಾಶಿ ಅವನಿಗೆ ಪುತ್ರರೆನಿಸುತ್ತಾರೆ, ಅಂತಹ ಪುತ್ರ ರೂಪರಾದ ಸಕಲ ಪ್ರಾಣಿಗಳನ್ನೂ ಅನಿಮಿತ್ತ ಬಂಧುವೆನಿಸಿದ ಶ್ರೀಹರಿಯು ಅನವರತವೂ ಸಂರಕ್ಷಿಸುತ್ತಿರುವನು. ಇದರಿಂದಲೇ ಪರಮಾತ್ಮನಿಗೆ **ಸುತಪ** ಎಂದು ಹೆಸರು. ಅಂದರೆ ಸುತ– ತನ್ನಿಂದ ಸೃಷ್ಟರಾದ ಸಕಲಪ್ರಾಣಿಗಳನ್ನುಪ- ಪಾಲಿಸುವವನು ಎಂತ ತಾತ್ಪರ್ಯ.

ಸೂರ್ಯಾಂತರ್ಯಾಮಿಯಾಗಿದ್ದು, ಸಮಸ್ತಜಗತ್ತನ್ನೂ ತನ್ನ ತೇಜಸ್ಸಿನಿಂದ ಬೆಳಗುತ್ತಿರುವುದರಿಂದ,ಶ್ರೀ ಪರಮಾತ್ಮನಿಗೆ **ಸುತಪ** ಎಂದು ಹೆಸರು.

ಜ್ಞಾನಸ್ವರೂಪಾಪನಾದ್ದರಿಂದ ಶ್ರೀಪರಮಾತ್ಮನನ್ನು **ಸುತಪ** ಎಂದು ಕರೆಯುವರು. ತಪ ಎಂದರೆ ಆಲೋಚನೆ ಎಂದರ್ಥ. ಇಂದರಿಂದ **ಕಂಕಣಾಕಾರ ಚಕ್ರ ಹೃದಯ ಅಷ್ಟದಳಕಮಲಕ್ಕೆ** ವಲಯಾಕಾರದಿಂದ ಇರತಕ್ಕ ೫೧ ದಳಾತ್ಮಕವಾದ ಕಮಲದಲ್ಲಿ ಅಜಾದಿ ಐವತ್ತೊಂದು ರೂಪದಿಂದ ಇದ್ದಾನೆ. ದೇಹಗತವಾದ

(೧) ಮೂಲಾಧಾರದಲ್ಲಿ [ಗುದಸ್ಥಾನಗತ] ಚತುರ್ದಳ ಕಮಲದಲ್ಲಿ "ಕ" ಆರಂಭಮಾಡಿ "ಘ"ವರಗೆ ನಾಲ್ಕುವರ್ಣಗಳು (೪)

[೨] ನಾಭಿ ಷಟ್ದಳ ಕಮಲದಲ್ಲಿ "ಙ" ಆರಂಭವಾಡಿ "ಞ" ವರೆಗೆ ಅರು ವರ್ಣಗಳು (೬)

[೩] ಹೃದಯ ಅಷ್ಟದಳ ಕಮಲವಲ್ಲಿ "ಟ" ಆರಂಭವಾಡಿ "ದ" ವರೆಗೆ ಎಂಟು ವರ್ಣಗಳು [೮]

[೪] ಕಂಠದಲ್ಲಿ ಷೋಡಶದಳ ಕಮಲದಲ್ಲಿ "ಧ" ಆರಂಭವಾಡಿ "ಳ" ವರೆಗೆ ಹದಿನಾರುವರ್ಣಗಳು (೧೬)

(೫) ಭ್ರೂಮಧ್ಯದಲ್ಲಿ ಚತುರ್ದಳ ಕಮಲವಲ್ಲಿ ಆ.ಅ.ಅಂ.ಆಃ ಎಂಬ ನಾಲ್ಕುವರ್ಣಗಳು (೪)

(೬) ಶಿರದಲ್ಲಿ ದ್ವಾದಶದಳ ಕಮಲದಲ್ಲಿ "ಇ" ಆರಂಭವಾಡಿ "ಔ" ವರೆಗೆ ಹನ್ನೆರಡು ವರ್ಣಗಳು (೧೨)

[೭] ಶಿರ ಬ್ರಹ್ಮರಧ್ರದಲ್ಲಿ ದ್ವಾದಶದಳ ಕರ್ಣಿಕಾಮಧ್ಯದಲ್ಲಿ "ಕ್ಷ" ವರ್ಣ ಒಂದು (೧)

ಹೀಗೆ ಒಟ್ಟು ೫೧ ವರ್ಣಗಳು, ಈ ಪ್ರಕಾರ ಕಮಲಗಳಲ್ಲಿ ಅಜಾದಿ ರೂಪದಿಂದ ದೇಹದಲ್ಲಿ ಇದ್ದಾನೆ. ಏಕಾದಶೇಂದ್ರಿಯಗಳಲ್ಲಿ ಶಕ್ತಿಪ್ರತಿಷ್ಠಾದಿ ಹನ್ನೊಂದು ರೂಪಗಳು [ಕರಣದಿ] ೨೪ ತತ್ವಗಳಲ್ಲಿ ಸಮೀಚೀನವಾದ ಕೇಶವಾದಿ ಇಪ್ಪತ್ತುನಾಲ್ಕು ಭಗವದ್ರೂಪಗಳು (ಚತುರ್ವಿಂಶತಿ) ಇವರಲ್ಲಿ ಏಕಾದಶೇಂದ್ರಿಯಗಳು ಸೇರಿ ಅದೆ. ಮೇಲೆ ಕರಣದಿ ಎಂಬುದರಲ್ಲಿ ಏಕಾದಶೇಂದ್ರಿಯಗಳು ಬಂದಿವೆ. ಪುನರುಕ್ತಿ ಆಗತದಲ್ಲಾ ಎಂದರೆ ಪ್ರಥಮದಲ್ಲಿ ಹೇಳಿದ್ದು ಇಂದ್ರಿಯಗಳು. ಈಗ ಎರಡನೇ ಸಾರಿ ಹೇಳಿದ್ದು ಆ ಇಂದ್ರಿಯಗೋಳಕಗಳು ಎಂತ ತಾತ್ಪರ್ಯ.

ಇನ್ನು ತ್ವಗಾದಿಏಳು ಧಾತುಗಳು. ಇದರಲ್ಲಿ ಅನಿರುದ್ಧಾದಿ ೫ ರೂಪಗಳು

ವಸಿಷ್ಠನಾಮಕ ಪರಮಾತ್ಮ ಮತ್ತು ಹಂಸನಾಮಕ ಪರಮಾತ್ಮ. ಹೀಗೆ ಏಳು ಅಂದರೆ ಸಪ್ತಧಾತುಗಳಲ್ಲಿ ಸಪ್ತ ಭಗವದ್ರೂಪಗಳು. ಇನ್ನು ಉಪಲಕ್ಷಣಯಾ ಜ್ಞಾನೋತ್ಪತ್ತಿ. ಸು-ಎಂದರೆ ಸಮೀಚೀನವಾದ ಅಪ್ರಾಕೃತವಾದ ಜ್ಞಾನಾನಂದಾತ್ಮಕನು ಶ್ರೀ ಪರಮಾತ್ಮ.

ಇಂತಹ ಸುತಪನಾಮಕನಾದ ಅನಿರುದ್ಧರೂಪೀ ಶ್ರೀಪರಮಾತ್ಮನು ಅಕಾರಾದಿ ಕ್ಷಕಾರಪರ್ಯಂತ ವರ್ಣಾತ್ಮಕನಾಗಿದ್ದು **ಅಕ್ಷರೇಡ್ಯನೆನಿಸಿದ್ದಾನೆ.** ವರ್ಣಮಾಲೆಯಲ್ಲಿ ೫೧ ಅಕ್ಷರಗಳಿವೆ. ಇಂತಹ ೫೧ ವರ್ಣಗಳು, ಆಯಾಯಾ ವರ್ಣಾತ್ಮಕವಾದ ಭಗವದ್ರೂಪಗಳು. ದೇಹದಲ್ಲಿ ಅವುಗಳ ಸ್ಥಾನವಿಶೇಷಗಳು-ಇತ್ಯಾದಿ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ, ಇದನ್ನು **ಮಾತೃಕಾನ್ಯಾಸ** ಕ್ರಮದಿಂದ ತಿಳಿಯಬಹುದು.

| ಕ್ರಮ ಸಂಖ್ಯೆ | ವರ್ಣ | ವರ್ಣಾತ್ಮಕ ಭಗವದ್ರೂಪ | ದೇಹಗತ ಸ್ಥಾನ | ವಿವರಗಳು |
|---|---|---|---|---|
| ೧ | ಅ | ಅಜ | ಶಿರಸ್ಸು | |
| ೨ | ಆ | ಆನಂದ | ಮುಖ | |
| ೩ | ಇ | ಇಂದ್ರ | ಬಲಗಣ್ಣು | |
| ೪ | ಈ | ಈಶಾನ | ಎಡಗಣ್ಣು | |
| ೫ | ಉ | ಉಗ್ರ | ಬಲಕಿವಿ | ಅ ಕಾರದಿಂದ ಪ್ರಾ |
| ೬ | ಊ | ಊರ್ಜ | ಎಡಕಿವಿ | ರಂಭಿಸಿ |
| ೭ | ಋ | ಋತುಂಭರ | ಬಲಮೂಗಿನ ಹೊಳ್ಳೆ | |
| ೮ | ೠ | ೠಘ | ಎಡಮೂಗಿನ ಹೊಳ್ಳೆ | ಅಃ ವರೆಗೆ |
| ೯ | ಌ | ಌಶ | ಬಲಗೆನ್ನೆ | |
| ೧೦ | ೡ | ೡಜ | ಎಡಗೆನ್ನೆ | ೧೬ ಸ್ವರಾಕ್ಷರಗಳು |
| ೧೧ | ಏ | ಏಕಾತ್ಮ | ಮೇಲ್ತುಟಿ | |
| ೧೨ | ಐ | ಐರ | ಕೆಳ ತುಟಿ | |
| ೧೩ | ಓ | ಓಜೋಭೃತ್ | ಮೇಲಿನ ಹಲ್ಲಿನ ಸಾಲು | |

| | | | |
|---|---|---|---|
| ೧೪ | ಔ | ಔರಸ | ಕೆಳಗಿನ ಹಲ್ಲಿನ ಸಾಲು |
| ೧೫ | ಅಂ | ಅಂತ | ತಲೆಯ ಮೇಲ್ಭಾಗ |
| ೧೬ | ಅಃ | ಅರ್ಧಗರ್ಭ | ಕಿರುನಾಲಿಗೆ |

| | | | | |
|---|---|---|---|---|
| ೧೭ | ಕ | ಕಪಿಲ | ಬಲಗೈಯ್ಯಿನ ಭುಜಕೀಲು | ಕ ವರ್ಗ ಪಂಚಕ ವರ್ಗೀಯ ವ್ಯಂಜನಾಕ್ಷರಗಳು (೫) |
| ೧೮ | ಖ | ಖಪತಿ | ಬಲಗೈಯ್ಯಿನ ಕೈಗಂಟು | |
| ೧೯ | ಗ | ಗರುಡಾಸನ | ಬಲಗೈಯ್ಯಿನ ಮಣಿಗಂಟು | |
| ೨೦ | ಘ | ಘರ್ಮ | ಬಲಗೈಯ್ಯಿನ ಬೆರಳುಗಂಟು | |
| ೨೧ | ಙ | ಙಸಾರ | ಬ ಲಗೈನ ಬೆರಳಿನ ಕಿಲುಗಳು | |

| | | | | |
|---|---|---|---|---|
| ೨೨ | ಚ | ಚಾರ್ವಾಂಗ | ಎಡಗೈಯ್ಯಿನ ಭುಜಕೀಲು | ಚ ವರ್ಗ ಪಂಚಕ ವರ್ಗೀಯ ವ್ಯಂಜನಾಕ್ಷರಗಳು (೫) |
| ೨೩ | ಛ | ಛಂದೋಗಮ್ಯ | ಎಡಗೈಯ್ಯಿನ ಕೈಗಂಟು | |
| ೨೪ | ಜ | ಜನಾರ್ಧನ | ಎಡಗೈಯ್ಯಿನ ಮಣಿಗಂಟು | |
| ೨೫ | ಝ | ಝೂಟಿಕಾರ | ಎಡಗೈಯ್ಯಿನ ಬೆರಳುಗಂಟು | |
| ೨೬ | ಞ | ಞಮ | ಎಡಗೈಯ್ಯಿನ ಬೆರಳಿನ ಕೀಲುಗಳು | |

| | | | | |
|---|---|---|---|---|
| ೨೭ | ಟ | ಟಂಕಿ | ಬಲಗಾಲಿನ ತೊಡೆ ಸಂಧಿ | ಟ ವರ್ಗ ಪಂಚಕ ವರ್ಗೀಯ ವ್ಯಂಜಾಕ್ಷರಗಳು [೫] |
| ೨೮ | ಠ | ಠಲಕ | ಬಲಗಾಲಿನ ಕಾಲುಗಂಟು | |
| ೨೯ | ಡ | ಡರಕ | ಬಲಗಾಲಿನ ಮಣಿಗಂಟು | |
| ೩೦ | ಢ | ಢರಿಣ | ಬಲಗಾಲಿನ ಬೆರಳು ಗಂಟು | |
| ೩೦ | ಣ | ಣಾತ್ಮ | ಬಲಗಾಲಿನ ಬೆರಳಿನ ಕೀಲುಗಳು | |

| | | | | |
|---|---|---|---|---|
| ೩೨ | ತ | ತಾರಾ | ಎಡಗಾಲಿನ ತೊಡೆ ಸಂಧಿ | |
| ೩೩ | ಥ | ಥಭ | ಎಡಗಾಲಿನ ಕಾಲುಗಂಟು | |
| ೩೪ | ದ | ದಂಡೀ | ಎಡಗಾಲಿನ ಮಣಿಗಂಟು | ತ ವರ್ಗ ಪಂಚಕ |
| ೩೫ | ಧ | ಧನ್ವೀ | ಎಡಗಾಲಿನ ಬೆರಳು ಗಂಟು | ವರ್ಗೀಯ ವ್ಯಂಜ |
| ೩೬ | ನ | ನಮ್ಯ | ಎಡಗಾಲಿನ ಬೆರಳಿನ ಕೀಲು ಗಳು | ನಾಕ್ಷರಗಳು [೫] |

| | | | | |
|---|---|---|---|---|
| ೩೭ | ಪ | ಪರ | ಬಲಹೊಟ್ಟೆ [ಪಾರ್ಶ್ವ] | ಪ ವರ್ಗಪಂಚಕ |
| ೩೮ | ಫ | ಫಲೀ | ಎಡಹೊಟ್ಟೆ [ಪಾರ್ಶ್ವ] | ವರ್ಗೀಯ ವ್ಯಂಜ |
| ೩೯ | ಬ | ಬಲೀ | ಪೃಷ್ಠ | ನಾಕ್ಷರಗಳು [೫] |
| ೪೦ | ಭ | ಭಗ | ಗುಹ್ಯ | |
| ೪೧ | ಮ | ಮನ | ತುಂದಿ | |

| | | | | |
|---|---|---|---|---|
| ೪೨ | ಯ | ಯಜ್ಞ | ಹೃದಯ (ಎದೆ) | |
| ೪೩ | ರ | ರಾಮ | ತ್ವಗಿಂದ್ರಿಯ | |
| ೪೪ | ಲ | ಲಕ್ಷ್ಮೀಪತಿ | ಚರ್ಮ | |
| ೪೫ | ವ | ವರಾಹ | ಮಾಂಸ | |
| ೪೬ | ಶ | ಶಾಂತ ಸಂವಿತ್ | ರಕ್ತ | ಅವರ್ಗೀಯ ವ್ಯಂಜನಾಕ್ಷರಗಳು (೧೦) |
| ೪೭ | ಷ | ಷಡ್ಗುಣ | ಮೇದಸ್ಸು | |
| ೪೮ | ಸ | ಸಾರಾತ್ಮ | ಮಜ್ಜಾ | |
| ೪೯ | ಹ | ಹಂಸ | ಅಸ್ಥಿಸಂಧಿಗಳು | |
| ೫೦ | ಳ | ಳಾಳುಕ | ಪ್ರಾಣ | |
| ೫೧ | ಕ್ಷ | ಲಕ್ಷ್ಮೀ ನರಸಿಂಹ | ಜೀವನಲ್ಲಿ | |

ಅಂತು ಅಜಾದಿ ಲಕ್ಷ್ಮೀನರಸಿಂಹ ಪರ್ಯಂತ ೫೧ ವರ್ಣಾತ್ಮಕ ಭಗವದ್ರೂಪಗಳ ಸಂಖ್ಯಾ ವಿವರ.

ಇನ್ನು ಕರಣಾದಿ ಅಂದರೆ, ಇಂದ್ರಿಯಗೋಳಕಗಳಲ್ಲಿ ವಿದ್ಯಮಾನವಾಗಿರುವ ೧೧ ಭಗವದ್ರೂಪಗಳು. ಇವುಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ :–

| ಕ್ರಮ ಸಂಖ್ಯೆ | ಇಂದ್ರಿಯ ಗೋಳಕಗಳು | ಭಗವದ್ರೂಪಗಳು | ವಿವರಗಳು |
|---|---|---|---|
| ೧ | ಮನಸ್ಸು | ಶಕ್ತಿ ನಾಮಕ ಪರಮಾತ್ಮ | ಮನಸ್ತತ್ವ ಗೋಳಕ |
| ೨ | ಕಿವಿ | ಸಂವಿತ್‌ನಾಮಕ ಪರಮಾತ್ಮ | |
| ೩ | ನೇತ್ರ | ಪ್ರತಿಷ್ಠಾ ನಾಮಕ ಪರಮಾತ್ಮ | ಪಂಚಜ್ಞಾನೇಂದ್ರಿ |
| ೪ | ತ್ವಕ್ | ಸ್ಫೂರ್ತಿ ನಾಮಕ ಪರಮಾತ್ಮ | ಯ ಗೋಳಕಗಳು |
| ೫ | ನಾಲಿಗೆ | ಪ್ರಕೃತಿ ನಾಮಕ ಪರಮಾತ | |
| ೬ | ನಾಸಿಕ | ಕಳಾ ನಾಮಕ ಪರಮಾತ್ಮ | |
| ೭ | ವದನ | ವಿದ್ಯಾ ನಾಮಕ ಪರಮಾತ್ಮ | |
| ೮ | ಹಸ್ತ | ಮತಿ ನಾಮಕ ಪರಮಾತ್ಮ | ಪಂಚ ಕರ್ಮೇಂದ್ರಿ |
| ೯ | ಪಾದ | ನಿಯತಿ ನಾಮಕ ಪರಮಾತ್ಮ | ಯ ಗೋಳಗಳು |
| ೧೦ | ಪಾಯು | ಮಾಯಾ ನಾಮಕ ಪರಮಾತ್ಮ | |
| ೧೧ | ಉಪಸ್ಥ | ಕಾಲ ನಾಮಕ ಪರಮಾತ್ಮ | |

ಅಂತು, ಏಕಾದಶೇಂದ್ರಿಯ ಗೋಳಕಗಳಲ್ಲಿ ಶಕ್ತ್ಯಾದಿ ಕಾಲ ನಾಮಕ ಪರ್ಯಂತ ೧೧ ಭಗವದ್ರೂಪಗಳು.

ಇನ್ನು ೨೪ ಸಂಖ್ಯಾಕವಾದ ಚತುರ್ವಿಂಶತಿ ಸುತತ್ತ್ವಗಳಲ್ಲಿ ಹಾಗೂ ತತ್ತ್ವೇಶರಲ್ಲಿ ವಿದ್ಯಮಾನನಾಗಿರುವ ಕೇಶವಾದಿ ಚತುರ್ವಿಂಶತಿ ರೂಪಗಳು. ಅವುಗಳ ವಿವರಗಳು ಇಂತಿವೆ :–

| ಕ್ರಮ ಸಂಖ್ಯೆ | ತತ್ತ್ವಗಳು | ತತ್ವೇಶರು | ಭಗವದ್ರೂಪ | ವಿವರಗಳು |
|---|---|---|---|---|
| ೧ | ಅವ್ಯಕ್ತತತ್ತ್ವ | ಲಕ್ಷ್ಮೀ | ಕೇಶವ | |
| ೨ | ಮಹತ್ತತ್ವ | ಬ್ರಹ್ಮ–ವಾಯು | ನಾರಾಯಣ | |
| ೩ | ಅಹಂಕಾರ ತತ್ತ್ವ | ಗರುಡ, ಶೇಷ, ರುದ್ರ | ಮಾಧವ | ಸೂಕ್ಷ್ಮ ತತ್ತ್ವಗಳು (೪) |
| ೪ | ಮನಸ್ತತ್ವ | ಇಂದ್ರ-ಕಾಮ | ಗೋವಿಂದ | |

| | | | | |
|---|---|---|---|---|
| ೫ | ಕರ್ಣ | ದಿಗ್ದೇವತೆಗಳು | ವಿಷ್ಣು | |
| ೬ | ನೇತ್ರ | ಸೂರ್ಯ | ಮಧುಸೂಧನ | |
| ೭ | ತ್ವಕ್ | ಅಹಂಕಾರಿಕ ಪ್ರಾಣ | ತ್ರಿವಿಕ್ರಮ | ಪಂಚ ಜ್ಞಾನೇಂದ್ರಿಯಗಳು (೫) |
| ೮ | ಜಿಂಹ್ವೆ | ವರುಣ | ವಾಮನ | |
| ೯ | ನಾಸಿಕ | ಅಶ್ವಿನೀ ದೇವತೆಗಳು | ಶ್ರೀಧರ | |
| ೧೦ | ವದನ | ಅಗ್ನಿ | ಹೃಷೀಕೇಶ | |
| ೧೧ | ಹಸ್ತ | ದಕ್ಷ | ಪದ್ಮನಾಭ | |
| ೧೨ | ಪಾದ | ಜಯಂತ | ದಾಮೋದರ | ಪಂಚ ಕರ್ಮೇಂದ್ರಿಯಗಳು (೫) |
| ೧೩ | ಪಾಯು | ಮಿತ್ರ | ಸಂಕರ್ಷಣ | |
| ೧೪ | ಉಪಸ್ಥ | ಮನು | ವಾಸುದೇವ | |
| ೧೫ | ಶಬ್ದ | ಪ್ರಾಣ | ಪ್ರದ್ಯುಮ್ನ | |
| ೧೬ | ಸ್ಪರ್ಶ | ಅಪಾನ | ಅನಿರುದ್ಧ | |
| ೧೭ | ರೂಪ | ವ್ಯಾನ | ಪುರುಷೋತ್ತಮ | ಪಂಚ ತನ್ಮಾತ್ರಾಗುಣಗಳು (೫) |
| ೧೮ | ರಸ | ಉದಾನ | ಅಧೋಕ್ಷಜ | |
| ೧೯ | ಗಂಧ | ಸಮಾನ | ನರಹರಿ | |
| ೨೦ | ಆಕಾಶ | ಗಣಪತಿ | ಅಚ್ಯುತ | |
| ೨೧ | ವಾಯು | ಪ್ರವಹ ವಾಯು | ಜನಾರ್ದನ | |
| ೨೨ | ತೇಜಸ್ಸು | ಅಗ್ನಿ | ಉಪೇಂದ್ರ | ಪಂಚಭೂತಗಳು (೫) |
| ೨೩ | ಅಪ್ಪು | ವರುಣ | ಹರಿ | |
| ೨೪ | ಪೃಥ್ವೀ | ಧರಾ-ಶನ್ಯೈಶ್ಚರ | ಶ್ರೀಕೃಷ್ಣ | |

ಅಂತು, ಚತುರ್ವಿಂಶತಿ ಸುತತ್ತ್ವಗಳಲ್ಲಿ ಕೇಶವಾದಿ ಶ್ರೀ ಕೃಷ್ಣಪರ್ಯಂತ ೨೪ ಭಗವದ್ರೂಪಗಳು ವಿದ್ಯಮಾನವಾಗಿವೆ [ತತ್ತ್ವನ್ಯಾಸ]

ಇನ್ನು ತ್ವಗಾದಿ ಸಪ್ತಧಾತುಗಳಲ್ಲಿ ಅಧಿಷ್ಠಿತ ಭಗವದ್ರೂಪಗಳ ವಿವರಗಳು:-

| ಕ್ರಮ ಸಂಖ್ಯೆ | ಸಪ್ತಧಾತುಗಳು | ಭಗವದ್ರೂಪಗಳು |
|---|---|---|
| ೧ | ತ್ವಕ್ | ಅನಿರುದ್ಧ |
| ೨ | ಚರ್ಮ | ಪ್ರದ್ಯುಮ್ನ |
| ೩ | ಮಾಂಸ | ಸಂಕರ್ಷಣ |
| ೪ | ರಕ್ತ | ವಾಸುದೇವ |
| ೫ | ಮೇದಸ್ಸು | ನಾರಾಯಣ |
| ೬ | ಮಜ್ಜಾ | ವಸಿಷ್ಠ |
| ೭ | ಅಸ್ಥಿ | ಹಂಸ |

ಅಂತು, ತ್ವಗಾದಿ ಸಪ್ತಧಾತುಗಳಲ್ಲಿ ಅನಿರುದ್ಧಾದಿ ಹಂಸನಾಮಕ ಪರಮಾತ್ಮನ ಪರ್ಯಂತ ೭ ಭಗವದ್ರೂಪಗಳು.

ಇನ್ನು ಮೂಲ ಪ್ರಕೃತಿಯ ಗುಣತ್ರಯಗಳಲ್ಲಿ ವಿದ್ಯಮಾನವಾಗಿರುವ ೩ ಭಗವದ್ರೂಪಗಳು:-

| ಕ್ರಮ ಸಂಖ್ಯೆ | ತ್ರಿಗುಣಗಳು | ಅಧಿಷ್ಠಾನ | ಭಗವದ್ರೂಪ |
|---|---|---|---|
| ೧ | ಸತ್ತ್ವಗುಣ | ವಿಷ್ಣು | ಸ್ವಯಂ ವಿಷ್ಣು |
| ೨ | ರಜೋಗುಣ | ಬ್ರಹ್ಮ | ಅಜನಾಮಕ ಪರಮಾತ್ಮ |
| ೩ | ತಮೋಗುಣ | ರುದ್ರ | ಸಂಕರ್ಷಣ |

ಇಂತು, ಗುಣತ್ರಯಗಳಲ್ಲಿ ಭಗವದ್ರೂಪಗಳು.

ಪೂರ್ವೋಕ್ತ ಅಧಿಷ್ಠಾನಗಳು ಮತ್ತು ಅವುಗಳಲ್ಲಿ ಅಧಿಷ್ಠಿತವಾಗಿರುವ ನಿಯಾಮಕ ಭಗವದ್ರೂಪಗಳ ಒಟ್ಟು ಸಂಖ್ಯೆಯನ್ನು ಪರಿಗಣಿಸಿದರೆ :-

| | | |
|---|---|---|
| (೧) | ೫೧ ವರ್ಣಾತ್ಮಕ ಅಜಾದಿ ಭಗವದ್ರೂಪಗಳು | =೫೧ |
| (೨) | ಏಕಾದಶೇಂದ್ರಿಯ ಗೋಳಕಗಳಲ್ಲಿ ಭಗವದ್ರೂಪಗಳು | =೧೧ |
| (೩) | ಚತುರ್ವಿಂಶತಿ ಸುತತ್ತ್ವಗಳಲ್ಲಿ ಭಗವದ್ರೂಪಗಳು | =೨೪ |
| (೪) | ಸಪ್ತಧಾತುಗಳಲ್ಲಿ ಶಕ್ತ್ಯಾದಿರೂಪಗಳು | = ೭ |
| (೫) | ಗುಣತ್ರಯಗಳಲ್ಲಿ ಭಗವದ್ರೂಪಗಳು | = ೩ |
| | ಒಟ್ಟು | = ೯೬ ರೂಪಗಳು |

ಇಂತು ೯೬ ರೂಪಗಳಿಂದ ವಿದ್ಯಮಾನನಾಗಿರುವ **ಷಣ್ಣವತಿ** ನಾಮಕ ಅನಿರುದ್ಧರೂಪೀ ಶ್ರೀ ಹರಿಯು ಈ ಜಗತ್ತಿನಲ್ಲಿ ಸಮಸ್ತ ಜೀವರಾಶಿಗಳ ಯೋಗಕ್ಷೇಮವನ್ನು ತಾನೇ ವಹಿಸಿ, ಸಂರಕ್ಷಿಸುತ್ತಿರುವನು. ಈ ಕಾರಣ ದಿಂದಲೇ ಸುಜ್ಞಾನಿಗಳು ಪಿತೃಯಜ್ಞರೂಪವಾದ ಶ್ರಾದ್ಧಕರ್ಮಗಳಲ್ಲಿ ಚತುರ್ಮೂರ್ತ್ಯಾತ್ಮಕನಾದ ಶ್ರಾದ್ಧಕಾಮಿಯಾದ ಷಣ್ಣವತಿನಾಮಕ ಅನಿರುದ್ಧ ನನ್ನು (೧) ಅನಿರುದ್ಧಅನಿರುದ್ಧ (೨) ಅನಿರುದ್ಧ ಪ್ರದ್ಯುಮ್ನ (೩) ಅನಿರುದ್ಧ ಸಂಕರ್ಷಣ ಮತ್ತು (೪) ಅನಿರುದ್ಧ ವಾಸುದೇವ ಎಂಬ ನಾಲ್ಕು ರೂಪಗಳನ್ನು ಅನುಸಂಧಾನ ಪೂರ್ವಕ ತಿಳಿದು ಪೂಜಿಸುತ್ತಾರೆ-ಎಂದು ತಾತ್ಪರ್ಯ ॥ ೨೩ ॥

# ಪದ್ಯ (೨೪)

**ಮೂಲ :—**

**ಅಂಬುಜಜಾಂಡೋದರನು ವಿಪಿನದಿ ।**
**ಶಬರಿಯೆಂಜಲನುಂಡು ಗೋಕುಲ ।**
**ದಬಲೆಯರನೊಲಿಸಿದನು ಋಷಿಪತ್ನಿಯರು ಕೊಟ್ಟನ್ನ ॥**
**ಸುಭುಜ ತಾ ಭುಂಜಿಸಿದ ಸ್ವರಮಣ ।**
**ಕುಬುಜೆ ಗಂಭಕೆ ಒಲಿದ ಮುನಿಗಣ ।**
**ವಿಬುಧಸೇವಿತ ಬಿಡುವನೇ ನಾವಿತ್ತ ಕರ್ಮಫಲ ॥ ೨೪ ॥**

**ಅವತರಿಣಿಕೆ :–**

ಚತುರ್ದಶಭುವನಾತ್ಮಕವಾದ ಬ್ರಹ್ಮಾಂಡವನ್ನು ತನ್ನ ಉದರದಲ್ಲಿ ಧರಿಸಿರುವ ವಿಶ್ವಂಭರನಾಮಕ ಶ್ರೀ ಪರಮಾತ್ಮನು ರಾಮಾವತಾರದಲ್ಲಿ ಭಕ್ತಳಾದ ಶಬರಿಯು ಕಚ್ಚಿ ತಿಂದು ರುಚಿನೋಡಿ. ಉತ್ತಮವಾದ ಹಾಗೂ ರಸಪೂರಿತವಾದ ಫಲಗಳನ್ನು ರಾಮನಿಗಾಗಿ ಕಾದಿರಿಸಿ ಇಟ್ಟದ್ದು, ಅವನಿಗೆ ಅತ್ಯಂತ ಭಕ್ತಿಭಾವದಿಂದ ಅರ್ಪಿಸಿದಳು. ಶ್ರೀಪರಮಾತ್ಮನಾದರೋ ಸ್ವರಮಣನು, ಆಪ್ತಕಾಮನು, ಪರಾಪೇಕ್ಷಾರಹಿತನು, ಇಂತಿದ್ದರೂ ನಂದಗೋಕುಲದ ಗೊಲ್ಲತಿಯರ ಭಕ್ತಿಗೆ ಮೆಚ್ಚಿ, ಅವರನ್ನು ಅನುಗ್ರಹಿಸಿದನು. ವನದಲ್ಲಿ ಋಷಿಪತ್ನಿಯರು ಕೊಟ್ಟ ಅನ್ನವನ್ನು, ತಾನು ಸ್ವಾಖ್ಯರಸಗಳನು ಸ್ವೀಕರಿಸುವವನಾದಾಗ್ಯೂ, ತೆಗೆದುಕೊಂಡು ಅವರನ್ನು ಪ್ರಸನ್ನಗೊಳಿಸಿದನು. ಅಷ್ಟಾವಕ್ರಳಾಗಿದ್ದ. ಕುಬುಜೆಯು ಕೊಟ್ಟ ಪರಿಮಳಯುಕ್ತ ಸುಗಂಧವನ್ನು ಸ್ವೀಕರಿಸಿ, ಅವಳ ಕುರೂಪವನ್ನು ನಿವಾರಿಸಿ, ಲಾವಣ್ಯವತಿಯನ್ನಾಗಿ ಮಾಡಿದ ಮಹಾಮಹಿಮಾಸಂಪನ್ನನು. ಋಷಿವರ್ಗದಿಂದಲೂ

ಮತ್ತು ಜ್ಞಾನಿಶ್ರೇಷ್ಠರಿಂದಲೂ ಸಂಸೇವ್ಯಮಾನನಾದ ಶ್ರೀಹರಿಯು ಭಕ್ತರಾದ ಅಧಿಕಾರಿಗಳು ನಿಷ್ಕಾಮವಾದ ಮನಸ್ಸಿನಿಂದ ಅರ್ಪಿಸಿದ ಕರ್ಮ ಫಲಗಳನ್ನು ಖಂಡಿತ ಸ್ವೀಕರಿಸುತ್ತಾನೆಂದು ಹೇಳುತ್ತಾರೆ- "ಅಂಬುಜ ಜಾಂಡೋದರನು"- ಎಂಬ ಪ್ರಸಕ್ತಸಂಧಿಗತ ೨೪ನೆಯ ಈ ಪದ್ಯದಿಂದ ॥ ೨೪ ॥

**ಪ್ರತಿಪದಾರ್ಥ :**

**ಅಂಬುಜಜಾಂಡೋದರನು**=ಬ್ರಹ್ಮಾಂಡವನ್ನು ತನ್ನ ಉದರದಲ್ಲಿ ಧರಿಸಿರುವ ಶ್ರೀಪರಮಾತ್ಮನು **ವಿಪಿನದಿ**=ಅರಣ್ಯದಲ್ಲಿ (ದಂಡಕಾರಣ್ಯದಲ್ಲಿ) **ಶಬರಿ**=ಶಬರಿ ಎಂಬ ಹೆಸರಿನ ವೃದ್ಧತಾಪಸಿಯು **ಎಂಜಲ**=ಹಲ್ಲಿನಿಂದ ಕಚ್ಚಿ ಎಂಜಲುಮಾಡಿದ್ದ ಫಲಗಳನ್ನು **ಉಂಡು**=ಸ್ವೀಕರಿಸಿ ಭಕ್ಷಿಸಿದನು. **ಗೋಕುಲದ**=ನಂದಗೋಕುಲ ನಿವಾಸಿಗಳಾದ **ಅಬಲೆಯರನು**=**ಗೋಪಿಕಾ** ಸ್ತ್ರೀಯರನ್ನು **ಒಲಿಸಿದನು**=ತನ್ನ ಅಂಗಸಂಗರೂಪವಾದ ಆನಂದಭಾಗ್ಯವನ್ನು ಕರುಣಿಸಿ, ಸಂತೋಷಪಡಿಸಿದನು. **ಋಷಿಪತ್ನಿಯರು**=ಯಜ್ಞಕಾರ್ಯದಲ್ಲಿ ನಿರತರಾಗಿದ್ದ ಬ್ರಾಹ್ಮಣರ ಪತ್ನಿಯರು **ಕೊಟ್ಟನ್ನ**=ಅತ್ಯಂತ ಭಕ್ತಿ ಪೂರ್ವಕವಾಗಿ ಕೊಟ್ಟ ಅನ್ನವನ್ನು **ಸುಭುಜ**=ಸ್ವಾಭ್ಯರಸವನ್ನು ಮಾತ್ರ ಭುಂಜಿಸುವ ಶ್ರೀ ಪರಮಾತ್ಮನು. **ತಾ ಭುಂಜಿಸಿದ**=ತಾನು ಭೋಜನ ಮಾಡಿದನು. **ಸ್ವರಮಣ**=ಶ್ರೀಪರಮಾತ್ಮನು ತನ್ನಲ್ಲಿಯೇ ಕ್ರೀಡಾಗಳನ್ನು ನಡೆಯಿಸತಕ್ಕ ಆಪ್ತಕಾಮನು **ಕುಬುಜೆ**=ತ್ರಿವಕ್ರೆಯಾದ ಕುಬ್ಜೆಯು **ಗಂಧಕೆ**=ತನಗೆ ಕೊಟ್ಟ ಪರಿಮಳಯುಕ್ತವಾದ ಗಂಧಕ್ಕೆ **ಒಲಿದು**=ಮೆಚ್ಚಿ, ಅವಳ ಕುರೂಪವನ್ನು ನಿವಾರಿಸಿದನು. **ಮುನಿಗಣ**=ಋಷಿವರ್ಗದಿಂದಲೂ **ವಿಬುಧ**=ಜ್ಞಾನಿಶ್ರೇಷ್ಠರಿಂದಲೂ **ಸೇವಿತ**=ಸಂಸೇವ್ಯಮಾನನಾದ ಶ್ರೀಪರ ಮಾತ್ಮನು **ನಾವಿತ್ತ**=ನಾವು ಸಮರ್ಪಿಸುವ **ಕರ್ಮಫಲ**=ಕರ್ಮಜನ್ಯ ವಾದ ಫಲಗಳನ್ನು **ಬಿಡುವನೇ**=ಸ್ವೀಕರಿಸದೆ ಬಿಡುತ್ತಾನೆಯೇ ? ಅಂದರೆ ಖಂಡಿತ ಸ್ವೀಕರಿಸದೆ ಬಿಡುವುದಿಲ್ಲ ಎಂದು ತಾತ್ಪರ್ಯ ॥ ೨೪ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಭಕ್ತರಾದ ಅಧಿಕಾರಿಗಳು ಅರ್ಪಿಸಿದ ಕರ್ಮಫಲ ಸ್ವೀಕರಿಸುತ್ತಾನೆ ಎಂದು ಹೇಳುತ್ತಾರೆ.

ಈ ವರ್ತಮಾನ ಬ್ರಹ್ಮಾಂಡವೂ, ಇನ್ನು ಅನಂತಾನಂತ ಬ್ರಹ್ಮಾಂಡಗಳ ಉದರದಲ್ಲಿ ಧರಿಸಿ ಇರುವಂಥ ಶ್ರೀ ಸೀತಾಪತಿಯಾದ ರಾಮಚಂದ್ರದೇವರು ದಂಡಕಾರಣ್ಯದಲ್ಲಿ " **ಪಂಪಾಯಾಂ ಪಶ್ಚಿಮೇ ತೀರೇ ವೀರೌ ನಿವಿಶತು ; ಶುಭಮ್ । ಆಲೋಕ್ಯ ಲೋಕನಾಥಂ ತಂ ಸಾನುಜಂ ಸ್ವಾತ್ರಮಾಗತಮ್ । ಶಬರೀ ಪೂಜಯಾಮಾಸ ಫಲಮೂಲೈಃ ತಪಸ್ವಿನೀ ॥**" ಎಂತ **ಸಂಗ್ರಹರಾಮಾಯಣ** ಉಕ್ತಿ ಇರುವುದರಿಂದ, ಇಂಥಾ ಶಬರೀ ನಾಮಕ ಸ್ತ್ರೀಯು ಹಲ್ಲಿನಿಂದ ಕಚ್ಚಿ ಎಂಜಲು ಮಾಡಿದ್ದ ಫಲಗಳು ಶ್ರೀ ರಾಮಚಂದ್ರದೇವರಿಗೆ ಬಹು ಸಂತೋಷವಾಯಿತು. ಫಲಗಳು ಎನತಕ್ಕದ್ದು ದಿವ್ಯವಾಗಿ, ಮಧುರವಾಗಿ, ಸುವಾಸಿತವಾಗಿ ಅದೋ ಅಲ್ಲವೋ ನೋಡಿ ಕೊಡಬೇಕಂತ ಭಕ್ತಿಯಿಂದ ದಿವ್ಯಫಲಗಳ ಕೊಟ್ಟಳೇ ಹೊರ್ತು, ತಾನು ಎಂಜಲು ಮಾಡಿದ್ದನು, ಎಂಜಲು ಫಲಗಳ ಕೊಟ್ಟೆ ಎಂತ ಕೊಟ್ಟವಳಲ್ಲ. ಆದ ಕಡಿಯಿಂದ ಭಕ್ತಿ ಇರುವುದ್ದರಿಂದ ಫಲಗಳು ಶುದ್ಧವಾಯಿತು. ತದ್ವತ್ ಬಿಂಬಕ್ರಿಯಾನುಸಂಧಾನದಿಂದ, ನಿಷಿದ್ಧಕರ್ಮ ಭಕ್ತಿಪೂರ್ವಕ ಅರ್ಪಿಸಿದರೆ, ಅದರನ ಶಬರೀ ಫಲವತ್ ಸ್ವೀಕರಿಸತಾನೆ. ಶಬರೀ ಕೊಟ್ಟ ಫಲಗತ ತನ್ನ ಸ್ವಾಮ್ಯ ತಾನು ಭೋಜನಮಾಡಿ ಜಡರಸ ಉದರದಲ್ಲಿ ಬ್ರಹ್ಮಾಂಡಗಳು ಧರಿಸಿದೋಪಾದಿಯಲ್ಲಿ ಇಡತಾವೆ ಎಂತಲೂ ತಾತ್ಪರ್ಯವೇ. ಗೋಕುಲ ಸ್ಥಾನದಲ್ಲಿ ಇದ್ದಂಥಾ ಗೋಪಿಕಾ

ಸ್ತ್ರಿಯರಿಗೆ, ತನ್ನಲ್ಲಿ ಮನಸ್ಸು ಇರುವಂತೆ ಮಾಡಿ, ಅವರ ಸಂಗಡ ಕ್ರೀಡಾದಿಗಳನ್ನು ಮಾಡಿದನು. **"ತಾಃ ಷಡ್ವಿಧಾನ್ನ ಪರಿಪೂರ್ಣಕರಾಃ ಸಮೇತಾಸ್ತ್ರಾಸ್ತ್ರಾ ವಿಸೃಜ್ಯ ಪತಿ ಪುತ್ರ ಸಮಸ್ತ ಬಂಧೂನ್ । ಆತ್ಮಾರ್ಚನೈಕಪರಮಾ ವಿಸಸರ್ಜ ಕೃಷ್ಣ ಏಕಾಪತಿ ಪ್ರವಿಧೃತಾ ಪ್ರದನೂಪ ವಿಷ್ಣೋಃ॥**

**ಭುಕ್ತ್ವಾಅಥ ಗೋಪಸಹಿತೋ ಭಗವಾಂಸ್ತದನ್ನಂ ರೇಮೇ ಚ ಗೋಕುಲಮವಾಪ್ಯ ಸಮಸ್ತನಾಥಃ॥**

ಎಂತ **ನಿರ್ಣಯ ೧೩ನೆಯ** ಅಧ್ಯಾಯದಲ್ಲಿ ಉಕ್ತವಾಗಿರುವುದರಿಂದ ಇಂಥಾ ಅನ್ನವನ್ನ, ತನ್ನ ಸ್ವಾಖ್ಯವಾದ ಅನ್ನವನ್ನು ಭೋಜನಮಾಡತಕ್ಕವ [ಸುಭುಜ] ಅಪ್ಸರನ್ನ ತಾನು ಭೋಜನಮಾಡಿದನು.

**"ಸುಭುಜೋ ದುರ್ಧರೋಽ ವಾಗ್ಮೀ"** -ಎಂತ ವಿಷ್ಣುಸಹಸ್ರ **ನಾಮೋಕ್ತೇಃ "ಗಚ್ಛನ್ ದದರ್ಶ ವನಿತಾಂ ನರದೇವಯೋಗ್ಯಮಾದಯ ಗಂಧಮಧಿಕಂ ಕುಟಿಲಾಂ ವ್ರಜಂತೀಂ॥ ತೇನಾರ್ಥಿತಾ ಸಪದಿ ಗಂಧಮದಾತ್ತ್ರಿವಕ್ರಾ ತೇನಾಗ್ರಜೇನ ಸಹಿತೋ ಭಗವಾಲ್ಲಿಲಿಂಪೇ॥**

-ಎಂತ ಕುಬುಜೆ ಕೊಟ್ಟ ಗಂಧಕ್ಕೆ ಒಲಿದವನಾದ ಸ್ವರಮಣ, ಅಂದರೆ, ಶ್ರೀಪರಮಾತ್ಮ ಪ್ರತಿಪದಾರ್ಥಗಳಲ್ಲಿ ತನ್ನ ಸ್ವಾಖ್ಯರಸಾತ್ಮಕ ಭಗವದ್ರೂಪಗಳಿಂದ ಪರಿದೃಶ್ಯಮಾನ ಭಗವದ್ರೂಪಗಳಲ್ಲಿ ಐಕ್ಯಹೊಂದತಾನೆ. ಆದ್ದರಿಂದ ಭುಂಜಿಸಿದ ಎಂತ ಪ್ರಯೋಗದ ಅರ್ಥ. ಅಂದರೆ ಈ ರೀತಿ ತಾತ್ಪರ್ಯ ಎಂತ ತಿಳಿಯಬೇಕು. ಸ್ವರಮಣ ವಿಶೇಷವಾಕ್ಯ ವೆಂದರೆ ಪೂರ್ವೋಕ್ತಗಳೆಲ್ಲಾ ಶ್ರೀಪರಮಾತ್ಮನಿಗೆ ಅಭಿನ್ನವಾದದ್ದೇ. ಆದ ಕಡಿಯಿಂರ ಶ್ರೀಪರಮಾತ್ಮ ತನ್ನ ರೂಪಗಳಿಂದ ತನಗೆ ಅಭಿನ್ನಗಳಾದ ಪದಾರ್ಥಾಂತರ್ಗತ ಭಗವದ್ರೂಪಗಳಿಗೆ ನಿವೇದದರೂಪ ಐಕ್ಯವೂನೂ ಹೊಂದತಾನೆ. ತನಗೆ ಭಿನ್ನಗಳಾದ ಜಡರೂಪವಾದ ಪದಾರ್ಥಗಳ ಅರ್ಪಿಸಿದರೆ, ಅದರನ್ನ ಬ್ರಹ್ಮಾಂಡಗಳ ಉದರದಲ್ಲಿ ಧರಿಸಿದೋಪಾದಿಯಲ್ಲಿ ಧರಿಸಿ ಇರತಾನೆ. ಆದ ಕಡಿಯಿಂದ ಸ್ವರಮಣ

ಪ್ರಯೋಗ ಮಾಡಿದ್ದಾರೆ ಎಂತ ತಾತ್ಪರ್ಯ. ಅಸಂಪ್ರಜ್ಞಸಮಾಧಿಯಿಂದ ಯುಕ್ತರಾದ ಋಷಿಗಳಿಂದ [ಮುನಿಗಣ] ಸೇವಿತನಾದ ಪರಮಾತ್ಮ, ನಾವುಗಳು ಪೂಜೋಪಯೋಗ್ಯವಾದಂಥಾ ನಿವೇದನರೂಪವಾದಂಥಾ ಪದಾರ್ಥಗ-ಅರ್ಪಿಸಬೇಕಾದರೆ ಪದಾರ್ಥಗಳಲ್ಲಿ ಅಭಿಮಾನಿದೇವತಾಪೂರ್ವಕ ಭಗವಚ್ಚಿಂತನ ಮಾಡಿ ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾ ಪೂರ್ವಕ ಅನುಸಂಧಾನದಿಂದತ "ಸ್ವಾಮೀ ನಿನ್ನ ಸ್ವಾಖ್ಯಗಳ ನೀನು ಸ್ವೀಕಾರಮಾಡು-" ಎಂತ ಕೊಟ್ಟರೆ, ಅಂಥಾಕರ್ಮಫಲವನ್ನ ಸ್ವೀಕಾರವಮಾಡದೇ ಬಿಡೋನೇ ? ಎಂದರೆ ತಕ್ಷಣ ಸ್ವೀಕಾರವಮಾಡತಾನೆ ಎಂತ ತಾತ್ಪರ್ಯ ॥ ೨೪ ॥

(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ:-

ಶ್ರೀ ಪರಮಾತ್ಮನು ಭಕ್ತವತ್ಸನೆಂದು ಹೇಳುತ್ತಾರೆ. ಶ್ರೀಪರಮಾತ್ಮನು ರಾಮಾವತಾರದಲ್ಲಿ ಸೀತಾಲಕ್ಷ್ಮಣ ಸಮೇತನಾಗಿ ಅಡವಿಯಲ್ಲಿ ವಾಸಮಾಡುವಾಗ ಶಬರಿ ಎಂಬ ತಾಪಸಿಯಾದವೃದ್ಧೆ ಯೊಬ್ಬಳು ರಾಮನ ಬರುವಿಕೆಯನ್ನು ಮೊದಲೇ ತಿಳಿದು, ಗಿಡದಿಂದ ಉದರಿದ ಒಳ್ಳೆಯ ಫಲಗಳನ್ನು ತೆಗೆದುಕೊಂಡು-ಅವನ್ನು ಕಚ್ಚಿ, ತಿಂದು, ರುಚಿನೋಡಿ, ಚನ್ನಾಗಿದ್ದರೆ— ಇದು ರಾಮನಿಗ್ಗೆ ಎಂದು ಇಟ್ಟು ಬಿಡುತ್ತಿದ್ದಳು. ಹೀಗೆ ರುಚಿನೋಡಿಟ್ಟ ಅನೇಕ ಫಲಗಳನ್ನು ಶ್ರಿರಾಮನು ಬಂದಾಗ ಸಮರ್ಪಿಸಿದಳು. ಶ್ರೀರಾಮನು ಆಕೆಯ ಭಕ್ತಿಗೆ ಮೆಚಿ, ಆ ಹಣ್ಣುಗಳನ್ನು ಭಕ್ಷಿಸಿದನು. ಸ್ವರಮಣನಾದರೂ ಗೋಕುಲದ ಗೊಲ್ಲತಿಯರಿಗೆ ಕೃಷ್ಣಾವತಾರದಲ್ಲಿ ಮೆಚ್ಚಿದನು. ಋಷಿಗಣಗಳಿಂದಲೂ, ಬ್ರಹ್ಮಾದಿ ದೇವಗಣಾರಾಧಿತನಾದರೂ ಋಷಿಪತ್ನಿಯರು ಕೊಟ್ಟ ಸಾಮಾನ್ಯವಾದ ಅನ್ನವನ್ನುಂಡನು. ತ್ರಿವಕ್ರಳಾದ ಸೈರಂಧ್ರಿಯು ಗಂಧ ಕೊಡಲು, ಪ್ರೀತಿಯಿಂದ ಸ್ವೀಕರಿಸಿ, ಅವಳಿಗೆ ಅಂಗಸಂಗವನ್ನಿತ್ತನು. ಹೀಗೆ ಜಾತಿ ಮೊದಲಾದವುಗಳಿಗೆ ದೃಷ್ಟಿಕೊಡದೆ, ಅವರವರ ಭಕ್ತಿಗೆ ಮೆಚ್ಚಿ, ಮೇಲೆ ಹೇಳಿದವರಿಗೆ ಒಲಿದಮೇಲೆ,ನಾವು ಭಕ್ತಿಯಿಂದ ಕರ್ಮಫಲಗಳನ್ನು ಒಪ್ಪಿಸಿದರೆ,ಪರಮಾತ್ಮನು ಕೈಗೊಳ್ಳನೇ ? ಸಂಶಯವಿಲ್ಲದ ತೆಗೆದುಕೊಳ್ಳುವನು ॥೨೪॥

(೩) "ಭಾವದರ್ಪಣ ಟೀಕಾ" -ವ್ಯಾಖ್ಯಾನ:—

ಬ್ರಹ್ಮಾಂಡವೇ ಉದರದಲ್ಲಿ ಉಳ್ಳವನು- ಅಂಬುಜಜಾಂಡೋದರನು. **ಉಕ್ತಂಚ ರಾಮಾಯಣೇ:-**

**"ತ್ವಧ್ಯಾನ ವೈಭವ ರಸಂ ರಘುನಾಥ ವೇತ್ತಿ ಸೋಚ್ಛಿಷ್ಟ ಮೂಲ ಫಲದಾ ಶಬರೀ ಬಿಭರ್ತೀ॥"**

ಆಬಲೆಯರು, ಎಂದರೆ ಗೋಲಸ್ಥ ಸ್ತ್ರಿಯರು ಎಂದರ್ಥ, ಸುಭುಜ ಎಂದರೆ, **"ಸುಭುಜೋ ದುರ್ಧರೋ ವಾಗ್ಮೀತಿ ಸಹಸ್ರನಾನು ಮಾನಾತ್ ॥೨೪॥**

(೪) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಪೂರ್ಣಾನಂದನಾದಾಗ್ಯೂ ಶ್ರೀಹರಿ ಇತರರ ರಕ್ಷಣಾರ್ಥವಾಗಿ ಪ್ರಾಕೃತರಸ ಸ್ವೀಕರಿಸುವುದುಂಟು. ಇದರಿಂದ ದೇವರಿಗೆ ದೋಷವಿಲ್ಲ ವೆಂಬ ಅರ್ಥವನ್ನು, ಅಧ್ಯಾಯಾಂತ ಸದೃಷ್ಟಾಂತ ತಿಳಿಸುತ್ತಾರೆ. **ಅಂಬ ಜಜಾಂಡ** ವೆಂಬ ಪದ್ಯದಿಂದ, ಅಂಬುಜಜಾಂಡ ಎಂದರೆ, ಬ್ರಹ್ಮಾಂಡವನ್ನು ಉದರದಲ್ಲಿಟ್ಟಿರುವವನಾದಾಗ್ಯೂ, ವಿಪಿನದಿ ಎಂದರೆ, ಅಡವಿಯಲ್ಲಿ ಭಕ್ತಳಾದ ಶಬರಿ ಎಂಬುವಳು ಕೊಟ್ಟ ಎಂಜಲು ಹಣ್ಣನ್ನು ಶ್ರೀರಾಮನು ಭಕ್ಷಿಸಿದನು. ರುಚಿಯಾದ್ದು ಕೊಡಬೇಕೆಂದು ಕಚ್ಚಿನೋಡಿ ಇಟ್ಟಿದ್ದಳೆಂದು ಗಾದೆಯಿಂದ ಎಂಜಲೆಂಬ ಭಾವವು. ಗೋಕುಲದ ಗೋಪಿಯರನ್ನು ಕೃಷ್ಣರೂಪದಿಂದ ಭೋಗಿಸಿದನು. ಋಷಿಪತ್ನಿಯರು ಕೊಟ್ಟ ಅನ್ನವನ್ನು ಸುಭುಜನೆಂದರೆ, ಸಾರಭೋಕ್ತ ಎಂದು ಹೆಸರುಳ್ಳ ಕೃಷ್ಣನು ಭುಂಜಿಸಿದನು. ಸ್ವರಮಣನೆಂಬ ಸ್ವರೂಪಾನಂದವುಳ್ಳವನಾದರೂ ಕುಬ್ಜೆ ಎನ್ನುವಳು ಕೊಟ್ಟ ಗಂಧಕ್ಕೆ ಮೆಚ್ಚಿದನು, ಹೀಗೆ ಋಷಿಗಳಿಂದಲೂ ದೇವತೆಗಳಿಂದಲೂ ಸೇವಿತನಾದ ಶ್ರೀಹರಿಯು, ನಾವು ಕೊಟ್ಟ ಕರ್ಮಫಲಗಳನ್ನು, ಬಿಡುವನೆ ? ಎಂದರೆ, ಸ್ವೀಕರಿಸುವನೆಂದು ಅರ್ಥ ॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ :

ಮಹಾಪ್ರಳಯಕಾಲದಲ್ಲಿ ಶ್ರೀಪರಮಾತ್ಮನು ತನ್ನಿಂದ ಸೃಷ್ಟವಾದ ಚೇತನಾಚೇತನಾತ್ಮಕವಾದ ಬ್ರಹಾಂಡವನ್ನು ಲಯಗೊಳಿಸಿ, ತನ್ನ ಉದರ ದಲ್ಲಿ ಆಶ್ರಯಕೊಟ್ಟು ಧರಿಸುವನು. ಇದರಿಂದ ಶ್ರೀಪರಮಾತ್ಮನಿಗೆ "ಜಗದುದರ" ಅಥವಾ "ವಿಶ್ವಂಭರ" ನೆಂದು ಹೆಸರು. ಅಂಬು ಎಂದರೆ. ನೀರು. ಅದರಲ್ಲಿ ಉತ್ಪನ್ನವಾದದ್ದು ಅಂಬುಜ-ವೆಂದರೆ ಕಮಲ. ಪದ್ಮನಾಭ ರೂಪಿಯಾದ ಶ್ರೀಹರಿಯ ಹೊಕ್ಕಳು ಎಂಬ ನಾಭಿಪ್ರದೇಶದಿಂದ ಉತ್ಪನ್ನ ವಾದದ್ದೇ ಚತುರ್ದಳಾತ್ಮಕವಾದ ಸುವರ್ಣಮಯ ಕಮಲವು. ಈ ಕಮಲ ದಲ್ಲಿ ಉತ್ಪನ್ನರಾದ ಶ್ರೀ ಚತುರ್ಮುಖ ಬ್ರಹ್ಮದೇವನೇ ಹಿರಣ್ಯಗರ್ಭ ನಾಮಕರು. ಈ ಕಮಲೋದ್ಭವರಾದ ಬ್ರಹ್ಮದೇವರು- ಅಂಬುಜಜರು. ಅವರ ದೇಹವೇ ಬ್ರಹ್ಮಾಂಡವು, ಅಂದರೆ ಅಂಬುಜಜಾಂಡವು. ಅಂತಹ ವರ್ತಮಾದ ಬ್ರಹ್ಮಾಂಡವೇನು, ಇನ್ನೂ ಅನಂತಾನಂತ ಬ್ರಹ್ಮಾಂಡಗಳನ್ನೇ ತನ್ನ ಉದರದಲ್ಲಿ ಧರಿಸಿರುವ ಶ್ರೀಪರಮಾತ್ಮನೇ- ಅಂಬುಜಜಾಂಡೋದರನು. ಏತಾದೃಶಮಹಿಮೋಪೇತನಾದ, ಭಗವಂತನು ಭಕ್ತಪರಾಧೀನನು. ಭಕ್ತ್ಯೈ ಕಲಭ್ಯನು, ಅಂತಹ ಭಕ್ತವತ್ಸಲನಾದ ಕರುಣಾಮಯನು ಭಕ್ತರಾದ ಅಧಿಕಾರಿ ಗಳು ತನಗೆ ಭಕ್ತಿಪುರಸ್ಸರವಾಗಿ ಉತ್ತಮಾನುಸಂಧಾನಜ್ಞಾನಪೂರ್ವಕ ತನಗೆ ಅರ್ಪಿಸಿದ ಕರ್ಮಫಲಗಳನ್ನು ಖಂಡಿತ ಸ್ವೀಕರಿಸುತ್ತಾನೆ- ಎಂದು ವಿಶದೀಕರಿ ಸುತ್ತಾರೆ. ಶ್ರೀ ಪರಮಾತ್ಮನ ಭಕ್ತ ಪರಾಧೀನತ್ವರೂಪವಾದ ಈ ಗುಣಾತಿ ಶಯವನ್ನು ನಾಲ್ಕು ಪೌರಾಣಿ ನಿದರ್ಶನಗಳಿಂದ ಪುಷ್ಟೀಕರಿಸಿದ್ದಾರೆ. :-

(೧) ಬೇಡರ ಜಾತಿಯಲ್ಲಿ ಉತ್ಪನ್ನಳಾದ ಶಬರೀ ಎಂದ ವೃದ್ಧ ತಾಪಸಿ.

(೨) ನಂದಗೋಕುಲದ ಅಬಲೆಯರಾದ ಗೋಪಿಕಾಸ್ತ್ರೀಯರು.

(೩) ಭಗವದರ್ಪಣ ಬುದ್ಧಿಯಿಂದ ಬಲರಾಮ ಕೃಷ್ಣರಿಗೆ ಅನ್ನವನ್ನು ಕೊಟ್ಟ ಋಷಿಪತ್ನಿಯರು.

## (೪) ಗೂನುಬೆನ್ನಿನಿಂದ ವಿಕೃತಳಾಗಿದ್ದ ಕುಬುಜೆ ಎಂಬ ಸ್ತ್ರೀ.

ಶ್ರೀ ಹರಿಯು ಧರ್ಮಸಂಸ್ಥಾಪನೆಗೋಸ್ಕರ ತ್ರೇತಾಯುಗದಲ್ಲಿ ರಾಮನಾಗಿ ಅವತರಿಸಿದ ಕಾಲದಲ್ಲಿ ಪಿತೃವಾಕ್ಯಪರಿಪಾಲನಾರ್ಥವಾಗಿ ಅರಣ್ಯವಾಸವನ್ನು ಕೈಗೊಂಡನು. ರಾವಣನಿಂದ ಅಪಹೃತಳಾದ ಸೀತಾಕೃತಿಯನ್ನು ಹುಡುಕುತ್ತಾ, ಸತಿಯ ವಿರಹದಿಂದ ದು:ಖತಪ್ತನಾದಂತೆ ವಿಡಂಬನ ಮಾಡುತ್ತಾ, ಪಂಪಾ ಸರೋವರದ ಪಶ್ಚಿಮತೀರಕ್ಕೆ ಲಕ್ಷ್ಮಣ ಸಮೇತನಾಗಿ ಬಂದನು. ಆಗ ಆ ಪ್ರದೇಶದಲ್ಲಿ ಶಬರೀ ಎಂಬ ವೃದ್ಧತಾಪಸಿಯು ರಾಮನ ದರ್ಶನಾಕಾಂಕ್ಷಿಯಾಗಿ, ಬಹುಕಾಲ ಅವನ ಆಗಮನವನ್ನೇ ನಿರೀಕ್ಷಿಸುತ್ತಿದ್ದಳು. ಶ್ರೀರಾಮಚಂದ್ರನಿಗಾಗಿ ವೃಕ್ಷಗಳಿಂದ ಉದುರಿದ ಫಲಗಳನ್ನು ಆಯ್ದು, ಅವು ಪಕ್ವವಾಗಿ ರಸಭರಿತವಾಗಿದೆಯೋ ಇಲ್ಲವೇ ಎಂದು ಪರೀಕ್ಷಿಸಲು. ಅವುಗಳನ್ನು ಕಚ್ಚಿ ರುಚಿನೋಡಿ, ಉತ್ತಮವಾದ ಹಾಗೂ ಭಕ್ಷಣಯೋಗ್ಯವಾದ ಸುಮಧುರ ಫಲಗಳನ್ನು ಆಯ್ದು ಪ್ರತಿದಿವಸವೂ ಕಾದಿರಿಸುತ್ತಿದ್ದಳು. ಶ್ರೀರಾಮನ ಸಂದರ್ಶನವಾದ ಕೊಡಲೇ, ಅತ್ಯಂತ ಭಕ್ತಿಭಾವದಿಂದ ಶ್ರೀರಾಮಲಕ್ಷಣರನ್ನು ತನ್ನ ಗುಹೆಗೆ ಕರೆದೊಯ್ದು, ಅವರಿಗಾಗಿ ಕಾದಿರಿಸಿದ್ದ ಫಲಗಳನ್ನು ಕೊಟ್ಟಳು. ಭಕ್ತಪರಾಧೀನನಾದ ಶ್ರೀರಾಮನು, ಅವಳ ಅಂತರಂಗದ ಭಕ್ತಿಭಾವಕ್ಕೆ ವಶನಾಗಿ, ಶಬರಿಯು ಕಚ್ಚಿ ಎಂಜಲು ಮಾಡಿದ್ದ ಫಲಗಳನ್ನು ಸಂತೋಷದಿಂದ ಸ್ವೀಕರಿಸಿ, ಅವಳಿಗೆ ಸದ್ಗತಿಯನ್ನು ದಯಪಾಲಿಸಿದನು. ಎಂಜಲು ಮಾಡಿದ್ದ ಫಲಗಳಿಂದಾಗಲೀ, ಅಥವಾ ಅವಳ ಜಾತಿಯನ್ನಾಗಲೀ ಪರಿಗಣಿಸದೆ,ಕೇವಲ ಅವಳ ಭಕ್ತಿಗೆ ಮೆಚ್ಚಿ, ಅನುಗ್ರಹಿಸಿದ ಕರುಣಾಮೂರ್ತಿ ಶ್ರೀರಾಮಚಂದ್ರಪ್ರಭು.

ಅಂತೆಯೇ, ನಂದಗೋಕುಲದಲ್ಲಿ ಗೋಪಿಕಾಸ್ತ್ರೀಯರು ಶ್ರೀಕೃಷ್ಣನಲ್ಲಿ ಪರಮ ಭಕ್ತಿಯನ್ನು ತೋರಿದಾಗ, ಅವರೊಡನೆ ಜಲಕ್ರೀಡೆ, ರಾಸಕ್ರೀಡಾದಿಗಳನ್ನಾಡಿ, ತನ್ನ ಅಂಗಸಂಗದ ಸುಖವನ್ನು ಅನುಗ್ರಹಿಸಿ, ಅವರನ್ನು ಸಂತೋಷಪಡಿಸಿದನು. ಶ್ರೀಪರಮಾತ್ಮನಾದರೋ ಸ್ವರಮಣನು, ಸಮಸ್ತ

ವಸ್ತುಗತವಾದ ತನ್ನ ರೂಪಗಳಲ್ಲಿ ಮಾತ್ರ ಕ್ರೀಡಿಸುವ [ರಮಣ ಮಾಡುವ] ಅಚಿಂತ್ಯಾದ್ಭುತಚರಿತನು. ಗೋಪಿಕಾಸ್ತ್ರೀಯರಲ್ಲಿ ಅಂತರ್ಯಾಮಿ ರೂಪತ್ವೇನ ತಾನೇ ನಿಂತು, ತನ್ನ ರೂಪದಲ್ಲಿಯೇ ತಾನು ಐಕ್ಯಹೊಂದಿ ರಮಿಸಿದನು. ಇದರಿಂದ ಪ್ರತಿಬಿಂಬ ಸ್ವರೂಪರಾದ ಗೋಪಿಕಾಸ್ತ್ರೀಯರಿಗೆ ಸಂತೋಷವುಂಟಾಗಿ ತೃಪ್ತಿಹೊಂದಿದರು. ಶ್ರೀಹರಿಯು ಆಪ್ತಕಾಮನೂ ಸ್ವರಮಣನೂ ಆದ್ದರಿಂದ, ಅವನಿಗೆ ಜಾರತ್ವಾದಿ ದೋಷಗಳಾವುವೂ ಇಲ್ಲವೇ ಇಲ್ಲ.

ಒಮ್ಮೆ ಶ್ರೀ ರಾಮಕೃಷ್ಣರು ವನದಲ್ಲಿ ಗೋಪಾಲಬಾಲಕರೊಡಗೂಡಿ ಸಂಚರಿಸುತ್ತಿರುವಾಗ, ಅವರೆಲ್ಲರಿಗೂ ಹಸಿವು, ನೀರಡಿಕೆ ಉಂಟಾಯಿತು. ಆಗ ಕೃಷ್ಣನು ಗೋಪಾಲಕರನ್ನು ಸಮೀಪದಲ್ಲಿಯೇ ಯಜ್ಞಮಾಡುತ್ತಿದ್ದ ಬ್ರಾಹ್ಮಣವೃಂದದವರ ಕಡೆಗೆ ಕಳುಹಿಸಿದರು. ಯಾಗದೀಕ್ಷಿತರಾಗಿದ್ದ ಆ ವಿಪ್ರರು ಸಾಕ್ಷಾತ್ ಶ್ರೀಕೃಷ್ಣನೇ ಪರಾತ್ಪರವಸ್ತುವೆಂದೂ, ಯಜ್ಞಫಲ ಭೋಕ್ತೃವೆಂದೂ ಅರಿಯದೆ, ಅಹಂಕಾರದಿಂದಗ್ರಸ್ತರಾಗಿ, ಆ ಗೋಪಾಲಕರನ್ನು ತಿರಸ್ಕರಿಸಿ, ಹಿಂದಕ್ಕೆ ಕಳುಹಿಸಿದರು. ಆಗ ಶ್ರೀಕೃಷ್ಣನು ಆ ವಿಪ್ರ, ಪತ್ನಿಯರ ಬಳಿಗೆ ಕಳುಹಿಸಲು, ಅವರು ತಮ್ಮ ಪತಿ, ಪುತ್ರ, ಬಂಧುಗಳನ್ನು ತೊರೆದು, ಶ್ರೀ ಕೃಷ್ಣನಲ್ಲಿಗೆ ಬಂದು, ತಾವು ತಂದಿದ್ದ ಭಕ್ಷ್ಯ ಭೋಜ್ಯಗಳನ್ನು ನೀಡಿದರು. ಸರ್ವಸಾರಭೋಕ್ತನಾದ ಆ ಸ್ವರಮಣನು, ಭಗವದರ್ಪಿತ ಚಿತ್ತವೃತ್ತಿಯಿಂದ ಆ ಋಷಿಪತ್ನಿಯರು ಕೊಟ್ಟ ಅನ್ನವನ್ನು ಭುಂಜಿಸಿ, ಅವರನ್ನು ಅನುಗ್ರಹಿಸಿದನು. ಸಮಸ್ತ ಪದಾರ್ಥಗತ ಸ್ವಾಖ್ಯರಸವನ್ನು ಮಾತ್ರ ಸ್ವೀಕರಿಸುವ ಆಪ್ತಕಾಮನು, ಋಷಿಪತ್ನಿಯರ ಅಂತಃಕರಣಪೂರಿತವಾದ ಶುದ್ಧಭಕ್ತಿಗೆ ಮೆಚ್ಚಿ, ಅವರು ಅರ್ಪಿಸಿದ ಅನ್ನವನ್ನುಂಡನು.

ಶ್ರೀಬಲರಾಮಕೃಷ್ಣರು ದುರುಳ ಕಂಸವಧಾರ್ಥವಾಗಿ ಮಧುರಾ ಪಟ್ಟಣದ ರಾಜಬೀದಿಯಲ್ಲಿ ಹೋಗುತ್ತಿರುವಾಗ, ಮಾರ್ಗದಲ್ಲಿ ತ್ರಿವಕ್ರಾ ಎಂಬ ಗೂನುಬೆನ್ನಿನ ಸ್ತ್ರೀಯನ್ನು ನೋಡಿದರು. ಆಕೆಯು ಸುಂದರಳಾಗಿದ್ದರೂ ಗೂನಿನಿಂದ ಬೆನ್ನು ವಿಕಾರವಾಗಿ, ಕುಬ್ಜೆಯಾಗಿದ್ದಳು. ಕಂಸನ ಉಪಯೋಗಕ್ಕಾಗಿ ಪರಿಮಳಯುಕ್ತ ಸುಗಂಧವನ್ನು ಸುವರ್ಣಕಳಸದಲ್ಲಿ ತೆಗೆದುಕೊಂಡು

ಹೋಗುತ್ತಿರುವುದನ್ನು ತಿಳಿದು ಶ್ರೀಕೃಷ್ಣನು ಆ ಗಂಧವನ್ನು ತನಗೆ ಕೊಡ ಬೇಕೆಂದು ಕೇಳಿದನು. ಪರಮಮಂಗಳ ಸ್ವರೂಪಿಯಾದ ಶ್ರೀಕೃಷ್ಣನ ನವ ಮೋಹನಾಕಾರವನ್ನು ನೋಡಿ ವಿವಶಳಾಗಿ ಕುಬುಜೆಯು ಗಂಧವನ್ನು ಶ್ರೀ ಕೃಷ್ಣನಿಗೆ ಅತ್ಯಂತ ಭಕ್ತಿಯಿಂದ ಅರ್ಪಿಸಿದಳು. ಆದರಿಂದೆ ಸಂತುಷ್ಟನಾದ ಆ ಕರುಣಾಳು ತನ್ನ ಪಾದದಿಂದ ಆಕೆಯ ಪಾದವನ್ನು ಮೆಟ್ಟಿಕೊಂಡು, ಅವಳ ಗಲ್ಲದ ಕೆಳಗೆ ಕೈಯಿಟ್ಟು, ಮೇಲಕ್ಕೆ ಎತ್ತಿದಾಗ, ಆಕೆಯ ಗೂನು ನಿವಾರಣೆಯಾಗಿ, ಬೆನ್ನು ನೇರವಾಗಿ, ಅವಳ ವಿಕಾರವು ಹೋಗಿ ನವಮೋಹ ನಾಂಗಿಯಾದಳು. ಕಲಸವಧಾನಂತರ ಶ್ರೀ ಕೃಷ್ಣನು ಕುಬುಜೆಯ ಮನೆಗೆ ಹೋಗಿ, ತನ್ನ ಅಂಗಸಂಗವನ್ನಿತ್ತು ಅವಳನ್ನು ಸಂತೋಷಗೊಳಿಸಿ ಸದ್ಗತಿ ಯನ್ನಿತ್ತನು.

ಇಂತು, ಶ್ರೀಹರಿಯು ಸ್ವರಮಣನಾದಾಗ್ಯೂ, ಪರಾಪೇಕ್ಷರಹಿತನಾದರೂ, ಅಧಿಕಾರಿಗಳಾದ ಸುಜನರು ಭಕ್ತಿಯಿಂದ ಅರ್ಪಿಸುವ ಕರ್ಮಜನ್ಯ ಫಲಗಳನ್ನು ಸ್ವೀಕರಿಸುತ್ತಾನೆ. ಕರ್ಮ ಸಾಕ್ಷಿಯಾದ ಬಿಂಬರೂಪೀ ಶ್ರೀಪರಮಾತ್ಮನೇ ಸಕಲ ಚೇತನರಲ್ಲಿ ನಿಂತು, ಅವರವರ ಕರ್ಮಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಅವರ ದ್ವಾರಾ ಮಾಡಿಸುತ್ತಿರುವನು. ಹೀಗೆ ಉತ್ತಮ ಜ್ಞಾನಾನುಸಂಧಾನದಿಂದ ಭಗವದ್ಭಕ್ತರು ಅರ್ಪಿಸುವ ಕರ್ಮಫಲಗಳನ್ನು ತಾನು ಸ್ವೀಕರಿಸದೆ ಬಿಡುವನೇ? ಖಂಡಿತ ಸ್ವೀಕರಿಸುತ್ತಾನೆಂದು ದಾಸರಾಯರ ಅಭಿಪ್ರಾಯವು ॥೨೪॥

# ಪದ್ಯ (೨೫)

**ಮೂಲ :—**

**ಗಣನೆಯಿಲ್ಲದ ಪರಮಸುಖ ಸ।**
**ದ್ಗುಣಗಣಂಗಳ ಲೇಶಲೇಶಕೆ।**
**ಎಣೆಯೆನಿಸದು ರಮಾಬ್ಜಭವಶಕ್ರಾದಿಗಳ ಸುಖವು ॥**
**ಉಣುತುಣುತ ಮೈಮರೆದು ಕೃಷ್ಣಾ।**
**ರ್ಪಣವೆನಲು ಕೈಕೊಂಬನರ್ಭಕ।**
**ಜನನಿ ಭೋಜನ ಸಮಯದಲಿ ಕೈವಡ್ಡುವಂದದಲಿ ॥೨೫॥**

**ಅವತರಣಿಕೆ :—**

ಶ್ರೀಪರಮಾತ್ಮನು ಅನಂತ ಕಲ್ಯಾಣಗುಣಪರಿಪೂರ್ಣನು. ಅವನ ಶುಭ ಗುಣಗಳು ಅನಂತ ಹಾಗೂ ಅಗಣಿತ. ರಮಾದಿ ಸಮಸ್ತ ದೇವತೆಗಳ ಒಟ್ಟು ಆನಂದರಾಶಿಯು ಅನಾದ್ಯನಂತಕಾಲದಿಂದ ಪರಿಪೂರ್ಣವಾಗಿರುವ ನಿತ್ಯಾನಂದ ಉದ್ರಿಕ್ತ ವಸ್ತುವಾದ ಆ ಅಪ್ರಮೇಯನ ಗುಣರಾಶಿಗಳಿಗೆ ಲವಲೇಶವಾದರೂ ಸಮಾನವಾಗಲಾರದು. ಇಂತಹ ಎಣೆಯಿಲ್ಲದ ಗುಣ ಸಾಂದ್ರನಾದ ಶ್ರೀಪರಮಾತ್ಮನನ್ನು ನಾವು ಭೋಜನ ಮಾಡುತ್ತಿರುವಾಗ ಮೈಮರೆತು, ಭಕ್ತಿಯಿಂದ ಪರವಶರಾಗಿ ಕೃಷ್ಣಾರ್ಪಣ ಭಾವದಿಂದ ಆ ಸ್ವರಮಣನಿಗೆ ಅರ್ಪಿಸಲು, ತಾಯಿಯಾದವಳು ಊಟಮಾಡುತ್ತಿರುವ ತನ್ನ ಬಾಲಕನಿಗೆ ತುತ್ತಿಗಾಗಿ ಕೈ ಒಡ್ಡುವಂತೆ, ಸ್ವೀಕರಿಸಿ, ಪರಮಾನುಗ್ರಹ ಮಾಡುವನು ಎಂದು ಹೇಳುತ್ತಾರೆ—ಪ್ರಸಕ್ತ ಸಂಧಿಗತ ೨೫ನೆಯ ಈ ಪದ್ಯದಿಂದ ॥೨೫॥

**ಪ್ರತಿಪದಾರ್ಥ** :-

**ಗಣನೆಯಿಸಿನಲ್ಲದ** = ಎಣಿಸಲಿಕ್ಕೆ ಅಸಾಧ್ಯವಾದ **ಪರಮ** = ಅತ್ಯಂತ ಶ್ರೇಷ್ಠವಾದ (ಅಪ್ರಾಕೃತ) **ಸುಖ** = ಆನಂದ **ಸದ್ಗುಣಂಗಳ** = ಮಂಗಳಕರವಾದ ಗುಣಸಮೂಹಗಳ **ಲೇಶಲೇಶಕೆ** = ಅನೇಕಾಂಶಗಳಪೈಕಿ ಒಂದಂಶಕ್ಕಾದರೂ (ಅಲ್ಪದಲ್ಲಿ ಅತ್ಯಲ್ಪಕ್ಕಾದರೂ) **ರಮಾ** = ಲಕ್ಷ್ಮೀದೇವಿ **ಅಜ್ಜಭವ** = ಚತುರ್ಮುಖ ಬ್ರಹ್ಮದೇವರು **ಶಕ್ರ** = ಇಂದ್ರದೇವರು **ಆದಿಗಳ** = ಇವರೇ ಮೊದಲಾದ ದೇವತೆಗಳ **ಸುಖವು** = ಆನಂದವು **ಎಣೆಯೆನಿಸದು** = ಎಂದೆಂದಿಗೂ ಸಮಾನವೆನಿಸುವುದಿಲ್ಲ **ಉಣುತುಣುತ** = ಭೋಜನಮಾಡುತ್ತಿರುವಾಗ **ಮೈಮರೆದು** = ಭಕ್ತಭಾವದಿಂದ ಮೈಮರೆತು (ದೇಹೇಂದ್ರಿಯಾದಿಗಳಿಂದ ಬಾಹ್ಯವಿಷಯಗಳ ಮರೆತು) **ಕೃಷ್ಣಾರ್ಪಣವೆನಲು** = ಶ್ರೀಕೃಷ್ಣಾರ್ಪಣ ಪೂರ್ವಕ ಶ್ರೀಪರಮಾತ್ಮನಿಗೆ ಅರ್ಪಿಸಲು **ಜನನಿ ಭೋಜನ ಸಮಯದಲಿ** = ತಾಯಿಯಾದಳು ಭೋಜನ ಮಾಡುತ್ತಿರುವ ಕಾಲದಲ್ಲಿ **ಅರ್ಭಕ** = ಬಾಲಕನಾದವನು **ಕೈವಡ್ಡುವಂದದಲಿ** ಹಸ್ತವನ್ನು ನೀಡುವಂತೆ **ಕೈಕೊಂಬ** = ಸ್ವೀಕರಿಸುವನು ॥೨೫॥

# ವ್ಯಾಖ್ಯಾನಗಳು

## [೧] ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ರಮಾಬ್ರಹ್ಮಾದಿಗಳ ಸುಖ ಶ್ರೀ ಪರಮಾತ್ಮನ ಸುಖಲೇಶಕ್ಕೆ ಸರಿ ಆಗೋದಿಲ್ಲ ಎಂತಲೂ, ಶ್ರೀಪರಮಾತ್ಮ ಸುಖಪೂರ್ಣನೆಂತಲೂ ಹೇಳುತ್ತಾರೆ.

ಸರ್ವೋತ್ತಮನಾದ ಶ್ರೀನಾರಾಯಣ ದೇವರ (ಪರಮ) ಎಣಿಸಲಿಕ್ಕೆ ಅಸಾಧ್ಯವಾದ, ಆದ್ಯಂತಗಳು ಶೂನ್ಯವಾದ ಅಪರಿಚ್ಛಿನ್ನಗಳಾದ (ಗಣನೆಯಿಲ್ಲದ) ಸುಖಗಳೇನು, ಸಂತೋಷಗಳೇನು, ನಿರ್ದುಷ್ಟಗಳಾದ ಮಂಗಳ

ಕರಗಳಾದ ಗುಣಸಮೂಹಗಳ ಒಳಗೆ (ಸದ್ಗುಣ ಗಣಂಗಳ) ಕೇವಲ ಸ್ವಲ್ಪವಾದ ಅಲ್ಪದೊಳಗೆ ಅತ್ಯಲ್ಪಸುಖಕ್ಕೇನು, ಗುಣಗಳು ಪ್ರಕೃತ ಸೇರಿಸಿದರೂ ಸಮಾನ ಎಂತ ಕರಸೋದಿಲ್ಲ (ಎಣೆ ಎನಿಸದು). ಆದಿ ಶಬ್ದದಿಂದ ರಮಾದಿ ತೃಣಾಂತ ಮುಕ್ತಿಯೋಗ್ಯ ಜೀವರ ಸ್ವರೂಪಾನಂದ ಸ್ವರೂಪಗುಣಗಳು ಮೊತ್ತ ಸೇರಿದ ರೂ ಶ್ರೀಪರಮಾತ್ಮನ ಲೇಶವಾದ ಗುಣಕ್ಕೂ,ಸುಖಕ್ಕೂ ಸಮಾನವಾಗಲಾರದ್ದು ಇದು ಹೇಳೋದಕ್ಕೆ ಕಾರಣವೇನೆಂದರೆ, ಮೋಕ್ಷದಲ್ಲಿ ಜೀವನು ಪೂರ್ಣಾನಂದ ಎಂತಲೂ, ಪರಮಾತ್ಮನು ಪೂರ್ಣಾನಂದ ಎಂತಲೂ ಕರಿಸೋವರಾಗಿದ್ದಾರೆ ಶ್ರೀಪರಮಾತ್ಮನ ಅನಂತಪೂರ್ಣತ್ವಕ್ಕೆ ವೈಲಕ್ಷಣ್ಯವೇನೆಂದರೆ ದೃಷ್ಟಾಂತಕ್ಕೆ:-

ಸಮುದ್ರೋದಕ ಸಮಾನ ಪರಮಾತ್ಮನ ಸುಖ ಆನಂದಾದಿ ಗುಣಗಳು. ಥಾಲಿ, ತಂಬಿಗಿ, ಕೊಡ ಇವುಗಳಲ್ಲಿ ಉದಕಪೂರ್ಣವಾಗಿ ಇರುವದ್ದರಿಂದ ಯೋಗ್ಯತಾನುಸಾರ ಪೂರ್ಣತ್ವ ಇವುಗಳಿಗೂ ಬಂತು, ಆದರೆ ಉದಕ ಪೂರ್ಣತ್ವ ಎಲ್ಲಾದಕ್ಕೂ ಅದೆ. ಉದಕ ವಿವಕ್ಷಯಾ ತಾರತಮ್ಯವದೆ. ತಂಬಿಗಿ, ಥಾಲಿ ಸಮಾನ ಜೀವರಲ್ಲಿ ಪೂರ್ಣತ್ವ ಎನತಕ್ಕದ್ದು ಎಲ್ಲಾದಕ್ಕೂ ಇದ್ದಾಗ್ಯೂ ಪಾತ್ರಗಳಲ್ಲಿ ಇರುವ ಉದಕವೂ ಅಪರಿಚ್ಛಿನ್ನಗಳು, ಜೀವರೋಪಾದಿಯಲ್ಲಿ ಇರುವ ಪಾತ್ರಗಳಲ್ಲಿರುವ ಉದಕ, ಪಾತ್ರಗಳಲ್ಲಿ ಅಪರಿಚ್ಛಿನ್ನಗಳು. ಆದಕಡಿಯಿಂದ ಬ್ರಹ್ಮಾದಿ ಜೀವರು ಆನಂದ ಗುಣ ಶ್ರೀಪರಮಾತ್ಮನ ಆನಂದ ಗುಣಗಳಿಗೆ ಸಮಾನವಾಗಲಾರದು. ಆದರೂ ಜೀವರ ಅವರವರು ತಾರತಮ್ಯಾನುಸಾರ ಗುಣಪೂರ್ಣರೇವೇ. ಇಂಥಾ ಶ್ರೀಪರಮಾತ್ಮನ ಮಹಾಮಹಿಮಾ ಅನುಷ್ಠಾನದಿಂದ ಭೋಜನ ಮಾಡುತಾ ಮಾಡುತಾ (ಉಣುತುಣುತ) ದೇಹೇಂದ್ರಿಯಾದಿಗಳಿಂದ ಬಾಹ್ಯ ವಿಷಯಗಳ ಮರೆತು, ಆ ತತ್ಕಾಲ ಆನಂದವನ್ನು ಶ್ರೀಕೃಷ್ಣಾರ್ಪಣ ಎಂದ ಮಾತ್ರಕ್ಕೆ (ಕೃಷ್ಣಾರ್ಪಣವೆನಲು), ಅದರನ್ನ ಸ್ವೀಕಾರಮಾಡತಾನೆ (ಕೈಕೊಂಬ). ಹ್ಯಾಗೆಂದರೆ, ಜನನಿಯಾದವಳು ಭೋಜನ ಮಾಡುತಾ (ಜನನಿ ಭೋಜನ ಸಮಯದಲಿ) ಇರತಕ್ಕ ಕಾಲದಲ್ಲಿ, ಬಾಲಕನಾದವ (ಅರ್ಭಕ) ಹಸ್ತವನ್ನು ನೀಡುವೋಪಾದಿಯಲ್ಲಿ ತಾಯಿ ತಾನ್ನ ಭೋಜನಮಾಡೋ ಪದಾರ್ಥ ಬಾಲಕನ ಅಪೇಕ್ಷಾ ತಿಳಿದು, ತಾನು ಭೋಜನ ಮಾಡುವ ಪದಾರ್ಥಗಳನ್ನು ಕೇವಲ ಪ್ರೇಮಾತಿಶಯದಿಂದ ಕೊಡುವೋಪಾದಿ

ಯಲ್ಲಿ ಭಗವದ್ಭಕ್ತರಾದವರು ಶ್ರೀಪರಮಾತ್ಮನಲ್ಲಿ ಅಂತ:ಕರಣದಿಂದ ಕೊಟ್ಟ ಕರ್ಮಫಲಗಳನ್ನು ಅವಶ್ಯವಾಗಿ ಸ್ವೀಕಾರ ಮಾಡತಾನೆ. ಉಭಯತ್ರರಿಗೂ ಪ್ರೇಮಾತಿಶಯಗಳು ಇರುವದ್ದರಿಂದ ಸ್ವೀಕಾರಮಾಡತಾನೆ ಎಂತ ತಾತ್ಪರ್ಯ ॥೨೫॥

## (೨) "ಭಾವಪ್ರಕಾಶಿಕೆ" - ವ್ಯಾಖ್ಯಾನ :

ಅಪರಿಮಿತವಾದ ಸುಖಸ್ವರೂಪನಾದ ಶ್ರೀಪರಮಾತ್ಮನ ಸದ್ಗುಣಗಣ ಗಳ ಲೇಶಾಂಶದಲ್ಲಿ ಒಂದು ಅಂಶಕ್ಕಾದರೂ ರಮಾ ಬ್ರಹ್ಮಾದಿಗಳ ಸುಖವನ್ನು ಈಡುಗಟ್ಟಲು ಆಗುವುದಿಲ್ಲ. ಇಂತಹ ಪರಮಾತ್ಮನ ಸೇವೆ ಎಂದು ಭಾವಿಸಿ, ತಾನು ಭೋಜನವನ್ನು ಮಾಡುತ, ಮಾಡುತ ಮೈಮರೆತು, ಭಕ್ತಿಯಿಂದ ತುತ್ತು ತುತ್ತಿಗೂ ಪರಮಾತ್ಮನ ಸ್ಮರಣೆಮಾಡುತ್ತಾ, ಆ ತುತ್ತುಗಳನ್ನು ಪರಮಾತ್ಮನಿಗೆ ಕೃಷ್ಣಾರ್ಪಣವೆಂದು ಸಮರ್ಪಿಸಿದರೆ, ತಾಯಿ ಭೋಜನಕ್ಕೆ ಕೂತಿರುವಾಗ ಮಗುವು ಹತ್ತಿರದಲ್ಲಿ ಕೂತು ಎಂಜಲು ಅನ್ನಕ್ಕೆ ಕೈನೀಡುವಂತೆ ನಾವು ಕೊಟ್ಟುದನ್ನು ಸ್ವೀಕರಿಸುವನು ॥೨೫॥

## (೩) "ಭಾವದರ್ಪಣ ಟೀಕಾ-ವ್ಯಾಖ್ಯಾನ :-

ಅಪರಿಮಿತ ಸುಖಪೂರ್ಣನಾದ ಶ್ರೀಹರಿಯು ಅಲ್ಪರ ಕರ್ಮಫಲ ಸ್ವೀಕರಿಸುತ್ತಾನೆಂದು ಹೇಳುತ್ತರೆ- "ಗಣನೆಯಿಲ್ಲದ–" ಎಂಬ ಪದ್ಯದಿಂದ.

ರಮಾದಿಗಳ ಸುಖವು ಶ್ರೀಹರಿ ಸುಖಕ್ಕೆ ಸರಿ ಎನಿಸದು ಎಂಬ ಭಾವ, (ಎಣೆಯೆನಿಸದು) ॥೨೫॥

## (೪) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :-

ರಮಾ ಬ್ರಹ್ಮ ರುದ್ರೇಂದಾದಿಗಳ ಸ್ವಾನಂದಕ್ಕಿಂತಲೂ ಲೆಕ್ಕಕ್ಕೆ ಸಿಕ್ಕದ ಅನಂತಾನಂದಾದಿ ಸದ್ಗುಣಗಣವುಳ್ಳವನಾದರೂ, ಶ್ರೀಹರಿಯು ಆ ರಮಾ ಬ್ರಹ್ಮಾದಿ ಭಕ್ತರ ಸಮೂಹವು ಭೋಜನಮಾಡುತ್ತಾ, ಭಪ್ತಪರವಶರಾಗಿ,

ಕ್ತ್ಯಾರ್ಪಣವೆಂದು ಅರ್ಪಿಸಲು, ತಾಯಿಯು ಭೋಜನಕಾಲದಲ್ಲಿ ಶಿಶುವು ಅಪೇಕ್ಷೆಯಿಂದ ಕೈಯೊಡ್ಡುವಂತೆ ನಿರಪೇಕ್ಷನಾದರೂ, ಅಪೇಕ್ಷೆ ಇದ್ದಂತೆ ಅಂಗೀಕರಿಸುವನಾದ್ದರಿಂದ ಭಕ್ತಸುಖಪ್ರದನು. ॥ ೨೫ ॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಶ್ರೀಹರಿಯು ಅಪರಿಮಿತ ಸುಖಪೂರ್ಣನು. ಶ್ರೀಪರಮಾತ್ಮನ ಜ್ಞಾನಾನಂದಾದಿ ಸದ್ಗುಣಗಳೆಲ್ಲವೂ ಪರಿಪೂರ್ಣವೇ. ಒಂದೊಂದೂ ಗುಣದಲ್ಲಿ ಅನಂತ ಗೇಣಗಳು ಅಡಗಿವೆ, ಒಂದೊಂದು ರೂಪದಲ್ಲಿಯೂ ಅನಂತಾನಂತರೂಪಗಳು. ಎಲ್ಲವೂ ಪರಿಪೂರ್ಣವಾದದ್ದೇ. ಅಸದೃಶವಾದ ಅಪರಿಚ್ಛಿನ್ನಗಳಾದ ಅನಂತಕಲ್ಯಾಣಗುಣಗಣ ಧಾಮನಾದ ಶ್ರೀಪರಮಾತ್ಮನು ಅನಾದ್ಯನಂತಕಾಲದಿಂದಲೂ ಅನುಪಮಮಹಿಮಾ ಸಂಪನ್ನನು. ಸಪ್ತ ಸಮುದ್ರಗಳಲ್ಲಿರುವ ಜಲಕಣಗಳನ್ನಾದರೂ ಎಣಿಸಬಹುದು. ಭೂಮಂಡ ದಲ್ಲಿರುವ ಮಣ್ಣಿನ ಪರಮಾಣುಗಳನ್ನು ಎಣಿಸಲು ಸಾಧ್ಯವೇನೋ. ಸರ್ವತ್ರ ವ್ಯಾಪ್ತವಾದ ಆಕಾಶದ ಉದ್ದಗಲಗಳನ್ನಾದರೂ ಅಳೆಯಬಹುದೇನೋ. ಆದರೆ ಅನಾದ್ಯನಂತ ಗುಣಗಣಪರಿಪೂರ್ಣನಾದ ಶ್ರೀ ಹರಿಯ ಗುಣಾತಿಶಯ ಗಳನ್ನು, ಅವನ ರೂಪ, ನಾಮ, ಕ್ರಿಯಾದಿ ವಿಶೇಷಗಳನ್ನೂ ಸಾಕಲ್ಯೇನ ಯಾರೂ ಅರಿಯಲು ಸಾಧ್ಯವೇ ಇಲ್ಲ.

ಅಕ್ಷರನಾಮಕರಾದ ಶ್ರೀ ರಮಾದೇವಿಯರ ಸ್ವರೂಪಾನಂದ, ಕ್ಷರವರ್ಗ ಪ್ರವಿಷ್ಟರಾದ ಬ್ರಹ್ಮ, ರುದ್ರೇಂದ್ರಾದಿಗಳ ಸ್ವರೂಪಸುಖ, ಇವರಿಂದ ಅವರ ರಾದ ಸಮಸ್ತ ಮುಕ್ತಿಯೋಗ್ಯಚೇತನರ ಸ್ವರೂಪಾನಂದ ರಾಶಿ ಇವೆಲ್ಲ ವನ್ನು ಒಟ್ಟುಗೂಡಿಸಿದರೂ, ಸದ್ಗುಣಗಣರತ್ನಾಕರನಾದ ಶ್ರೀ ಹರಿಯು ಆನಂದದ ಲವಲೇಶಕ್ಕೂ ಎಂದೆಂದಿಗೂ ಸಮಾನವಾಗಲಾರದು. ಏತಾದೃಶ ಮಹಿಮೋಪೇತನೂ, ಅನಂತಶುಭಗುಣನಿಧಿಯೂ ಆಗಿರುವ ಶ್ರೀ ಪರಮಾತ ನನ್ನು ಮಹಾತ್ಮ್ಯಜ್ಞಾನಪೂರ್ವಕವಾಗಿ ಭಕ್ತಿಪರವಶರಾಗಿ ಕೊಂಡಾಡುತ್ತ ನಾವು ಭೋಜನಮಾಡುತ್ತಿರುವ ಸಮಯದಲ್ಲಿ ತುತ್ತು ತುತ್ತಿಗೂ ಕೃಷ್ಣ

ಗೋವಿಂದ, ಮಾಧವ ...." ಹೀಗೆ ಭಗವನ್ನಾಮಸ್ಮರಣೆ ಮಾಡುತ್ತಾ, ಭಕ್ತಿಭಾವದಿಂದ ಮೈಮರೆತು, ರೋಮಾಂಚನಯುಕ್ತರಾಗಿ ಯಜ್ಞರೂಪ ವಾದ ಭೋಜನಕ್ರಿಯೆಯನ್ನು ಭಗವದರ್ಪಣ ಬುದ್ಧಿಯಿಂದ ಕೃಷ್ಣಾರ್ಪಣ ವೆನಲು, ಭಕ್ತೈಲಭ್ಯನೂ, ಆಪ್ತಕಾಮನೂ, ನಿರಪೇಕ್ಷನೂ ಆದ ಶ್ರೀಪರಮಾತ್ಮ ನು ಎಂದು ದಾಸರಾಯರ ಭಾವವು. ಇದನ್ನು ದಾಸವರ್ಯರು ಒಂದು ಸುಂದರ ವಾದ ನಿದರ್ಶನದಿಂದ ವಿವರಿಸುತ್ತಾರೆ. ತಾಯಿಯಾದವಳು ತಾನು ಭೋಜನ ಮಾಡುತ್ತಿರುವಸಮಯದಲ್ಲಿ ಮಗುವು ಕೈಯಾಡ್ಡಿ ತುತ್ತನ್ನು ಸ್ವೀಕರಿಸುವುದು. ಇಲ್ಲಿ ಜನನಿಯ ಸಾದೃಶ್ಯ ಜೀವರು ಮತ್ತು ಮಗುವಿನ ಸಾದೃಶ್ಯ ಶ್ರೀಪರಮಾತ್ಮ ಆದರೆ ಜನನಿಯ ಸಾದೃಶ್ಯ ಶ್ರೀಪರಮಾತ್ಮ ಮತ್ತು ಮಗುವಿನ ಸಾದೃಶ್ಯ ಅವನಿಂದ ಸೃಷ್ಟರಾದ ಜೀವರಾಶಿ- ಎಂದು ಗಣನೆಗೆ ತಂದುಕೊಂಡರೆ, ಮಗುವು ಊಟಮಾಡುತ್ತಿರುವಾಗ, ಜನನಿಯು ಅತ್ಯಂತ ವಾತ್ಸಲ್ಯದಿಂದ ಕೈಯಾಡ್ಡುವಂತೆ ಸ್ವೀಕರಿಸುತ್ತಾನೆ ಎಂದೂ ಇನ್ನೊಂದು ವಿವರಣೆ ಇದೆ ||೨೫||

# ಪದ್ಯ (೨೬)

ಜೀವಕೃತ ಕರ್ಮಗಳ ಬಿಡದೆ ರ।
ಮಾವರನು ಸ್ವೀಕರಿಸಿ ಫಲಗಳ।
ನೀವನಧಿಕಾರಾನುಸಾರದಲವರಿಗನವರತ॥
ಪಾವಕನು ಸರ್ವಸ್ವ ಭುಂಜಿಸಿ।
ತಾ ವಿಕಾರವನೈದನೊಮ್ಮೆಗೆ।
ಪಾವನಕೆ ಪಾವನನೆನಿಸ ಹರಿಯುಂಬುದೇನರಿದು ॥೨೬॥

**ಅವತರಿಣಿಕೆ :—**

ಸರ್ವರ ಬಿಂಬನಾದ ಶ್ರೀಹರಿಯೇ ತಾನೇ ಜೀವಸ್ಥಿತನಾಗಿ ನಿಂತು, ಬಿಂಬಕ್ರಿಯಾದ್ವಾರಾ ಜೀವರಿಂದ ಮಾಡಿಸಿದ ಸಮಸ್ತ ಕರ್ಮಗಳನ್ನು ಸ್ವೀಕರಿಸುವನು. ಭಿನ್ನ ಭಿನ್ನರಾದ ಜೀವಕೃತ ಕರ್ಮಜನ್ಯವಾದ ಫಲಗಳನ್ನು ಆಯಾಯಾ ಜೀವರ ಯೋಗ್ಯತಾನುಸಾರ ಅವರವರಿಗೆ ನೀಡುವನು. ಸರ್ವ ಭಕ್ಷರನಾದ ಅಗ್ನಿಯು ಹೀಗೆ ತನ್ನಲ್ಲಿ ಹಾಕಿದ ಸಮಸ್ತ ವಸ್ತುಗಳನ್ನು ಭುಂಜಿಸಿ ತಾನು ಮಾತ್ರ ಯಾವ ವಿಕಾವನ್ನೂ ಹೊಂದುವುದಿಲ್ಲವೋ, ಅಂತೆಯೇ ಜಗತ್ಪಾವನ ಸ್ವರೂಪಿಯೂ, ಪವಿತ್ರ ವಸ್ತುಗಳಿಗೆ ಪಾವಿತ್ರ್ಯಪ್ರದನೂ ಆದ ಶ್ರೀಹರಿಯು ಜೀವರು ಭಗವದರ್ಪಣ ಬುದ್ಧಿಯಿಂದ ಸಮರ್ಪಿಸಿದ ಕರ್ಮಗಳನ್ನು ತಾನು ಸ್ವೀಕರಿಸಿ, ತಾನು ಮಾತ್ರ ಆ ಕರ್ಮಜನ್ಯಫಲಗಳಿಂದ ನಿರ್ಲಿಪ್ತನಾಗಿರುವನು. ಇದರಲ್ಲಿ ಏನಾಶ್ಚರ್ಯ ? —ಎಂದು ಹೇಳುತ್ತಾರೆ. "ಜೀವಕೃತ ಕರ್ಮಗಳ"—ಎಂಬ ಪ್ರಸಕ್ತ ಸಂಧಿಗತ ಈ ೨೬ನೆಯ ಪದ್ಯದಿಂದ ॥ ೨೬ ॥

**ಪ್ರತಿಪದಾರ್ಥ :**

ಜೀವಕೃತ = ಅಸ್ಪೃಶ್ಯರಾಶಿಯಿಂದ ಸೃಷ್ಟಿಗೆ ಬಂದಂಥ ತ್ರಿವಿಧ

ಜೀವರು ಮಾಡತಕ್ಕ **ಕರ್ಮಗಳ**= ಕರ್ಮಗಳನ್ನು **ಬಿಡದೆ**= ಬಿಟ್ಟು ಬಿಡದೆ **ರಮಾವರನು**= ಲಕ್ಷ್ಮೀಪತಿಯಾದ (ಅವರಿಗಿಂತಲೂ ಉತ್ತಮನಾದ) ಶ್ರೀ ಪರಮಾತ್ಮನು **ಸ್ವೀಕರಿಸಿ**= ತಾನು ಸ್ವೀಕಾರಮಾಡಿ **ಫಲಗಳ**=ಆಯಾಯಾ ಕರ್ಮಜನ್ಯವಾದ ಫಲಗಳನ್ನು **ಅಧಿಕಾರಾನುಸಾರದಲಿ**= ಆಯಾಯಾ ಜೀವರ ಯೋಗ್ಯತಾನುಸಾರವಾಗಿ (ಲಿಂಗಭಂಗಾನಂತರ ಮುಕ್ತಿಯೋಗ್ಯರಿಗೆ ನಿತ್ಯಸುಖ. ನಿತ್ಯಸಂಸಾರಿಗಳಿಗೆ ಸುಖ ದು:ಖ ಮಿಶ್ರವಾದ ಮಿಶ್ರಫಲ ಮತ್ತು ತಮೋಯೋಗ್ಯರಿಗೆ ನಿತ್ಯದು:ಖ) **ಅವರಿಗೆ**=ಆ ತ್ರಿವಿಧ ಜೀವವರ್ಗಕ್ಕೆ **ಅನವರತ**=ನಿತ್ಯದಲ್ಲಿಯೂ (ಲಿಂಗಭಂಗಾನಂತರ ಅವಿಚ್ಛಿನ್ನವಾಗಿ ಭೋಗ ಮಾಡತಕ್ಕ) **ಈವನು** = ಕೊಡುತ್ತಾನೆ. ಹೇಗೆಂದರೆ, **ಪಾವಕನು**= ಅಗ್ನಿಯು. **ಸರ್ವಸ್ವ**= ನೀ ಚೋಚ್ಚಭಾವವಿಲ್ಲದೆ ತನಗೆ ಅರ್ಪಿಸಿದ ಸಮಸ್ತ **ಪದಾರ್ಥಗಳನ್ನೂ** **ಭುಂಜಿಸಿ**=ತಾನು ಭೋಜನ ರೂಪದಿಂದ ಸ್ವೀಕಾರ ಮಾಡಿದರೂ **ತಾ**= ಆ ಅಗ್ನಿಯು ಮಾತ್ರ **ಒಮ್ಮೆಗೆ**=ಯಾವ ಕಾಲದಲ್ಲಿ ಯಾದರೂ (ಒಂದು ಸಲವಾದರೂ) **ವಿಕಾರವೈದನು**= ವಿಕಾರವನ್ನು ಹೊಂದುವುದಿಲ್ಲ (ಅಗ್ನಿ ನಿರ್ವಿಕಾರನಾಗಿ ಸ್ವಚ್ಛನಾಗಿರುತ್ತಾನೆ) **ಪಾವನಕೆ**= ಪರಿಶುದ್ಧವಾದ ವಸ್ತುಗಳಿಗೆ **ಪಾವನನೆನಿಪ**=ಪವಿತ್ರತರನೆಂದು ಪ್ರಸಿದ್ಧಿ ಪಡೆದಿರುವ **ಹರಿ**=ಸರ್ವರ ಬಿಂಬರೂಪಿಯಾದ ಶ್ರೀಪರಮಾತ್ಮನು **ಉಂಬುದು**=ಜೀವರು ಅರ್ಪಿಸಿದ ಕರ್ಮಗಳನ್ನೂ ಸ್ವೀಕರಿಸುವುದು **ಏನರಿದು**= ಏನಾಶ್ಚರ್ಯ? ಖಂಡಿತ ಆಶ್ಚರ್ಯವೇನೂ ಇಲ್ಲ ॥೨೬॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:—

ಸೃಷ್ಟಿಪ್ರಾರಂಭದಿಂದ ತ್ರಿವಿಧಜೀವರು ಮಾಡುವಂಥಾ ಅನಾದಿ ಲಿಂಗದ ತೃತೀಯಪರಿಚ್ಛೇದಗತ ವಿವಿಧ ವಿಚಿತ್ರಗಳಾದ ಕರ್ಮಗಳನ್ನ ಜೀವರ ಬಿಂಬ ವಾದ ಶ್ರೀಪರಮಾತ್ಮನು ಅನಾದಿಯಿಂದ ಬಿಡದೆ ಸ್ವೀಕರಿಸಿ, ಆ ಅನಾದಿ

ಕರ್ಮಗಳ ದ್ವಾರಾ ಆಗಾಮಿ ಸಂಚಿತಗಳನ್ನು ವೃದ್ಧಿಮಾಡಿ ಸಾಧನಾಪೂರ್ತಿ ಮಾಡಿಸಿ, ಲಿಂಗ ಭಂಗಾನಂತರ ಅವಿಚ್ಛಿನ್ನವಾಗಿ ಭೋಗವಮಾಡತಕ್ಕ ಆಯಾ ಜೀವರ ಅಧಿಕಾರಾನುಸಾರದಲಿ ಎಂದರೆ, ಮುಕ್ತಿಯೋಗ್ಯರಿಗೆ ಸುಖವೂ ತಮೋಯೋಗ್ಯರಿಗೆ ದು:ಖವೂ, ನಿತ್ಯ ಸಂಸಾರಿಗಳಿಗೆ ಮಿಶ್ರಫಲವೂ ಕೊಟ್ಟು ಪ್ರಳಯಕಾಲದಲ್ಲಿ ಚರಾಚರ ಸರ್ವಪ್ರಪಂಚವೂ ನುಂಗಿದಾಗ್ಯೂ, ವಿಕಾರ ಐದದೇ ಇರತಾನೆ. ಹ್ಯಾಗೆಂದರೆ, ಶ್ರೀಪರಮಾತ್ಮ ಕೊಟ್ಟ ಶಕ್ತಿಯಿಂದ ಅಗ್ನಿದೇವರು ಸಮಸ್ತವನ್ನೂ ಭುಂಜಿಸಿ, ವಿಕಾರವನ್ನೈದೋದಿಲ್ಲ. ಇಂಥಾ ಶಕ್ತಿಪ್ರದನಾದ ಪರಮಾತ್ಮ ಜೀವರು ಕೊಟ್ಟಂಥಾ ಪದಾರ್ಥವನ್ನೂ ಭುಂಜಿಸಿ, ವಿಕಾರವನ್ನೈದದೇ ಇರುವುದು ಏನಾಶ್ಚರ್ಯ? ಆಶ್ಚರ್ಯವೇನೂ ಇಲ್ಲ. ॥ ೨೬ ॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ:-

ರಮಾಪತಿಯಾದ (ಅಥವಾ ರಮಾದೇವಿಯರಿಗಿಂತಲೂ ಶ್ರೇಷ್ಠನಾದ) ಪರಮಾತ್ಮನು ದೇವ ಮನುಷ್ಯಾದಿ ಜೀವರು ಮಾಡುವ ಪುಣ್ಯಪಾಪಾದಿ ಕರ್ಮಗಳನ್ನು ಸರ್ವಕರ್ತ ಭಗವಂತನೆಂದು ಭಾವಿಸಿ, ಅವನಿಗೆ ಸಮರ್ಪಿಸಲು. ಶ್ರೀ ಹರಿಯು ಅವುಗಳನ್ನು ಬಿಡದೆ ಸ್ವೀಕರಿಸಿ, ತನ್ನ ಭಕ್ತರು ಮಾಡಿದ ಪಾಪಕರ್ಮಗಳನ್ನು ಭಸ್ಮಮಾಡಿ, ಅವರವರು ಮಾಡಿದ ಪುಣ್ಯವನ್ನನುಸರಿಸಿ ಅವರವರ ಯೋಗ್ಯತಾನುಸಾರವಾಗಿ ಅವರವರಿಗೆ ಫಲಗಳನ್ನು ಕೊಡುವನು. ಆದರೆ, ಅಪ್ರಾಕೃತನಾದ ರಮಾವಲ್ಲಭನು ಪ್ರಾಕೃತರು ಮಾಡುವ ಪೂಜಾದಿ ಗಳನ್ನೂ,ಅವರು ಕೊಡುವ ಪ್ರಾಕೃತಾನ್ನಗಳನ್ನೂ ಹೇಗೆ ಸ್ವೀಕರಿಸುವನೆಂದರೆ, ಹೇಳುತ್ತಾರೆ- ಅಗ್ನಿಯು ಸರ್ವವನ್ನೂ ಭಕ್ಷಿಸುವನು. ಆದರೂ ಯಾವ ಪದಾರ್ಥವನ್ನು ಭಕ್ಷಿಸಿದರೂ ವಿಕಾರ ಹೊಂದುವುದಿಲ್ಲ. ದೇವತೆಗಳು ತಾರ ತಮ್ಯದಲ್ಲಿ"**ವಿಷ್ಣುಃ ಪರಮೋ ಅಗ್ನಿರವಮಃ**"- ಎಂದು ಅಗ್ನಿಯನ್ನು ಕಡೆಯವನೆಂದು ಅವುಗಳನ್ನು ತಾನು ಖಂಡಿತ ಸ್ವೀಕರಿಸುತ್ತಾನೆ, ಲಕ್ಷ್ಮೀ ಪತಿಯಾದ ಶ್ರೀಹರಿಯು ರಮಾದೇವಿಯರಿಗಿಂತಲೂ ಶ್ರೇಷ್ಠನಾಗಿರುವುದರಿಂದ "**ರಮಾವರ**" ನೆನಿಸಿದ್ದಾನೆ (ಪರತರನೆಂದರ್ಥ. ಅಕ್ಷರನಾಮಕನಾಳ ಶ್ರೀ

ರಮಾ, ಕ್ಷರವರ್ಗಕ್ಕೆ ಸೇರಿದ ಬ್ರಹ್ಮಾದಿಗಳಿಗಿಂತ ಉತ್ತಮಳು, ಇದರಿಂದ ಶ್ರೀರಮಾ "ಪರ" ನೆನಿಸಿದ್ದಾಳೆ. ಪರನಾಮಕಳಾದ ಶ್ರೀರಮಾಗಿಂತಲೂ ಅನಂತಾನಂತ ಗುಣಗಳಿಂದ ಅಧಿಕನಾದ ಶ್ರೀ ಪರಮಾತ್ಮನು ಪರತರನು. ಅಂದರೆ ರಮಾವರನು), ಏತಾದೃಶಮಹಿಮೋಪೇತನಾದ ರಮಾವರನು ಜೀವಕೃತ ಕರ್ಮಗಳನ್ನು ಸ್ವೀಕರಿಸಿ, ಆಯಾಯಾ ಕರ್ಮಜನ್ಯವಾದ ಫಲ ಗಳನ್ನು ಆಯಾಯಾ ಜೀವರ ಯೋಗ್ಯತಾನುಸಾರವಾಗಿ ಅವರವರಿಗೆ ಕೊಡು ತ್ತಾನೆ. ಭಿನ್ನ ಜೀವ- ಭಿನ್ನ ಕರ್ಮ ಎಂಬ ನಿತ್ಯ ತತ್ತ್ವದಂತೆ. ಲಿಂಗ ಭಂಗಾನಂತರ (೧) ಸಾತ್ವಿಕ ಸ್ವರೂಪರಾದ ಮುಕ್ತಿಯೋಗ್ಯ ಚೇತನರಿಗೂ ವೈಕುಂಠಾದಿ ಮುಕ್ತ ಸ್ಥಾನಗಳಲ್ಲಿ ನಿತ್ಯ ಸುಖರೂಪವಾದ ಫಲ (೨) ರಾಜಸ ಸ್ವರೂಪರಾದ ನಿತ್ಯಸಂಸಾರಿಗಳಿಗೆ. ಸಾಂತಾನಿಕ ಲೋಕಗಳಲ್ಲಿ ಸ್ವರ್ಗ ಭೂ ನರಕಗಳಲ್ಲಿ ನಿತ್ಯ ಬದ್ಧರನಾಗಿ ಮಾಡಿ, ಅವರಿಗೆ ಸುಖ ದುಃಖ ಮಿಶ್ರಿತವಾದ ಮಿಶ್ರಫಲ ಮತ್ತು (೩) ತಮೋಗುಣಸ್ವರೂಪರಾದ ತಮೋಯೋಗ್ಯ ಜೀವ ರಿಗೆ ಅಂಧಂತಮಸ್ಸು ಇತ್ಯಾದಿ ಲೋಕಗಳಲ್ಲಿ ನಿತ್ಯ ದುಃಖರೂಪವಾಡ ಫಲ ಈ ರೀತಿಯಲ್ಲಿ ತ್ರಿವಿಧ ಜೀವರಿಗೆ ಅವರವರ ಸ್ವರೂಪ ಯೋಗ್ಯತಾನುಸಾರ ಕರ್ಮಜನ್ಯ ಫಲಪ್ರದನು. ಸ್ವಭಕ್ತರಾದವರು ಭಗವದರ್ಪಣ ಬುದ್ಧಿಯಿಂದ ತನಗೆ ಸಮರ್ಪಿಸಿದ ಕರ್ಮಗಳನ್ನು ತಾನು ಸ್ವೀಕರಿಸಿ, ದುಷ್ಕರ್ಮ ಜನ್ಯವಾದ ಫಲಗಳನ್ನು ಭಸ್ಮಮಾಡಿ, ಸುಕರ್ಮ ಜನ್ಯ ಫಲಗಳನ್ನು, ಅವುಗಳಲ್ಲಿ ತಾನು ಸ್ವಾಖ್ಯರೂಪದಿಂದ ಇದ್ದು, ಶುಭ ರಸಗಳನ್ನು ಸ್ವೀಕರಿಸಿ, ಸಚ್ಚೇತನರಿಗೆ ಅನಂತಮಡಿ ಮಾಡಿ ಕೊಡುವನು. ತಾನು ಮಾತ್ರ ಆ ಕರ್ಮಫಲಗಳಿಂದ ನಿರ್ಲಿಪ್ತನಾಗಿರುವನು. ಆದರ ಸಂಬಂಧ ಪರಮಾತ್ಮನಿಗೇನೂ ಇಲ್ಲ. ಶ್ರೀ ಹರಿಯ ಈ ಗುಣಾತಿಶಯವನ್ನು ದಾಸರಾಯರು ಒಂದು ಸುಂದರವಾದ ದೃಷ್ಟಾಂತದಿಂದ ವಿವರಿಸಿದ್ದಾರೆ. ಅಗ್ನಿಯು (ಪಾವಕ) ತನಗೆ ಸಮರ್ಪಿಸಿದ ಸಮಸ್ತ ಪದಾರ್ಥಗಳನ್ನು ಭುಂಜಿಸುವನು- ಅಂದರೆ, ದಹಿಸಿ ಭಸ್ಮ ಮಾಡು ವನು. ಹೇಳಿರುವರು ಇಂತಹ ಅಗ್ನಿಯೇ ಸರ್ವಭಕ್ಷಕನಾಗಿ ವಿಕಾರ ಹೊಂದದಿರಲು, ಗಂಗಾದಿ ಪಾವನವಸ್ತುಗಳನ್ನು ಪಾವನವನ್ನಾಗಿ ಮಾಡುವ ಪರಮಾತ್ಮನು ಪ್ರಾಕೃತಾನ್ನವನ್ನುಂಡು ಪವಿತ್ರವನ್ನಾಗಿ ಮಾಡುವುದೇ ನಾಶ್ಚರ್ಯ? ॥೨೬॥

(೩) "ಭಾವದರ್ಪಣ ಟೀಕಾ" –ವ್ಯಾಖ್ಯಾನಃ—

ಪುನಃ ದಾರ್ಢ್ಯಾರ್ಥವಾಗೋ ಉದ್ದಿಶ್ಯ ಜೀವಕೃತ್ ಕರ್ಮಸಮೂಹ ವನ್ನು ಶ್ರೀ ಹರಿಯು ಸ್ವೀಕರಿಸುತ್ತಾನೆಂದು ಸದೃಷ್ಟಾಂತ ಹೇಳುತ್ತಾರೆ- "ಜೀವಕೃತ"- ಎಂಬ ಪದ್ಯದಿಂದ

ಪಾವಕ= ಅಗ್ನಿ, ಏನರಿದು= ಏನಾಶ್ಚರ್ಯ? ॥೨೬॥

(೪) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಅಗ್ನಿಯು ಸರ್ವಪದಾರ್ಥಗಳನ್ನು ಎಂದರೆ ಹವಿಸ್ಸು ಮೊದಲಾದ ಶುದ್ಧ ವಸ್ತುಗಳನ್ನೂ, ಉಚ್ಛಿಷ್ಟಪತ್ರ ಮೊದಲಾದ ಅಶುದ್ಧವಸ್ತುಗಳನ್ನೇ ಸಹ ಭುಂಜಸಿದಾಗ್ಯೂ, ಎಂದರೆ ದಹಿಸಿದಾಗ್ಯೂ ವಿಕಾರವನ್ನೊಮ್ಮೆಗೈದನು- ಎಂದರೆ, ಒಂದು ಕಾಲಕ್ಕೂ ದೋಷಇಲ್ಲದೆ ಇರುವಲ್ಲಿ ಪಾವನಕೆ ಪಾವನ ನೆನಿಪ ಎಂದರೆ– "ಅಗ್ನಿಶ್ಶುಚಿಃ"-ಎಂಬ ವೇದದಲ್ಲಿ ಪವಿತ್ರನೆಂದು ಕರೆಸುವ ಅಗ್ನ್ಯಾದಿಗಳನ್ನು ಪಾವನಮಾಡುವ ಶ್ರೀಹರಿಯು ಸರ್ವರಸ ಸ್ವೀಕರಿಸುವುದು ಹೆಚ್ಚೇನಲ್ಲ. ಆದ್ದರಿಂದ ಸರ್ವಜೀವಕೃತ ಕರ್ಮಫಲಗಳನ್ನು ರಮಾಪತಿಯು ಸ್ವೀಕರಿಸಿ, ಅವರವರ ಯೋಗ್ಯತಾನುರೂಪ ಸುಖದುಃಖಾ ದಿಗಳೆಂಬ ಫಲಗಳನ್ನು ಕೊಡುವನು. ಸುಖದುಃಖಗಳನ್ನು ಸ್ವೀಕರಿಸಿದ ಹೊರತು, ಫಲಕೊಡುವುದಕ್ಕೆ ಆಸ್ಪದವಿಲ್ಲದ್ದರಿಂದ. ದೇವರಿಗೆ ತತ್ಸ್ವೀಕಾರ ಮಾತ್ರದಿಂದ ತತ್ಸಂಪರ್ಕದೋಷವಿಲ್ಲೆದು ಹೃದಯ ॥೨೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಸರ್ವನಿಯಾಮಕನಾದ ಶ್ರೀಪರಮಾತ್ಮನು ತ್ರಿವಿಧ ಜೀವರಲ್ಲಿಯೂ ತಾನೇ ಸ್ಥಿತನಾಗಿದ್ದು. ಅವರವರ ಯೋಗ್ಯತಾನುಸಾರವಾದ ಕರ್ಮಕಲಾಪ ಗಳನ್ನು ಬಿಂಬಕ್ರಿಯಾ ದ್ವಾರಾ ತಾನು ಮಾಡಿ, ಜೀವರ ದ್ವಾರಾ ಮಾಡಿಸು ತ್ತಿರುವನು. ಕರ್ಮಸಾಕ್ಷಿಯೂ ಕರ್ಮನಿಯಾಮಕನೂ ಆದ ಶ್ರೀಪರಮಾತ್ಮನು

ಜೀವಕೃತ ಕರ್ಮಗಳನ್ನು ಭಗವದರ್ಪಣಬುದ್ಧಿಯಿಂದ ಸ್ವಭಕ್ತರು ತನಗೆ ಸಮರ್ಪಿಸಿದಾಗ ಅವುಗಳನ್ನು ಸ್ವೀಕರಿಸುವನು. ಅಗ್ನಿಗೆ "ಸರ್ವಭಕ್ಷಕ" ವೆಂದು ಹೆಸರು. ಸರ್ವಭಕ್ಷಕನಾದ ಅಗ್ನಿಯು ಯಜ್ಞ ಯಾಗಾದಿಗಳಲ್ಲಿ ತನ್ನಲ್ಲಿ ಅರ್ಪಿಸಿದ ತುಪ್ಪ, ಹಾಲು, ಮೊಸರು ಮುಂತಾದ ಶುಭ ಪದಾರ್ಥಗಳನ್ನು ಹವಿಸ್ಸಿನ ರೂಪದಲ್ಲಿ ಒಯ್ದು ದೇವತೆಗಳಿಗೆ ತಲುಪಿಸುವನು, ಹುತಾಶನನಾದ ಅಗ್ನಿಯ ದ್ವಾರವೇ ಆಯಾಯಾ ದೇವತೆಗಳಿಗೆ ಹವಿಸ್ಸು ಲಭ್ಯ. ಅಂತೆಯೇ ಎಂಜಲೆಲೆ ಕೆಲಸಕ್ಕೆ ಬಾರದ ವಸ್ತುಗಳನ್ನು ಅಗ್ನಿಯಲ್ಲಿ ಹಾಕಿದಾಗ, ಅವು ಸುಟ್ಟು ಭಸ್ಮವಾಗುವವು, ಅಗ್ನಿಯು ಸಮಸ್ತ ವಸ್ತುಗಳನ್ನು ದಹಿಸುವವನಾದಾಗ್ಯೂ, ಆಯಾಯಾ ವಸ್ತು ಸಂಬಂಧವಾದ ಗುಣ ದೋಷಗಳ ಲೇಪವಿಲ್ಲ. ಅಗ್ನಿಯು ಪವಿತ್ರನಾಗಿಯೇ ಇರುತ್ತಾನೆ. ಇದೇ ರೀತಿಯಲ್ಲಿ ಶ್ರೀಪರಮಾತ್ಮನು ಜಗತ್ಪಾವನನು. ಪರಮಪುಂಗಳ ಸ್ವರೂಪಿಯು, ಅನಂತವಾದ ಜ್ಞಾನಾನಂದಾದಿಗುಣಪರಿಪೂರ್ಣನು. ಸರ್ವ ದೋಷ ವರ್ಜಿತನು. ಗಂಗೆ, ಅಗ್ನಿ ಇತ್ಯಾದಿ ವಸ್ತುಗಳೆಲ್ಲವೂ ಜಗತ್ತಿನಲ್ಲಿ ಪವಿತ್ರ ವಸ್ತುಗಳೆನಿಸಿವೆ. ಇದಕ್ಕೆ ಅವುಗಳಲ್ಲಿ ಅಂತರ್ಯಾಮಿಯಾಗಿ ವ್ಯಾಪ್ತರೂಪದಿಂದ ಇರುವ ಶ್ರೀಪರಮಾತ್ಮನ ಸನ್ನಿಧಾನ ವಿಶೇಷವೇ ಅವುಗಳ ಪಾವಿತ್ರ್ಯಕ್ಕೆ ಮುಖ್ಯ ಕಾರಣವು. ಇದರಿಂದ ಪಾವನಕೆ ಪಾವನ ನೆನಿಸಿರುವ ಆ ಜಗತ್ಪಾವನ ಮೂರ್ತಿಯು ಜೀವಕೃತ ಕರ್ಮಗಳನ್ನು ತಾನು ಸ್ವೀಕರಿಸುವನು. ಆದರೆ ಆ ಕರ್ಮಜನ್ಯವಾದ ಪುಣ್ಯ ಪಾಪಗಳ ಲೇಪವು ಅತನಿಗೆ ಲವಲೇಶವೂ ಇಲ್ಲ. ಅಂದರೆ ನಿರ್ಲಿಪ್ತನಾಗಿ, ಅಗ್ನಿಯಂತೆ ನಿರ್ವಿಕಾರನಾಗಿರುವನು. ಅಂತಹ ನಿರ್ಲಿಪ್ತನಾದ ಶ್ರೀಪರಮಾತ್ಮನು ಭಗವದ್ಭಕ್ತರು ಸ್ವೇಚ್ಛ್ಯಾನುಸಂಧಾನದಿಂದ ಅರ್ಪಿಸುವ ಪ್ರಾಕೃತಾನ್ನವನ್ನು ಸ್ವೀಕರಿಸುವುದು ಏನಾಶ್ಚರ್ಯ? ಎಂದು ತಾತ್ಪರ್ಯ ॥೨೬॥

## ಪದ್ಯ (೨೭)

ಕಲುಷಜಿಹ್ವೆಗೆ ಸುಷ್ಟು ಭೋಜನ ।
ಜಲ ಮೊದಲು ವಿಷದೋರುವುದು ನೀ ।
ಷ್ಕಲುಷ ಜಿಹ್ವೆಗೆ ಸುರಸ ತೋರುವುದೆಲ್ಲ ಕಾಲದಲಿ ॥
ಸುಲಲಿತಾಂಗಗೆ ಸಕಲ ರಸ ಮಂ ।
ಗಳ ವೆನಿಸುತಿಹುದನ್ನಮಯ ಕೈ ।
ಕೊಳದೆ ಬಿಡುವನೆ ಪೂತನಿಯ ವಿಷಮೊಲೆಯನುಂಡದವನು॥೨೭॥

**ಅವತರಣಿಕೆ :—**

ಸ್ಮರಮಣನಾದ ಶ್ರೀ ಪರಮಾತ್ಮನು ದಿವ್ಯ ಮಂಗಳ ವಿಗ್ರಹನು. ಆ ಸುಲಲಿತಾಂಗನು ಸಮಸ್ತ ಭೋಜ್ಯವಸ್ತುಗಳಲ್ಲಿರುವ ಸ್ವಾಖ್ಯರಸರೂಪವಾದ ಶುಭರಸವನ್ನು ಮಾತ್ರ ಸ್ವೀಕರಿಸುವನು. ಈ ಕಾರಣದಿಂದ ಸಕಲ ರಸ ವಿಶೇಷಗಳೂ ಆ ಮಂಗಳಾತ್ಮನಿಗೆ ಮಂಗಳವೆಂದೆನಿಸುವುವು. ತನ್ನನ್ನು ಸಂಹರಿಸುವ ದುರುದ್ದೇಶದಿಂದ ಬಂದ ಪೂತನಿ ಎಂಬ ಅಸುರೆಯ ಅಸುವನ್ನು ಅವಳ ವಿಷದ ಮೊಲೆಯನ್ನುಣ್ಣುವ ವ್ಯಾಜದಿಂದ ಹೀರಿದ ಪರಮ ಮಹಿಮಾಸಂಪನ್ನನು, ಅನ್ನಮಯನೆಂದೆನಿಸಿ, ಭಕ್ತರು ಭಕ್ತಿ ಪರವಶರಾಗಿ ಕೊಡುವ ಪದಾರ್ಥಗಳನ್ನು ಕೈಕೊಳದೆ ಬಿಡುವುದಿಲ್ಲ ವೆಂಬ ಅಭಿಪ್ರಾಯವನ್ನು ದಾಸವರ್ಯರು ಚಿಹ್ವೆಯ ದೃಷ್ಟಾಂತ ನಿರೂಗಿಸುತ್ತಾರೆ- "ಕಲುಷ ಜಹ್ಯಗೆ" ಎಂಬ ಪ್ರಸಕ್ತ ಸಂಧಿಯ ಈ ೨೭ನೆಯ ಪದ್ಯದಿಂದ ॥೨೭॥

**ಪ್ರತಿಪದಾರ್ಥ :—**

**ಕಲುಷ**=ಜ್ವರಾದಿ ಉಪದ್ರವಗಳಿಂದ ಕೆಟ್ಟಿರುವ **ಜಿಹ್ವೆಗೆ**=ನಾಲಿಗೆಗೆ **ಸುಷ್ಟು**= ರುಚಿಕರವಾದ [ಸುರಸೋಪೇತಗಳಾದ] **ಭೋಜನ**=ಭೋಜನ

ಯೋಗ್ಯವಾದ ಮೃಷ್ಟಾನ್ನವು **ಜಲ**=ಪಾನ ಯೋಗ್ಯವಾದ ನೀರು [ಅನ್ನೋದಕಗಳು] **ಮೊದಲು**=ಇವೇ ಮುಂತಾದ ಯಾವತ್ತು ಪದಾರ್ಥಗಳು **ವಿಷದೋರುವುದು**=ವಿಷದಂತೆ ಕಹಿಯಾಗಿ ತೋರುವುದು **ನಿಷ್ಕಲುಷ**= ರೋಗರಹಿತವಾದ, ಅಂದರೆ ಆರೋಗ್ಯ ಸ್ಥಿತಿಯಲ್ಲಿರುವ **ಜಿಹ್ವೆಗೆ**= ನಾಲಿಗಗೆ **ಎಲ್ಲ ಕಾಲದಲಿ**=ನಿರೋಗಿಯಾಗಿರುವ ಎಲ್ಲಾ ಸಮಯದಲ್ಲಿಯೂ **ಸುರಸ**=ಅತ್ಯಂತ ರುಚಿಕರವಾಗಿ, ರಸೋಪೇತವಾಗಿ **ತೋರುವುದು**= ಅನುಭವಕ್ಕೆ ಬರುವುದು [ರಸಾನುಭವ] **ಸುಲಲಿತಾಂಗಗೆ**=ಪರಮಮಂಗಳ ಕರವಾದ ಸೌಂದರ್ಯಯುಕ್ತವಾದ ಸ್ವರೂಪವುಳ್ಳ ಶ್ರೀಪರಮಾತ್ಮನಿಗೆ **ಸಕಲರಸ**=ಸಮಸ್ತ ವಸ್ತುಗತ ಸ್ವಾಖ್ಯರೂಪವಾದ ರಸಗಳು **ಮಂಗಳವೆನಿಸುತಿಹವು**=ಕೇವಲ ಶುಭಕರಗಳಾಗಿಯೇ ಇರುವುವು **ಅನ್ನಮಯ**=ಅನ್ನಾಂ ರ್ಗತನಾಗಿ ಅನ್ನಶಬ್ದ ವಾಚ್ಯನಾಗಿರುವ ಅನಿರುದ್ಧರೂಪೀ ಶ್ರೀಪರಮಾತ್ಮನು **ಪೂತನಿಯ**=ಪೂತನಿ ಎಂಬ ರಾಕ್ಷಸಿಯ **ವಿಷ**=ವಿಷಪೂರಿತನಾದ **ಮೊಲೆ**=ಸ್ತನಗತ ಹಾಲನ್ನು **ಉಂಡವನು**=ಸ್ವೀಕರಿಸಿದಂಥ ಶ್ರೀ ಕೃಷ್ಣರೂಪೀ ಪರಮಾತ್ಮನು **ಕೈಕೊಳದೆ**=ಸ್ವಭಕ್ತರು ಭಕ್ತಿ ಪುರಸ್ಸರವಾಗಿ ಭಗವದರ್ಪಣವೆಂದು ಕೊಟ್ಟ ವಸ್ತುಗಳನ್ನು ಸ್ವೀಕರಿಸದೆ **ಬಿಡುವನೆ**= ಬಿಡುತ್ತಾನೆಯೇ? ಅಂದರೆ ಖಂಡಿತ ಬಿಡುವುದಿಲ್ಲವೆಂದರ್ಥ ॥೨೭॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಶ್ರೀಪರಮಾತ್ಮನಲ್ಲಿ ದ್ವೇಷಸ್ನೇಹಕ್ಕೆ ಕಾರಣವೂ, ಸಕಲರಸವೂ ದೇವರಿಗೆ ಶುಭರಸ ಎಂತ ಹೇಳತಾರೆ.

ರೋಗಾದಿ ಉಪದ್ರವಗಳಿಂದ ಕಲುಷಯುಕ್ತವಾದ ನಾಲಿಗೆವುಳ್ಳ ಪುರುಷನಿಗೆ [ಕಲುಷ ಜಿಹ್ವೆಗೆ] ಸುರಸೋಪೇತಗಳಾದ [ಸುಮೃ] ಭೋಜನಕ್ಕೆ

ಯೋಗ್ಯಗಳಾದ [ಭೋಜನ] ನೀರು ಮೊದಲಾದ ಯಾವತ್ತು ಪದಾರ್ಥಗಳು [ಜಲಮೊದಲು] ಕಹಿಯಾಗಿ ತೋರೋದಾಗತದೆ. [ವಿಷದೋರುವುದು] ರೋಗಾದ್ಯುಪದ್ರವಗಳಿಂದ ರಹಿತವಾದ, ಕಲುಷದಿಂದ ದೂರನಾದ ಪುರುಷನ ಜಿಹ್ವೆಗೆ [ನಿಷ್ಕಲುಷ ಜಿಹ್ವೆಗೆ] ಪೂರ್ವೋಕ್ತ ಭೋಜನ ಪದಾರ್ಥಗಳು ಯಾವತ್ತು ಯಥಾವಸ್ಥಿತಿಯಿಂದ ಸಮೀಚೀನವಾದ ರಸವಾಗಿ ತೋರತದೆ. [ಸುರಸ ತೋರುವುದು] ತದ್ವತು, ಶ್ರೀ ಪರಮಾತ್ಮನೆಂಬೋ ಸುರಸೋಪೇತವಾದ ಮಹಾ ಮಹಾತ್ಮೆಯುಳ್ಳ ಭೋಜನದ್ರವ್ಯ ಕಲುಷ ಜಿಹ್ವೆಗೆ ಸದೃಶರಾದ ದೈತ್ಯರಿಗೆ ವಿಷವಾಗಿ ತೋರಿ, ಪರಮಾತ್ಮನ ತ್ಯಾಗಮಾಡಿ, ಅವನಲ್ಲಿ ದ್ವೇಷಮಾಡುತಾರೆ. ನಿಷ್ಕಲುಷ ಜಿಹ್ವೆಗೆ ಸದೃಶರಾದ ದೇವತೆಗಳಿಗೆ ಅಮೃತವಾಗಿ ತೋರಿ, ಶ್ರೀ ಪರಮಾತ್ಮನು ಸ್ವೀಕಾರಮಾಡಿ, ಅವನಲ್ಲಿ ಸ್ನೇಹಮಾಡತಾರೆ. ರೋಗಾದಿ ಉಪದ್ರವಗಳಿಂದ ಪ್ರಾಪ್ತವಾದ ಕಲುಷ ಚಿಕಿತ್ಸಾದಿಗಳಿಂದ ಪರಿಹಾರ ಕಂಡೆದೆ. ಈ ಕಲುಷ ಅನಾದಿಸ್ವರೂಪಸ್ವಭಾವದಲ್ಲಿ ನಿತ್ಯವಾಗಿ ಇರೋಣದರಿಂದ ಸದಾ ಸರ್ವಕಾಲದಲ್ಲಿ ಕೆಡದೇ ಇರುತ್ತದೆ. ತದ್ವತ್ ದೇವತೆಗಳ ನಿಷ್ಕಲುಷವು ಎಲ್ಲಾ ಕಾಲದಲ್ಲೂ ಕೆಡದೇ ಇರತದೆ ಎಂತ ಅರ್ಥ, ಮಂಗಳಕರವಾದ ಸೌಂದರ್ಯವುಳ್ಳ ಸೃಷ್ಟ್ಯಾದಿ ಆಟಗಳು ಉಳ್ಳ [ಸುಲಲಿತ] ಸರ್ವತ್ರ ತದಾಕಾರದಿಂದ ವ್ಯಾಪ್ತನಾದ ತದಾಕಾರನಾದ ಅಂಗಗಳುಳ್ಳ ಶ್ರೀ ಪರಮಾತ್ಮನಿಗೆ [ಅಂಗಗೆ] ಸಮಸ್ತ ಪದಾರ್ಥಗತ ರಸಗಳಲ್ಲಿ ಸ್ವಾಖ್ಯರಸರೂಪದಿಂದ ಶ್ರೀ ಪರಮಾತ್ಮ ಇದಾನೆ. ಅಂಥಾ ರಸಗಳೇ ತಾನು ಸ್ವೀಕಾರಮಾಡತಾನೆ. ಅತಏವ ಸಮಸ್ತ ರಸಗಳು [ಸಕಲ ರಸ] ಜೀವರಿಗೆ ಶುಭಕರಗಳಾದ ರಸಗಳೆಂದು [ಮಂಗಳ] ಎನಿಸೋದಾಗಿ ಅವೆ [ಎನಿಸಂತಿಹವು] ಆದ ಕಡಿಯಿಂದ ನಿಷಿದ್ಧಾನಿಷಿದ್ಧ, ಸರ್ವಪದಾರ್ಥಗತ ರಸಗಳು ಪರಮಾತ್ಮಗೆ ಶುಭರಸವೆಂದು ಕರೆಸಿ ಸ್ವೀಕರಿಸೋವನಾಗತಾವೆ. ಅಶುಭರಸ ಶ್ರೀ ಪರಮಾತ್ಮ ಸ್ವೀಕರಿಸೋಲ್ಲ, ಅನ್ನಾಂತರ್ಗತನಾಗಿ ಅನ್ನಮಯ ಶಬ್ದವಾಚ್ಯನಾಗಿ ಶ್ರೀ ಅನಿರುದ್ಧ ರೂಪೀ ಪರಮಾತ್ಮ [ಅನ್ನಮಯ] ಅನುಸಂಧಾನಯುಕ್ತರಾದ ಅಧಿಕಾರಿಗಳು ಕೊಟ್ಟ ದ್ವಂದ್ವರಸ ಅಥವಾ ಕರ್ಮಗಳ ಸ್ವೀಕಾರ ಮಾಡದೇ ಬಿಡೋನೇ ಎಂದರೆ ಬಿಡೋದಿಲ್ಲಾ. [ಕೈಕೊಳದೆ ಬಿಡುವನೇ] ಅವಶ್ಯವಾಗಿ ಸ್ವೀಕಾರ ಮಾಡೋವನಾಗತಾನೆ. ಹ್ಯಾಂಗೆಂದರೆ– ಪೂತನಿಯು **"ಸಾ ಶಾಟಿಕಾ ಚೋರ್ವಶೀ**

ಸಂಪ್ರಸಿಷ್ಟಾ ಕೃಷ್ಣಾ ವಧ್ಯಾನಾನ್ನಿರಯಂ ಸಂಜಗಾಮ"—ಎಂತ ನಿರ್ಣಯೋಕ್ತಿ ಇರುವುದರಿಂದ, ಇಂಥಾ ಪೂತಣೇ ಎಂಬ ರಾಕ್ಷಸಸ್ತ್ರೀ ಕೊಟ್ಟಂಥಾ ವಿಷಪೂರಿತವಾದ ಸ್ತನಗತ ವಿಷಗತ ತನ್ನ ಸ್ವಾಖ್ಯ ತಾನು ಭೋಜನ ಮಾಡಿ, ತನಗೆ ಭಿನ್ನವಾದ ಜಡ ವಿಷವನ್ನು ಅಲ್ಲೇ ಇಟ್ಟರುವಂಥಾ ವನಾದನು. [ವಿಷಮೊಲೆಯನುಂಡವನು] ಈ ಪ್ರಕಾರ ಅಧಿಕಾರಗಳು ಕೊಟ್ಟ ದ್ವಂದ್ವರಸ ಕರ್ಮ ಇವುಗಳಲ್ಲಿರುವ ತನಗೆ ಅಭೇದವಾದದನ್ನು ತಾನು ಸ್ವೀಕಾರಮಾಡಿ, ಭಿನ್ನಗಳಾಗಿ, ಇರುವದರನ್ನ ನಾಶಮಾಡಿ, ಪೂತನಿಗೆ ಸ್ವರ್ಗ ಕೊಟ್ಟಂತೆ, ಅಧಿಕಾರಿಗಳಿಗೆ ದಿವ್ಯ ಸುಖವನ್ನ ಕೊಡತಾನೆ. ಆದ್ದರಿಂದ ದ್ವಂದ್ವಕರ್ಮ ಸಮರ್ಪಣೆ ಮಾಡಬೇಕು ಎಂತ ತಾತ್ಪರ್ಯ.

ಇದಕ್ಕೆ ಪ್ರಮಾಣಃ—

"ಯೇ ದೋಷಾ ಇತರತ್ರಾಪಿ ತೇ ಗುಣಾ: ಪರಮೇ ಮತಾ:|
ನ ದೋಷ: ಪರಮೇ ಕಶ್ಚಿದ್ಗುಣ ಏವ ನಿರಂತರ:॥

-ಇತಿ ಸೂತ್ರ ಭಾಷ್ಯೋಕ್ತಿ.

[೨] ಭಾವಪ್ರಕಾಶಿಕೆ- ವ್ಯಾಖ್ಯಾನ:-

ನಾವು ಕೊಡುವ ಪದಾರ್ಥಗಳು ರುಚಿಯಿಲ್ಲದಿದ್ದರೂ ಪರಮಾತ್ಮನಿಗೆ ಅವುರುಚಿಯಾಗಿಯೇ ಇರುವುವು. ಅದು ಭಗವನ್ಮಹಿಮೆಯೇ ಹೊರತು, ಬೇರೆಯಲ್ಲವೆಂದು ಹೇಳುತ್ತಾರೆ. ಪಿತ್ತ ಹೆಚ್ಚಾಗಿ ನಾಲಿಗೆ ಕೆಟ್ಟರುವವರಿಗೆ ಎಂತಹ ಮೃಷ್ಟಾನ್ನ ಕೊಟ್ಟರೂ, ನೀರೂ ಸಹ ಕಹಿಯಾಗಿಯೇ ತೋರುವುದು ರೋಗಾದಿಗಳಿದ್ದವರ ನಾಲಿಗೆಗೆ ರುಚಿಯು ಚನ್ನಾಗಿ ತಿಳಿಯದು. ಒಂದೇ ಪದಾರ್ಥವು ಹೀಗೆ ಕೆಲವರಿಗೆ ರುಚಿಯಾಗಿಯೂ, ಕೆಲವರಿಗೆ ಕಹಿಯಾಗಿಯೂ ಇರಲು ನಾಲಿಗೆ ಕಾರಣವೇ ಹೊರತು, ಪದಾರ್ಥವು ಕಾರಣವಲ್ಲವೋ, ಹಾಗೆ ನಮ್ಮ ದೇಹಾಭಿಮಾನಾದಿ ದೋಷಗಳಿಂದ ನಮಗೆ ರುಚಿಸುವುದಿಲ್ಲ. "ಯೇ ದೋಷಾ ಇತರ ತ್ರಾಪಿತೇ ಗುಣಾ: ಪರಮೇವಮತಾ:"-ಎಂಬ ಪ್ರಮಾಣಾ

ನುಸಾರ ಎಲ್ಲರಿಗೂ ಯಾವುದು ದೋಷವಾಗಿ ಕಾಣುವುದೋ, ಅದು ಪರಮಾತ್ಮನಿಗೆ ಗುಣವಾಗಿಯೇ ಇರುವುದೆಂಬ **ಬ್ರಹ್ಮಸೂತ್ರ ಭಾಷ್ಯಾನುಸಾರವಾಗಿ,** ನಮಗೆ ರುಚಿಸದ ಪದಾರ್ಥಗಳು ಪರಮಾತ್ಮನಿಗೆ ರುಚಿಕರ ಇರುವುವು. ಭಗವದ್ಭಕ್ತನಾದ ಓಬ್ಬ ಬ್ರಾಹ್ಮನು ತನ್ನ ಮನೆಯಲ್ಲಿ ಶ್ರಾದ್ಧ ಬರಲು, ಬ್ರಾಹ್ಮಣರಿಗೆ ಭೋಜನಮಾಡಿಸಲು ಯಾವ ಪದಾರ್ಥವೂ ದೊರಕದಿರಲು, ಸಾಸಿವೆ ಮುದ್ದೆಯನ್ನು ಬ್ರಾಹ್ಮಣರಿಗೆ ಭೋಜನಮಾಡಿಸಿದನು. ಬ್ರಾಹ್ಮಣರಿಗೆ ಆ ಸಾಸಿವೆಮುದ್ದೆಯೇ ಅಮೃತದಂತೆ ಇದ್ದಿತೆಂದು **ವರಾಹ ಪುರಾಣವಾಕ್ಯ** ವಿರುವುದು. ಭಗವದ್ಭಕ್ತರಿಗೇನೇ ಸಾಸಿವೆ ಮುದ್ದೆಯೇ ಅಮೃತವಾದಮೇಲೆ ಪರಮಾತ್ಮನ ವಿಷಯದಲ್ಲಿ ಹೇಳುವುದೇನು? ವಿದೇಹದೇಶವಾಸಿಯಾದ ಶೃತದೇವನೆಂಬ ಬ್ರಾಹ್ಮಣನು ಭಕ್ತಿಯಿಂದ ಕೃಷ್ಣನನ್ನು ಪ್ರಾರ್ಥಿಸುತ್ತಿರಲು, ಶ್ರೀ ಕೃಷ್ಣನು ಆವನ ಭಕ್ತಿಗೆ ಮೆಚ್ಚಿ, ಆ ಬ್ರಾಹ್ಮಣನ ಮನೆಗೆ ಬಂದನು. ಆಗ ಬ್ರಾಹ್ಮಣನು ಸಾಸಿವೆ ಮುದ್ದೆಯಿಂದಲೇ ಕೃಷ್ಣನನ್ನು ತೃಪ್ತಿಪಡಿಸಿದನು. ಶ್ರೀಕೃಷ್ಣನು ಅದನ್ನು ಅಮೃತದಂತೆ ಸ್ವೀಕರಿಸಿದನೆಂದು **ಭಾಗವತ ದಶಮ ಸ್ಕಂಧದಲ್ಲಿ** ಹೇಳಿರುವರು. ಅದೂ ಅಂತಿರಲಿ, ಪೂತನಿ ಎಂಬ ರಾಕ್ಷಸಿಯು ಶ್ರೀಕೃಷ್ಣನನ್ನು ಕೊಲ್ಲುವುದಕ್ಕಾಗಿ ತನ್ನ ಸ್ತನದಲ್ಲಿ ವಿಷತುಂಬಿಕೊಂಡು ಬಂದು ಶ್ರೀಕೃಷ್ಣನಿಗೆ ಪಾನ ಮಾಡಿಸಲು ಅದನ್ನೂ ಕೂಡ ಪರಮಾತ್ಮನು ಬಿಡದೆ ಪಾನಮಾಡಿದನು. ಹೀಗಿರುವಾಗ ನಾವು ಕೊಡುವ ಪದಾರ್ಥಗಳದ್ನು ಎಂದಿಗಾದರೂ ಬಿಡುವನೇ? ಸ್ವೀಕರಿಸದೆ ಬಿಡನೆಂಬ ಭಾವವು ॥೨೭॥

## (೩) ಭಾವದರ್ಪಣ ಟೀಕಾ– ವ್ಯಾಖ್ಯಾನ:—

ಸಕಲ ರಸಗಳೂ ಶ್ರೀಶಗೆ ಮಂಗಳಕರವೆಂದು ಅನಿಸುತ್ತವೆ. ಆ ರಸಗಳನ್ನು ನಿರ್ಭೀತಿಯಿಂದ ತಾನು ಸ್ವೀಕಾರಮಾಡುತ್ತಾನೆಂದು ಸದೃಷ್ಟಾಂತ ಹೇಳುತ್ತಾರೆ– **"ಕಲುಷ"**– ಎಂಬ ಪದ್ಯದಿಂದ.

**"ಯೇ ದೋಷಾ ಇತರ ತ್ರಾಪಿ ತೇ ಗುಣಾಃ ಪರಮೇ ಮತಾಃ।**

ನ ದೋಷಾ: ಪರಮೋ ಕಶ್ಚಿದ್ಗುಣಾ ಏವ ನಿರಂತರಾ:॥"
॥ ಸೂತ್ರ ಭಾಷ್ಯೋಕ್ತೇ:

ಇತ್ತೊಂದು ಪ್ರಮಾಣವು:—

"ಸ ಏಕೈರಿಂದ್ರಿಯೈ ವಿಷ್ಣುಭೋಗಾನನು ಭವತ್ಯಜ:।
ಸ್ವರೂಪೇಣೈವ ಶಕ್ತ್ಯೋಪಿ ಜೀವ ದೇಹಾಸ್ಥಿತೋ ಹರಿ:॥
ಭುಂಜ್ಯತೇ ತತ್ತದ್ಗುಣಾನ್ವಿಷ್ಣುರ್ನೈವ ದೋಷಾನ್ಕಥಂಚನೇತಿ॥"
ಛಾಂದೋಗ್ಯ ಭಾಷ್ಯಮಾನಾತ್. ॥೨೭॥

೪) ಗುರುಹೃದಯ ಪ್ರಕಾಶಿಕೆ- ವ್ಯಾಖ್ಯಾನ:—

"ಶುಭಂ ಪಿಬತ್ಯಸೌ ನಿತ್ಯಂ ನಾಶುಭಂ ಸ ಹರಿ: ಪಿಬೇತ್"
-ಎಂಬ ಭಾಷ್ಯೋಕ್ತಿರೀತ್ಯಾ, ದೇವರಿಗೆ ಅಶುಭರಸವೇ ಇಲ್ಲ. ಸರ್ವವೂ
ಶುಭರಸವೆಂದರ್ಥ, ಇದನ್ನು ಸಪ್ರಮಾಣ ದೃಷ್ಟಾಂತ ಸಹ ಹೇಳುತ್ತಾರೆ.
"ಕಲುಷ"- ಎಂದು. ಕಲುಷ ಜಿಹ್ವೆಗೆ ಎಂದರೆ, ರೋಗಿಷ್ಠನ ನಾಲಿಗೆಗೆ ಜಲ
ಮೊದಲಾದ ಸರ್ವ ಭೋಜ್ಯಪದಾರ್ಥ ಕಹಿಯಾಗಿ ತೋರುವಂತೆ, ಮುಕ್ತಿ
ಯೋಗ್ಯ ಸ್ವಾನಂದ ಶಕ್ತಿಯುಳ್ಳ ಜೀವರು ಸದಾ ಭವರೋಗಗ್ರಸ್ತರಾದ್ದರಿಂದ
ಅವರಿಗೆ ಬಾಹ್ಯ ಸುಖ ದು:ಖಗಳು ಕಾಲಾವಸ್ಥಾಭೇದದಿಂದ ಉಂಟು.
ರೋಗವಿಲ್ಲದವನ ನಾಲಿಗೆಗೆ ಭೋಜ್ಯ ಸರ್ವರಸ ಸುಖಕರವಾಗಿರುವಂತೆ,
ನಿತ್ಯಮುಕ್ತನಾದ ದೇವರಿಗೆ, ಶುಭಾಶುಭಗತ ಸರ್ವಸ್ವರೂಪರಸವೂ
ಸ್ವಾನಂದವಲ್ಲದೆ, ಬಾಹ್ಯ ಸುಖ ದು:ಖವಿಲ್ಲವೆಂದು ಅರ್ಥ. "ಅನ್ನಮಯ"-
ಎಂದರೆ, ಸ್ವಾತ್ಮಕ ಪ್ರಚುರನ್ನರಸರೂಪ ಶ್ರೀ ಹರಿಯು ದ್ವೇಷದಿಂದ ಪೂತನಿ
ಕೊಟ್ಟ ಸ್ತನಗತ ವಿಷದಲ್ಲಿದ್ದ ಸ್ವಾನಂದಾನುಭವಿಸಿದನು. ಇಂತಹ
ಪರಮಾತ್ಮನು ಭಕ್ತಿಯಿಂದ ಕೊಟ್ಟ ಕರ್ಮಫಲಗಳನ್ನು ಬಿಡವುದಿಲ್ಲ.
ಇದರಿಂದ "ಷಾಡ್ಗುಣ್ಯ ಕಂಜಿಘ್ರಾತಿ ಷಡ್ಗುಣೇಶ:"- ಎಂಬರ್ಥ ವಿವರಿಸಲ್ಪ

## ಸರ್ವವ್ಯಾಖ್ಯಾನಸಾರಸಂಗ್ರಹ :

ಜಗತ್ತಿನಲ್ಲಿ ವಿದ್ಯಮಾನವಾಗಿರುವ ಸಮಸ್ತ ಭೋಜನಯೋಗ್ಯ ವಸ್ತುಗತ ರಸವಿಶೇಷಗಳು ಸರ್ವಸಾರಭೋಕ್ತನಾದ ಶ್ರೀಪರಮಾತ್ಮನಿಗೆ ಶುಭರಸಗಳೆಂದೆನಿಸಿ, ಅವುಗಳು ಭಗವಂತನಿಂದ ಸ್ವೀಕಾರಾರ್ಹವೆಂದು ದೃಷ್ಟಾಂತಪೂರ್ವಕ ತಿಳಿಸುತ್ತಾರೆ. "ಕಲುಷ ಜಿಹ್ವೆಗೆ"– ಎಂಬ ಪ್ರಸಕ್ತ ಪದ್ಯದಿಂದ.

ಜ್ವರ ಪಿತ್ತವಿಕೋಪ ಇತ್ಯಾದಿ ರೋಗದಿಂದ ಗ್ರಸ್ತನಾಗಿರುವ ಮನುಷ್ಯನ ನಾಲಿಗೆಗೆ ರಸೋಪೇತವಾದ ಭೋಜ್ಯ ಪದಾರ್ಥಗಳು ಕಹಿಯಾಗಿ ತೋರುವುವು. ಅವುಗಳ ಸುರುಚಿ ಆ ಮನುಷ್ಯನ ಅನುಭವಕ್ಕೆ ಬರುವುದಿಲ್ಲ. ಇದಕ್ಕೆ ರೋಗಾದ್ಯುಪದ್ರವಗಳು ಕಾರಣವೇ ಹೊರತು, ನಾಲಿಗೆಯುದಲ್ಲ, ನಾಲಿಗೆ ರೋಗಾದಿಗಳಿಂದ ದೋಷ ಗ್ರಸ್ತವಾದಾಗ ಮಾತ್ರ ಇಂತಹ ಕಹಿಯ ಅನುಭವ. ಆದರೆ ನಿರೋಗಿಯಾದ ಮನುಷ್ಯನ ನಾಲಿಗೆಯು ದೋಷರಹಿತವಾಗಿರುವುದು. ಆದ ಕಾರಣದಿಂದ, ಭೋಜನಯೋಗ್ಯ ವಸ್ತುಗತ ರಸವಿಶೇಷಗಳೆಲ್ಲವೂ ದೋಷರಹಿತವಾದ ನಾಲಿಗೆಗೆ (ನಿಷ್ಕಲುಷ ಜಿಹ್ವೆಗೆ) ಅತ್ಯಂತ ರುಚಿಕರವಾಗಿಯೇ ತೋರುವುವು. ಇಂತೆಯೇ ಜನನ ಮರಣಾಖ್ಯ ರೂಪವಾದ ಈ ಅಪಾರ ಸಂಸಾರವೆಂಬುದೇ ಒಂದು ಮಹತ್ತರವಾದ ರೋಗ, ಇಂತಹ ಭವರೋಗದಿಂದ ಗ್ರಸ್ತರಾದವರಿಗೆ ಸುರಸೋಪೇತವಾದ ಭಗವದ್ವಿಷಯಗಳು ಹಿತವೆನಿಸದೆ, ಕಹಿಯಾಗಿಯೇ ತೋರುವುವು. ಆದರೆ ಭಗವಂತನ ಪಾದಾರವಿಂದಗಳಲ್ಲಿ ಆಸಕ್ತರಾದ ಭಗವದ್ಭಕ್ತರಿಗೆ, ಭಗವತ್ಸಂಬಂಧವಾದ ಸರ್ವವಿಷಯಗಳೂ ಸುರಸವಾಗಿಯೇ ಇದ್ದು, ಪರಮ ತಾರಕವಾಗಿರುವುವು. ಹೀಗೆಯೇ, ಭಗವದ್ಭಕ್ತರಲ್ಲಿ ದ್ವೇಷಬುದ್ಧಿಯುಳ್ಳ ದುರ್ಜನರ ಸ್ವಭಾವ ರೋಗಗ್ರಸ್ತವಾದ ನಾಲಿಗೆ ಇದ್ದಂತೆ. ಭಗವದ್ವಿಷಯಗಳೆಲ್ಲವೂ ಅವರಿಗೆ ಅಮಂಗಳಕರವೇ.

ಶ್ರೀ ಪರಮಾತ್ಮನು ಅಪ್ರಾಕೃತವಾದ ಜ್ಞಾನಾನಂದಾದಿ ಸ್ವರೂಪನು. ದಿವ್ಯ ಮಂಗಳ ವಿಗ್ರಹನು. ಪರಮ ಮಂಗಳ ಸ್ವರೂಪಿಯಾದ ಶ್ರೀಹರಿಯು

ಸಮಸ್ತವಾದ ಭೋಜ್ಯ ಪದಾರ್ಥಗತ ರಸಗಳಲ್ಲಿ ರಸಾಂತರ್ಗತನಾಗಿ, ರಸ ಪದವಾಚ್ಯನಾಗಿದ್ದಾನೆ. ಸರ್ವಸಾರಭೋಕ್ತನಾದ ಶ್ರೀ ಪರಮಾತ್ಮನು ಆಯಾಯಾ ರಸ ವಿಶೇಷಗಳಲ್ಲಿ ತಾನು ಇಟ್ಟಿರುವ ಸ್ವಾಖ್ಯರೂಪವಾದ ರಸ ವನ್ನು ಮಾತ್ರ ಸ್ವೀಕರಿಸುವನು. ಇದರಿಂದ ಶ್ರೀಪರಮಾತ್ಮನಿಗೆ ಸರ್ವರಸ ಗಳೂ ಶುಭಕರವೆನಿಸುವುವು. ಇದಕ್ಕೆ ಒಂದು ನಿದರ್ಶನವನ್ನು ದಾಸರಾಯರು ಕೊಟ್ಟಿರುತ್ತಾರೆ. ನಂದಗೋಕುಲದಲ್ಲಿ ಶ್ರೀಕೃಷ್ಣನು ಬಾಲಲೀಲೆಗಳನ್ನು ಪ್ರದರ್ಶಿಸುತ್ತಾ, ಎಲ್ಲರನ್ನೂ ಆನಂದಗೊಳಿಸುತ್ತಿರಲು, ಪೂತನಿ ಎಂಬ ರಾಕ್ಷಸಿಯು ಕಂಸನಿಂದ ಪ್ರೇರಿತಳಾಗಿ, ಯಶೋದೆಯ ಮನೆಗೆ ಆಗಮಿಸಿ, ಯಾರೂ ಇಲ್ಲದಿರುವ ಸಮಯವನ್ನು ನೋಡಿ, ತೊಟ್ಟಿಲಿನಲ್ಲಿ ಮಲಗಿದ್ದ ಬಾಲರೂಪೀ ಶ್ರೀ ಕೃಷ್ಣನನ್ನು ಎತ್ತಿಕೊಂಡು, ತನ್ನ ವಿಷಪೂರಿತವಾದ ಸ್ತನ ಗಳನ್ನೇ ಮುದ್ದು ಬಾಲಕನ ಬಾಯಿಯೊಳಗಿಡಲು, ಶ್ರೀ ಕೃಷ್ಣನು ಸ್ತನ್ಯಪಾನ ವ್ಯಾಜದಿಂದ ಅವಳ ಅಸುವನ್ನೇ ಹೀರಿ, ಆ ದುರುಳನ್ನು ಸಂಹರಿಸಿದನು. ಶಾಪಗ್ರಸ್ತಳಾದ ಊರ್ವಶಿ ಎಂಬ ಅಪ್ಸರಾಸ್ತ್ರೀಯಲ್ಲಿ ತಾಟಕಾ ಎಂಬ ರಾಕ್ಷಸಿ ಯ ಆವೇಶ. ಹೀಗೆ ಜೀವದ್ವಯಾವಿಷ್ಟಳಾಗಿದ್ದ ಶಾಪಗ್ರಸ್ತ ಊರ್ವಶಿಯೇ ಪೂತನಿ ಎಂಬ ರಾಕ್ಷಸಿಯಾಗಿ ಹುಟ್ಟಿದಳು. ವಿಷವೆಂಬ ವಸ್ತುಗತ ರಸದಲ್ಲಿ ಆ ವಿಷದ ವ್ಯಾಪಾರ ವಿಶೇಷಗಳನ್ನು ಅಭಿವ್ಯಕ್ತಿಮಾಡುವುದಕ್ಕಾಗಿ ಶ್ರೀ ಪರ ಮಾತ್ಮನು ಸ್ವಾಭಿನ್ನ ರಸರೂಪವನ್ನಿಟ್ಟಿದ್ದಾನೆ. ವಿಷವೆಂಬುದು ಜಡವಸ್ತು. ಜೀವ ಮತ್ತು ಜಡಗಳಿಂದ ಅತ್ಯಂತ ಭಿನ್ನನಾದ ಬಿಂಬರೂಪೀ ಶ್ರೀ ಹರಿಗೆ ಆ ವಿಷವೇನು ಮಾಡಬಲ್ಲದು ? ಅಂತಹ ವಿಷಗತ ಸ್ವಾಖ್ಯ ರಸವನ್ನು ತಾನೇ ಸ್ವೀಕರಿಸುವುದರ ದ್ವಾರಾ, ಪೂತನಿಯ ಅಸುವನ್ನೇ ಹೀರಿದ ಅಚಿಂತ್ಯಾದ್ಭುತ ಶಕ್ತನು ಶ್ರೀ ಪರಮಾತ್ಮನು ! ಏತಾದೃಶಮಹಿಮೋಪೇತನಾದ ಶ್ರೀ ಹರಿಗೆ ಸಕಲ ರಸಗಳೂ ಮಂಗಳ ರಸಗಳೇ ಆಗಿರುವುವು. ಅನ್ನನಾಮಕನಾದ ಅನ್ನ ಮಯ ಕೋಶಾಭಿಮಾನಿ ಶ್ರೀ ಅನಿರುದ್ಧರೂಪೀ ಪರಮಾತ್ಮನು ಅನ್ನಮಯ ನೆಂದೆನಿಸಿರುವನು. ಅಂತಹ ಅನ್ನಮಯ ಶಬ್ದವಾಚ್ಯನಾದ ಶ್ರೀ ಹರಿಯು ನಾವು ಅರ್ಪಿಸುವ ಕರ್ಮಫಲರೂಪವಾದ ರಸಗಳನ್ನು ಸ್ವೀಕರಿಸದೇ ಬಿಡು ತ್ತಾನೆಯೇ ? ಎಂದೆಂದಿಗೂ ಸ್ವೀಕರಿಸುವನು ಎಂದು ತಾತ್ಪರ್ಯ ॥೨೭॥

## ಪದ್ಯ (೨೮)

**ಮೂಲ :—**

**ಪೇಳಲೇನು ಸಮೀರದೇವನು ।**
**ಕಾಲಕೂಟವನುಂಡು ಲೋಕವ ।**
**ಪಾಲಿಸಿದ ತದ್ದಾಸನೋರ್ವನು ಅಮೃತನೆನಿಸಿದನು ॥**
**ಶ್ರೀಲಕುಮೀವಲ್ಲಭ ಶುಭಾಶುಭ ।**
**ಜಾಲಕರ್ಮಗಳುಂಬನುಪಚಯ ।**
**ದೇಳಿಗೆಗಳವಗಿಲ್ಲವೆಂದಿಗು ಸ್ವರಸಗಳ ಬಿಟ್ಟು ॥ ೨೮ ॥**

**ಅವತರಣಿಕೆ :-**

ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನು ಸ್ವರಮಣನು. ಶುಭಾಶುಭ ಕರ್ಮಜನ್ಯಫಲಗಳನ್ನು ಸ್ವೀಕಾರ ಮಾಡುವುದರಿಂದ ಭಗವಂತನಿಗೆ ಭೋಜನ ಪದಾರ್ಥಗತ ರಸಗಳಿಂದ ದೇಹದ ಉಪಚಯವಾಗಲೀ. ಭೋಜನವಿಲ್ಲದಿರುವುದರಿಂದ ದೇಹ ಸೊರಗಿ ಬಲಹೀನತ್ವ ಉಲಟಾಗುವುದಾಗಲೀ, ಸಚ್ಚಿದಾನಂದವಿಗ್ರಹನಾದ ನಿತ್ಯಾನಂದ ಉದ್ರಿಕ್ತನಾದ ಶ್ರೀಪರಮಾತ್ಮನಿಗೆ ಇಲ್ಲವೆಂಬ ವಿಷಯವನ್ನು, ಸಮುದ್ರಮಥನ ಕಾಲದಲ್ಲಿ ಉದ್ಭವಿಸಿದ ಹಾಲಾಹಲವೆಂಬ ಕ್ರೂರತಮ ವಿಷದ ತೀಕ್ಷ್ಣತೆಯನ್ನು ಕ್ಷೀಣಮಾಡಿದ ಶ್ರೀವಾಯುದೇವರು ಮತ್ತು ಶೇಷಗರಳವನ್ನು ಪಾನಮಾಡಿದ ಶ್ರೀಮಹರುದ್ರದೇವರ ದೃಷ್ಟಾಂತದಿಂದ ತಿಳಿಸುತ್ತಾರೆ- "**ಪೇಳಲೇನು**"–ಎಂಬ ಪ್ರಸಕ್ತ ಸಂಧಿಗತ ೨೮ನೆಯ ಈ ಪದ್ಯದಿಂದ ॥೨೮॥

**ಪ್ರತಿಪದಾರ್ಥ :–**

**ಸಮೀರದೇವನು**=ಜೀವೋತ್ತಮರಾದ ಭಗವದ್ವಿಷಯದಲ್ಲಿ ಸಮೀಚೀನ ಜ್ಞಾನವಂತರಾದ ಶ್ರೀ ವಾಯುದೇವರು **ಕಾಲಕೂಟವನು**=ಕ್ಷೀರ ಸಮುದ್ರ ಮಥನ ಕಾಲದಲ್ಲಿ ಉತ್ಪನ್ನವಾದ ಲೋಕನಾಶಕ ಕಾಲಕೂಟವೆಂಬ ವಿಷವನ್ನು **ಉಂಡು**=ಹರಿ ಆಜ್ಞೆಯಂತೆ ಪಾನಮಾಡಿದವರಾಗಿ **ಲೋಕವ**=ಜಗತ್ತಿನ ಪ್ರಾಣಿಗಳನ್ನು **ಪಾಲಿಸಿದ**=ಸಂರಕ್ಷಣೆ ಮಾಡಿದರು **ತದ್ದಾಸ**=ವಾಯುದೇವರ ದಾಸನಾದ **ಜುರ್ವನು**=ಮಹ ರುದ್ರದೇವರು **ಅಮೃತನೆನಿಸಿದನು**=ವಾಯುದೇವರ ಅಂಗೈಯಿಂದ ಹೊಸೆಯಲ್ಪಟ್ಟು. ತೀಕ್ಷ್ಣತೆ ಕಡಿಮೆಯಾದ ಶೇಷಗರಳವನ್ನು ಪಾನಮಾಡಿ ಮೃತಿರಹಿತರಾದರು. **ಪೇಳಲೇನು**=ಇನ್ನು ಪರಿಪೂರ್ಣನಾದ ಶ್ರೀ ಪರಮಾತ್ಮನ ವಿಷಯದಲ್ಲಿ ಹೇಳತಕ್ಕದ್ದೇನಿದೆ ? **ಶ್ರೀಲಕುಮಿ ವಲ್ಲಭ**=ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು **ಶುಭ**=ಮಾನವರು ಮಾಡುವ ಪುಣ್ಯರೂಪವಾದ ಶುಭಕರ್ಮಗಳೇನು **ಅಶುಭ**=ಪಾಪರೂಪವಾದ ಅಶುಭಕರ್ಮಗಳೇನು **ಜಾಲಕರ್ಮಗಳ**=ಈ ಉಭಯ ರೂಪವಾದ ಕರ್ಮಸಮೂಹಗಳಿಂದ ಜನ್ಯಫಲಗಳನ್ನು **ಉಂಬನು**=ಫಲದಾತೃವಾಗಿ ಸ್ವೀಕರಿಸುವನು. **ಉಪಚಯ**=ಹೀಗೆ ಕರ್ಮಜನ್ಯಫಲ ಸ್ವೀಕಾರದಿಂದ ಶ್ರೀಪರಮಾತ್ಮನಿಗೆ ಶರೀರ ವೃದ್ಧಿಯಾಗಲೀ **ದೇಳಿಗೆಗಳು**=ದೇಹಹ್ರಾಸ [ಕ್ಷೀಣಿಸುವುದುವಾಗಲೀ] **ಅವಗೆ**=ಅಪ್ರಾಕೃತ ಸ್ವರೂಪನಾದ ಶ್ರೀ ಪರಮಾತ್ಮನಿಗೆ ಎಂದಿಗು **ಇಲ್ಲ**=ಯಾವ ಕಾಲಕ್ಕೂ ಇಲ್ಲವೇ ಇಲ್ಲ **ಸ್ವರಸಗಳ ಬಿಟ್ಟು**=ಸ್ವರೂಪಸಂಬಂಧವಾದ ಆನಂದ ರೂಪವಾದ ಸ್ವಾಖ್ಯರಸಗಳನ್ನು ಬಿಟ್ಟು ಅನ್ಯವಾದ. ಅಂದರೆ ತನ್ನಿಂದ ಅತ್ಯಂತ ಭಿನ್ನವಾದ ಪ್ರಾಕೃತ ವಸ್ತುಗತ ರಸಗಳನ್ನು ಎಂದೆಂದಿಗೂ ಸ್ವೀಕರಿಸುವುದಿಲ್ಲ. ॥ ೨೮ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಶ್ರೀ ಪರಮಾತ್ಮ ರಾಮಕೃಷ್ಣಾದಿ ಅವತಾರ ರೂಪಗಳಲ್ಲಿ ಮಾಡಿದ ಪ್ರಾಕೃತ ಭೋಜನಾದಿಗಳಿಂದ ಉಪಚಯಾಪಚಯಗಳು ದೇವರಿಗೆ ಇಲ್ಲ ಎಂತ ಹೇಳುತಾರೆ.

ಜೀವೋತ್ತಮರಾದ ವಾಯುದೇವರು ಶ್ರೀಪರಮಾತ್ಮನ ಆಜ್ಞಾದಿಂದ ಕ್ಷೀರಸಮುದ್ರದಲ್ಲಿ ಅಮೃತಮಥನ ಕಾಲಕ್ಕೆ ಉತ್ಪನ್ನವಾದ ಲೋಕನಾಶ ಮಾಡತಕ್ಕ ವಿಷವನ್ನು ಪಾನ ಮಾಡಿದವರಾಗಿ, ಪ್ರಾಣಿಗಳ ಸಮೂಹವನ್ನೂ ಸಂರಕ್ಷಣೆ ಮಾಡೋವನಾದನು. ಆ ವಾಯುದೇವರ ಶಿಷ್ಯನಾದ ಪಾರ್ವತೀ ಪತಿಯಾದ ರುದ್ರದೇವರು **"ಕರೇ ವಿಮಥ್ಯಾಸ್ತ ಬಲಂ ವಿಧಾಯ ದದೌ ಸ ಕಿಂಚಿದ್ಗಿರೀಶಾಯ ವಾಯುಃ"**-ಎಂತ ವಾಯುದೇವರಿಂದ ಕೊಡಲ್ಪಟ್ಟ ವಿಷವನ್ನು ಪಾನಮಾಡಿ ಅಮೃತನೆನಿಸಿದರು,

**"ಸ ತತ್ಪಿಬನ್ ಕಂಠಗತೇನ ತೇನ ನಿಷಾಕಿತೋ ಮೂರ್ಛಿತ ಆಶ್ತ ರುದ್ರಃ । ಹರೇಃ ಕರಸ್ಪರ್ಶ ಬಲಾತ್ಸ ಸಂಜ್ಞಾನವಾಪ ನೀಲೋಸ್ಯಗಳಸು ದಾಸೀತ್" ॥** ಎಂಬಂತೆ ಇರುವದ್ದರಿಂದಲೂ, **"ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣಾ ಪಿಬತ್ಸ :—"**ಎಂಬ **ಶ್ರುತಿ** ಯಿಂದಲೂ ಮೃತಿರಹಿತ [ಅಮೃತನೆನಿಸಿದನು] ಎಂತ ಕರೆಸೋವನಾದ. ಆದ ಕಡಿಯಿಂದ ಈ ಉಭಯ ರನ್ನ ಆ ವಿಷ ಏನೂ ಮಾಡಲಿಲ್ಲ. ಅಪೂರ್ಣರಾದ ಇವರಲ್ಲಿ ಇಂಥಾ ಸಾಮರ್ಥ್ಯ ಇರೋದಾಗಿ ಅದೆ. ಹೀಂಗಿರಲಾಗಿ, ಕಾಂತಿಸಂಪನ್ನರಾದ ಲಕ್ಷ್ಮೀದೇವರಿಗೆ ಪತಿಯಾದ ಶ್ರೀ ಪರಮಾತ್ಮ ತನ್ನ ಅವತಾರಗಳಲ್ಲಿ ಶುಭ

ದ್ರವ್ಯಗಳೇನು, ಅಶುಭ ದ್ರವ್ಯಗಳೇನು, ಈ ಉಭಯ ಸಮೂಹವಾದ ಕರ್ಮ ಫಲಗಳ ಪ್ರಾಕೃತದ್ರವ್ಯಗಳೇನು, ಹಾಂಗೆ ತನ್ನ ಸ್ವರೂಪಭೂತವಾದದ್ದೇನು, ಇವುಗಳನ್ನು ಭೋಜನಮಾಡುವುದರಿಂದ, ತನ್ನ ದೇಹಕ್ಕೆ ಉಪಚಯವಾಗಿ ದೇಹ ಬಲಿಯೋಣವೂ, ಭೋಜನಮಾಡದೇ ಇರುವುದರಿಂದ ದೇಹ ಸೊರಗಿ ಶುಷ್ಕವಾಗಿ ಬಲಹೀನವಾಗೋಣವೇನು, ಇವು ಎರಡೂ ದೇವರಿಗಿಲ್ಲವು. ಅನಾದ್ಯಂತಕಾಲಕ್ಕೂ ಇಲ್ಲ. (ಎಂದೆಂದಿಗೂ) ಏಕೆಂದರೆ, ಶ್ರೀ ಪರಮಾತ್ಮ ತನ್ನ ಸ್ವರಸಗಳ ಬಿಟ್ಟು ಅನ್ಯ ರಸಗಳನ್ನು ಸ್ವೀಕಾರ ಮಾಡೋದಿಲ್ಲವಾದ್ದರಿಂದ್ಮ ಪ್ರಾಕೃತ ಪದಾರ್ಥದಿಂದ ಉಪಚಯಾಪಚಯಗಳಲ್ಲಿ ಜಗತ್ತಿನ ಪ್ರಳಯಕಾಲ ದಲ್ಲಿ ಉದರದಲ್ಲಿ ಧರಿಸೋಪಾದೇಯಲಿ ಪ್ರಾಕೃತ ಪದಾರ್ಥಗಳು ಭೋಜನ ಮಾಡತಾನೆ. ಆದ್ದರಿಂದ ಉಪಚಯಾಪಚಯ ದೋಷಗಳು ಅವಗಿಲ್ಲ.

**"ಅಭೂತ್ಕಲಿ: ಸರ್ವ ಜಗತ್ಸು ಪೂರ್ಣಂ ಪೀತ್ವಾ ವಿಕಾರೋ ನ ಚಭೂವ ವಾಯೋ:।**

**ಸ್ವಯಂ ತ್ವ ನಿರ್ಮರ್ಥ್ಯ ಬಲೋಪಪನ್ನಂ ಪದೌ ಸ ವಾಯು: ತದುಕಾಸ್ಯ ಜೀರ್ಣಂ॥"**

—ಎಂಬ ಪ್ರಮಾಣಾನುಸಾರ ವಾಯುದೇವರು ವಿಷ ಪಾನಮಾಡಿ ವಿಕಾರಯ್ಯದೇದೆ ಇರಲಾಗಿ, ಸರ್ವೋತ್ತಮನಾದ ಶ್ರೀ ಪರಮಾತ್ಮಗೆ ಅವತಾರ ರೂಪಗಳಲ್ಲಿ ಪ್ರಾಕೃತಪದಾರ್ಥಗಳು ಭೋಜನಮಾಡೋಣದರಿಂದ ಉಪಚಯಾಪಚಯಗಳು ಇಲ್ಲವೆಂಬದು ಹೇಳತಕ್ಕದ್ದೇನು, ಅದೆ ಎಂತ ತಾತ್ಪರ್ಯ (ಪೇಳಲೇನು). ಈ ಸಮನ್ವಯ ಎಲ್ಲಿ ಅಂದರೆ, ರಾಮಕೃಷ್ಣಾದಿ ಅವತಾರಗಳಲ್ಲಿ ಪ್ರಾಕೃತಾನ್ನ ಭೋಜನ ಮಾಡಿದ್ದಾಗಿ ಅದೆ. ಪ್ರಾಕೃತ ಕರ್ಮಫಲ ಭೋಗಗಳು ಕಂಡದೆ. ಅದರ ದೋಷ ಪರಿಹಾರ್ಥ ವಾಯು ದೇವರು ವಿಷಪಾನ ಮಾಡಿದ ದೃಷ್ಟಾಂತ ಹೇಳೋವವರಾಗಿದ್ದಾರೆ ಎಂತ ತಾತ್ಪರ್ಯ ॥೨೮॥

(೨) **"ಭಾವಪ್ರಕಾಶಿಕೆ"—ವ್ಯಾಖ್ಯಾನ:-**

ಜನರು ಪೂಜಿಸಿ ನೈವೇದ್ಯ ಕೊಡುವುದನ್ನು ಪರಮಾತ್ಮನು ಸ್ವೀಕರಿಸು ವುದು ಜೀವರ ಉದ್ಧಾರಕ್ಕಾಗಿಯೇ ಹೊರತು, ತನ್ನ ತೃಪ್ತಿ ಗೋಸ್ಕರವಲ್ಲ ವೆಂದು ಹೇಳುತ್ತಾರೆ.

ದೇವದೈತ್ಯರು ಸೇರಿ ಕ್ಷೀರಸಮುದ್ರವನ್ನು ಮಥನ ಮಾಡಿದ ಕಾಲದಲ್ಲಿ ವಿಷವು ಹುಟ್ಟಿ, ಜಗತ್ತನ್ನೆಲ್ಲ ದಹಿಸುತ್ತಿರಲು ದೇವತೆಗಳೆಲ್ಲರೂ ಭೀತರಾಗಿ ರುದ್ರದೇವರನ್ನು ಮೊರೆ ಹೊಕ್ಕು ವಿಷವನ್ನು ಪರಿಹರಿಸಬೇಕೆಂದು ಬೇಡಿ ಕೊಂಡರು. ಆಗ ರುದ್ರದೇವರು ವಿಷಪ್ರಾಶನ ಮಾಡಲು ಹೊರಟು ಬರು ತ್ತಿದ್ದರು. ಆದರೆ ಶ್ರೀ ಪರಮಾತ್ಮನು ಅಮೃತ ಮಥನ ಮಾಡುತ್ತಿದ್ದವರಿಗೆ ಸಹಾಯಭೂತನಾಗಿ ಅಲ್ಲಿಯೇ ಇರಲು, ತಾನ್ಯಾಕೆ ವಿಷವನ್ನು ಪರಿಹರಿಸಲಿಲ್ಲ ವೆಂದರೆ—**ಭಾಗವತ ಅಷ್ಟಮಸ್ಕಂಧ ತಾತ್ಪರ್ಯದಲ್ಲಿ- "ರುದ್ರಸ್ಯ ಯಶ ಸೋಽರ್ಥಾಯ ಸ್ವಯಂ ವಿಷ್ಣುರ್ವಿಷಂ ವಿಭುः॥ ನ ಸಂಜಹ್ರೇ ಸಮ ರ್ಥೋಽಪಿ ವಾಯುಂ ಚೋಚ ಪ್ರಶಾಂತಯೇ॥."**

ಶ್ರೀ ಪರಮಾತ್ಮನಿಗೆ ವಿಷವನ್ನು ಪರಿಹಾರಮಾಡುವ ಶಕ್ತಿ ಇದ್ದರೂ, ರುದ್ರದೇವರಿಗೆ **"ನೀಲಕಂಠ"** ನೆಂಬ ಹೆಸರನ್ನು ಕೊಡಿಸಬೇಕಂತಲೂ, ರುದ್ರದೇವರಿಗೂ ಮತ್ತು ವಾಯುದೇವರಿಗೂ ಇರುವ ತಾರತಮ್ಯವನ್ನು ತೋರಿಸುವ ಉದ್ದೇಶದಿಂದಲೂ ತಾನು ವಿಷವನ್ನು ಪರಿಹರಿಸಲಿಲ್ಲ.

ಮೇಲೆ ಹೇಳಿದ ರೀತಿಯಲ್ಲಿ **ಭಾರತ ತಾತ್ಪರ್ಯ ನಿರ್ಣಯದ ಹತ್ತನೆಯ ಅಧ್ಯಾಯದ ೧೪ನೆಯ ಶ್ಲೋಕದಂತೆ-**

**"ಕಲೇः ಸ್ವರೂಪಂತದತೀವದುः ಸಹಂವರಾದ್ವಿಧಾತುः ಸಕಲೈ ರ್ದ್ವ ದುಸ್ಪೃಶಂ।**

**ಕರೇ ವಿಮೃಧ್ಯಾಸ್ತ್ರಬಲಂ ನಿಧಾಯ ದದೌ ಸ ಕಿಂಚಿದ್ಗಿರೀಶಾಯ ವಾಯುಃ॥**

**ಹರೇಃ ಕರಸ್ಪರ್ಶ ಬಲಾತ್ಸಸಂಜ್ಞಾಮವಾಪ ನೀಲೋಸ್ಯ ಗಲಸ್ತದಾಸೀತ್॥"**

ಅಮೃತಮಥನಕಾಲದಲ್ಲಿ ಹುಟ್ಟಿದ ವಿಷವು ಎಂತಹುದೆಂದು ಹೇಳುತ್ತಾರೆ :–

ಅದು ಕಲಿಯ ಸ್ವರೂಪಭೂತವಾದುದು. ಯಾರಿಂದಲೂ ತಡೆಯಲ ಶಕ್ಯವಾದುದು. ಬ್ರಹ್ಮದೇವರ ವರದಿಂದ ಮತ್ತೊಬ್ಬರು ಸ್ಪರ್ಶಮಾಡಲು ಯೋಗ್ಯವಲ್ಲದಾಗಿದ್ದಿತು. ಇಂತಹ ವಿಷವನ್ನು ವಾಯುದೇವರು ಸ್ವಲ್ಪ ಮಾತ್ರ ಕೈಯಲ್ಲಿ ಹಾಕಿಕೊಂಡು, ಚೆನ್ನಾಗಿ ಉಜ್ಜಿ, ಅದರ ವೇಗವನ್ನು ಕಮ್ಮಿ ಮಾಡಿ, ರುದ್ರದೇವರ ಕೈಯಲ್ಲಿ ಹಾಕಿದರು. ರುದ್ರದೇವರು ಅದನ್ನು ಪಾನ ಮಾಡಿದಕೂಡಲೇ ಅದು ಗಂಟಲ ಒಳಗೆ ನಿಂತು, ರುದ್ರದೇವರು ಮೂರ್ಛಿತರಾಗಿ ಬಿದ್ದುಬಿಟ್ಟರು, ಶ್ರೀ ಪರಮಾತ್ಮನು ರುದ್ರದೇವರನ್ನು ಕೈಯಿಂದ ನೇವರಿಸಲು, ಅವರು ಸಂಜ್ಞೆಯನ್ನು ಹೊಂದಿದರು. ಅವರ ಕಂಠದಲ್ಲಿ ಕಪ್ಪು ಹಾಗೆಯೇ ನಿಂತು "ನೀಲಕಂಠ"ನೆಂದು ಹೆಸರಾಗಲು ಕಾರಣವಾಯಿತು.

**"ಅಥ ತ್ವದಾಜ್ಞಾಂ ಪುರತೋ ನಿಧಾಯ ನಿಧಾಯ ಪಾತ್ರೇ ತಪನೀಯರೂಪೇ॥**

**ಸ್ವಯಂತವನಿರ್ಮಥ್ಯ ಬಲೋಪಪನ್ನಂ ಪಪೌ ಸ ವಾಯುಸ್ತದುತಾಸ್ಯಜೀರ್ಣಂ॥"**

ತದನಂತರದಲ್ಲಿ ಪರಮಾತ್ಮನ ಆಜ್ಞಾ ಪ್ರಕಾರ ವಾಯುದೇವರು ಆ ವಿಷವೆಲ್ಲವನ್ನೂ ಭಂಗಾರದ ಪಾತ್ರೆಯಲ್ಲಿ ಹಾಕಿಕೊಂಡು ಮಥನಾದಿಗಳಿಂದ ವೇಗವನ್ನು ಕಡಿಮೆಮಾಡದೆ ಹಾಗೆಯೇ ಕುಡಿದು ಬಿಟ್ಟರು. ಅದು ಅವರಿಗೆ ಜೀರ್ಣವಾಯಿತು. ಅಲ್ಪ ವಿಷಪ್ರಾಶನದಿಂದ ರುದ್ರದೇವರನ್ನು ಶ್ರೀ ಹರಿಯು ರಕ್ಷಿಸಬೇಕಾಯಿತು. ಉಳಿದ ವಿಷವೆಲ್ಲವನ್ನೂ ಪಾನಮಾಡಿದ ವಾಯುದೇವ

ರು ಯಾವ ವಿಧವಾದ ವಿಕಾರವನ್ನೂ ಹೊಂದದೆ "ಅಮೃತ" ಎಂಬ ಹೆಸರನ್ನು ಪಡೆದರು. ಅದೇ ಅಭಿಪ್ರಾಯವನ್ನು ದಾಸರಾಯರು ಇಲ್ಲಿ ಉದಹರಿಸಿ ರುವರು. ಈ ಪ್ರಕಾರವಾಗಿ ವಾಯುದೇವರು ಕಾಲಕೂಟವೆಂಬ ವಿಷವನ್ನು ಪಾನಮಾಡಿ ಲೋಕವನ್ನು ಪಾಲಿಸಿರುವರು. ಪರಮಾತ್ಮನ ದಾಸರಲ್ಲಿ ಒಬ್ಬರಾದ ವಾಯುದೇವರೇ ವಿಷಪ್ರಾಶನದಿಂದ ಅಮೃತನೆಂಬ ಬಿರುದು ಪಡೆದರೆಂದಮೇಲೆ, ಲಕ್ಷ್ಮೀವಲ್ಲಭನಾದ ಶ್ರೀ ಪರಮಾತ್ಮನ ವಿಷಯದಲ್ಲಿ. ಹೇಳುವುದೇನು? ಜನರ ಪುಣ್ಯಪಾಪಾದಿ ಕರ್ಮಗಳನ್ನು ತಾನು ಸ್ವೀಕರಿಸಿ, ದ್ವೇಷಿಗೆ ದ್ವೇಷ ಫಲವನ್ನೂ, ಭಕ್ತರಿಗೆ ಪುಣ್ಯ ಫಲವನ್ನೂ ಕೊಡುವನು.

**"ಶುಭಂ ಪಿಬತ್ಯಸೌ ನಿತ್ಯಂ ನಾಶುಭಂ ಸ ಹರಿಃ ಪಿಬೇತ್ ।"**
—ಎಂಬ ಬ್ರಹ್ಮಸೂತ್ರಭಾಷ್ಯದ ವಾಕ್ಯಾನುಸಾರ ಪಾಪಿಗಳ ಪಾಪಕರ್ಮ ಗಳಿಗೆ ತಕ್ಕಂತೆ ಅವರಿಗೆ ಫಲಗಳನ್ನು ಉಣಿಸುವನು. ಭಕ್ತರು ಮಾಡುವ ಪಾಪಕರ್ಮಗಳನ್ನು ಭಸ್ಮ ಮಾಡುವನು. ಪುಣ್ಯಫಲಗಳನ್ನು ತಾನುಂಡು ಅವರಿಗೆ ಉಣಿಸುವನು. ಆದರೆ ನಿಜ ಭಕ್ತರು ಪೂಜಾದಿಗಳನ್ನು ಮಾಡಿ, ಷಡ್ರಸೋಪೇತವಾದ ಅನ್ನ ಭಕ್ಷ್ಯ ಫಲಾದಿಗಳನ್ನು ಸಮರ್ಪಿಸಲು, ಪರಮಾ ತ್ಮನು ಅವನ್ನು ಸ್ವೀಕರಿಸುವನು. ಆದರೆ ಅದು ತನ್ನ ಇಂದ್ರಿಯ ಪ್ರೀತಿ ಗೋಸ್ಕರವಲ್ಲ.

ಅನ್ನವನ್ನು ಭೋಜನ ಮಾಡಿದುದರಿಂದ ಶರೀರವು ಪುಷ್ಟಿಯಾಯಿತು, ದೇಹದಲ್ಲಿ ಬಲ ಬಂದಿತು ಎಂದಾಗಲೀ, ಭೋಜನಮಾಡದಿದ್ದರೆ, ಶರೀರ ಕೃಶವಾಯಿತು, ದೇಹದಲ್ಲಿ ದೌರ್ಬಲ್ಯ ಉಂಟಾಯಿತು, ಎಂದಾಗಲೀ ಇಲ್ಲ.

**"ಯಥಾ ತರೋರ್ಮೂಲ ನಿಷೇಚನೇನ ತೃಪ್ಯಂತಿ ತತ್ಸ್ಕಂಧ ಭು ಜೋಪ ಶಾಖಾಃ ॥"**

—**ಎಂಬ ಭಾಗವತ ಚತುರ್ಥ ಸ್ಕಂಧ** ವಾಕ್ಯದಂತೆ, ವೃಕ್ಷದ ಬೇರಿಗೆ ನೀರೆರೆ ಯಲು ಹೇಗೆ ಶಾಖೆಗಳೆಲ್ಲವೂ ಪುಷ್ಟಿಯಾಗುವುವೋ, ಹಾಗೆಯೇ ನಮಗೆ

ಮೂಲಭೂತನಾದ ಪರಮಾತ್ಮನು ನಮ್ಮ ದೇಹದಲ್ಲಿದ್ದು ಸ್ವೀಕರಿಸಿದರೇನೇ, ನಮಗೆ ತೃಪ್ತಿಯಾಗುವುದು. ಆದ್ದರಿಂದ ನಮ್ಮ ಕ್ಷೇಮಕ್ಕಾಗಿಯೇ ಪರಮಾತ್ಮನು ಸ್ವೀಕರಿಸುವನು. ತಾನೇ ಅನ್ನಮಯನು. ಅನ್ನಾದಿರೂಪಿಯಾಗಿ ತಾನೇ ಇದ್ದು. ಅದೇ ಅನ್ನರಸದಿಂದ ತಾನೇ ತೃಪ್ತನಾಗುವ ಪರಮಾನಿಗೆ ನಮ್ಮ ಅನ್ನದಿಂದ ಆಗುವುದೇನು?

**ಭಾಗವತ ಪ್ರಥಮಸ್ಕಂಧದ ಹತ್ತನೆಯ ಅಧ್ಯಾಯದಲ್ಲಿ**

**"ಪ್ರತ್ಯುದ್ಯಯುಃ ಪ್ರಜಾಸರ್ವಾಃ ಭರ್ತೃದರ್ಶನ ಲಾಲಸಾಃ ||**
**ನತ್ವೋಪನೀತವಲಯೋರವೇ ರ್ದೀಪಮಿವಾದೃತಾಃ ||**
**ಆತ್ಮಾರಾಮಂ ಪೂರ್ಣಕಾಮಂ ನಿಜಲಾಭೇನ ನಿತ್ಯದಾ ||"**

(ಶ್ರೀಕೃಷ್ಣನು ಹಸ್ತಿನಾಪುರದಿಂದ ಪ್ರಯಾಣಮಾಡಿ,ತಮ್ಮ ದೇಶವಾದ ಅವರ್ತ ದೇಶಕ್ಕೆ ಬಂದು ಶಂಖಧ್ವನಿಯನ್ನು ಮಾಡಿದನು-ಎಂಬ ಕಥಾ ಸಂದರ್ಭ)

ಶ್ರೀ ಕೃಷ್ಣನ ಬರುವಿಕೆಯನ್ನು ತಿಳಿದು, ಪ್ರಜೆಗಳೆಲ್ಲರೂ ತಮ್ಮ ಸ್ವಾಮಿಯನ್ನು ನೋಡಬೇಕೆಂಬ ಲವಲವಿಕೆಯಿಂದ ಬೇಕಾದ ಭಕ್ಷ್ಯ ಭೋಜ್ಯಾದಿ ಪದಾರ್ಥಗಳಿಂದಲೂ, ಫಲಾದಿಗಳಿಂದಲೂ ಕೂಡಿ, ಕೃಷ್ಣನ ಸಮೀಪಕ್ಕೆ ಬಂದು ನಮಸ್ಕರಿಸಿ, ತಾವು ತಂದುದನ್ನು ಪರಮಾತ್ಮನಿಗೆ ಸಮರ್ಪಿಸಿದರು. ಶ್ರೀ ಪರಮಾತ್ಮನು ಸ್ವರಮಣನು. ಪೂರ್ಣಕಾಮನು. ತನಗೆ ಯಾವುದು ಬೇಕಾಗುವುದೋ ಆ ವಸ್ತುವಾಗಿ ತಾನೇ ಆಗುವನು. ಹೀಗೆ ತನ್ನಿಂದ ತಾನೆ ಸುಖಪಡುವ ಪರಮಾತ್ಮನಿಗೆ ಇವರು ಕೊಟ್ಟ ಪದಾರ್ಥಗಳಿಂದ ಆಗುವ ಪ್ರಯೋಜನವು ಏನೆಂದು ಹೇಳಬೇಕು? ಅಂದರೆ, "ರವೇರ್ದೀಪಮಿವ" ಎಂಬಂತೆ ಸೂರ್ಯನಮಸ್ಕಾರ ಮಾಡುವವರು ಜಗತ್ಪ್ರಕಾಶನಾದ ಸೂರ್ಯನಿಗೆ ಅಲ್ಲಿ ಒಂದು ದೀಪವನ್ನು ಹಚ್ಚುವರು, ಆದರಿಂದ ಸೂರ್ಯನಿಗೆ ಎಷ್ಟು ಪ್ರಯೋಜನವಿದೆಯೋ ಅಷ್ಟೇ ಪ್ರಯೋಜನವು, ಇವರು ಕೊಡುವ ಪದಾರ್ಥಗಳಿಂದ ಪರಮಾತ್ಮನಿಗಾಗುವುದೆಂದು ಹೇಳಿರುವರು. ಆದ್ದರಿಂದ ಶ್ರೀ ಪರಮಾತ್ಮನು ಭಕ್ತರನ್ನು ಸಂತೋಷಪಡಿಸುವುದಕ್ಕಾಗಿ, ತಂದೆ ತಾಯ್ಗ

ಳು ಮಗುವಿನ ಕೈಯಲ್ಲಿ ವೀಳ್ಯವನ್ನು ಕೊಟ್ಟು, ಅದನ್ನು ತಮ್ಮ ಬಾಯಲ್ಲಿ ಹಾಕಿಕೊಂಡು, ಮಗುವನ್ನು ಸಂತೋಷಪಡಿಸುವಂತೆ, ನಾವು ಕೊಟ್ಟಿದು ದನ್ನು ತಾನು ಸ್ವೀಕರಿಸಿ, ನಮ್ಮನ್ನು ಸಂತೋಷಪಡಿಸುವನು—ಎಂದು ತಿಳಿಯ ಬೇಕು ॥೨೮॥

(೩) "ಭಾವದರ್ಪಣ ಟೀಕಾ" -ವ್ಯಾಖ್ಯಾನ:—

ಈಗ ಯಾವ ಶ್ರೀ ಪರಮಾತ್ಮನ ಪೂರ್ಣಾನುಗ್ರಹದಿಂದ ಜಗದಾಹಕ ಶಕ್ತಿಉಳ್ಳಂಥಾ ಕಾಳಕೂಟವಿಷವನ್ನು ವಾಯುದೇವರು ಭೋಜನ ಮಾಡಿ ಜೀರ್ಣಿಸಿಕೊಂಡರೋ, ಅಂಥ ಜಗನ್ನಿಯಾಮಕನಾದ ಪೂರ್ಣಾತ್ಪೂರ್ಣ ತರನಾದ ಶ್ರೀಶನು ಶುಭಾಶುಭಕರ್ಮ ಸ್ವೀಕರಿಸುತ್ತಾನೆಂಬೋದು ಏನು ದೊಡ್ಡ ವಿಷಯವೆಂದು ನಾನೇನು ಹೇಳಲೆಂದು ಸೂಚಿಸುತ್ತಾರೆ- "ಪೇಳಲೇ ನು"-ಎಂಬ ಪದ್ಯದಿಂದ.

"ತದಾ ಜಗತ್‌ಗ್ರಾಸಿ ವಿಷಂ ಸಮುತ್ಥಿತಂ ತ್ವದಾಜ್ಞಯಾ ವಾಯು ರಥಾತ್ಕರೇ ನಿಜೇ ।

ಕಲೇಃ ಸ್ವರೂಪಂ ತದತೀವ ದುಸ್ಸಹಂ ವರಾದ್ವಿಧಾತುಃ ಸಫಲೈಶ್ಚ ದುಃಸ್ಪೃಷಮ್ ॥

ಕರೇ ವಿಮುಥ್ಯಾಸ್ತ ಬಲಂ ವಿಧಾಯ ದದೌ ಸ ಕಿಂಚಿದ್ಗಿರೀಶಾಯ ವಾಯುಃ ।

ಸ ತಚ್ಛಿನ್ ಕಂಠಗತೇನ ತೇನ ನಿಷಾಕಿತೋ ಮೂರ್ಛಿತ ಆಶು ರುದ್ರಃ ॥

ಹರೇಃ ಕರಸ್ಪರ್ಶಬಲಾತ್ಸ ಸಂಜ್ಞಾಮವಾಪ ನೀಲೋಽಸ್ಯ ಗಲ ಸ್ತದಾ ಆಸೀತ್ ॥

ಅಥ ತ್ವದಾಜ್ಞಾಂ ಪುರತೋ ವಿಧಾಯ ನಿಧಾಯ ಪಾತ್ರೇ ತಪನೀಯ ರೂಪೇ ।

ಕ್ಷಯಂ ತ್ವ ನಿರ್ಮಥ್ಯ ಬಲೋಪಪನ್ನಂ ಪಯೌಸ ವಾಯುಸ್ತ್ವದು ಕಾಸ್ಯ ಜೀರ್ಣೇ॥

ಅತ್ಯಲ್ಪ ಪಾನಾಶ್ಚ ಬಭೂವ ಶೂಲಾ ಶಿವಸ್ಯ ಶೀರ್ಷ್ಣಸ್ಯ ಕರಾವ ಶಿಷ್ಟಂ। ಅಭೂತ್ಕ ಲಿಸ್ಸರ್ವ ಜಗತ್ಸುಪೂರ್ಣಾ ಪೀತ್ವಾ ವಿಕಾರೋ ನ ಬಭೂವ ವಾಯೋರಿತಿ॥

-ಇತಿ ಶ್ರೀ ಮನ್ಮಹಾಭಾರತ ನಿರ್ಣಯೋಕ್ತೇ:॥

ಶುಭಾಶುಭ ರಸ ಸ್ವೀಕರಿಸೋ ವಿಷಯದಲ್ಲಿ ಕಲುಷ ಎಂಬೋ ಪದ್ಯಕು ಸ್ಫುಟವಾಗಿ ಬರದಿರುತ್ತದೆ. ಅದನ್ನ ಅವಲೋಕಿಸಿದಲ್ಲಿ, ಮನಸ್ಸಿಗೆ ದಾರ್ಢ್ಯ ವಾಗುತ್ತದೆ. ಉಪಚಯ-ವೃದ್ಧಿ ಏಳಿಗೆ-ಸಮೂಹ. ರುದ್ರನು ಅಮೃತ ಎಂದರೆ, ಮೃತನಲ್ಲಾ ಯಂತ ಅನಿಸುತ್ತಾನೆಂಬ ತಾತ್ಪರ್ಯ. ಶ್ರೀ ಹರಿಯು ಶುಭಾಶುಭಗತ ಸ್ವಕೀಯರಸ ಸ್ವೀಕರಿಸುತ್ತಾನೆಂಬ ಫಲಿತಾರ್ಥ ॥ ೨೮ ॥

## (೪) ಗುರುಹೃದಯ ಪ್ರಕಾಶಿಕೆ- ವ್ಯಾಖ್ಯಾನ:-

ವಾಯುದೇವರು ಕಾಲಕೂಟವೆಂಬ ವಿಷವನ್ನು ಪಾನಮಾಡಿ ಲೋಕ ವನ್ನು ರಕ್ಷಿಸಿದರು. ದೇವರ ಭೃತ್ಯರಾದ ಆ ಪ್ರಾಣದೇವರು ಅಮೃತನೆಂದು ಪ್ರಸಿದ್ಧ ಹೆಸರುಳ್ಳವರಾದರು. ಹೀಗಿರುವಲ್ಲಿ ದೇವರಿಗೆ ವಿಷ ಮೊದಲಾದ ಪ್ರಾಕೃತರಸ ಸ್ವೀಕಾರ ನಿಮಿತ್ತ ದು:ಖಾದಿಗಳಿಲ್ಲವೆಂದು ಹೇಳತಕ್ಕದ್ದೇನೆಂದ್ಯ ತಾತ್ಪರ್ಯ. ಇದರಿಂದ ಶ್ರೀ ಲಕ್ಷ್ಮೀಪತಿಯು ಶುಭಾಶುಭ ಜಾಲಕರ್ಮ ಗಳುಂಡು, ಎಂದರೆ, ಜೀವರಿಗೆ ಸುಖ ದು:ಖಕೊಡುವುದಕ್ಕಾಗಿ ಪುಣ್ಯಪಾಪ ಫಲಗಳನ್ನು ತೆಗೆದುಕೊಳ್ಳುವನು. ಉಪಚಯ ಏಳಿಗೆಗಳು ಅವಗಿಲ್ಲವು. ಎಂದಿಗೂ ಸ್ವರಸಗಳ ಬಿಟ್ಟು ಎಂದರೆ, ಯಾವಾಗ್ಯೂ ದೇವರಿಗೆ ಸ್ವಾನಂದ ರೂಪ ಸ್ವರಸಾನುಭವವೇ ಹೊರತು, ನೀಚೋಚ್ಚತಾನುಭವರೂಪ ಸುಖ ದು:ಖಗಳೂ, ವೃದ್ಧಿ ಹ್ರಾಸಗಳೂ ಇಲ್ಲವೆಂದರ್ಥ ॥೨೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪೂರ್ವದಲ್ಲಿ ದೇವಾಸುರರು ಅಮೃತಪ್ರಾಪ್ತಿ ಗೋಸುಗ ಕ್ಷೀರಸಮುದ್ರವನ್ನು ಮಥನಮಾಡಿದರು. ಆ ಸಮುದ್ರಮಥನದಲ್ಲಿ ಮಂದರಗಿರಿಯನ್ನೇ ಕಡಗೋಲಾಗಿಯೂ, ವಾಸುಕಿಯನ್ನು ಪಾಶವನ್ನಾಗಿಯೂ ಮಾಡಿಕೊಂಡರು, ಪರ್ವತವು ಭಾರದಿಂದ ಕುಸಿಯುದಂತೆ ದೇವತೆಗಳ ಪ್ರಾರ್ಥನೆಯನ್ನು ಲಾಲಿಸಿ, ಶ್ರೀ ಪರಮಾತ್ಮನು ಕೂರ್ಮರೂಪವನ್ನು ತಾಳಿ, ಪರ್ವತವನ್ನು ತನ್ನ ಬೆನ್ನಿನ ಮೇಲೆ ಹೊತ್ತನು. ಆ ಮಂದರಗಿರಿಧರನ ಅನುಗ್ರಹದಿಂದ ಸಮುದ್ರ ಮಥನಕಾರ್ಯವು ಸುಗಮವಾಗಿ ಸಾಗಿತು. ಆಗ ಪ್ರಥಮದಲ್ಲಿಯೇ ಜಗತ್ತನ್ನೇ ಕ್ಷೋಭೆಗೊಳಿಸುವ ಕಾಲಕೂಟವೆಂಬ ಹಾಲಾಹಲ ವಿಷವು ಉತ್ಪತ್ತಿಯಾಯಿತು. ಕಲಿಸ್ವರೂಪಭೂತವಾದ ಆ ಅತ್ಯುಗ್ರ ವಿಷದ ಭಾದೆಗೆ ಸರ್ವರೂ ತತ್ತರಿಸಿದರು, ಆಗ ದೇವತೆಗಳ ಪ್ರಾರ್ಥನೆಯನ್ನು ಲಾಲಿಸಿ, ಮಹರುದ್ರದೇವರು ವಿಷಪಾನಮಾಡಲು ಉದ್ಯುಕ್ತರಾದರು. ಶ್ರೀ ಹರಿಯ ಆಜ್ಞೆಯಂತೆ ಶ್ರೀವಾಯುದೇವರು ಮೊದಲು ಅತ್ಯುಗ್ರ ವಿಷವನ್ನು ತಮ್ಮ ಅಂಗೈಯಿಂದ ಉಜ್ಜಿ, ಅದರ ತೀಕ್ಷ್ಣತೆಯನ್ನು ಕಡಿಮೆಮಾಡಿ, ರುದ್ರದೇವರಿಗೆ ಪಾನಮಾಡಲು ಕೊಟ್ಟರು. ಆ ಶೇಷಗರಳವನ್ನು ರುದ್ರದೇವರು ಪಾನಮಾಡಿದಾಗ, ಕಂಠದವರೆಗೆ ಇಳಿದು ನಿಂತಿತು. ಆ ವಿಷದ ಉಗ್ರ ಪ್ರಭಾವದಿಂದ ಮಹಾ ಯೋಗಿಗಳಾದ ರುದ್ರದೇವರು ಮೂರ್ಛಿತರಾದರು. ಶ್ರೀ ಹರಿಯ ಕರಸ್ಪರ್ಶದಿಂದ ಪುನಃ ಪ್ರಜ್ಞೆಯನ್ನು ಪಡೆದು, "ನೀಲಕಂಠ"ನೆಂದು ಖ್ಯಾತನಾಮಕರಾದರು. ನಂತರ ವಾಯುದೇವರು ವಿಷವನ್ನು ಭಂಗಾರದ ಪಾತ್ರೆಯಲ್ಲಿ ಹಾಕಿಕೊಂಡು, ಮಥನಾದಿಗಳನ್ನು ಮಾಡದೆಯೇ ಪಾನಮಾಡಿ, ಜಗತ್ತಿನ ಪ್ರಾಣಿಗಳನ್ನು ವಿಷಭಾದೆಯಿಂದ ಸಂರಕ್ಷಿಸಿ, "ಅಮೃತ"ರೆನಿಸಿದರು. ವಾಯುದೇವರ ಶಿಷ್ಯರೇ ಮಹರುದ್ರದೇವರು. ರುದ್ರದೇವರು ಶ್ರೀ ಹರಿವಾಯುಗಳ ಅನುಗ್ರಹವಿಶೇಷದಿಂದ ಮೃತಿರಹಿತರಾಗಿ ಅಮೃತತ್ವವನ್ನು ಪಡೆದರು. ಶ್ರೀ ಹರಿಯಿಂದ ನಿಯಮ್ಯರೂ, ಅಸ್ವಂತತ್ರರೂ, ಅಪೂರ್ಣರೂ ಆದ ಶ್ರೀ ಹರಿಯ ದಾಸರಾದವರ ಮಹಿಮೆಯೇ ಇಂತಿರುವಾಗ,

ಸರ್ವನಿಯಾಮಕನೂ, ಸರ್ವತಂತ್ರ ಸ್ವತಂತ್ರನೂ, ಪೂರ್ಣಾನಂದಗುಣ ಸ್ವರೂಪನೂ ಆದ ಶ್ರೀಪರಮಾತ್ಮನ ವಿಷಯದಲ್ಲಿ ಹೇಳುವುದಿನ್ನೇನಿದೆ ? ಮೂಲ ಪ್ರಕೃತಿಗೆ ಅಭಿಮಾನಿಗಳು ಶ್ರೀ ಲಕ್ಷ್ಮೀದೇವಿಯರು. ಅಂತಹ ಲಕ್ಷ್ಮೀದೇವಿಯರಿಗೆ ಪತಿಯಾದ ರಮಾವಲ್ಲಭನು ಸ್ವರಮನು, ಆಪ್ತಕಾಮನು, ಪರಾಪೇಕ್ಷರಹಿತನು. ಚೇತನರಲ್ಲಿ ತಾನೇ ಕರ್ಮಸಾಕ್ಷಿಯಾಗಿದ್ದು, ಪುಣ್ಯ ಹಾಗೂ ಪಾಪ ಕರ್ಮಗಳನ್ನು ಅವರವರ ಯೋಗ್ಯತಾನುಸಾರ ಮಾಡಿ ಮಾಡಿಸುತ್ತಿರುವ ಪರಾತ್ಪರ ವಸ್ತುವಾದ ಶ್ರೀ ಪರಮಾತ್ಮನು ಪುಣ್ಯ ಮತ್ತು ಪಾಪ ಕರ್ಮಜನ್ಯವಾದ ಶುಭ ಮತ್ತು ಅಶುಭ ರಸಗಳು ಆ ಚೇತನರ ಉದ್ಧಾರಕ್ಕಾಗಿ ತಾನು ಸ್ವೀಕರಿಸಿ, ತನ್ನ ಪ್ರತಿಬಿಂಬರಾನ ಜೀವರಿಗೆ ಶುಭಾಶುಭಫಲಗಳನ್ನು ಉಣಿಸುವನು. ಭೋಜನಕ್ರಿಯೆಯಿಂದ ಶರೀರದ ವೃದ್ಧಿ (ಉಪಚಯ) ಮತ್ತು ಉಪವಾಸವಿರುವುದರಿಂದ ಶರೀರದ ಕ್ಷೀಣತೆ [ಅಪಚಯ] ಉಂಟಾಗುವುದು ಸ್ವಾಭಾವಿಕ. ಆದರೆ ಇಂತಹ ರಸಸ್ವೀಕಾರ ಕ್ರಿಯೆಯಿಂದ ಜಗದ್ವಿಲಕ್ಷಣನಾದ ಶ್ರೀಪರಮಾತ್ಮನಿಗೆ ದೇಹವೃದ್ಧಿ ಕ್ಷಯಗಳಾವುವೂ ಇಲ್ಲ. ಏಕೆಂದರೆ ತನ್ನ ಸ್ವರೂಪಾನಂದರೂಪವಾದ ಸ್ವಾಖ್ಯರಸಗಳನ್ನು (ಸ್ವರಸ) ಬಿಟ್ಟು, ಅನ್ನವನ್ನು ಸ್ವೀಕರಿಸುವುದಿಲ್ಲ. ಪ್ರಾಕೃತವಸ್ತುಗತ ರಸಗಳಲ್ಲಿ ರಸಪದವಾಚ್ಯನಾಗಿ ಶ್ರೀ ಪರಮಾತ್ಮನು ತನ್ನದೇ ಆದ ಭಗವದ್ರೂಪಗಳನ್ನು ಇಟ್ಟಿರುತ್ತಾನೆ. ಸ್ವಾಭಿನ್ನವಾದ ಆಯಾಯಾ ರೂಪಗಳಲ್ಲಿ ತಾನೇ ಸ್ವರಮಣನಾಗಿ ಕ್ರೀಡಿಸುತ್ತಾನೆ. ಹೀಗೆ ಪದಾರ್ಥಗತ ರಸಾಂತರ್ಗತ ಭಗವದ್ರೂಪಕ್ಕೂ ಮತ್ತು ಜೀವಸ್ಥಿತ ಬಿಂಬರೂಪಕ್ಕೂ ಐಕ್ಯಚಿಂತನೆ ಮಾಡುವುದೇ, ಶ್ರೀಹರಿಗೆ ಆ ಪದಾರ್ಥವನ್ನು ನಿವೇದಿಸುವುದು ಎಂದು ಅನುಸಂಧಾನ. ಬಿಂಬರೂಪಿಯಾದ ಶ್ರೀಪರಮಾತ್ಮನು ರಸಗತ ಸ್ವಾಖ್ಯ ಭಗವದ್ರೂಪಗಳಲ್ಲಿ ಕ್ರೀಡಿಸುವುದರಿಂದ; ಅಧಿಷ್ಠಾನಭೂತವಾದ ಆ ರಸಗಳ ಅನುಭವ ಪ್ರತಿಬಿಂಬನಾದ ಜೀವನಿಗೆ ಉಂಟಾಗುವುದು. ಇಲ್ಲಿ ವಸ್ತುಗತರಸ ಜಡ ಪದಾರ್ಥ. ಚೇತನ ಜೀವ. ಪರಮಚೇತನ ಶ್ರೀ ಪರಮಾತ್ಮ. ಹೀಗೆ ಅನ್ಯೋನ್ಯ ಸಂಬಂಧವನ್ನು ಬಿಂಬಕ್ರಿಯಾದ್ವಾರ ತಿಳಿಯತಕ್ಕದ್ದು ॥ ೨೮ ॥

# ಪದ್ಯ (೨೯)

**ಮೂಲ :-**

**ಈಪರಿಯಲಚ್ಯುತನ ತತ್ತ |**
**ದ್ರೂಪ ತನ್ನಾಮಗಳ ಸಲೆ ನಾ |**
**ನಾಪದಾರ್ಥದಿ ನೆನೆನೆನೆದು ಭುಂಜಿಸುತಲಿರು ವಿಷಯ ||**
**ಪ್ರಾಪಕ ಸ್ಥಾಪಕ ನಿಯಾಮಕ |**
**ವ್ಯಾಪಕನು ಎಂದರಿದು ನೀ ನಿ**
**ರ್ಲೇಪನಾಗಿರು ಪುಣ್ಯಪಾಪಗಳನರ್ಪಿಸವನಡಿಗೆ || ೨೯ ||**

**ಅವತರಣಿಕೆ :-**

ಪೂರ್ವೋಕ್ತ ಪ್ರಕಾರ ನಾಶರಹಿತನಾದ ಅಚ್ಯುತನಾಮಕ ಶ್ರೀ ಪರಮಾತ್ಮನ ಸಮಸ್ತ ಭೋಜನಯೋಗ್ಯವಸ್ತುಗತ ತದ್ರೂಪ, ತನ್ನಾಮಕನ ಭಗವದ್ರೂಪಗಳನ್ನು ಜ್ಞಾನಾನುಸಂಧಾನಪೂರ್ವಕವಾಗಿ ಚಿಂತಿಸುತ್ತಾ, ಸರ್ವಾಂತರ್ಯಾಮಿಯಾದ ಶ್ರೀಹರಿಯೇ ಪ್ರಾಪಕನು, ಸ್ಥಾಪಕನು, ನಿಯಾಮಕನು ಮತ್ತು ಸರ್ವತ್ರ ವ್ಯಾಪಕನೆಂದು ತಿಳಿದು, ಕರ್ಮಗಳಿಂದ ನಿರ್ಲಿಪ್ತನಾಗಿ, ಶುಭಾಶುಭರೂಪವಾದ ಪುಣ್ಯಪಾಪಗಳೆಂಬ ದ್ವಂದ್ವಕರ್ಮಗಳನ್ನು ಶ್ರೀಪರಮಾತ್ಮನ ಪಾದ ಪದ್ಮಂಗಳಿಗೆ ಅರ್ಪಿಸು ಎಂದು ಹೇಳುತ್ತಾರೆ-**ಈಪರಿಯ ಲಚ್ಯುತನ"**- ಎಂಬ ಪ್ರಸ್ತುತ ಸಂಧಿಗತ ಈ ೨೯ನೆಯ ಪದ್ಯದಿಂದ || ೨೯ ||

**ಪ್ರತಿಪದಾರ್ಥ:—**

**ಈಪರಿಯಲಿ**=ಪೂರ್ವೋಕ್ತಪ್ರಕಾರ **ಅಚ್ಯುತನ**=ನಾಶರಹಿತನಾದ ಶ್ರೀಪರಮಾತ್ಮನ **ತತ್ತದ್ರೂಪ**=ಭೋಜನ ಯೋಗ್ಯವಾದ ಪದಾರ್ಥಗಳಲ್ಲಿ

ಅವುಗಳಂತೆಯೇ ವಿದ್ಯಮಾನವಾಗಿರುವ ರೂಪಗಳನ್ನು **ತನ್ನಾಮ**=ಆಯಾ ಯಾ ವಸ್ತುಗಳ ಹೆಸರಿನಿಂದಲೇ ವಾಚ್ಯನಾಗಿದ್ದು **ಸಲಿ**=ಯುಕ್ತನಾಗಿ [ಸಹಿತ ನಾಗಿದ್ದು] **ನಾನಾ ಪದಾರ್ಥದಿ**=ಭೋಜನ ಯೋಗ್ಯವಾದ ವಿವಿಧ ಭಕ್ಷ್ಯ ಭೋಜ್ಯಾದಿಪದಾರ್ಥಗಳಲ್ಲಿ **ನೆನೆನೆನೆದು**=ಆಯಾಯಾವಸ್ತುಗತ ಭಗವದ್ರೂ ಗಳನ್ನು ಬಾರಿಬಾರಿಗೂ ಸ್ಮರಣೆಮಾಡುತ್ತಾ **ವಿಷಯ**= ವಿಷಯ ಸುಖಾದಿ ಗಳನ್ನು (ಭೋಜನಕ್ಕೆ ವಿಷಯಗಳಾದ ದ್ರವ್ಯಗಳನ್ನು) **ಭುಂಜಿಸುತಲಿರು**= ಭೋಜನ ಮಾಡುತ್ತಾ ಇರು. **ಪ್ರಾಪಕ**=ಜೀವರಿಗೆ ಅನ್ನಾದಿ ಆಹಾರ ಪದಾರ್ಥಗಳನ್ನು ಒದಗಿಸುವವನೂ (ಹೊಂದಿಸುವವನೂ) **ಸ್ಥಾಪಕ**= ಜೀವರನ್ನು ಲಿಂಗ ಭಂಗಾ ನಂತರ ಅವರವರ ಸ್ಥಾನಗಳಲ್ಲಿ ಇಲ್ಲಿಸುವವನೂ **ನಿಯಾಮಕ**=ನಿಯಂತ್ರಣ ಮಾಡತಕ್ಕ ಈಶ ನಾಮಾಖ್ಯನೂ **ವ್ಯಾಪಕನು** =ಸರ್ವತ್ರ ವ್ಯಾಪ್ತನೂ ಆದ **ಎಂದರಿತು**=ಶ್ರೀ ಪರಮಾತ್ಮನೇ ಎಂದು ಜ್ಞಾನಪೂರ್ವಕ ತಿಳಿದು **ನೀ**=ನೀನು (ಜೀವರನ್ನು ಕುರಿತು ಸಂಭೋಧನೆ) **ನಿರ್ಲೇಪನಾಗಿರು**=ಸಂಸಾರದಲ್ಲಿ ನೀರಿನಲ್ಲಿರುವ ಪದ್ಮ ಪತ್ರದಂತೆ ನಿರ್ಲಿಪ್ತ ನಾಗಿರು **ಪುಣ್ಯಪಾಪಗಳನು**=ಸತ್ಕರ್ಮ ಹಾಗೂ ದುಷ್ಕರ್ಮಗಳೆಂಬ ದ್ವಂದ್ವ ಕರ್ಮ ಜನ್ಯವಾದ ಪುಣ್ಯ ಮತ್ತು ಪಾಪ ಫಲಗಳನ್ನು **ಅವನ ಅಡಿಗೆ**= ಸರ್ವಕರ್ಮಪ್ರೇರಕನಾದ ಬಿಂಬರೂಪೀ ಶ್ರೀ ಹರಿಯ ಪಾದಾರವಿಂದಗಳಿಗೆ **ಅರ್ಪಿಸು**=ಸಮರ್ಪಿಸುವವನಾಗು (ಸರ್ವಕರ್ಮ ಸಮರ್ಪಣೆ ಮಾಡು) ॥೨೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಈ ಪೂರ್ವೋಕ್ತ ಪ್ರಕಾರದಲ್ಲಿ ಚ್ಯುತಿರಹಿತನಾದ ಎಂದರೆ, ಜೀವನ್ನ ಬಿಟ್ಟು ದೂರನಾಗದೇ ಇರುವ ಬಿಂಬರೂಪಿ ಪರಮಾತ್ಮನ, ಭೋಜನೋಪ ಯೋಗ್ಯವಾದ ದ್ರವ್ಯಾಧಿಷ್ಠಾನಗಳಲ್ಲಿ ಆಯಾ ಪದಾರ್ಥಗಳ ಆಕಾರದಂತೆ

ರೂಪಗಳಿಂದಲೂ ಸಹಿತವಾಗಿರತಕ್ಕ (ಸಲೆ) ಆಯಾಯಾ ಪದಾರ್ಥಗಳು ದಾವ ನಾಮದಿಂದ ಕರಿಸತದೋ ಆಯಾ ನಾಮಗಳಿಂದಲೂ ಸಹಿತನಾಗಿ ಇರತಕ್ಕ ಅಥವಾ ಮೊತ್ತವಾಗಿ ಹೇಳಿದ ಶ್ರೀಪರಮಾತ್ಮನ ರೂಪಗಳನ್ನ ಬಾರಿಬಾರಿಗೂ ಸ್ಮರಣೆಮಾಡುತ್ತಾ, ಭೋಜನಕ್ಕೆ ವಿಷಯಗಳಾದ ದ್ರವ್ಯಗಳ ಭೋಜನ ಮಾಡತಾ ಪರಮಾತ್ಮನಲ್ಲೇ ಮನಸ್ಸು ಇಟ್ಟವನಾಗಿ ಇರೋವನಾಗು. ಶ್ರೀಪರಮಾತ್ಮ ಎಂಥಾವನೆಂದರೆ, ರಾಶಿಯಿಂದ ಸೃಷ್ಟಿಗೆ ತರತಕ್ಕ ಕಾರಣನು (ಪ್ರಾಪಕ) ಇನ್ನೊಂದು ಅರ್ಥ ಏನೆಂದರೆ, ಇವನೇ ಅನ್ನಾದಿಗಳನ್ನ ಕಾಲಕಾಲಕ್ಕೆ ಒದಗಿ ಸೋವ ಎಂತ ಅರ್ಥ. ಅವರವರ ಸ್ವರೂಪಯೋಗ್ಯತಾನುಸಾರ ಸಾಧನೆ ಮಾಡಿಸೋ ವಿಷಯದಲ್ಲಿ ಇಂದ್ರಿಯಗಳ ದ್ವಾರಾ ನಿಯಾಮಕನಾಗಿ ಸಾಧನೆ ಪೂರ್ತಿಮಾಡಿಸುವನು (ನಿಯಾಮಕ). ಇವನೇ ಲಿಂಗಭಂಗಾನಂತರ ತ್ರಿವಿಧ ಜೀವರನ್ನ ತ್ರಿವಿಧಸ್ಥಾನದಲ್ಲಿ ಸ್ಥಾಪನ ಮಾಡತಕ್ಕವನು. (ಸ್ಥಾಪಕ) ಇನ್ನೊಂದು ಅರ್ಥ- ಭೋಜನಮಾಡಿದ ದ್ರವ್ಯಗಳನ್ನು ಉದರ ಸೇರಿಸಿ ತದ್ರಸಗಳ ಸರ್ವಾಂಗಕ್ಕೆ ಉಪಚಯರೂಪವಾದ ಸ್ಥಾನದಲ್ಲಿ ಸ್ಥಾಪನ ಮಾಡತಕ್ಕವನು. ಮುಕ್ತಾಮುಕ್ತರ ಸರ್ವರಲ್ಲೂ ವ್ಯಾಪ್ತನಾಗಿ ರತಕ್ಕವನು (ವ್ಯಾಪಕ) ಎಂತ ಒಂದು ಅರ್ಥ. ಇನ್ನೊಂದು ಅರ್ಥ-ತನ್ನ ಶರೀರದಲ್ಲಿ ಇತರರಾದವರ ವ್ಯಾಪಕತ್ವ ಇಲ್ಲದೇ ತಾನು ಪೂರ್ಣನಾಗಿ ವ್ಯಾಪ್ತನಾಗಿ ಇರತಕ್ಕವನು, ಎಂತ- ನೀನು ತಿಳಿದವನಾಗಿ, ನೀನು ಸಂಸಾರದಲ್ಲಿ ಪದ್ಮಪತ್ರಗತ ಜಲ ಬಿಂದುಗಳೋಪಾದಿಯಲಿ ದಾವದಕ್ಕೂ ಸಂಬಂಧ ಪಡದೇ ಇರೋವನಾಗು (ನಿರ್ಲೇಪನಾಗಿರು). ಇನ್ನು ನೀನು ಮಾಡತಕ್ಕ ಸತ್ಕಾರ್ಯಗಳೇನು, ಹಾಗೆಯೇ ಮಾಡುವ ಪಾಪಕಾರ್ಯಗಳೇನು. ಎಲ್ಲವನ್ನೂ ಬಿಂಬರೂಪನಾದ ಶ್ರೀ ಪರಮಾತ್ಮನ ಪಾದಗಳಿಗೆ ಅರ್ಪಿಸೋವನಾಗು ॥೨೯॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ :-

ಮೇಲೆ ಹೇಳಿದ ಪ್ರಕಾರ ನಮ್ಮ ದೇಹದೊಳಗೆ ಅನ್ನಮಯನಾಗಿ ಖಂಡ ರೂಪಿಯಾಗಿಯೂ, ಇದರಂತೆ ಪ್ರಾಣಮಯಾದಿ ರೂಪಗಳಿಂದ ಆಯಾ ನಾಮಗಳಿಂದ ಕೂಡಿ ನಾನಾ ಪದಾರ್ಥಗಳಲ್ಲಿ ಪರಮಾತ್ಮನಿರುವನೆಂದು ತಿಳಿದು,

ಭೋಜನವನ್ನು ಮಾಡುತ್ತಿರು. ಎಲ್ಲೈ ಅಧಿಕಾಯೇ, ವಿಷಯಾದಿ ಭೋಗ ಗಳನ್ನು ಕೊಡಿಸುವವನೂ, ಸ್ಥಿರಪಡಿಸುವವನೂ, ನಿಯಾಮಕನೂ, ವ್ಯಾಪ ಕನೂ ಶ್ರೀ ಪರಮಾತ್ಮನೇ ಆಗಿರುವವನು ಎಂದು ತಿಳಿದು ನೀನು ಮಾಡಿದ ಪುಣ್ಯಪಾಪಾದಿ ಎಲ್ಲಾ ಕರ್ಮಗಳನ್ನೂ ಪರಮಾತ್ಮನಿಗೆ ಸಮರ್ಪಿಸು. ಆಗ ಶ್ರೀ ಪರಮಾತ್ಮನು ನಿನ್ನ ಪಾಪಕರ್ಮಗಳನ್ನು ಸುಟ್ಟು, ಪುಣ್ಯಕ್ಕೆ ಫಲಗಳನ್ನು ಕೊಡುವನು. ನೀನು ಸಕಲವೂ ಪರಮಾತ್ಮನ ಕರ್ತೃವೆಂದು ಭಾವಿಸಿ ನಿರ್ಲೇಪನಾಗಿರು. ಆಗ ನಿನಗೆ ಕರ್ಮ ಲೇಪವಾಗುವುದಿಲ್ಲವೆಂದು ತಾತ್ಪಯದ ॥೨೯॥

(೩) "ಭಾವದರ್ಪಣ ಟೀಕಾ" –ವ್ಯಾಖ್ಯಾನ:—

"ತತ್ತದ್ವಸ್ತುಷು ಸರ್ವೇಷು ತತ್ತದಾಕಾರತಃ ಸ್ಥಿತಃ ॥"

—ಎಂಬ ವಚನಾನುಸಾರ ತತ್ತತ್ಪದಾರ್ಥಗಳಲ್ಲಿ ತದ್ರೂಪ ತನ್ನಾಮದಿಂ. ಇದ್ದಾನೆಂದು ತಿಳಿಯತಕ್ಕದ್ದು. ಪ್ರಾಪಕ-ಎಂದರೆ, ಹೆಚ್ಚಾಗಿ ಹೊಂದುವವ. ಸ್ಥಾಪಕ–ಎಂದರೆ, ಸ್ಥಾಪನ ಮಾಡುವವ. ನಿಯಾಮಕ–ಎಂದರೆ, ಆಜ್ಞಾ ಮಾಡುವವ, ವ್ಯಾಪಕ–ಎಂದರೆ, ಸರ್ವವಸ್ತುಗಳಲ್ಲಿ ವ್ಯಾಪಿಸಿರುವವನೆಂದರ್ಥ, ಹಿಂಗೆ ತಿಳಿದು ಶ್ರೀಸರ್ವಜ್ಞರ ಉಕ್ತ ರೀತ್ಯಾ ಪಾಪಪುಣ್ಯ ಅರ್ಪಣಮಾಡು ಎಂದು ಹೇಳುತ್ತಾರೆ.

"ಪುಣ್ಯಪಾಪಾದಿಕಂ ವಿಷ್ಣೋರರ್ಪಣಂ ಕುರು ಸರ್ವದಾ"

–ಎಂಬ ಬೃಹನ್ನಾರದೀಯ ವಚನದಂತೆ, ಇದಲ್ಲದೆ–

"ಗೃಹ್ಣಾತಿಹಿ ಹರಿಃ ಪುಣ್ಯಂ ಪಾಪಂ ಭಸ್ಮೀಕರೋತಿಚ ॥<br>ಸ್ವಸ್ಯಚ ದ್ರೋಹಿಣಃ ಕಿಂಚಿತ್ಪಾಪಾಶಂ ಪ್ರದದಾತಿ ಸಃ ॥"

ಅಂದರೆ, ಪುಣ್ಯಪಾಪ ಶ್ರೀ ಹರಿಯೇ ಸ್ವೀಕರಿಸಿ ಅನಂತರ ಕೆಲವು ದಹನಮಾಡಿ, ಕೆಲವು ಪಾಪ ದೈತ್ಯರಿಗೆ ಕೊಡುತ್ತಾನೆಂದು ವಿಷ್ಣುರಹಸ್ಯದ ಉಕ್ತಿ ಅದೆ.

**ಇದಲ್ಲದೆ ಸುಳಾದಿ ಮಾತು– "ಕಟ್ಟಕಡೆಗೆ ಮುಕ್ತಿಯೋಗ್ಯಗೆ ಜ್ಞಾನಇದೇ ಪುಟ್ಟದಲ್ಲದೆ"**

ಅಂದರೆ ಸರ್ವಸಮರ್ಪಣಜ್ಞಾನ ಎಂದರ್ಥ.

**"ಬಿಂಬ ದರ್ಶನವಾಗದು ಎಷ್ಟೇ ಮಾನವಾರಿಗೆ ವರದೋರದು ಕೇವಲ ।**
**ಗುಟ್ಟು ತಿಳಿಪದದರಿಂದ ಯೋನಾಹುದೋ ॥**
**ದಿಟ್ಟ ದೈವಂಗಳರಸ ವಿಜಯವಿಠ್ಠಲ ಜಗಪಟ್ಟಗೆ ಪಾಪಪುಣ್ಯ ಲೇಪ ವೇನೋ**

ಎಂಬದಾಗಿ ವಿಜಯದಾಸ ರಾಜರು ಸರ್ವಸಮರ್ಪಣ ಸುಳಾದಿಯಲ್ಲಿ ನಿಸ್ಸಂಶಯದಿಂದ ಪುಣ್ಯಪಾಪ ಶ್ರೀ ಹರಿಗೆ ಅರ್ಪಣಮಾಡೆಂದು ಹೇಳಿದ ಅರ್ಥವನ್ನು ಪ್ರಮಾಣಗಳ ತಾತ್ಪರ್ಯ ಮನಸ್ಸಿನಲ್ಲಿಟ್ಟು ಜಗನ್ನಾಥದಾಸಾರ್ಯರು ಧೃಡದಿಂದ ಪುಣ್ಯಪಾಪಗಳನರ್ಗಿಸವನಡಿಗೆಂದು ಹೇಳಿರೋ ಕಾರಣ ಸುಜ್ಞರು ತಿಳಿದು ಅರ್ಪಣಮಾಡತಕ್ಕದ್ದು ॥೨೯॥

**(೪) ಗುರುಹೃದಯ ಪ್ರಕಾಶಿಕೆ- ವ್ಯಾಖ್ಯಾನ:—**

ಈಪರಿ, ಎಂದರೆ, ಹಿಂದೆ ಹೇಳಿದ ಪ್ರಕಾರ, ನಾಶರಹಿತನಾದ ಅಚ್ಯುತನ ಸಲೆ.- ಎಂದರೆ, ಒಟ್ಟಾಗಿ ಹೇಳಿದ, ತದ್ರೂಪ ತನ್ನಾಮಗಳ–ಎಂದರೆ, ವಾಸುದೇವನು ಅನ್ನದೊಳು–ಎಂಬುದೇ ಮೊದಲಾದ ವಾಸುದೇವಾದಿ ನಾಮ ರೂಪಗಳನ್ನು, ಅನ್ನ ಮೊದಲಾದ ಭೋಜನ ಪದಾರ್ಥಗಳಲ್ಲಿ, ಪುನಃ ಪುನ: ಸ್ಮರಿಸುತ್ತಾ, ರಸಮೊಲಾದವನ್ನು ಸ್ವೀಕರಿಸುವದು. ಪ್ರಾಪಕ-ಎಂದರೆ, ಅನ್ನಾದಿಗನ್ನು ಕಾಲಕಾಲಕ್ಕೆ ಒದಗಿಸುವವನು. ಸ್ಥಾಪಕ–ಎಂದರೆ, ಉಂಡದ್ದನ್ನು ಹೊಟ್ಟೆಯಲ್ಲಿ ಇಟ್ಟು ಕೊಳ್ಳುವ ಹಾಗೆ ಮಾಡುವನು. ನಿಯಾಮಕ–ಎಂದರೆ ಆಜ್ಞಾಪಕ, ಗೊತ್ತುಗಾರನು. ವ್ಯಾಪಕ–ಎಂದರೆ, ಸರ್ವತ್ರ ತುಂಬಿರುವ

ವನು–ಎಂದು ದೇವರನ್ನು ತಿಳಿದು, ಪುಣ್ಯ ಪಾಪಗಳನ್ನು ಅವನಡಿಗೆ ಅರ್ಪಿಸು -ಎಂದರೆ, ದೇವರೇ ಸ್ವತಂತ್ರ ಕರ್ತ, ಜೀವನು ತದಧೀನ ಕರ್ತನಾದ್ದರಿಂದ, ಸರ್ವಕರ್ಮವೂ ಅವನ ಪೂಜೆಯಾಗಲೆಂದು, ಅವನ ಪಾದಕ್ಕೆ ಒಪ್ಪಿಸಿ, ಉಭಯ ಕರ್ಮಫಲ ಬಿಡಿಸಿ, ನನ್ನನ್ನು ಉದ್ಧರಿಸೆಂದು ಪ್ರಾರ್ಥಿಸುವುದೇ ಸಮರ್ಪಣೆ ಎಂದರ್ಥ. ಹೀಗೆ ಕರ್ತೃತ್ವಾದ್ಯಭಿಮಾನ ಬಿಟ್ಟು ನಿರ್ಲೇಪನಾಗೆಂದು ತಾತ್ಪರ್ಯ ಇದರಿಂದ-

**"ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮಚಾಖಿಲಂ॥"**
-ಎಂಬ ಮಂತ್ರಾರ್ಥವು ಹೇಳಲ್ಪಟ್ಟಿತು ॥೨೯॥

**ಸರ್ವವ್ಯಾಖ್ಯಾನಸಾರ ಸಂಗ್ರಹ :–**

ಹಿಂದಿನ ಪದ್ಯಗಳಲ್ಲಿ ವಿವರಿಸಿರುವ ನಾನಾವಿಧ ಭೋಜನ ಯೋಗ್ಯ ಪದಾರ್ಥಗತ ಮತ್ತು ಭೋಕ್ತೃಗತ ಭಗವದ್ರೂಪ ವಿಶೇಷಗಳನ್ನೂ, ತದಾಕಾರ, ತದ್ವಾಚ್ಯ, ತನ್ನಾಮಕ ಗುಣ ರೂಪ ಕ್ರಿಯಾ ವಿಶೇಷಗಳನ್ನೂ ಪದೇ ಪದೇ ಸ್ಮರಣೆಮಾಡುತ್ತಾ, ಇಂದ್ರಿಯಗಳಿಗೆ ವಿಷಯಗಳಾದ ಸಕಲ ವಿಹಿತವಾದ ಭೋಗ ಭಾಗ್ಯಂಗಳನ್ನು ಅನುಭವಿಸುತ್ತಾ ಸಂತೋಷದಿಂದಿರು ಎಂದು ಹೇಳುತ್ತಾರೆ ಶ್ರೀ ದಾಸರಾಯರು. ಶ್ರೀ ಪರಮಾತ್ಮನು ನಾಶರಹಿತನು. ಆದಿ ಮಧ್ಯಾಂತರಹಿತನು. ಜನನ ಮರಣ ವಿದೂರನು. ಇಂತಹ ಅಚ್ಯುತನ ಖಂಡಾಖಂಡರೂಪಗಳನ್ನು ಅನವರತವೂ ಚಿಂತಿಸುತ್ತಾ, ಭೋಗ ಯೋಗ್ಯ ಪದಾರ್ಥಗಳನ್ನು ಸ್ವೀಕರಿಸುತ್ತಿದ್ದರೆ, ತತ್ಕ್ರಿಯಾ ಸಂಬಂಧವಾದ ಪಾಪ ಫಲಗಳಿಂದ ಜೀವರನ್ನು ದೂರರನ್ನಾಗಿ ಮಾಡಿ, ಪುಣ್ಯ ಫಲಗಳನ್ನು ಮಾತ್ರ, ಅನುಭವಕ್ಕೆ ತಂದು ಕೊಟ್ಟು, ಆ ಜೀವರನ್ನು ಪುಣ್ಯ ಭಾಜರನ್ನಾಗಿ ಮಾಡಿ, ತದ್ವಾರಾ ಸದ್ಗತಿಯನ್ನು ಕೊಡುವನು.

ಅಂತಹ ಅಚ್ಯುತ ರೂಪೀ ಪರಮಾತ್ಮನು ಜೀವರನ್ನು ಅಸ್ಪಷ್ಟರಾಶಿಯಿಂದ ಸೃಷ್ಟಿಗೆ ತರುವ ವ್ಯಂಖ್ಯ ಕಾರಣನು. ಇದರಿಂದ ಅವನಿಗೆ ಪ್ರಾಪಕ

ಎಂದು ಹೆಸರು. ಭೋಜನ ಯೋಗ್ಯವಾದ ಅನ್ನಾದಿ ಆಹಾರ ಪದಾರ್ಥಗ ಗಳನ್ನು ಜೀವರಿಗೆ ಕಾಲ ಕಾಲಕ್ಕೆ ಒದಗಿಸುವನು. ಇದರಿಂದ **ಪ್ರಾಪಕ** ನೆನಿಸುವನು.

ಭೋಜನ ಮಾಡಿದ ಪದಾರ್ಥಗಳನ್ನು ಉದರಕ್ಕೆ ಸೇರಿಸಿ, ಜೀರ್ಣ ಮಾಡಿ, ರಸ ವಿಭಾಗಮಾಡುವುದರಿಂದ **ಸ್ಥಾಪಕ** ನೆನಿಸುವನು. ಲಿಂಗ ಭಂಗಾನಂತರ ತ್ರಿವಿಧ ಜೀವರಾಶಿಯನ್ನು ಅವರವರ ಸ್ವರೂಪ ಯೋಗ್ಯತೆಗ ನುಸಾರವಾಗಿ ತ್ರಿವಿಧಗತಿಗಳನ್ನು ಕೊಡ ತಕ್ಕವನಾದ್ದರಿಂದ **ಸ್ಥಾಪಕನು.**

ಜಗತ್ತಿನ ಸಮಸ್ತ ವ್ಯಾಪಾರಗಳನ್ನೂ ತನ್ನ ಅಧೀನದಲ್ಲಿ ಇಟ್ಟುಕೊಂಡು ನಿಯಂತ್ರಣ ಮಾಡುತ್ತಿರುವುದರಿಂದ **ನಿಯಾಮಕ** ನೆನಿಸುವನು. ನಿಯಾಮಕ ನೆಂದರೆ ಪ್ರಭು ಅಥವಾ ಈಶನೆಂದರ್ಥ. ಸಮಸ್ತವೂ ಭಗವದಧೀನವಾದದ್ದು. ಶ್ರೀ ಪರಮಾತ್ಮನೊಬ್ಬನೇ ಸರ್ವ ತಂತ್ರ ಸ್ವತಂತ್ರನು. ಅವನಿಂದ ಭಿನ್ನವಾದ ಎಲ್ಲಾ ಜಡವರ್ಗ ಹಾಗೂ ಚೇತನವರ್ಗ ಅವನಿಂದ ನಿಯಮ್ಯರು. ಜೀವರ ಇಂದ್ರಿಯಗಳಲ್ಲಿ ತಾನು ಸ್ಥಿತನಾಗಿದ್ದು, ಆಯಾಯಾ ಇಂದ್ರಿಯಗಳ ದ್ವಾರಾ, ಜೀವರ ಸಾಧನರೂಪವಾದ ಕರ್ಮ ವಿಶೇಷಗಳನ್ನು ಮಾಡಿ, ಮಾಡಿಸುತ್ತಿರುವು ದರಿಂದ **ನಿಯಾಮಕನು.**

ಅಣು ರೇಣು ತೃಣ ಕಾಷ್ಠಾದಿ ವಸ್ತುಗಳಲ್ಲಿ, ಸರ್ವ ಚೇತನರಲ್ಲಿ, ಪರಿ ಪೂರ್ಣನಾಗಿ ಸರ್ವತ್ರ ವ್ಯಾಪಿಸಿರುವುದರಿಂದ **ವ್ಯಾಪಕನು.** ಜಗತ್ತಿನಲ್ಲಿ ವ್ಯಾಪ್ತನಾಗಿ ಸರ್ವತ್ರ ಇದ್ದರೂ, ಜೀವ ಜಡಾತ್ಮಕವಾದ ಜಗತ್ತಿನಿಂದ ಅತ್ಯಂತ ಭಿನ್ನನಾಗಿದ್ದಾನೆ.

ಇಂತಹ ಅಗಮ್ಯ ಮಹಿಮಾ ಸಂಪನ್ನನಾದ, ಪ್ರಾಪಕ, ಸ್ಥಾಪಕ, ನಿಯಾಮಕ, ಮತ್ತು ವ್ಯಾಪಕನಾದ ಶ್ರೀ ಪರಮಾತ್ಮನು ಸಕಲಕ್ಕೂ ಕಾರಣನು ಎಂದು ಜ್ಞಾನಾನುಸಂಧಾನದಿಂದ ತಿಳಿದು, ಕರ್ಮ ಜನ್ಯವಾದ ಪುಣ್ಯ ಪಾಪ ಫಲಗಳನ್ನು ಆತನ ಪಾದಾರವಿಂದಗಳಿಗೆ ನೈಚ್ಯಾನುಸಂಧಾನ ಕ್ರಮದಿಂದ ಸಮ

ರ್ಪಿಸುತ್ತಿರಬೇಕು. ಇದರಿಂದ ಆ ಕರ್ಮಗಳ ಲೇಪನವು ಜೀವನಿಗೆ ಆಗದಂತೆ ಶ್ರೀಶನು ರಕ್ಷಿಸಿ, ಪರಮಪುರುಷಾರ್ಥರೂಪವಾದ ಮೋಕ್ಷಭಾಗ್ಯವನ್ನು ಅನು ಗ್ರಹಿಸುವನು ಎಂದು ತಾತ್ಪರ್ಯ ॥ ೨೯ ॥

## ಪದ್ಯ (೩೦)

**ಮೂಲ :-**

ಐದುಲಕ್ಷಂಭತ್ತರೊಂಭ ।
ತ್ತಾದ ಸಾವಿರದೇಳುನೂರರ ।
ಐದು ರೂಪವ ಧರಿಸಿ ಭೋಕ್ತೃಗ ಭೋಜ್ಯನೆಂದೆನಿಸಿ ॥
ಶ್ರೀಧರಾ ದುರ್ಗಾರಮಣ ಪಾ ।
ದಾದಿ ಶಿರಪರ್ಯಂತ ವ್ಯಾಪಿಸಿ ।
ಕಾದುಕೊಂಡಿಹ ಸಂತತ ಜಗನ್ನಾಥವಿಠ್ಠಲನು ॥ ೩೦ ॥

**ಅವತರಿಣಿಕೆ :-**

ದೇಹಗತ ಪಂಚಕೋಶಗಳಲ್ಲಿ ಅನ್ನಮಯಾದಿ ಕೋಶಗತ ರೂಪ ಗಳಿಂದಲೂ ಮತ್ತು ಕೋಶನಾಮಕ ರೂಪಗಳಿಂದಲೂ ಒಟ್ಟು ಐದು ಲಕ್ಷದ ಎಂಭತ್ತೊಂಭತ್ತು ಸಾವಿರದ ಏಳನೂರು ಐದು ರೂಪಾಹ್ವಯನಾಗಿ ವಿರಾಜಿ ಸುತ್ತಾ, ಭೋಜನಯೋಗ್ಯ ವಸ್ತುಗಳಲ್ಲಿಯೂ ಮತ್ತು ಭೋಜನಮಾಡುವ ಭೋಕ್ತೃ ಗಳಲ್ಲಿಯೂ ಇದ್ದು, ಸಕಲ ಚೇತನರನ್ನೂ ಸಂರಕ್ಷಿಸುತ್ತಿರುವ ಶ್ರೀ ಭೂದುರ್ಗಾರಮಣನಾದ ದಾಸರಾಯರ ಬಿಂಬಮೂರ್ತೀ ಶ್ರೀ ಜಗನ್ನಾಥ ವಿಠ್ಠಲನಾಮಕ ಶ್ರೀ ಪರಮಾತ್ಮನು ಈ ದೇಹದಲ್ಲಿ ಪಾದದಿಂದ ಆರಂಭಿಸಿ ಶಿರಃಪರ್ಯಂತ ಸರ್ವದೇಹವನ್ನೂ ವ್ಯಾಪಿಸಿಕೊಂಡಿದ್ದಾನೆಂದು ಪ್ರಸಕ್ತ

ಸಂಧಿಗತ ಈ ೩೦ನೆಯ ಅಂತ್ಯ ಪದ್ಯದಿಂದ ಈ ಸಂಧಿಯ ವಿಷಯವನ್ನು ಉಪಸಂಹಾರಮಾಡುತ್ತಾರೆ- "ಐದುಲಕ್ಷದ"-ಎಂಬುದಾಗಿ ॥ ೩೦ ॥

**ಪ್ರತಿಪದಾರ್ಥ :-**

**ಐದುಲಕ್ಷದ**=೫,೦೦,೦೦೦ **ಎಂಭತ್ತರೊಂಭತ್ತಾದ ಸಾವಿರದ**=೮೯,೦೦೦ ಏಳುನೂರರ **ಐದು**=೭೦೫, ಅಂದರೆ ೫,೮೯,೭೦೫ (ಐದ ಲಕ್ಷದ ಎಂಭತ್ತೊಂಭತ್ತು ಸಾವಿರದ ಏಳನೂರು ಐದು) ಈ ಸಂಖ್ಯಾಕವಾದ **ರೂಪವ ಧರಿಸಿ**=ರೂಪಗಳನ್ನು ಸ್ವೀಕರಿಸಿದವನಾಗಿ **ಭೋಕ್ತೃಗ**=ಭೋಜನ ಮಾಡುವವರಲ್ಲಿಯೂ **ಭೋಜ್ಯ**=ಭೋಜನಯೋಗ್ಯವಾದ ಪದಾರ್ಥಗಳಲ್ಲಿ ಅನ್ನಮಯಾದಿರೂಪಗಳಿಂದಲೂ **ಎಂದೆನಿಸಿ**=ಈ ರೀತಿಯಲ್ಲಿ ಕರೆಸುವವನಾಗಿ **ಶ್ರೀ**=ಶ್ರೀದೇವಿಯರ ಪತಿ ವಿಷ್ಣು **ಭೂ**=ಭೂದೇವಿಯರ ಪತಿ ಬ್ರಹ್ಮರೂಪೀ ಪರಮಾತ್ಮ **ದುರ್ಗಾ**=ದುರ್ಗಾಪತಿ ರುದ್ರರೂಪೀ ಪರಮಾತ್ಮ **ರಮಣ**=ಶ್ರೀ ಭೂ ದುರ್ಗಾ ರೂಪಗಳಿಂದ ವಿರಾಜಮಾನರಾದ ಶ್ರೀ ಲಕ್ಷ್ಮೀದೇವಿಯರ (ತ್ರಿಗುಣಾಭಿಮಾನಿಗಳು) ಪತಿಯಾದ ಶ್ರೀಪರಮಾತ್ಮನು **ಪಾದಾದಿ**=ಈ ದೇಹದಲ್ಲಿ ಪಾದದಿಂದ ಪ್ರಾರಂಭಿಸಿ **ಶಿರಃಪರ್ಯಂತ**=ತಲೆಯವರೆಗೂ **ವ್ಯಾಪಿಸಿ**=ದೇಹಗತ ಸರ್ವಾಂಗಗಳಲ್ಲಿ ವ್ಯಾಪಿಸಿಕೊಂಡು **ಜಗನ್ನಾಥವಿಠಲನು**=ಶ್ರೀ ಜಗನ್ನಾಥದಾಸವರ್ಯರ ಅಂಕಿತನಾಮರೂಪೀ ಶ್ರೀ ಜಗನ್ನಾಥವಿಠ್ಠಲನು **ಸಂತತ**=ನಿರಂತರದಲ್ಲಿಯೂ (ಸರ್ವಕಾಲದಲ್ಲೂ) **ಕಾದುಕೊಂಡಿಹ**=ದೇಹಾಂತರ್ಗತನಾಗಿ ಇದ್ದುಕೊಂಡು ಚೇತನರನ್ನು ಸಂರಕ್ಷಿಸುತ್ತಿರುವನು ॥ ೩೦ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಐದು ಲಕ್ಷದ ಎಂಭತ್ತೊಂಭತ್ತು ಸಾವಿರದ ಏಳುನೂರ ಐದು (೫,೮೯, ೭೦೫) ರೂಪಗಳನ್ನು ಧರಿಸಿ, ಅಂದರೆ ಅದರ ವಿವರ :-

| | | |
|---|---|---|
| (೧) | ಅನ್ನಮಯಾದಿ ಕೋಶಗತ ರೂಪಗಳು | =೫, ೮೫, ೪೦೦. |
| (೨) | ಅನ್ನಕೋಶಾದಿ ರೂಪಗಳು | =೪, ೩೦೫. |
| | ಒಟ್ಟು ರೂಪಗಳ ಸಂಖ್ಯೆ | =೫, ೮೯, ೭೦೫. |

ಇಷ್ಟು ರೂಪಗಳನ್ನು ಧರಿಸಿದವನಾಗಿ, ಭೋಕ್ತೃಗಳೊಳಗೆ ಇರತಕ್ಕವ (ಭೋಕ್ತೃಗ), ಭೋಜನಕ್ಕೆ ಯೋಗ್ಯವಾದ ಪದಾರ್ಥದೊಳಗೆ ಇರತಕ್ಕವ (ಭೋಜ್ಯ) ಎಂತ ಕರೆಸಿದವನಾಗಿ, ಶ್ರೀ ದೇವೇರು, ಭೂ ದೇವೇರು, ದುರ್ಗಾ ದೇವೇರು ಇವರು ಮೂರು ಮಂದಿಗೆ ಪತಿಯಾದ (ಶ್ರೀಭೂದುರ್ಗಾರಮಣ) (೧) ಶ್ರೀ ದೇವೇರು ಪತಿ ವಿಷ್ಣು, (೨) ಭೂದೇವೇರ ಪತಿಯಾದ ಬ್ರಹ್ಮರೂಪಿ ಪರಮಾತ್ಮ (೩) ದುರ್ಗಾಪತಿ ರುದ್ರರೂಪಿ ಪರಮಾತ್ಮ. ಈ ಮೂರು ರೂಪಗಳಿಂದ (೧) ಮುಕ್ತಿ ಯೋಗ್ಯರಲ್ಲಿ ವಿಷ್ಣು ರೂಪದಿಂದಲೂ, (೨) ನಿತ್ಯ ಸಂಸಾರಿಗಳಲ್ಲ ಬ್ರಹ್ಮ ರೂಪದಿಂದಲೂ ಮತ್ತು (೩) ತಮೋ ಯೋಗ್ಯರಲ್ಲಿ ರುದ್ರಾದಿ ರೂಪದಿಂದಲೂ, ಪಾದ ಆರಂಭಮಾಡಿ ಶಿರಃ ಪರ್ಯಂತ ವ್ಯಾಪಿಸಿಕೊಂಡು, ದೇಹ ಸಂರಕ್ಷಣಾರ್ಥವಾಗಿ, ದೇಹಾಂತರ್ಗತನಾಗಿ ಕಾದು ಕೊಂಡಿರೋವವನಾಗಿ ಇದ್ದಾನೆ, ನಿರಂತರದಲ್ಲಿಯೂ (ಸಂತತ),

ಜಗತ್ತಿಗೆ ಸ್ವಾಮಿಯಾದ ಪಾಪ ಪರಿಹಾರಕನಾದ ವಿಠ್ಠಲರೂಪೀ ಪರಮಾತ್ಮ (ಜಗನ್ನಾಥ ವಿಠ್ಠಲನು) ಎಂತ ಅರ್ಥ.

ಬ್ರಹ್ಮಾಂಡವೇನು, ತದ್ಗತ ಪದಾರ್ಥಗಳೇನು, ಪಂಚಕೋಶಾತ್ಮಕ ಚತುರ್ವಿಂಶತಿ ತತ್ವಾತ್ಮಕ ಸಂಸೃಷ್ಟಗಳಾದದ್ದು ಆದ್ದರಿಂದ 'ಭೋಜ್ಯವಸ್ತುಗಳಲ್ಲಿ ದೇಹಗತ ರೂಪಗಳೋಪಾದಿಯಲ್ಲಿ ಇದ್ದಾನೆ ಎಂತ ತಾತ್ಪರ್ಯ ||೩೦||

**ಇಂತು ಶ್ರೀ ಮತ್ಸತ್ಯ ಪರಾಯಥತೀರ್ಥ ಕರಕಮಲ ಸಂಜಾತ ಶ್ರೀಮತ್ಸಲಕರ್ಷಣ ತೀರ್ಥವಿರಚಿತಾಯಾಂ ಶ್ರೀಮದ್ಧರಿ ಕಥಾಮೃತಸಾರ ಕನ್ನಡಭಾಷಾ ಟೀಕಾಯಾಂ ಭೋಜನರಸವಿಭಾಗ ಸಂಧಿ ವ್ಯಾಖ್ಯಾನಂ ಸಂಪೂರ್ಣಂ**

॥ಶ್ರೀ ಕೃಷ್ಣಾರ್ಪಣಮಸ್ತು ॥

(೨) **ಭಾವಪ್ರಕಾಶಿಕೆ"—ವ್ಯಾಖ್ಯಾನ:-**

ಶ್ರೀ ಭೂದುರ್ಗಾರಮಣನಾದ, ತಮ್ಮ (ದಾಸರಾಯರ) ಬಿಂಬ ರೂಪಿಯಾದ ಶ್ರೀ ಜಗನ್ನಾಥವಿಠ್ಠಲನು ಅನ್ನಮಯಾದಿ ಖಂಡರೂಪಗಳು ೫, ೮೫, ೪೦೦. ಅನ್ನಾದಿ ಅಖಂಡರೂಪಗಳು ೪೩೦೫. ಒಟ್ಟನಲ್ಲಿ ೫,೮೯, ೭೦೫ ರೂಪಗಳು. ಹೀಗೆ ಭೋಜನ ಮಾಡುವವರಲ್ಲಿ, ಅಂದರೆ, ಪಂಚಪ್ರಾಣಗಳಲ್ಲಿಯೂ, ತತ್ವಾಭಿಮಾನಿ ದೇವತೆಗಳಲ್ಲಿಯೂ, ಜೀವರಲ್ಲಿಯೂ, ಸರ್ವೇಂದ್ರಿಯಗಳಲ್ಲಿಯೂ ವ್ಯಾಪ್ತನಾಗಿರುವನು. ಅಲ್ಲದೆ, ಭೋಜ್ಯಪದಾರ್ಥಗಳಲ್ಲಿ ಒಟ್ಟು ೫, ೮೯, ೭೦೫ ರೂಪಗಳನ್ನು ಧರಿಸಿಕೊಂಡು, ಪ್ರಾಣಿಗಳ ಆಪಾದ ಶಿರ: ಪರ್ಯಂತವಾಗಿ ವ್ಯಾಪಿಸಿಕೊಂಡು, ಸರ್ವದಾ ಪ್ರಾಣಿಗಳನ್ನು ಕಾದುಕೊಂಡಿರುವನು. ಹೀಗೆ ಪರಮಾತ್ಮನನ್ನು ಧ್ಯಾನಿಸಿದರೆ, ನಾವು ನಿರ್ಲಿಪ್ತರಾಗಿ ಪರಮಾತ್ಮನನ್ನು ಹೊಂದಬಹುದೆಂದು ತಾತ್ಪರ್ಯ ॥೩೦॥

ಇಂತು "ಭಾವಪ್ರಕಾಶಿಕೆ"-ಎಂಬ ವ್ಯಾಖ್ಯಾನದಲ್ಲಿ "ಭೋಜನರಸ ವಿಭಾಗ ಸಂಧಿ"- ಎಂಬ ೪ನೆಯ ಸಂಧಿಯ ಟಿಪ್ಪಣಿಯು ಮುಗಿಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

(೩) ಭಾವದರ್ಪಣ ಟೀಕಾ- ವ್ಯಾಖ್ಯಾನ:—

ಪಂಚಕೋಶಗತವಾದ ೫, ೮೫, ೦೦೦ ಭಗವದ್ರೂಪಗಳು ಮತ್ತು ಪಂಚಕೋಶನಾಮಕವಾದ ೪೩೦೫ ಭಗವದ್ರೂಪಗಳು. ಎರಡೂ ಸೇರಿ ಐದುಲಕ್ಷ ಎಂಭತ್ತೊಂಭತ್ತು ಸಾವಿರ ದೇಳನೂರ ಐದು ರೂಪಗಳಾಗಿ ಪಾದಾದಿ ಶಿರಾಂತ ವ್ಯಾಪಿಸಿಕೊಂಡು ಇರುತ್ತವೆಂದು ಹೇಳುತ್ತಾ, ಸಂಧ್ಯುಪಸಂಹಾರ ಮಾಡುತ್ತಾರೆ.

ಪ್ರಮಾಣ :–

"ನವಾಧಿಕಾಸೀತಿ ಯುಕ್ತೈರ್ಸಹ ಸ್ರೈರ್ಪಂಚ ಲಕ್ಷ ಕೈಃ ।
ಪಂಚಕೈಯರ್ುತ ಸಪ್ತಾನಾಂ ಶತೈರ್ಜ್ಞೇಯೋ ಹಿ ಕೋವಿದೈಃ ॥
ಸ್ವರೂಪೈರ್ವಿಮಲೈಃ ಶ್ರೀದಃ ಭೋಕ್ತೃ ಭೋಜ್ಯೇಷು
ಸಂಸ್ಥಿತಃ ॥

-ಇತಿ ಗುರುವೃತ್ತ ವಚನಾಜ್ಞೇಯಮ್

॥ಇತಿ ಶ್ರೀಮತ್ಕವಿಕುಲತಿಲಕ ಶ್ರೀ ಜಗನ್ನಾಥದಾಸರಾಜ ವಿರಚಿತ ಶ್ರೀಮದ್ಧರಿಕಥಾಮೃತಸಾರಸ್ಯ ಭಾವದರ್ಪಣ ಟೀಕಾಯಾಂ ಕಮಲಾ ಪತಿದಾಸ ಹೃದ್ಗತೇನ ಶ್ರೀ ಹರಿಣಾ ಕೃತಾಯಾಂ ಭೋಜ ನಸಂಧಿಃ ಪರ್ಯವಸಿತಃ ॥

## (೪) ಗುರುಹೃದಯ ಪ್ರಕಾಶಿಕೆ- ವ್ಯಾಖ್ಯಾನ:-

ಜ್ಞಾಪಕಾರ್ಥ ಮೇಲೆ ಹೇಳಿದ ರಸರೂಪಗಳ ಒಟ್ಟು ಲೆಕ್ಕವನ್ನು ನಿರೂಪಿಸುತ್ತಾರೆ. ಹೇಗೆಂದರೆ:—

| | | | |
|---|---|---|---|
| [೧] | ಅನ್ನಮಯಕೋಶದಲ್ಲಿ | = | ೮,೨೫೧ ರೂಪಗಳು. |
| [೨] | ಪ್ರಾಣಮಯ ಕೋಶದಲ್ಲಿ | = | ೫,೫೪೩ |
| [೩] | ಮನೋಮಯ ಕೋಶದಲ್ಲಿ | = | ೫,೬೨,೧೧೭ |
| [೪] | ವಿಜ್ಞಾನಮಯ ಕೋಶದಲ್ಲಿ | = | ೪,೩೭೪ |
| [೫] | ಆನಂದಮಯ ಕೋಶದಲ್ಲಿ | = | ೫,೧೨೫ |
| [೬] | ಅನ್ನನಾಮಕ | = | ೧೦೧ |
| [೭] | ಪ್ರಾಣನಾಮಕ | = | ೫೧೩ |
| [೮] | ಮನ ನಾಮಕ | = | ೫೫ |
| [೯] | ವಿಜ್ಞಾನ ನಾಮಕ | = | ೫೮೪ |
| [೧೦] | ಆನಂದ ನಾಮಕ | = | ೩,೦೫೨ |
| | ಒಟ್ಟು | = | ೫,೮೯,೭೦೫ ರೂಪಗಳು |

ಈ ರೀತಿಯಲ್ಲಿ ೫, ೮೯,೭೦೫ ರೂಪಗಳನ್ನು ಶ್ರೀ ಹರಿಯು ಧರಿಸಿ, ಭೋಜನಮಾಡುವವರಲ್ಲೂ (ಭೋಕ್ತೃ) ಮತ್ತು ಭೋಜನ ಪದಾರ್ಥಗಳಲ್ಲೂ (ಭೋಜ್ಯಗ) ಶ್ರೀ ಭೂದುರ್ಗಾ ದೇವಿಯ ಪತಿಯಾದ ಶ್ರೀ ಜಗನ್ನಾಥ ವಿಠ್ಠಲನೆಂಬ ಪಾಪಪರಿಹಾರಕ ಲೋಕಸ್ವಾಮಿಯು, ಆಪಾದಮಸ್ತಕ ಎಂದರೆ ಕಾಲಿನಿಂದ ತಲೆ ಪರ್ಯಂತ ಸನ್ನಿಹಿತನಾಗಿ, ವ್ಯಾಪ್ತನಾಗಿ, ಜೀವರನ್ನು ರಕ್ಷಿಸುತ್ತಿರುವನು ಎಂದು ತಾತ್ಪರ್ಯ.

"ಭೋಜನರಸವಿಭಾಗಸಂಧಿ"—ಎಂಬ ಈ ನಾಲ್ಕನೆಯ ಸಂಧಿಯಲ್ಲಿ ಶ್ರೀ ದಾಸರಾಯರು ಅಪರೋಕ್ಷಜ್ಞಾನಕ್ಕೆ ಸಾಧಕವಾದ ಪರಮರಹಸ್ಯ ಪ್ರಮೇಯಗಳನ್ನು ಹೇಳಿರುತ್ತಾರೆ. ಇದೇ ವಿಚಾರವನ್ನು ಮುಂದೆ ವಿಸ್ತರಿಸಿ, "ಸರ್ವಜೀವನ ಕಲ್ಪಸಂಧಿ" ಎಂಬ ೧೪ನೆಯ ಸಂಧಿಯಲ್ಲಿ, **ಬೃಹದಾರಣ್ಯಕೋಪನಿಷತ್ತಿ**ದಲ್ಲಿ ಹೇಳಿರುವ **"ಸಪ್ತಾನ್ನೋಪಾಸನ"** ಮೊದಲಾದ ಅನೇಕ ಪ್ರಮೇಯಗಳನ್ನು ನಿರೂಪಿಸಿರುತ್ತಾರೆ.

ಈ ಭೋಜನ ಪ್ರಕರಣದ ವಿಚಾರವು ಅನೇಕ ಪ್ರಮೇಯ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟಿದೆ. **"ಭಾವಪ್ರಕಾಶಿಕೆ"**ಯಲ್ಲಿಯೂ **"ತತ್ತ್ವವಿವೃತಿ"** ಎಂಬ ಗ್ರಂಥದಲ್ಲಿಯೂ ಈ ಪ್ರಕರಣಕ್ಕೆ ಸಂಬಂಧಪಟ್ಟ ಅನೇಕ ಪ್ರಮೇಯಗಳು ಉಕ್ತವಾಗಿವೆ.

**"ಯದ್ ಜ್ಞಾತ್ವಾ ಮುಚ್ಯತೇ ಜಂತುಃ ಜನ್ಮ ಸಂಸಾರ ಬಂಧನಾತ್**
**ಕುಲಾನುದ್ಧರತೇ ವಿಪ್ರೋನರಕಾದೇಕ ವಿಂಶತೇಃ ||**
**ಸರ್ವಯಜ್ಞಫಲಂ ಪ್ರಾಪ್ಯ ವಿಷ್ಣೋಸ್ಸಾಯುಜ್ಯ ಮಾಪ್ನು**
**ಯಾತ್ ।"**

—ಎಂದು ಪ್ರಾರಂಭಿಸಿ

**"ಯ ಏವಂ ವಿದ್ವಾನಗ್ನಿಹೋತ್ರಂ ಜುಹೋತಿತಸ್ಯ ಸರ್ವೇಷು ।**
**ಭೂತೇಷು ಸರ್ವೇಷು ಕಾಲೇಸು ಸರ್ವೇಷ್ವಾತ್ಮಸು ಸುಹುತಂಭವತಿ ।"**

**"ಯ ಏವಮನುವಿದ್ವಾನಗ್ನಿಹೋತ್ರಂ ಜುಹೋತಿ ತಸ್ಯ ।**
**ಅಂಗಾರಾನಪೋಹ್ಯ ಭಸ್ಮಸುಹುತಂ ಭವತಿ ||"**

—ಎಂದರೆ, ವಿಧಿಪೂರ್ವಕವಾಗಿ ಪ್ರಾಣಾಗ್ನಿಹೋತ್ರ (ಭೋಜನ)ವನ್ನು ತಿಳಿದು ಮಾಡಿದರೆ, ಸರ್ವಾಂತರ್ಯಾಮಿಯಾದ ಸ್ವಾಮಿಯ ಸರ್ವಕಾಲದಲ್ಲಿಯೂ ಸಂತೃಪ್ತನಾಗುತ್ತಾನೆ. ಹಾಗೆ ತಿಳಿಯದ್ದೆ ಮಾಡಿದರೆ, ಅಗಿಯಿಂದ ಕೆಂಡಗಳ

ನ್ನೆಲ್ಲಾ ಈಚೆಗೆ ಎಳೆದು ಬೂದಿಯಲ್ಲಿ ಹೋಮಮಾಡಿದಂತೆ ಆಗುತ್ತದೆ ಎಂಬು ದಾಗಿ "**ಪ್ರಾಣಾಗ್ನಿಹೋತ್ರ ಖಂಡ**"ದಲ್ಲಿ ಹೇಳಿದೆ.

ಈ ವಿಚಾರದಲ್ಲಿ ಛಾಂದೋಗ್ಯೋಪನಿಷತ್ತಿನ ಆರನೆಯ **ಅಧ್ಯಾಯ** ದಲ್ಲಿ ಹೇಳಿರುವುದನ್ನು ಶ್ರೀ ವಿಜಯದಾಸಾರ್ಯರು "**ಪ್ರಾಣಾಗ್ನಿಹೋತ್ರ ಸುಳಾದಿ**" ಯಲ್ಲಿಯೂ ಮತ್ತು "**ನಿತ್ಯತೃಪ್ತಸುಳಾದಿ**"ಯಲ್ಲಿಯೂ ದೇವತೆ ಗಳು, ವಾಯುದೇವರೂಪ, ಭಾರತೀರೂಪ, ಋಷಿ, ದೇವತಾ, ಛಂದಸ್ಸು, ಅಗ್ನಿಗಳ ನಾಮಗಳು, ಯಜ್ಞಮಾಡುವ ವಿಧಾನ ಮುಂತಾದ್ದನ್ನು ವಿಸ್ತಾರ ವಾಗಿ ನಿರೂಪಿಸುತ್ತಾರೆ. ಸುಳಾದಿಯ ಪರಿಸಮಾಪ್ತಿಯಲ್ಲಿ ಈ ರೀತಿ ತಿಳಿಸುತ್ತಾರೆ :

ಈ ತೆರದಲಿ ಭುಂಜಿಸಿದ ಮಾನವ ತನ್ನ ।
ಜಾತಿಯೊಳಗೆ ಅಧಿಕನಾಹನು ।
ತಾ ತೃಪ್ತನಾಗಿ ಉಂಡ ಮಿಕ್ಕ ಎಂಜಲು ।
ದೂತ ಸೂಕರ ಶ್ವಾನ ಚಂಡಾಲ ನಾನಾಯೋನಿ ।
ಜಾತರಿಗೆ ಕೊಡೆ ಅವರಲ್ಲದ್ದ ।
ಜಾತವೇದಸನು ತಾ ತೃಪ್ತನಾಗುವನಯ್ಯ ।
ಭೂತಳದೊಳಗಿದು ತಿಳಿದವನೆ ಧನ್ಯ ।
ಪಾತಕದವನಲ್ಲ ಯಾತನೆಗೆ ಸಲ್ಲ ।
ವಾತದೇವನ ದಯೆ ಪಡೆದು ಮತ್ತೆ ಮಹಾ।
ಕೀರ್ತಿವಂತನಾಹ ಜ್ಞಾನವಂತನಾಹ।
ಪೂತುರೆ ಮುಕ್ತಿಲಿ ಸುಖಸಾಂದ್ರದೊಳಗಿಪ್ಪ।
ಈತಗೆ ಗತಿಯೀವ ವಿಜಯವಿಠ್ಠಲರೇಯ
ನೂತನ ನೂತನ ಮಹಿಮೆ ತೋರುವ॥
ಈ ಪರಿ ತಿಳಿದು ಯಾಗಮಾಡಿದವರಿಗೆ ।
ತಾಪತ್ರಯಂಗಳಿಲ್ಲ ವಿಜಯವಿಠ್ಠಲ ಬಲ್ಲ ॥

ಶರೀರ ಸ್ಥೂಲವಾಗಬೇಕೆಂದು ಆಹಾರಮೆಲ್ಲದಿರೋ ಮನುಜ ।
ಧಾರುಣಿಯೊಳಗೆ ಶ್ರೀಹರಿ ಸೇವೆಗೋಸುಗ ಆರುಬಗೆ ರಸ ಸವಿಯೋ॥

ಈ ರೀತಿ ಭೋಜನ ಮಾಡುವಾಗ ಆಯಾ ಭೋಜನ ಪದಾರ್ಥಗಳಲ್ಲಿ ರತಕ್ಕ ಪರಮಾತ್ಮನ ರೂಪಗಳನ್ನೂ ಚಿಂತನೆ ಮಾಡುತ್ತಾ, ವಿಷ್ಣು ಪೂಜೆ ಎಂಬ ಅನುಸಂಧಾನದಿಂದ ಭೋಜನ ಮಾಡಿದಲ್ಲಿ ಪರಮಾತ್ಮನು ತೃಪ್ತನಾಗಿ ಮುಕ್ತಿಯನ್ನು ಕೊಡುವನೆಂಬುದು ಈ ಸಂಧಿಯ ತಾತ್ಪರ್ಯ.

**॥ ಇಂತು "ಗುರುಹೃದಯ ಪ್ರಕಾಶಿಕೆ" ಎಂಬ ವ್ಯಾಖ್ಯಾನ ಸಹಿತ ಶ್ರೀ ಹರಿಕಥಾಮೃತಸಾರದಲ್ಲಿ "ಭೋಜನ ರಸವಿಭಾಗಸಂಧಿ" ಎಂಬ ನಾಲ್ಕನೆಯ ಸಂಧಿ ಪರಿಸಮಾಪ್ತವಾದುದು ॥**

॥ ಶ್ರೀ ಕೃಷ್ಣಾರ್ಪಣ ಮಸ್ತು ॥

**ಸರ್ವವ್ಯಾಖ್ಯಾನ ಸಾರಸಂಗ್ರಹ :-**

ಅನ್ನಮಯಾದಿ ಪಂಚಕೋಶಗತ ಹಾಗೂ ಆಯಾಯಾ ಕೋಶನಾಮಾತ್ಮಕ ಅಕ್ಷರಸಾಂಕೇತ ಭಗವದ್ರೂಪಗಳ ಸಮಗ್ರ ಸಂಖ್ಯಾ ರೂಪಗಳನ್ನು ತಿಳಿಸುತ್ತಾ ಜ್ಞಾನಿವರೇಣ್ಯರಾದ ಶ್ರೀ ಜಗನ್ನಾಥದಾಸವರ್ಯರು ಪ್ರಸಕ್ತ ಸಂಧಿಗತ ವಿಷಯವನ್ನು ಈ ಅಂತ್ಯ ಪದ್ಯದಿಂದ ಉಪಸಂಹಾರಮಾಡಿರುತ್ತಾರೆ. ಈ ಸಮಗ್ರ ರೂಪಗಳ ವಿವರಗಳನ್ನು ಹಿಂದಿನ ಪದ್ಯಗಳಲ್ಲಿ ನಿರೂಪಿಸಿರುತ್ತಾರೆ. ವಿವರಗಳು ಇಂತಿವೆ :-

**೧) ಪಂಚಕೋಶಗತ ಭಗವದ್ರೂಗಳು :-**

(೧) ಅನ್ನಮಯಕೋಶ-ಅನಿರುದ್ಧ = ೮೨೫೧ ರೂಪಗಳು

(೨) ಪ್ರಾಣಮಯ ಕೋಶ-ಪ್ರದ್ಯುಮ್ನ = ೫೫೪೩ ..

(೩) ಮನೋಮಯ ಕೋಶ-ಸಂಕರ್ಷಣ = ೫೬,೨೧೦೭

(೪) ವಿಜ್ಞಾನಮಯ ಕೋಶ-ವಾಸುದೇವ = ೪೩೭೪

(೫) ಆನಂದಮಯ ಕೋಶ-ನಾರಾಯಣ = ೫೧೨೫

**ಮೊತ್ತ = ೫,೮೫,೪೦೦ ರೂಪಗಳು**

**(೨) ಕೋಶನಾಮಕ ಭಗವದ್ರೂಪಗಳು :-**

(೧) ಅನಿರುದ್ಧನು ಅನ್ನ ನಾಮಕನಾಗಿ = ೧೦೧ ರೂಪಗಳು

(೨) ಪ್ರದ್ಯುಮ್ನನು ಪ್ರಾಣ ನಾಮಕನಾಗಿ = ೫೧೩

(೩) ಸಂಕರ್ಷಣನು ಮನ ನಾಮಕನಾಗಿ = ೫೫

(೪) ವಾಸುದೇವನು ವಿಜ್ಞಾನ ನಾಮಕನಾಗಿ = ೫೮೪

(೫) ನಾರಾಯಣನು ಆನಂದ ನಾಮಕನಾಗಿ = ೩೦೫೨

**ಮೊತ್ತ = ೪೩೦೫ ರೂಪಗಳು**

ಇಂತು, ಪಂಚಕೋಶಗತ ಅನಿರುದ್ಧಾದಿ ರೂಪಗಳು =೫,೮೫,೪೦೦೦

ಮತ್ತು ಕೋಶನಾಮಕ ಅನ್ನಾದಿ ರೂಪಗಳು = ೪೩೦೫

---

ಸಮಗ್ರ ರೂಪಗಳ ಒಟ್ಟು ಸಂಖ್ಯೆ=೫,೮೯,೭೦೫

---

ಅಂದರೆ, ಐದು ಲಕ್ಷದ ಎಂಭತ್ತೊಂಭತ್ತು ಸಾವಿರದ ಏಳನೂರ ಐದು ರೂಪಗಳಾದುವು. ಇದನ್ನೇ ದಾಸರಾಯ-

| | |
|---|---|
| ಐದು ಲಕ್ಷದ | =೫,೦೦,೦೦ |
| ಎಂಭತ್ತರೊಂಭತ್ತಾದ ಸಾವಿರ | =೮೯,೦೦೦ |
| ಏಳುನೂರರ | = ೭೦೦ |
| ಐದು | = ೫ |
| ಅಲ್ಲಿಗೆ, | ೫,೮೯,೭೦೫ ರೂಪಗ |

ಎಂದು ವಿವರಿಸುತ್ತಾರೆ.

ಏತಾದೃಶಮಹಿಮಾನ್ವಿತನಾದ ಶ್ರೀ ಪರಮಾತ್ಮನು ೫,೮೯,೭೦೫ ರೂ ಗಳಿಂದ ಈ ದೇಹದಲ್ಲಿ ವಿರಾಜಮಾನನಾಗಿದ್ದಾನೆ. ಅಲ್ಲದೆ ಭೋಜನಯೋ ಗ್ಯವಾದ ಪದಾರ್ಥಗಳಲ್ಲಿ ಅಂತರ್ಯಾಮಿತ್ವೇನ ರಸಪದವಾಚ್ಯನಾಗಿದ್ದಾ ಭೋಜನಮಾಡುವ ಚೇತನರಲ್ಲಿ ನಿಯಾಮಕನಾಗಿದ್ದು, ಭೋಕ್ತೃಗನೆಂದೆನಿ ತಾನು ಸ್ವರಸಗಳನ್ನು ಸ್ವೀಕರಿಸುವುದರ ಮೂಲಕ, ಬಿಂಬಕ್ರಿಯಾ ವ್ಯಾ ತನ್ನ ಪ್ರತಿಬಿಂಬರಿಗೆ ಉಣಿಸುವನು. ಇಂತು, ಸಕಲ ಚೇತನರಿಗೆ "ಉಂಡುಣಿ ಆ ಸರ್ವಸಾರ ಭೋಕ್ತನಾದ ಸ್ವರಮಣನು ಶ್ರೀ ಭೂ ದುರ್ಗಾರಮಣನಾ ನಮ್ಮ ದೇಹಾದ್ಯಂತ ವ್ಯಾಪಿಸಿಕೊಂಡಿರುವನು. ಇವರ ಅರ್ಥವಿವ ಇಂತಿದೆ :–

[೧] ಲಕ್ಷ್ಮೀದೇವಿಯರ ಶ್ರೀರೂಪ ಸತ್ವಗುಣಾಭಿಮಾನಿ ರೂಪ. ಇಂತಹ ಶ್ರೀದೇವಿಯರ ರಮಣನಾದ ವಿಷ್ಣುರೂಪೀ ಪರಮಾತ್ಮನು ಮುಕ್ತಿ ಯೋಗ್ಯ ಚೇತನರಲ್ಲಿ ವಿಷ್ಣು ರೂಪದಿಂದ ವಿರಾಜಮಾನನಾಗಿದ್ದಾನೆ.

[೨] ರಜೋಗುಣಾಭಿಮಾನಿ ಲಕ್ಷ್ಮೀದೇವಿಯರ ರೂಪ ಭೂರೂಪ. ಇಂತಹ ಭೂದೇವಿಯರ ಪತಿಯಾದ ಬ್ರಹ್ಮರೂಪೀ ಪರಮಾತ್ಮನು ನಿತ್ಯ ಸಂಸಾರಿ ಜೀವರಲ್ಲಿ ಬ್ರಹ್ಮರೂಪದಿಂದ ಇದ್ದಾನೆ.

[೩] ತಮೋಗುಣಾಭಿಮಾನಿ ದುರ್ಗಾರೂಪೀ ಶ್ರೀ ಲಕ್ಷ್ಮೀದೇವಿಯರ ರಮಣನಾದ ರುದ್ರರೂಪೀ ಪರಮಾತ್ಮನು ತಮೋಯೋಗ್ಯ ಚೇತನರಲ್ಲಿ ರುದ್ರರೂಪದಿಂದ ಸ್ಥಿತನಾಗಿದ್ದಾನೆ.

ಇಂತು ತ್ರಿಗುಣಾಭಿಮಾನಿಗಳಾದ ಶ್ರೀ ಭೂ ದುರ್ಗಾ ರಮಣನಾದ ಶ್ರೀ ಪರಮಾತ್ಮನು ಸಮಸ್ತ ಚೇತನರ ದೇಹದಲ್ಲಿ ಕಾಲಿನಿಂದ ಪ್ರಾರಂಭಿಸಿ, ತಲೆಯವರೆಗೂ (ಆಪಾದಮಸ್ತಕ ಪರ್ಯಂತ) ಪುರುಷಾಕಾರದಿಂದ ಅಖಂಡ ರೂಪದಿಂದ ವ್ಯಾಪಿಸಿಕೊಂಡು, ದೇಹಗತ ವ್ಯಾಪಾರ ವಿಶೇಷಗಳನ್ನು ಮಾಡಿ ಮಾಡಿಸುತ್ತಾ, ನಿರಂತರವೂ ಲೋಕಪ್ರಭುವಾದ ಶ್ರೀ ಜಗನ್ನಾಥವಿಠ್ಠಲಾತ್ಮಕ ಶ್ರೀಪರಮಾತ್ಮನು ದೇಹ ಸಂರಕ್ಷಣೆ ಮಾಡುತ್ತಾ, ಕಾಪಾಡುತ್ತಿರುವನು ಎಂದು ಪದ್ಯಾಭಿಪ್ರಾಯವು ॥ ೩೦ ॥

**॥ ಇಂತು ಪ್ರಸಕ್ತ "ಭೋಜನರಸವಿಭಾಗಸಂಧಿ"ಯು ಈ ಅಂತ್ಯ ಪದ್ಯದಿಂದ "ಸರ್ವವ್ಯಾಖ್ಯಾನಸಾರ ಸಂಗ್ರಹ"ವೆಂಬ ತಾತ್ಪರ್ಯರೂಪವಾದ ಸಾರಾಂಶವು ಮುಗಿಯಿತು ॥**

॥ ಶ್ರೀ ಜಗನ್ನಾಥ ವಿಠ್ಠಲಾಯನಮಃ ॥

॥ ಶ್ರೀಮಧ್ವೇಶಾರ್ಪಣ ಮಸ್ತು ॥

H.K. SRINIVASA RAO